ಬುಧವಾರ, ಆಗಸ್ಟ್ 13, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 224 | ಪುಟ 16
prajavani.net prajavani • www.prajavani.net

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಐಸಿಸಿ: ಎರಡನೇ ಸ್ಥಾನಕ್ಕೆ ದೀಪ್ತಿ
ಭಾರತ ಮಹಿಳಾ ಕ್ರಿಕೆಟ್ ತಂಡದ ದೀಪ್ತಿ ಶರ್ಮಾ ಅವರು ಐಸಿಸಿ ಬೌಲರ್‌ಗಳ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ. ಮೊದಲ ಸ್ಥಾನದಲ್ಲಿ ಆಸ್ಟ್ರೇಲಿಯಾದ ಅನಾಬೆಲ್ ಸದರ್ಲೆಂಡ್ ಇದ್ದಾರೆ

ಬಲವಂತದ ಕ್ರಮ ಸಲ್ಲ
ನವದೆಹಲಿಯಲ್ಲಿ 10 ವರ್ಷಗಳಿಗೂ ಹಳೆಯ ಡೀಸೆಲ್ ವಾಹನಗಳು ಹಾಗೂ 15 ವರ್ಷಗಳಿಗೂ ಮೀರಿದ ಪೆಟ್ರೋಲ್ ವಾಹನಗಳನ್ನು ಇಟ್ಟುಕೊಂಡವರ ಮೇಲೆ ಬಲವಂತದ ಕ್ರಮ ಸಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ

ಸೆನ್ಸೆಕ್ಸ್ 80,235 | ನಿಫ್ಟಿ 24,487 | $/₹ 87.63 | ಚಿನ್ನ (Std. 10g) ₹1,04,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,20,900 (ಬೆಂಗಳೂರು)

ಬಿಹಾರ: ಪ್ರಮಾಣಪತ್ರಗಳಿಗೆ ಮಹಿಳೆಯರ ಹುಡುಕಾಟ

• ಸತೀಶ್ ಝಾ

ಕಿಶನ್‌ಗಂಜ್: ಕೆಲ ತಿಂಗಳಲ್ಲಿ ಚುನಾವಣೆ ನಡೆಯಲಿರುವ ಬಿಹಾರದಲ್ಲಿ ಚುನಾವಣಾ ಆಯೋಗ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಿ, ಕರಡು ಮತದಾರರ ಪಟ್ಟಿ ಪ್ರಕಟಿಸಿ 10 ದಿನಗಳೇ ಕಳೆದಿವೆ. ಆದರೆ, ಇಲ್ಲಿನ ಹೆಚ್ಚಿನ ಸಂಖ್ಯೆಯ ವಿವಾಹಿತ ಮಹಿಳೆಯರು ತಮ್ಮ ಪೌರತ್ವ ಸಾಬೀತುಪಡಿಸಲು ಮತ್ತು ಮತದಾನದ ಹಕ್ಕನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ.

ಇದಕ್ಕಾಗಿ ಅವರು ತಮ್ಮ ತಂದೆ ಮನೆಯ ವಾಸಸ್ಥಳದ ದೃಢೀಕರಣ ಪ್ರಮಾಣಪತ್ರಗಳನ್ನು ತರಬೇಕಿದ್ದು, ಅದನ್ನು ಪಡೆಯಲು ಹರಸಾಹಸ ಪಡುತ್ತಿದ್ದಾರೆ. ವಿವಾಹದ ಬಳಿಕ ವಿಳಾಸ ಬದಲಾದ ಕಾರಣ ಮಹಿಳೆಯರು ಅಗತ್ಯ ದಾಖಲೆಗಳನ್ನು ಹೊಂದಿಸಲು ಕಷ್ಟ ಪಡುತ್ತಿದ್ದ ದೃಶ್ಯ ರಾಜ್ಯದ ಕಿಶನ್‌ಗಂಜ್, ಬೇಗುಸರಾಯ್, ಪೂರ್ಣಿಯಾ ಜಿಲ್ಲೆಗಳಲ್ಲಿ ಕಂಡು ಬಂತು.

ನಿಯಮಗಳ ಪ್ರಕಾರ, ಅವರು ಶಾಲಾ ವರ್ಗಾವಣೆ ಪ್ರಮಾಣ ಪತ್ರಗಳು (ಟಿ.ಸಿ) ಅಥವಾ ಪೋಷಕರ ಹೆಸರಿನಲ್ಲಿರುವ ಆಸ್ತಿ ದಾಖಲೆಗಳನ್ನು ಒದಗಿಸಬೇಕು. ಅವುಗಳಲ್ಲಿ ಅವರ ಪೋಷಕರ ಹೆಸರು 2003ರ ಮತದಾರರ ಪಟ್ಟಿಯಲ್ಲಿ ದಾಖಲಾಗಿರುವಂತೆ ಇರಬೇಕು.

ತಳ ಸಮುದಾಯದ ಜನರಿಗಂತೂ ಈ ದಾಖಲೆಗಳನ್ನು ಪಡೆಯುವುದು ಸವಾಲಾಗಿದೆ. ಕಾರಣ, ಈ ಸಮುದಾಯ-ಗಳಲ್ಲಿನ ಬಹುತೇಕ ಮಹಿಳೆಯರು ಶಾಲೆಗೆ ಹೋಗಿಲ್ಲ. ಅಲ್ಲದೆ ಅವರ ಪೋಷಕರು ಯಾವುದೇ ಆಸ್ತಿಯನ್ನೂ ಹೊಂದಿಲ್ಲ. ಹೀಗಾಗಿ ದಾಖಲೆಗಳನ್ನು ಹುಡುಕುತ್ತಾ ಹತಾಶರಾಗಿರುವ ಹಲವು ಮಹಿಳೆಯರು ಬಹುತೇಕ ಗ್ರಾಮಗಳಲ್ಲಿ ಕಂಡು ಬರುತ್ತಾರೆ.

ಗಮನಿಸಬೇಕಾದ ಅಂಶ ಎಂದರೆ, ಕರಡು ಮತದಾರರ ಪಟ್ಟಿಯಲ್ಲಿ ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರ ಹೆಸರುಗಳನ್ನು ಕೈಬಿಡಲಾಗಿದೆ.

ಜೆಡಿಯುಗೆ ಆತಂಕ: ಈ ಬೆಳವಣಿಗೆಯು ಆಡಳಿತಾರೂಢ ಜೆಡಿಯು ಪಕ್ಷಕ್ಕೆ ಆತಂಕ ತರಿಸಿದೆ. ಹೆಚ್ಚಿನ ಸಂಖ್ಯೆಯ ಮಹಿಳಾ ಮತದಾರರು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಬೆಂಬಲಿಗರು ಎಂಬುದು ಇದಕ್ಕೆ ಕಾರಣ.

ಶಾಲಾ ಬಾಲಕಿಯರಿಗೆ ಉಚಿತ ಸೈಕಲ್, ಸಮವಸ್ತ್ರ ವಿತರಣೆ, ಮದ್ಯಪಾನ ನಿಷೇಧ ಕಾನೂನು ಜಾರಿ ಸೇರಿದಂತೆ ಹಲವು ಮಹಿಳಾ ಕೇಂದ್ರಿತ ಯೋಜನೆಗಳಿಗೆ ನಿತೀಶ್ ಕುಮಾರ್ ಕಾರಣರಾಗಿದ್ದಾರೆ. ಇವು ಮಹಿಳಾ ಮತದಾರರನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ ಎಂದು ಹೇಳಲಾಗುತ್ತಿದೆ.

▶10

ಶಿಬಿರಗಳಲ್ಲಿ ಹತಾಶೆ

ತೊಂದರೆಗೆ ಒಳಗಾದ ಮತದಾರರಿಗಾಗಿ ವಿವಿಧೆಡೆ ಶಿಬಿರಗಳನ್ನು ತೆರೆದು ನೆರವು ನೀಡಲಾಗುತ್ತಿದೆ. ಅಲ್ಲಿಗೆ ಪರಿಹಾರಕ್ಕಾಗಿ ಬರುವ ಬಹುತೇಕರಲ್ಲಿ ನಿರಾಶೆ ಆವರಿಸಿದೆ. 'ಇಲ್ಲಿನ ಮನೋಜ್ ಮಾಸ್ಟರ್ ಅವರು ನಮ್ಮ ಕಾಗದಪತ್ರಗಳನ್ನು ಎಸೆಯುತ್ತಿದ್ದಾರೆ. ಆಸ್ತಿ ದಾಖಲೆಗಳನ್ನು ತನ್ನಿ ಎಂದು ಹೇಳುತ್ತಿದ್ದಾರೆ. ನನ್ನ ಪೋಷಕರು ಮೃತಪಟ್ಟಿದ್ದಾರೆ. ಈ ಅಧಿಕಾರಿಗಳು ಕೇಳುವ ದಾಖಲೆಗಳನ್ನು ಎಲ್ಲಿಂದ ತರಲಿ' ಎಂದು ಅತ್ಯಂತ ಹಿಂದುಳಿದ ಸಮುದಾಯ ಎಂದು ಗುರುತಿಸಿರುವ ನಿಷಾದ್ ಸಮುದಾಯದ ಮಹಿಳೆ ಕಣ್ಣೀರು ಹಾಕಿದರು.

ಮಹಿಳೆಯರು ನಿಜವಾಗಿಯೂ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ಹಲವು ಮತಗಟ್ಟೆ ಹಂತದ ಮತದಾರರ ನೋಂದಣಿ ಅಧಿಕಾರಿಗಳು (ಬಿಎಲ್‌ಒ) 'ಪ್ರಜಾವಾಣಿ'ಗೆ ತಿಳಿಸಿದರು.

'ಹೀಗೆ ಸಮಸ್ಯೆಗಳನ್ನು ಎದುರಿಸುತ್ತಿರುವ ಮಹಿಳೆಗೆ ಕಟ್ಟಕಡೆಯ ಆಯ್ಕೆಯಾಗಿ ಆಧಾರ್ ಕಾರ್ಡ್ ಅನ್ನು (ಇದು ಅಗತ್ಯವಿರುವ 11 ದಾಖಲೆಗಳ ಪಟ್ಟಿಯಲ್ಲಿ ಇಲ್ಲ) ಬಳಸಲು ಚುನಾವಣಾ ಆಯೋಗ ಬಿಎಲ್‌ಒಗಳಿಗೆ ಅವಕಾಶ ನೀಡುತ್ತದೆ. ಆದರೆ ಈ ರೀತಿಯ ಪ್ರಕರಣಗಳು ಪ್ರತಿ ಬಿಎಲ್‌ಒಗಳ ವ್ಯಾಪ್ತಿಯಲ್ಲಿ 10ರಿಂದ 15 ಮೀರಬಾರದು' ಎಂದು ಪೂರ್ಣಿಯಾ ಜಿಲ್ಲೆಯ ಬಿಎಲ್‌ಒ ಒಬ್ಬರು ಮಾಹಿತಿ ನೀಡಿದರು.

ಪಶ್ಚಿಮ ಬಂಗಾಳದ ಜತೆಗೆ ಗಡಿ ಹಂಚಿಕೊಂಡಿರುವ ಕಿಶನ್‌ಗಂಜ್‌ನ ಅಂಗಡಿಯೊಂದರ ಮಾಲೀಕ ಸುನಿಲ್ ಕುಮಾರ್ ಶರ್ಮಾ ಅವರಲ್ಲೂ ಆತಂಕ ಮನೆ ಮಾಡಿತ್ತು. ಅವರ ಸೊಸೆ ಮಮತಾ ಕೋಲ್ಕತ್ತದವರು. 'ಇಲ್ಲಿಯವರೆಗೆ ಎಲ್ಲವೂ ಸರಿಯಿತ್ತು. ಇದೀಗ ಪ್ರಮಾಣಪತ್ರಗಳನ್ನು ಕೊಡಬೇಕಾಗಿದೆ. ಇಲ್ಲದಿದ್ದರೆ ಈ ಜನ ನನ್ನ ಸೊಸೆಯನ್ನು ಎಲ್ಲಿ ಬಾಂಗ್ಲಾದೇಶದವಳು ಎಂದು ಬಿಡುತ್ತಾರೋ ಎಂಬ ಆತಂಕ ಕಾಡುತ್ತಿದೆ' ಎಂದು ಪ್ರತಿಕ್ರಿಯಿಸಿದರು.

ಪೌರತ್ವ ದೃಢೀಕರಿಸಲು ಆಧಾರ್ ದಾಖಲೆ ಅಲ್ಲ: ಒಪ್ಪಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಪೌರತ್ವವನ್ನು ದೃಢೀಕರಿಸಲು ಆಧಾರ್ ಕಾರ್ಡ್ ಅನ್ನು ನಿರ್ಣಾಯಕ ದಾಖಲೆಯಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂಬ ಚುನಾವಣಾ ಆಯೋಗದ ನಿಲುವನ್ನು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿಕೊಂಡಿದೆ.

ಬಿಹಾರದಲ್ಲಿ ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ವಿರುದ್ಧ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಹತ್ವದ ನಿಲುವು ತೆಗೆದುಕೊಂಡಿದೆ.ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರು ಅರ್ಜಿಗಳ ವಿಚಾರಣೆ ನಡೆಸುತ್ತಿದ್ದಾರೆ.

ಆಧಾರ್ ಕಾರ್ಡ್, ಮತದಾರರ ಗುರುತಿನ ಪತ್ರ (ಎಪಿಕ್) ಮತ್ತು ಪಡಿತರ ಚೀಟಿಗಳನ್ನು ಪೌರತ್ವ ದೃಢೀಕರಿಸಲು ನಿರ್ಣಾಯಕ ಪುರಾವೆಯಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಚುನಾವಣಾ ಆಯೋಗವು ಈ ಹಿಂದೆ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಇದನ್ನು ಒಪ್ಪಿಕೊಂಡ ಪೀಠ, 'ಈ ದಾಖಲೆಗಳಿಗೆ ಬೆಂಬಲವಾಗಿ ಇತರೆ ದಾಖಲೆಗಳನ್ನೂ ನೀಡಬೇಕು' ಎಂದು ಹೇಳಿತು.

'ಆಧಾರ್ ಅನ್ನು ಪೌರತ್ವದ ನಿರ್ಣಾಯಕ ಪುರಾವೆಯಾಗಿ ಸ್ವೀಕರಿಸಲು ಸಾಧ್ಯವಿಲ್ಲ ಎಂದು ಚುನಾವಣಾ ಆಯೋಗವು ಹೇಳುವುದು ಸರಿಯಾಗಿಯೇ ಇದೆ. ಆಧಾರ್ ಅನ್ನೂ ಪರಿಶೀಲನೆಗೆ ಒಳಪಡಿಸಬೇಕು. ಆಧಾರ್ ಕಾಯ್ದೆಯ ಸೆಕ್ಷನ್ 9 ನಿರ್ದಿಷ್ಟವಾಗಿ ಅದನ್ನೇ ಹೇಳುತ್ತದೆ' ಎಂದು ಪೀಠವು ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರಿಗೆ ತಿಳಿಸಿತು.

▶11

ಪೀಠ ಹೇಳಿದ್ದು....

- ಪೌರತ್ವವನ್ನು ನೀಡುವ ಅಥವಾ ಹಿಂತೆಗೆದುಕೊಳ್ಳುವ ಕಾನೂನನ್ನು ಸಂಸತ್ತು ಅಂಗೀಕರಿಸಬೇಕು. ಆದರೆ, ಪೌರತ್ವ ಹೊಂದಿರುವವರು ಮತ್ತು ಹೊಂದಿಲ್ಲದವರನ್ನು ಮತದಾರರ ಪಟ್ಟಿಗೆ ಸೇರಿಸುವ ಹಾಗೂ ಹೊರಗಿಡುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆ
- ಜೀವಂತ ವ್ಯಕ್ತಿಯನ್ನು 'ಸತ್ತಿದ್ದಾನೆ' ಎಂದು ಘೋಷಿಸಿರುವ ಅಥವಾ ಸತ್ತ ವ್ಯಕ್ತಿಯನ್ನು 'ಜೀವಂತವಾಗಿದ್ದಾನೆ' ಎಂದು ತೋರಿಸಿರುವ ಲೋಪಗಳನ್ನು ಸರಿಪಡಿಸಲು ಅವಕಾಶವಿದೆ
- ಎಸ್‌ಐಆರ್‌ನಲ್ಲಿ ಅಕ್ರಮ ಕಂಡುಬಂದರೆ ಇಡೀ ಪ್ರಕ್ರಿಯೆಯನ್ನು ರದ್ದುಪಡಿಸಲಾಗುವುದು ಎಂದು ಈ ಹಿಂದೆ ಹೇಳಿದ್ದ ಸುಪ್ರೀಂ ಕೋರ್ಟ್, ಅದನ್ನು ಪುನರುಚ್ಚರಿಸಿದೆ

'ಆಧಾರ್, ಮತದಾರರ ಗುರುತಿನ ಚೀಟಿ, ಪಾನ್ ಕಾರ್ಡ್ ಪೌರತ್ವಕ್ಕೆ ಪುರಾವೆಯಲ್ಲ'

ಮುಂಬೈ (ಪಿಟಿಐ): 'ಆಧಾರ್, ಮತದಾರರ ಗುರುತಿನ ಚೀಟಿ, ಪಾನ್ ಕಾರ್ಡ್ ಹೊಂದಿದ ಮಾತ್ರಕ್ಕೆ ವ್ಯಕ್ತಿಯೊಬ್ಬ ಭಾರತದ ಪ್ರಜೆ ಎಂಬುದಾಗಿ ಹೇಳಲಾಗದು' ಎಂದು ಬಾಂಬೆ ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಜೊತೆಗೆ, ಅಕ್ರಮವಾಗಿ ಭಾರತಕ್ಕೆ ಪ್ರವೇಶಿಸಿದ್ದ ಆರೋಪ ಎದುರಿಸುತ್ತಿರುವ ಬಾಂಗ್ಲಾದೇಶದ ಪ್ರಜೆಗೆ ಜಾಮೀನು ನೀಡಲೂ ನಿರಾಕರಿಸಿದೆ.

ಬಾಂಗ್ಲಾದೇಶದ ಪ್ರಜೆಯು ಕಳೆದೊಂದು ದಶಕದಿಂದ ಭಾರತದಲ್ಲಿ ನೆಲಸಿದ್ದು, ನಕಲಿ ದಾಖಲೆಗಳನ್ನು ಹೊಂದಿದ್ದರು ಎಂಬ ಆರೋಪವಿದೆ.

'ಪೌರತ್ವ ಕಾಯ್ದೆಯು, ಯಾರು ದೇಶದ ಪ್ರಜೆಯಾಗಬಹುದು?, ಹೇಗೆ ಪೌರತ್ವ ಪಡೆಯಬಹುದು ಎಂಬುದನ್ನು ವ್ಯಾಖ್ಯಾನಿಸುತ್ತದೆ. ಅದೇ ರೀತಿ, ಆಧಾರ್ ಕಾರ್ಡ್, ಪಾನ್ ಕಾರ್ಡ್, ಮತದಾರರ ಗುರುತಿನ ಚೀಟಿಯು ವ್ಯಕ್ತಿಯ ಗುರುತಿಸುವಿಕೆಗೆ ಮತ್ತು ಸೇವೆಯನ್ನು ಪಡೆಯಲಷ್ಟೇ ಅರ್ಹ' ಎಂದು ನ್ಯಾಯಮೂರ್ತಿ ಅಮಿತ್ ಬೋರ್ಕರ್ ನೇತೃತ್ವದ ನ್ಯಾಯಪೀಠವು ತಿಳಿಸಿದೆ.

ಮಾನ್ಯತೆ ಹೊಂದಿದ ಪಾಸ್‌ಪೋರ್ಟ್ ಹಾಗೂ ಪ್ರಯಾಣ ದಾಖಲೆ ಇಲ್ಲದೇ ಭಾರತಕ್ಕೆ ಅಕ್ರಮವಾಗಿ ಪ್ರವೇಶಿಸಿದ್ದ, ಬಾಂಗ್ಲಾದೇಶದ ನಾಗರಿಕ ಬಾಬು ಅಬ್ದುಲ್ ರೌಫ್ ಸರ್ದಾರ್‌ಗೆ ಜಾಮೀನು ನೀಡಲು ನ್ಯಾಯಾಲಯವು ನಿರಾಕರಿಸಿದೆ. ಆಧಾರ್ ಕಾರ್ಡ್, ಪಾನ್ ಕಾರ್ಡ್, ಮತದಾರರ ಗುರುತಿನ ಚೀಟಿ ಹಾಗೂ ಭಾರತದ ಪಾಸ್‌ಪೋರ್ಟ್ ಅನ್ನು ಅಕ್ರಮವಾಗಿ ಪಡೆದಿದ್ದ ಆರೋಪವೂ ಇವರ ಮೇಲಿದೆ.

'ಎಸ್‌ಐಆರ್ ವಿಶ್ವಾಸ ಕೊರತೆಯ ವಿಚಾರ'

ಎಸ್‌ಐಆರ್‌ಗೆ ಸಂಬಂಧಿಸಿದ ವಿವಾದ 'ವಿಶ್ವಾಸದ ಕೊರತೆಯ ವಿಚಾರ' ಎಂದು ಪೀಠವು ಹೇಳಿದೆ. 'ಬಿಹಾರದಲ್ಲಿ ಒಟ್ಟು 7.9 ಕೋಟಿ ಮತದಾರರಿದ್ದಾರೆ. ಅವರಲ್ಲಿ 2003ರ ಮತದಾರರ ಪಟ್ಟಿಯಲ್ಲಿದ್ದ ಸುಮಾರು 6.5 ಕೋಟಿ ಮಂದಿ ತಾವು ರಾಜ್ಯದ ಮತದಾರರು ಎಂಬುದನ್ನು ಸಾಬೀತುಪಡಿಸಲು ಯಾವುದೇ ದಾಖಲೆ ನೀಡಬೇಕಾಗಿಲ್ಲ ಎಂದು ಆಯೋಗ ಹೇಳಿಕೊಂಡಿದೆ. ಆದ್ದರಿಂದ ಈ ವಿವಾದವು ವಿಶ್ವಾಸದ ಕೊರತೆಯ ವಿಚಾರದಂತೆ ಕಾಣುತ್ತದೆ, ಬೇರೇನೂ ಅಲ್ಲ' ಎಂದು ಇಬ್ಬರೂ ನ್ಯಾಯಮೂರ್ತಿಗಳು ತಿಳಿಸಿದರು.

ಒಂದು ಕೋಟಿ ಮತದಾರರ ಮತದಾನದ ಹಕ್ಕು ಕಸಿದುಕೊಳ್ಳ-ಲಾಗುತ್ತಿದೆ ಎಂಬ ಆಧಾರದ ಮೇಲೆ ಎಸ್‌ಐಆರ್‌ಅನ್ನು ವಿರೋಧಿಸುವ ಅರ್ಜಿದಾರರ ನಿಲುವನ್ನೂ ಪೀಠವು ಪ್ರಶ್ನಿಸಿತು.

'7.9 ಕೋಟಿ ಮತದಾರರಲ್ಲಿ 7.24 ಕೋಟಿ ಮಂದಿ ಎಸ್‌ಐಆರ್‌ಗೆ ಸಂಬಂಧಿಸಿದ ಅರ್ಜಿಗೆ ಪ್ರತಿಕ್ರಿಯಿಸಿ-ದ್ದಾರೆ. ಒಂದು ಕೋಟಿ ಮತದಾರರು ನಾಪತ್ತೆಯಾಗಿದ್ದಾರೆ ಅಥವಾ ಮತದಾನದಿಂದ ವಂಚಿತರಾಗಿದ್ದಾರೆ ಎಂಬ ವಾದವನ್ನು ಈ ಅಂಕಿ–ಅಂಶ ಸುಳ್ಳಾಗಿಸುತ್ತದೆ' ಎಂದು ಪೀಠ ತಿಳಿಸಿತು.

ರಾಜಣ್ಣ ಪರ ಬಿಜೆಪಿ ಸ್ವರ

ಪ್ರಜಾವಾಣಿ ವಾರ್ತೆ

ರಾಜಣ್ಣ

ಬೆಂಗಳೂರು: ವಿಧಾನಮಂಡಲ ಅಧಿವೇಶನದ ಹೊತ್ತಿನಲ್ಲಿಯೇ ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡಿರುವ ಕ್ರಮ ಉಭಯ ಸದನಗಳ ಒಳಗೆ ಮತ್ತು ಹೊರಗೆ ಭಾರಿ ಚರ್ಚೆಗೆ ಕಾರಣವಾಗಿದೆ.

ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಈ ವಿಚಾರ ಪ್ರಸ್ತಾಪಿಸಿ, ಹೇಳಿಕೆ ನೀಡುವಂತೆ ಪಟ್ಟು ಹಿಡಿದರೂ ಸರ್ಕಾರ ಉತ್ತರ ನೀಡಲಿಲ್ಲ. ವಜಾ ಆದ ಬಳಿಕ ರಾಜಣ್ಣ ಅವರು, ಮಂಗಳವಾರ ಕಲಾಪಕ್ಕೆ ಹಾಜರಾಗಲಿಲ್ಲ.

ವಿಧಾನಸಭೆ ಕಲಾಪ ಮಂಗಳವಾರ ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಸದನ ನಡೆಯುತ್ತಿರುವಾಗ ಮಂತ್ರಿಯೊಬ್ಬರ ವಜಾ ಆಗಿದ್ದು, ಸದನದಲ್ಲಿ ಹೇಳಿಕೆ ನೀಡಬೇಕು' ಎಂದು ಪಟ್ಟುಹಿಡಿದರು.

'ನನ್ನ ವಜಾ ಹಿಂದೆ ಷಡ್ಯಂತ್ರವಿದೆ ಎಂದು ರಾಜಣ್ಣ ಹೇಳಿದ್ದಾರೆ. ಅವರು ರಾಜೀನಾಮೆ ಕೊಟ್ಟರೂ ಅಂಗೀಕರಿಸದೆ ವಜಾ ಮಾಡಲಾಗಿದೆ. ಸತ್ಯ ಹೇಳಿದ್ದಕ್ಕೆ ವಜಾ ಮಾಡಲಾಗಿದೆಯೇ' ಎಂದೂ ಪ್ರಶ್ನಿಸಿದರು. 'ಈ ವಿಚಾರದಲ್ಲಿ ಸದನವನ್ನು ಕತ್ತಲಲ್ಲಿ ಇಡಬೇಡಿ' ಎಂದು ಬಿಜೆಪಿಯ ಎಸ್. ಸುರೇಶ್ ಕುಮಾರ್, ವಿ. ಸುನಿಲ್ ಕುಮಾರ್ ಸೇರಿದಂತೆ ಇತರೆ ಸದಸ್ಯರು ದನಿಗೂಡಿಸಿದರು.

▶5

'ದ್ವೇಷ ಇದ್ದಿದ್ದೆ, ಹುಶಾರಾಗಿರಬೇಕು'

ರಾಜಕೀಯದಲ್ಲಿ ದ್ವೇಷ ಇದ್ದೇ ಇರುತ್ತದೆ. ನಾವು ಹುಶಾರಾಗಿ, ಬಿಗಿಯಾಗಿ ಇರಬೇಕು. ರಾಜಣ್ಣ ವಜಾ ಹೈಕಮಾಂಡ್ ನಿರ್ಧಾರ. ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕು. ಆಗ ಈ ರೀತಿ ಆಗುವುದಿಲ್ಲ. ಪಕ್ಷದ ನಿರ್ಧಾರದ ವಿರುದ್ಧ ಹೋಗಲು ಆಗುವು-ದಿಲ್ಲವೆಂದು ಮುಖ್ಯಮಂತ್ರಿ ಕೂಡಾ ಹೇಳಿದ್ದಾರೆ

ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

'ರಾಜಕಾರಣದಲ್ಲಿ ಷಡ್ಯಂತ್ರ ಸಹಜ'

ರಾಜಕೀಯದಲ್ಲಿ ಷಡ್ಯಂತ್ರ ಸಾಮಾನ್ಯ. ರಾಜಕಾರಣಿಗಳು ಅದನ್ನು ಎದುರಿಸಬೇಕಾಗುತ್ತದೆ. ರಾಜಣ್ಣ ಪ್ರಕರಣದಲ್ಲಿ ಷಡ್ಯಂತ್ರ ನಡೆದಿದೆಯೋ ಇಲ್ಲವೋ ಎಂಬುದು ಭವಿಷ್ಯದಲ್ಲಿ ಗೊತ್ತಾಗುತ್ತದೆ. ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡುವ ಮೂಲಕ ಪಕ್ಷದ ಶಿಸ್ತನ್ನು ಪಾಲಿಸಬೇಕು ಎಂಬ ಬಲವಾದ ಸಂದೇಶವನ್ನು ಎಲ್ಲರಿಗೂ ಪಕ್ಷ ರವಾನಿಸಿದೆ

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ

ಆತ್ಮಹತ್ಯೆಗೆ ಯತ್ನ

ಮಧುಗಿರಿ: ರಾಜಣ್ಣ ಅವರನ್ನು ವಜಾಗೊಳಿಸಿರುವುದನ್ನು ವಿರೋಧಿಸಿ ಅವರ ಬೆಂಬಲಿಗರು, ಅಭಿಮಾನಿಗಳು ಮಂಗಳವಾರ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಪ್ರತಿಭಟನೆ ನಡೆಸಿದರು. ಮೂವರು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

▶5

ನ್ಯಾ. ವರ್ಮಾ ಪದಚ್ಯುತಿಗೆ ಪ್ರಕ್ರಿಯೆ ಶುರು

ಪ್ರಜಾವಾಣಿ ವಾರ್ತೆ

ನವದೆಹಲಿ: ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧದ ನಗದು ಪತ್ತೆ ಆರೋಪಗಳ ತನಿಖೆಗಾಗಿ ಮೂವರು ಸದಸ್ಯರ ಸಮಿತಿಯನ್ನು ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ ಮಂಗಳವಾರ ರಚಿಸಿದ್ದಾರೆ.

ಸುಪ್ರೀಂ ಕೋರ್ಟ್ ನ್ಯಾ.ಅರವಿಂದ ಕುಮಾರ್, ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಮಣೀಂದರ್ ಮೋಹನ್ ಶ್ರೀವಾಸ್ತವ ಮತ್ತು ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲ ಬಿ.ವಿ. ಆಚಾರ್ಯ ಅವರು ಸಮಿತಿಯ ಸದಸ್ಯರಾಗಿರುವರು. ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಪದವೀಧರ ಆಗಿರುವ ನ್ಯಾ. ಅರವಿಂದ ಕುಮಾರ್ ಅವರು ಈ ಹಿಂದೆ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಆಗಿದ್ದರು.

▶10

Lilly A MEDICINE COMPANY
ಸಣ್ಣ ಪ್ರಮಾಣದ ತೂಕ ಇಳಿಕೆಯಿಂದಲೂ ಆರೋಗ್ಯ ಸಮಸ್ಯೆಗಳ ಅಪಾಯವನ್ನು ಕಡಿಮೆ ಮಾಡಬಹುದು ಎಂದು ನಿಮಗೆ ತಿಳಿದಿದೆಯೇ?
ನಿಮ್ಮ ದೇಹದ ತೂಕದ ಕೇವಲ 5% ರಷ್ಟು ಕಳೆದುಕೊಳ್ಳುವುದರಿಂದ ಮಧುಮೇಹದಂತಹ ಬೊಜ್ಜಿಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳ ಅಪಾಯವನ್ನು ಗಣನೀಯವಾಗಿ ಕಡಿಮೆ ಮಾಡಬಹುದು.[1,2]
ನಿಮ್ಮ ವೈದ್ಯರೊಂದಿಗೆ ತೂಕ ಇಳಿಕೆಯ ಬಗ್ಗೆ ಚರ್ಚಿಸುವ ಸಮಯ ಇದು.[3,4]
References:
1. Hall KD, Kahan S. Maintenance of lost weight and long-term management of obesity. Med Clin North Am. 2018;102(1):183-197. doi:10.1016/j.mcna.2017.08.012
2. National Institute of Diabetes and Digestive and Kidney Diseases. Preventing type 2 diabetes. Reviewed November 2016. Accessed August 5, 2024. https://www.niddk.nih.gov/health-information/diabetes/overview/preventing-type 2-diabetes
3. National Heart, Lung, and Blood Institute. Overweight and obesity: treatment. US Department of Health and Human Services. Updated March 24, 2022. Accessed October 8, 2024. https://www.nhlbi.nih.gov/health/overweight-and-obesity/treatment
4. Greenway FL. Physiological adaptations to weight loss and factors favouring weight regain. Int J Obes (Lond). 2015;39(8):1188-1196. PP-MG-IN-0561

ಕೃತಕ ಬುದ್ಧಿಮತ್ತೆ: ಪ್ರಭಾವಿಗಳ ಪಟ್ಟಿಯಲ್ಲಿ ಸಚಿವ ಪ್ರಿಯಾಂಕ್

ಬೆಂಗಳೂರು: ಅನಲಿಟಿಕ್ಸ್ ಇಂಡಿಯಾ ಮ್ಯಾಗಜಿನ್ ನಡೆಸಿದ ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ (ಎಐ) ವಲಯದ ಭಾರತದ 100 ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಒಂಬತ್ತನೇ ಸ್ಥಾನ ಪಡೆದಿದ್ದಾರೆ.

ಸುದ್ದಿ ▶5

ಚಿನಕುರುಳಿ ≡ ಪ್ರಕಾಶ್ ಶೆಟ್ಟಿ

ಹಣದುಬ್ಬರ: 8 ವರ್ಷದ ಕನಿಷ್ಠ

ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಶೇಕಡ 1.55ಕ್ಕೆ ಇಳಿಕೆ ಕಂಡಿದೆ. ಇದು ಎಂಟು ವರ್ಷಗಳ ಕನಿಷ್ಠ ಮಟ್ಟ.

ಅಷ್ಟೇ ಅಲ್ಲ, ಚಿಲ್ಲರೆ ಹಣದುಬ್ಬರ ದರವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗುರಿಯಾದ ಶೇ 2–4ರ ಮಟ್ಟಕ್ಕಿಂತ ಕೆಳಕ್ಕೆ ಬಂದಿರುವುದು 2019ರ ಜನವರಿಯ ನಂತರದಲ್ಲಿ ಇದೇ ಮೊದಲು.

ಆಹಾರ ವಸ್ತುಗಳ ಬೆಲೆಯು ಕಡಿಮೆ ಇದ್ದುದು ಚಿಲ್ಲರೆ ಹಣದುಬ್ಬರ ಪ್ರಮಾಣವು ಕಡಿಮೆ ಆಗಲು ಒಂದು ಮುಖ್ಯ ಕಾರಣ ಎಂದು ಕೇಂದ್ರ ಸರ್ಕಾರ ಮಂಗಳವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 4ರ ಹಂತದಲ್ಲಿ ಇರಬೇಕು, ಅದು ಶೇ 2ಕ್ಕಿಂತ ಕಡಿಮೆ ಆಗಬಾರದು, ಶೇ 6ಕ್ಕಿಂತ ಹೆಚ್ಚಾಗಬಾರದು ಎಂಬುದು ಆರ್‌ಬಿಐಗೆ ಕೇಂದ್ರ ಸರ್ಕಾರ ನಿಗದಿ ಮಾಡಿರುವ ಗುರಿ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಜೂನ್‌ನಲ್ಲಿ ಶೇ 2.1ರಷ್ಟು ದಾಖಲಾಗಿತ್ತು, ಹಿಂದಿನ ವರ್ಷದ ಜುಲೈನಲ್ಲಿ ಶೇ 3.6ರಷ್ಟು ಇತ್ತು. ಈ ವರ್ಷದ ಜುಲೈನಲ್ಲಿ ದಾಖಲಾಗಿರುವ ಹಣದುಬ್ಬರ ಪ್ರಮಾಣವು 2017ರ ಜೂನ್ ನಂತರದ ಅತ್ಯಂತ ಕನಿಷ್ಠ ಮಟ್ಟ. ಆ ತಿಂಗಳಲ್ಲಿ ಹಣದುಬ್ಬರ ಪ್ರಮಾಣವು ಶೇ 1.46ರಷ್ಟು ಇತ್ತು.

'ದ್ವಿದಳ ಧಾನ್ಯಗಳು ಮತ್ತು ಅವುಗಳ ಉತ್ಪನ್ನಗಳು, ಸಾರಿಗೆ ಮತ್ತು ಸಂವಹನ, ತರಕಾರಿಗಳು, ಏಕದಳ ಧಾನ್ಯಗಳು ಮತ್ತು ಅವುಗಳ ಉತ್ಪನ್ನಗಳು, ಮೊಟ್ಟೆ ಮತ್ತು ಸಕ್ಕರೆ ಬೆಲೆ ಏರಿಕೆಯ ಪ್ರಮಾಣ ತಗ್ಗಿದೆ. ಇದು ಒಟ್ಟಾರೆ ಹಣದುಬ್ಬರದ ಪ್ರಮಾಣ ಹಾಗೂ ಆಹಾರ ವಸ್ತುಗಳ ಹಣದುಬ್ಬರದ ಪ್ರಮಾಣವು ಜುಲೈ ತಿಂಗಳಲ್ಲಿ ಗಮನಾರ್ಹವಾಗಿ ಇಳಿಕೆ ಆಗಿರುವುದಕ್ಕೆ ಪ್ರಮುಖ ಕಾರಣ' ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಹೇಳಿದೆ.

ಎನ್‌ಎಸ್‌ಒ ಪ್ರಕಾರ ಜುಲೈನಲ್ಲಿ ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಶೇ (–)1.76 ಆಗಿದೆ. ಗ್ರಾಮೀಣ ಪ್ರದೇಶಗಳಲ್ಲಿನ ಪ್ರಮಾಣವು ಶೇ 1.18ರಷ್ಟು ಹಾಗೂ ನಗರ ಪ್ರದೇಶಗಳಲ್ಲಿ ಶೇ 2.05ರಷ್ಟು ಇದೆ.

▶10

'ಬೀದಿನಾಯಿಗಳಿಂದ ಮುಕ್ತಿ ನೀಡಿ'

2,400 ನಾಯಿಗಳಿಗೆ ವಿಷ ಹಾಕಿದ್ದೆವು: ಬೋಜೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದಿನಾಯಿಗಳ ಹಾವಳಿಯ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಸ್ವಾರಸ್ಯಕರ ಚರ್ಚೆ ನಡೆಯಿತು. ಚಿಕ್ಕಮಗಳೂರು ಜಿಲ್ಲೆಗೆ ನೀಡಿರುವ ಅನುದಾನದ ಬಗ್ಗೆ ಜೆಡಿಎಸ್‌ನ ಎಸ್. ಎಲ್.ಬೋಜೇಗೌಡ ಅವರು ಕೇಳಿದ್ದ ಪ್ರಶ್ನೆಗೆ ಪೌರಾಡಳಿತ ಸಚಿವ ರಹೀಂ ಖಾನ್ ಹತ್ತಾರು ಪುಟಗಳ ಉತ್ತರ ನೀಡಿದ್ದರು.

ಉತ್ತರ ಪತ್ರವನ್ನು ತಿರುವುಹಾಕಿದ ಭೋಜೇಗೌಡರು, 'ಅ ಇಂದ ಉಊವರೆಗೂ ಉತ್ತರ ನೀಡಿದ್ದಾರೆ' ಎಂದರು. ನಂತರ ಮಾತನ್ನು ಬೀದಿನಾಯಿಗಳತ್ತ ತಿರುಗಿಸಿದರು. 'ಮಹಾಸ್ವಾಮಿ, ನಗರ–ಪಟ್ಟಣಗಳಲ್ಲಿ ಬೀದಿ ನಾಯಿಗಳ ಹಾವಳಿ ವಿಪರೀತ ಹೆಚ್ಚಾಗಿದೆ. ಬೀದಿನಾಯಿಗಳಿಗೆ ಏನಾದರೂ ಮಾಡಬೇಕು' ಎಂದರು.

ರಹೀಂ ಖಾನ್, 'ಸುಪ್ರೀಂ ಕೋರ್ಟ್ ಆದೇಶವಿದೆ. ಅವುಗಳಿಗೆ ಲಸಿಕೆ ಹಾಕಿಬಿಡಬಹುದು. ಬೇರೇನೂ ಮಾಡಲು ಸಾಧ್ಯವಿಲ್ಲ. ಸುಪ್ರೀಂ ಕೋರ್ಟ್ ಅದಕ್ಕೆ ಅನುಮತಿಸುವುದಿಲ್ಲ' ಎಂದು ಉತ್ತರಿಸಿದರು.

▶6

'ಸುಪ್ರೀಂ' ಆದೇಶಕ್ಕೆ ಸಿ.ಎಂ ಆಕ್ಷೇಪ

'ಮಾನವ ಸಮಾಜವು ತನಗೆ ಮತ್ತು ಪ್ರಾಣಿಗಳ ಭದ್ರತೆಯನ್ನು ಎತ್ತಿಹಿಡಿಯುವ ಪರಿಹಾರ ಕಂಡುಕೊಳ್ಳುತ್ತದೆಯೇ ಹೊರತು ಬೀದಿನಾಯಿಗಳನ್ನು ಉಪದ್ರವ ಎಂದು ಪರಿಗಣಿಸಿ, ಹೊರಹಾಕುವುದಿಲ್ಲ. ಹಾಗೆ ಮಾಡುವುದು ಕ್ರೌರ್ಯ ಎನಿಸಿಕೊಳ್ಳುತ್ತದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ದೆಹಲಿಯಿಂದ ಬೀದಿನಾಯಿಗಳನ್ನು ಒಂದು ವಾರದಲ್ಲಿ ಹೊರಹಾಕಿ ಎಂದು ಸುಪ್ರೀಂ ಕೋರ್ಟ್ ನೀಡಿದ ಆದೇಶವನ್ನು ಖಂಡಿಸಿ ರಾಹುಲ್ ಗಾಂಧಿ ಅವರು ಮಾಡಿರುವ 'ಎಕ್ಸ್' ಪೋಸ್ಟ್ ಅನ್ನು ಸಿದ್ದರಾಮಯ್ಯ ಅವರು ರಿಪೋಸ್ಟ್ ಮಾಡಿದ್ದಾರೆ. 'ನಮ್ಮೆದುರು ಸಂತಾನಶಕ್ತಿ ಹರಣ ಚಿಕಿತ್ಸೆ, ಲಸಿಕೆ, ಆರೈಕೆ ಕೇಂದ್ರಗಳಂತಹ ಪರಿಹಾರ ಕ್ರಮಗಳಿವೆ. ಭಯಗ್ರಸ್ತ ಮನಸ್ಥಿತಿಯಿಂದ ಕೈಗೊಂಡ ಕ್ರಮಗಳು ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಸುತ್ತವೆ' ಎಂದಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ, ಅಲ್ಲಲ್ಲಿ ಮಳೆ ಸಾಧ್ಯತೆ

ನಾಳೆ ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲ ಮಂಡಳಿಯ ವಿವಿಧ ಉಪ ವಿಭಾಗಗಳಲ್ಲಿ ಆ.14ರ ಬೆಳಿಗ್ಗೆ 9.30ರಿಂದ 11 ಗಂಟೆವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಉತ್ತರ-2-1, ದಕ್ಷಿಣ-1-1, ದಕ್ಷಿಣ-2-1, ನೈರುತ್ಯ -1, ನೈರುತ್ಯ - 4, ಪೂರ್ವ -1-2, ಪೂರ್ವ -2-2, ಆಗ್ನೇಯ - 2, ಆಗ್ನೇಯ – 5, ಪಶ್ಚಿಮ-1-2 ಮತ್ತು ಪಶ್ಚಿಮ-2-2, ಉಪವಿಭಾಗಗಳಲ್ಲಿ ನೀರಿನ ಬಿಲ್, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹಯೇತರ ಬಳಕೆಗೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ನೀಡಲು ಆದಾಲತ್ ನಡೆಸಲಾಗುತ್ತಿದೆ.

ಸಾರ್ವಜನಿಕರು ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿ 24/7 ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಕ್ಕೆ ಕರೆ ಮಾಡಿ ದೂರುಗಳನ್ನು ದಾಖಲಿಸಬಹುದು. ವಾಟ್ಸ್ ಆ್ಯಪ್ ಸಂಖ್ಯೆ 8762228888ಕ್ಕೆ ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದಾಗಿದೆ ಎಂದು ಬೆಂಗಳೂರು ಜಲ ಮಂಡಳಿ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಪುನರ್ ಮುದ್ರಿತ ಕಾದಂಬರಿ ಜನಾರ್ಪಣೆ

ಬೆಂಗಳೂರು: ಸಂಗೀತಗಾರರೊಬ್ಬರು ಐದು ಕಾದಂಬರಿಗಳನ್ನು ಬರೆಯುವ ಮೂಲಕ ಕನ್ನಡ ಸಾಹಿತ್ಯದಲ್ಲಿ ದಾಖಲೆ ಬರೆದಿದ್ದಾರೆ ಎಂದು ಅಂಕಣಕಾರ ಎನ್. ಎಸ್.ಶ್ರೀಧರಮೂರ್ತಿ ಹೇಳಿದರು.

ನಗರದ ನರಸಿಂಹರಾಜ ಕಾಲೋನಿಯ ಪತ್ತಿ ಸಭಾಂಗಣದಲ್ಲಿ ಮಧ್ವಾದಿರಾಜ ಆರಾಧನಾ ಟ್ರಸ್ಟ್ (ಶಾರದಾ ಕಲಾಕೇಂದ್ರ) ಹಾಗೂ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ಆಯೋಜಿಸಿದ್ದ ಸಮಾರಂಭದಲ್ಲಿ ವಿದ್ವಾನ್ ಆರ್. ಕೆ. ಪದ್ಮನಾಭ ಅವರ ಐದು ಕಾದಂಬರಿಗಳ ಪುನರ್ ಮುದ್ರಣದ ಕೃತಿಗಳ ಜನಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಅನಂತನಾದ, ನಾದ ಬಿಂದು, ವಿಪ್ರ ವಿಕ್ರಮ, ಸುವರ್ಣಗಾನ, ಬೇವು ಬೆಲ್ಲ ಕಾದಂಬರಿಯನ್ನು ಆರ್.ಕೆ.ಪದ್ಮನಾಭ ಅವರು ರಚಿಸಿ ಭಿನ್ನ ಶಿಸ್ತುಗಳ ಅಂತರ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು.

ಶಾಂತಾ ನಾಗಮಂಗಲ, ಗಿರಿಜಾ ರಾಜ್, ಬಿ. ಎಸ್. ಚಂದ್ರಶೇಖರ್, ರಂಜನೀ ಕೀರ್ತಿ, ಜಿ. ಎನ್. ನರಸಿಂಹಮೂರ್ತಿ ಅವರು ಕಾದಂಬರಿಗಳ ಕುರಿತು ಮಾತನಾಡಿದರು. ಪ್ರತಿಷ್ಠಾನದ ಅಧ್ಯಕ್ಷ ಬೆಂ. ಶ್ರೀ.ರವೀಂದ್ರ ಅಧ್ಯಕ್ಷತೆ ವಹಿಸಿದ್ದರು.

ಫಲಪುಷ್ಪ ಪ್ರದರ್ಶನವೋ, ಕಿರು ಮಾರುಕಟ್ಟೆಯೋ!

ಲಾಲ್‌ಬಾಗ್‌ನಲ್ಲಿ ತೆರೆಯುವ ತಾತ್ಕಾಲಿಕ ಮಳಿಗೆಗಳಿಂದ ₹24.68 ಲಕ್ಷ ಆದಾಯ

● ಖಲೀಲಅಹ್ಮದ ಶೇಖ

ಬೆಂಗಳೂರು: ಆಲಂಕಾರಿಕ ವಸ್ತುಗಳು, ಅಡುಗೆಮನೆ ಸಾಮಗ್ರಿಗಳು, ಸಿದ್ಧ ಉಡುಪುಗಳು, ತಿಂಡಿ–ತಿನಿಸು, ಮೌಲ್ಯವರ್ಧಿತ ಸಿರಿಧಾನ್ಯ ಉತ್ಪನ್ನಗಳ ಮಳಿಗೆಗಳಿಗೆ ಲಗ್ಗೆ ಇಟ್ಟಿದ್ದ ಸಾರ್ವಜನಿರು, ತಮಗೆ ಬೇಕಾದ ವಸ್ತುಗಳನ್ನು ಖರೀದಿಸುತ್ತಿದ್ದರು. ಇದು ಕಿರು ಮಾರುಕಟ್ಟೆಯ ಪ್ರಾಂಗಣದಂತೆ ಭಾಸವಾಯಿತು.

ಲಾಲ್‌ಬಾಗ್ ಸಸ್ಯೋದ್ಯಾನದಲ್ಲಿ ಕಂಡು ಬರುವ ದೃಶ್ಯಗಳು ಇವು.

ತೋಟಗಾರಿಕೆ ಇಲಾಖೆಯು ಸ್ವಾತಂತ್ರ್ಯೋತ್ಸವದ ಅಂಗವಾಗಿ ಫಲಪುಷ್ಪ ಪ್ರದರ್ಶನ ಆಯೋಜಿಸಿದೆ. ಇದಕ್ಕಾಗಿ ಗಾಜಿನ ಮನೆಯ ಹಿಂಭಾಗದಲ್ಲಿ 148 ತಾತ್ಕಾಲಿಕ ವಾಣಿಜ್ಯ ಮಳಿಗೆಗಳನ್ನು ತೆರೆಯಲು ಅವಕಾಶ ನೀಡಿದೆ. ಉದ್ಯಾನದ ಆವರಣದಲ್ಲಿರುವ ಅಧಿಕೃತ ಮಾರಾಟ ಮಳಿಗೆಗಳಲ್ಲಿ ಆಟಿಕೆಗಳು, ಗೃಹ ಉಪಯೋಗಿ, ಕರಕುಶಲ ವಸ್ತುಗಳು, ಅಡುಗೆ ಪದಾರ್ಥಗಳು, ಬ್ಯಾಗ್, ಪರ್ಸ್, ಉಪ್ಪಿನಕಾಯಿ, ಹಪ್ಪಳ, ಒಣ ಹಣ್ಣುಗಳು, ಐಸ್ ಕ್ರೀಮ್, ಮಸಾಲೆ ಪದಾರ್ಥಗಳು, ಅಗರಬತ್ತಿ, ಫೋಟೊ ಫ್ರೇಮ್, ಕೃತಕ ಹೂವುಗಳು ಸೇರಿದಂತೆ ವಿವಿಧ ವಸ್ತುಗಳ ಖರೀದಿಗೆ ಜನ

ಮಳಿಗೆಗಳ ವಿಧಗಳು	ಮಳಿಗೆಗಳ ಸಂಖ್ಯೆ	12 ದಿನಕ್ಕೆ ಬಾಡಿಗೆ
'ಎ' ಮಾದರಿ ಮಳಿಗೆಗಳು	46	₹26,000
'ಬಿ' ಮಾದರಿ ಮಳಿಗೆಗಳು	48	₹16,000
'ಸಿ' ಮಾದರಿ ಮಳಿಗೆಗಳು	50	₹8,000
ತೆರೆದ ಪ್ರದೇಶದ ನರ್ಸರಿಗಳು	4	₹26,000
12 ದಿನಕ್ಕೆ ಸಂಗ್ರಹವಾಗುವ ಒಟ್ಟು ಬಾಡಿಗೆ ಮೊತ್ತ		₹24,68,000

ಲಾಲ್‌ಬಾಗ್‌ನ ಗಾಜಿನ ಮನೆಯ ಹಿಂಭಾಗದಲ್ಲಿ ಕಿರು ಮಾರುಕಟ್ಟೆಯಲ್ಲಿ ಸಾರ್ವಜನಿಕರು ಉತ್ಪನ್ನಗಳನ್ನು ಖರೀದಿಸಿದರು

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಮುಗಿಬಿದ್ದಿದ್ದರು. ಬಹುತೇಕ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಚೀಲ ಕಂಡು ಬಂದವು. ಇದರಿಂದ ಉದ್ಯಾನದ ಸಸ್ಯ ಸಂಪತ್ತಿಗೆ ಧಕ್ಕೆಯಾಗುವ ಸಾಧ್ಯತೆ ಇದೆ ಎಂಬುದು ಸಾರ್ವಜನಿಕರ ಆರೋಪ.

ತೋಟಗಾರಿಕೆಯ ಬಗ್ಗೆ ಮಾಹಿತಿ ನೀಡುವ ಮಳಿಗೆಗಳಿಗೆ ಇಲ್ಲಿ ಆದ್ಯತೆ ನೀಡಲಾಗುತ್ತಿದೆ ಎಂಬುದು ತೋಟಗಾರಿಕೆ ಇಲಾಖೆಯ ವಾದ. ಆದರೆ ಇಲ್ಲಿ ಅಂತಹ ಮಳಿಗೆಗಳ ಸಂಖ್ಯೆ ಬಹಳ ಕಡಿಮೆ ಇವೆ ಎಂಬುದು ಪರಿಸರ ಪ್ರೇಮಿಗಳ ದೂರು.

'ಲಾಲ್‌ಬಾಗ್‌ನಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಎಲ್ಲೆಂದರಲ್ಲಿ ಕಸ ಎಸೆಯುವ ಹಾಗೂ ಪ್ಲಾಸ್ಟಿಕ್ ಬಳಕೆ ಮಾಡುವ ಮಳಿಗೆಯನ್ನು ತೆರವುಗೊಳಿಸಲಾಗುತ್ತದೆ. ಈ ಬಾರಿ ಇಂತಹ ಮೂರು ಮಳಿಗೆಗಳನ್ನು ತೆರವುಗೊಳಿಸಲಾಗಿದೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದರು.

'ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ, ಮಾವು, ಹಲಸಿನ ಮೇಳದ ಸಂದರ್ಭದಲ್ಲಿ ತಾತ್ಕಾಲಿಕ ವಾಣಿಜ್ಯ ಮಳಿಗೆಗಳನ್ನು ತೆರೆಯಲಾಗುತ್ತಿದೆ. ಪ್ಲಾಸ್ಟಿಕ್ ಸೇರಿದಂತೆ ಪರಿಸರಕ್ಕೆ ಹಾನಿಯಾಗುವ ಯಾವುದೇ ರೀತಿಯ ವಸ್ತುಗಳನ್ನು ಬಳಕೆ ಮಾಡುವುದನ್ನು ನಿಷೇಧಿಸಲಾಗಿದೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮಳಿಗೆ ತೆರೆಯಲು ಅರ್ಜಿ ಸಲ್ಲಿಸುವವರಿಗೆ ಮೊದಲೇ ಈ ಬಗ್ಗೆ ಸೂಚನೆ ನೀಡಲಾಗುತ್ತದೆ. ಇದಕ್ಕಾಗಿಯೇ ವ್ಯಾಪಾರಸ್ಥರಿಂದ ಮುಂಗಡವಾಗಿ ₹5 ಸಾವಿರ ಪಡೆದುಕೊಳ್ಳಲಾಗುತ್ತದೆ. ಪ್ಲಾಸ್ಟಿಕ್ ಬಳಕೆ ಮಾಡಿದರೆ, ಆ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆಯನ್ನು ತೆರವುಗೊಳಿಸಲಾಗುತ್ತದೆ' ಎಂದರು.

'ಈ ಬಾರಿಯ ಫಲಪುಷ್ಪ ಪ್ರದರ್ಶನವು 12 ದಿನ ನಡೆಯುತ್ತದೆ. ಇದಕ್ಕಾಗಿಯೇ ಲಾಲ್‌ಬಾಗ್‌ನ ಆವರಣದಲ್ಲಿ ವಾಣಿಜ್ಯ ಮಳಿಗೆಗಳನ್ನು ತೆರೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಿ, ತೋಟಗಾರಿಕೆ ಇಲಾಖೆಯ ಪರಿಕರಗಳು, ಈ ಬಗ್ಗೆ ಮಾಹಿತಿ ನೀಡುವ ಹಾಗೂ ಪರಿಸರಕ್ಕೆ ಪೂರಕವಾಗಿರುವ 148 ಮಳಿಗೆಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿತ್ತು. ಮಳಿಗೆಗಳನ್ನು ತೆರೆಯಲು ಲಾಲ್‌ಬಾಗ್‌ನಲ್ಲಿ ಪ್ರತ್ಯೇಕ ಪ್ರಾಂಗಣ ಇದೆ. ಅಲ್ಲಿಯೇ ವ್ಯಾಪಾರ–ವಹಿವಾಟು ಮಾಡಲಾಗುತ್ತಿದೆ. ಇದರಿಂದ ಉದ್ಯಾನದ ಸಸ್ಯ ಸಂಪತ್ತಿಗೆ ಯಾವುದೇ ರೀತಿಯ ಹಾನಿ ಆಗುವುದಿಲ್ಲ' ಎಂದು ಮಾಹಿತಿ ನೀಡಿದರು.

7 ಶೇಡ್ಸ್ ಛಾಯಾಗ್ರಹಣ ಪ್ರದರ್ಶನ 15ರಿಂದ

ಬೆಂಗಳೂರು: 7 ಶೇಡ್ಸ್ ತಂಡವು ಆಗಸ್ಟ್ 15ರಿಂದ 26ರವರೆಗೆ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ ಛಾಯಾಗ್ರಹಣ ಪ್ರದರ್ಶನ ಆಯೋಜಿಸಿದೆ.

ನವೀನ್ ಕುಮಾರ್, ಪ್ರಮೋದ್ ಸ್ಟೀಫನ್, ಅಶೋಕ್ ಮನ್ಸೂರ್, ಇಂದ್ರಕುಮಾರ್, ಸಂತೋಷ್, ರವಿಕಿರಣ ಅವರ ಛಾಯಾಚಿತ್ರಗಳು ಪ್ರದರ್ಶನಗೊಳ್ಳಲಿವೆ. ಪ್ರದರ್ಶನವು ಬೆಳಿಗ್ಗೆ 11ರಿಂದ ಸಂಜೆ 7ರವರೆಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

THE BANGALORE CITY INSTITUTE®
No.8, Pampa Mahakavi Road, opposite Makkala Koota, Basavanagudi, Bangalore 560004
Phone No: 080-26678472 Email: office@nammabci.in
Estd 1902

NOTICE INVITING TENDER

Tenders are invited by The Bangalore City Institute, No.8, Pampa Mahakavi Road, Basavanagudi, Bangalore 560004, for the following works:

DESCRIPTION OF WORK

1. Renovation of Compound wall (North to South and East to West on PMK Road), Gate & Entrance Elevation.
2. Renovation of Fine Dining area on the ground floor.

For more details, please contact **Sukumar Kuna, President, BCI @ Mobile No. 9663376136** and collect the tender documents before 7 days of this notification.

Sd/- **Hon. Secretary**
The Bangalore City Institute

ಕಾಂಗ್ರೆಸ್‌ಗೆ ಅಕ್ಕೈ ಪದ್ಮಶಾಲಿ ರಾಜೀನಾಮೆ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ ಸಮುದಾಯದ ಹಕ್ಕುಗಳ ಹೋರಾಟಗಾರ್ತಿ ಹಾಗೂ ಕೆಪಿಸಿಸಿ ಉಪಾಧ್ಯಕ್ಷೆ ಅಕ್ಕೈ ಪದ್ಮಶಾಲಿ ಅವರು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಅಕ್ಕೈ ಪದ್ಮಶಾಲಿ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಅವರು, ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿದ್ದು ಕೂಡಲೇ ಅಂಗೀಕರಿಸಬೇಕು ಎಂದು ಮನವಿ ಮಾಡಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತರ ಸಮುದಾಯವು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಕಾನೂನು, ಮೂಲಭೂತ ಹಕ್ಕುಗಳು, ನೀತಿ ನಿರೂಪಣೆಯ ನೆಲಗಟ್ಟಿನಿಂದ ಹಿಂದುಳಿದಿದೆ. ಸಮುದಾಯವನ್ನು ಸಂಘಟಿಸುವ ಕಾರಣಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ತಿಳಿಸಿದ್ದಾರೆ.

'ಶ್ರಮ ಪಟ್ಟರೆ ಪ್ರತಿಫಲ ಸಿಗಲಿದೆ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಶ್ರಮ ಪಟ್ಟು ಅಭ್ಯಾಸ ಮಾಡಿದರೆ ಮುಂದೆ ತಕ್ಕ ಪ್ರತಿಫಲ ದೊರಕುವುದು ಖಚಿತ. ಹಾಗಾಗಿ ಚಂಚಲ ಮನಸ್ಸಿಗೆ ಕಡಿವಾಣ ಹಾಕಿ ಏಕಾಗ್ರತೆಯಿಂದ ಓದಿನ ಕಡೆ ಗಮನಹರಿಸಬೇಕು' ಎಂದು ಶಾಸಕ ಎಸ್. ಮುನಿರಾಜು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾಳಸ್ರೀ ನಗರದ ಸರ್ಕಾರಿ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್, ರೆಡ್ ಕ್ರಾಸ್, ಕನ್ನಡ ಸಂಘ ಮತ್ತು ವಿವಿಧ ಸಮಿತಿಗಳ 2025-26ನೇ ಸಾಲಿನ ಚಟುವಟಿಕೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಓದು, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದನ್ನು ರೂಢಿಸಿಕೊಳ್ಳಿ. ಪ್ರತಿದಿನ ದಿನಪತ್ರಿಕೆ ಓದುವುದರಿಂದ ಜ್ಞಾನಾರ್ಜನೆ ಹೆಚ್ಚುತ್ತದೆ' ಎಂದರು.

ಕಳೆದ ಸಾಲಿನಲ್ಲಿ ಶೇ 85ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ನೀಡಲಾಗುವುದು. ವಿದ್ಯಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದಾಗ ಇನ್ನೂ ಹೆಚ್ಚು ಅಂಕ ಪಡೆಯಬಹುದು ಎಂಬ ಉದ್ದೇಶ ನಮ್ಮದು' ಎಂದು ತಿಳಿಸಿದರು. ಸರ್ಕಾರಿ ಶಾಲೆಯ ಮಕ್ಕಳು ಉತ್ತಮ ವಿದ್ಯಾಭ್ಯಾಸದಿಂದ ವಂಚಿತರಾಗಬಾರದೆಂದು ಕ್ಷೇತ್ರದ ಎಲ್ಲಾ ಶಾಲೆಗಳಿಗೆ ಸೂರಜ್ ಫೌಂಡೇಷನ್ ವತಿಯಿಂದ ಸಹಾಯ ಮಾಡಲಾಗುತ್ತಿದೆ' ಎಂದು ಹೇಳಿದರು.

ಪ್ರಾಂಶುಪಾಲೆ ಅಮೃತಾಕ್ಷಿ ಜಿ, 'ನಮ್ಮ ಕಾಲೇಜಿಗೆ ಇರುವ ಅನೇಕ ಕೊರತೆಗಳನ್ನು ಶಾಸಕರು ಬಗೆಹರಿಸಿದ್ದಾರೆ, ಇನ್ನು ಕಟ್ಟಡದ ಅವಶ್ಯಕತೆ ಇದೆ. ನೂತನವಾಗಿ ನಿರ್ಮಿಸಿರುವ ಕೊಠಡಿಗಳನ್ನು ನೀಡಿದರೆ ಉಪಯೋಗವಾಗುತ್ತದೆ' ಎಂದು ಮನವಿ ಮಾಡಿದರು.

ಸಮಾರಂಭದಲ್ಲಿ ಸೂರಜ್ ಫೌಂಡೇಷನ್ ವತಿಯಿಂದ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ ವಿತರಣೆ, ಪ್ರತಿನಿತ್ಯ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ದಿನಪತ್ರಿಕೆ ವಿತರಣೆಗೆ ಚಾಲನೆ ನೀಡಲಾಯಿತು.

ಸಮಾರಂಭದಲ್ಲಿ ಶಾಸಕ ಎಸ್. ಮುನಿರಾಜು ಮಾತನಾಡಿದರು. ಸಮಾಜ ಸೇವಕ ಬಿ.ಟಿ. ಶ್ರೀನಿವಾಸ್, ಪ್ರಾಧ್ಯಾಪಕರಾದ ಪುಟ್ಟ ನರಸಿಂಹಮೂರ್ತಿ, ಪ್ರಾಂಶುಪಾಲರಾದ ಅಮೃತಾಕ್ಷಿ, ದೇವರಾಜು, ಶಶಿಧರ್ ಇದ್ದರು.

ನವಜಾತ ಶಿಶು ತಪಾಸಣೆ ಯೋಜನೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಆಸ್ಪತ್ರೆಗಳಲ್ಲಿ ಹೆರಿಗೆಯಾದ ಶಿಶುಗಳ ಜನ್ಮಜಾತ ಸಮಸ್ಯೆಗಳ ಪತ್ತೆಗೆ ಸಂಬಂಧಿಸಿದಂತೆ 'ಸಾರ್ವತ್ರಿಕ ನವಜಾತ ಶಿಶು ತಪಾಸಣೆ ಯೋಜನೆ' ಅನುಷ್ಠಾನಕ್ಕೆ ಆರೋಗ್ಯ ಇಲಾಖೆ ಅನುಮೋದನೆ ನೀಡಿದೆ.

ಈ ಬಗ್ಗೆ ಇಲಾಖೆ ಆದೇಶ ಹೊರಡಿಸಿದ್ದು, ಪ್ರಾಯೋಗಿಕವಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ತಪಾಸಣೆ ಆರಂಭಿಸಲು ಸೂಚಿಸಲಾಗಿದೆ.

ಸಾರ್ವಜನಿಕ ಆರೋಗ್ಯ ಸೌಲಭ್ಯಗಳಲ್ಲಿ ಹೆರಿಗೆಯಾಗುವ ನವಜಾತ ಶಿಶುಗಳ ಜನ್ಮಜಾತ 'ಹೈಪೋಥೈರಾಯ್ಡಿಸಮ್', 'ಅಡ್ರಿನಲ್ ಹೈಪರ್‌ಪ್ಲಾಸಿಯಾ' (ಸಿಎಎಚ್), 'ಗ್ಯಾಲಕ್ಟೋಸೆಮಿಯಾ', 'ಫಿನೈಲ್ಕೆಟೋನೂರಿಯಾ', 'ಗ್ಲೂಕೋಸ್-6 ಫಾಸ್ಫೇಟ್ ಡಿಹೈಡ್ರೋಜಿನೇಸ್' (ಜಿ6ಪಿಡಿ) ಕೊರತೆ, ಚಯಾಪಚಯ ಅಸ್ವಸ್ಥತೆಗಳ ಸಾರ್ವತ್ರಿಕ ತಪಾಸಣೆಗೆ ಈ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರಾಯೋಗಿಕವಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ, 57,350 ನವಜಾತ ಶಿಶುಗಳ ತಪಾಸಣೆಗೆ ₹ 2.58 ಕೋಟಿಯನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಬಿಡುಗಡೆ ಮಾಡಲು ಸೂಚಿಸಲಾಗಿದೆ.

ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (ಕೆಎಂಇಆರ್‌ಸಿ) ವ್ಯಾಪ್ತಿಗೆ ಒಳಪಡುವ ತುಮಕೂರು, ಬಳ್ಳಾರಿ, ಚಿತ್ರದುರ್ಗ, ವಿಜಯಪುರ ಜಿಲ್ಲೆಗಳ ತಾಲ್ಲೂಕುಗಳಲ್ಲಿ ತಪಾಸಣೆಗೆ ಸಂಬಂಧಿಸಿದಂತೆ, ಕೆಎಂಇಆರ್‌ಸಿ ಅಡಿ ₹2.79 ಕೋಟಿ ಒದಗಿಸುವಂತೆ ತಿಳಿಸಲಾಗಿದೆ.

ನವಜಾತ ಶಿಶುಗಳ ತಪಾಸಣೆಯ ಅನುಷ್ಠಾನ, ಮೇಲ್ವಿಚಾರಣೆ, ಗುಣಮಟ್ಟಕ್ಕಾಗಿ ಪರಿಣಾಮಕಾರಿ ಕಾರ್ಯವಿಧಾನ ಅನುಸರಿಸಲು, ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯಲ್ಲಿ ರಾಜ್ಯ ನವಜಾತ ಶಿಶು ಪರೀಕ್ಷಾ ಕೇಂದ್ರ (ಎಸ್‌ಎನ್‌ಎಸ್‌ಸಿ) ಸ್ಥಾಪಿಸಲು ನಿರ್ದೇಶನ ನೀಡಲಾಗಿದೆ.

ಅರ್ಜಿ ಆಹ್ವಾನ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವ ವಿದ್ಯಾಲಯವು (ಯುವಿಸಿಇ) 2025–26ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿ ಉಪನ್ಯಾಸಕರ ವಿವಿಧ ಹುದ್ದೆಗಳಿಗೆ ಅರ್ಜಿ ಅಹ್ವಾನಿಸಿದೆ.

ಆರ್ಕಿಟೆಕ್ಚರ್, ಸಿವಿಲ್ ಎಂಜಿನಿಯರಿಂಗ್ ವಿಭಾಗದ ಅತಿಥಿ ಉಪನ್ಯಾಸಕರ ಹುದ್ದೆಗೆ ಆಸಕ್ತರು ಆಗಸ್ಟ್ 18ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ:– https://uvce.karnataka.gov.in/en ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿಳಾಸ: ಕುಲಸಚಿವರು, ಯುವಿಸಿಇ, ಕೆ.ಆರ್ ವೃತ್ತ, ಬೆಂಗಳೂರು–560 001

SANSERA ideas@work

SANSERA ENGINEERING LIMITED

CIN: L34103KA1981PLC004542
Registered Address: Plant-7, No.143/A, Jigani Link Road, Bommasandra Industrial Area, Bengaluru - 560105
Phone: 080 27839081/82/83; **Fax:** 080 27839309; **Email:** rajesh.modi@sansera.in; **Website:** www.sansera.in

UNAUDITED FINANCIAL RESULTS FOR THE QUARTER ENDED JUNE 30, 2025

The Board of Directors at the meeting held on August 11, 2025, approved the unaudited financial results of the Company for the quarter ended June 30, 2025.

The results and the Limited Review Report with unmodified opinion issued by the Statutory Auditors of the Company have been posted on the Company's website: www.sansera.in and can be accessed by scanning the below QR code.

On Behalf of the Board

Place: Bengaluru
Date: 11-08-2025

S Sekhar Vasan
Chairman & Managing Director

Note: *The above information is in accordance with Regulation 33 read with Regulation 47(1) of the SEBI (Listing Obligations and Disclosure Requirements) Regulations 2015.*

KIRLOSKAR ELECTRIC COMPANY LIMITED

REGD OFFICE: No.19, 2nd Main Road, Peenya 1st Stage, Phase-1, Peenya, Bengaluru - 560 058.
Phone no: 080-28397256; **Fax:** 080-28396727; **Website:** www.kirloskarelectric.com
Email: investors@kirloskarelectric.com; **CIN:** L31100KA1946PLC000415

EXTRACT OF STATEMENT OF UNAUDITED FINANCIAL RESULTS FOR THE QUARTER ENDED JUNE 30, 2025

(₹. in Lakhs)

Sr. No.	Particulars	STANDALONE			CONSOLIDATED		
		Quarter ended		Year ended	Quarter ended		Year ended
		June 30, 2025	June 30, 2024	March 31, 2025	June 30, 2025	June 30, 2024	March 31, 2025
		Unaudited	Unaudited	Audited	Unaudited	Unaudited	Audited
1	Total income from operations	13,320	13,440	55,075	13,320	13,445	55,157
2	Net Profit / (Loss) for the period (before Tax, Exceptional and/or Extraordinary items)	69	227	748	42	200	(596)
3	Net Profit / (Loss) for the period before tax (after Exceptional and/or Extraordinary Items)	69	227	1,743	42	200	399
4	Net Profit / (Loss) for the period after tax (after Exceptional and/or Extraordinary Items)	69	227	1,725	42	193	374
5	Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	74	231	4,592	47	197	3,241
6	Equity Share Capital	6,641	6,641	6,641	6,641	6,641	6,641
7	Reserves (excluding revaluation reserves as shown in the Balance Sheet of previous year)	NA	NA	NA	NA	NA	NA
8	Earnings Per Share (EPS) (₹.)						
	(a) Basic EPS before extra ordinary items (not annualised)	0.10	0.34	2.60	0.06	0.29	0.56
	(b) Diluted EPS before extra ordinary items (not annualised)	0.10	0.34	2.60	0.06	0.29	0.56
	(c) Basic EPS after extra ordinary items (not annualised)	0.10	0.34	2.60	0.06	0.29	0.56
	(d) Diluted EPS after extra ordinary items (not annualised)	0.10	0.34	2.60	0.06	0.29	0.56

NOTE:

1. The above unaudited standalone and consolidated financial results have been reviewed by the Audit Committee and approved by the Board of directors at its meeting held on August 12, 2025.
2. The standalone and consolidated financial results of the Company for the quarter ended June 30, 2025 have been subject to limited review by its Statutory auditors.
3. The above is an extract of the detailed format of the unaudited financial results for the quarter ended June 30, 2025 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended. The full format of the unaudited financial results are available on the stock exchange websites (www.bseindia.com, www.nseindia.com) and also on the company's website (http://www.kirloskarelectric.com/investors/investors-information/financial.html) and can also be accessed by scanning the below quick response code.

Place : Bengaluru
Date : August 12, 2025

Sd/-
Vijay R Kirloskar
Executive Chairman

ಸ್ವಾತಂತ್ರ್ಯ ದಿನಾಚರಣೆ: ಮೊದಲ ಬಾರಿಗೆ 'ಇ–ಪಾಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಆಗಸ್ಟ್ 15ರಂದು ನಡೆಯಲಿರುವ ರಾಜ್ಯಮಟ್ಟದ 79ನೇ ಸ್ವಾತಂತ್ರ್ಯ ದಿನಾಚರಣೆಗೆ ಪ್ರಥಮ ಬಾರಿಗೆ ಇ–ಪಾಸ್ ವ್ಯವಸ್ಥೆ ಜಾರಿಗೆ ತರಲಾಗಿದೆ.

ಕಾರ್ಯಕ್ರಮ ವೀಕ್ಷಿಸಲು ಆಸಕ್ತಿ ಹೊಂದಿರುವ ಸಾರ್ವಜನಿಕರು ಸೇವಾ ಸಿಂಧು ವೆಬ್‌ಸೈಟ್‌ನಿಂದ (www.sevasindhu.karnataka.gov.in) ಇ–ಪಾಸ್ ಪಡೆಯಬಹುದು.

ಪಾಸ್ ಪಡೆಯಲು ಸೇವಾ ಸಿಂಧು ವೆಬ್‌ಸೈಟ್‌ನಲ್ಲಿ ಆಧಾರ್ ಕಾರ್ಡ್‌ನ ವಿವರವನ್ನು ನಮೂದಿಸಿ ನೋಂದಾಯಿಸಿಕೊಳ್ಳಬಹುದು. ವೆಬ್‌ಸೈಟ್ ಲಾಗಿನ್ ಮಾಡಿ ಮೊಬೈಲ್ ಸಂಖ್ಯೆ ನಮೂದಿಸಿದ ನಂತರ ಬರುವ ಒಟಿಪಿ ಅನ್ನು ಅಳವಡಿಸಿ ಇ–ಪಾಸ್ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಪಾಸ್ ಹೊಂದಿರುವವರು ಬೆಳಿಗ್ಗೆ 8.15ಕ್ಕೆ ನಂ.4ರಿಂದ ಪ್ರವೇಶ ಪಡೆಯಬಹುದು. ನಂತರ, ಬಂದವರಿಗೆ ಪ್ರವೇಶ ಇರುವುದಿಲ್ಲ. ಪ್ರತಿ ಪಾಸ್‌ನಲ್ಲಿ ಒಬ್ಬರಿಗೆ ಮಾತ್ರ ಪ್ರವೇಶ. ಮುದ್ರಿತ ಅಥವಾ ಡಿಜಿಟಲ್ ಪ್ರತಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಇ–ಪಾಸ್ ಅವಶ್ಯ ಇರುವುದಿಲ್ಲ. ಪಾಸ್‌ಗಳ ಸಂಖ್ಯೆಯನ್ನು 3 ಸಾವಿರಕ್ಕೆ ಸೀಮಿತ ಮಾಡಲಾಗಿದ್ದು, ಮೊದಲು ಬಂದವರಿಗೆ ಆದ್ಯತೆ. ಇ–ಪಾಸ್ ಹೊಂದಿರುವವರಿಗೆ ಪಾರ್ಕಿಂಗ್ ಸೌಲಭ್ಯ ಒದಗಿಸುವುದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–346/1847/2025–26 ದಿನಾಂಕ: 11.08.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕೆ.ವಾಸುದೇವ ಉಡುಪ # 2609, 5ನೇ ಮುಖ್ಯರಸ್ತೆ, 9ನೇ ಕ್ರಾಸ್, ಇ–ಬ್ಲಾಕ್, ಸಹಕಾರನಗರ ಬೆಂಗಳೂರು–560092.	ಯಲಹಂಕ	ಜಾಲ	ತಿಮ್ಮಸಂದ್ರ	106	0ಎ–25ಗುಂ	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಾಣಿಜ್ಯ ಉಪಯೋಕ್ಕಾಗಿ ಅಭಿವೃದ್ಧಿಪಡಿಸಿದರೆ ಸದರಿ ಜಮೀನಿನಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸುವುದರಿಂದ, ಸಾರ್ವಜನಿಕರಿಗೆ ಉತ್ತಮ ಬೆಲೆಯಲ್ಲಿ ದಿನನಿತ್ಯ ಉಪಯೋಗದ ವಸ್ತುಗಳು ಹತ್ತಿರದಲ್ಲಿ ಲಭ್ಯವಾಗುತ್ತವೆ. ವಾಣಿಜ್ಯ ಕಟ್ಟಡಗಳು ಅಭಿವೃದ್ಧಿಪಡಿಸುವುದರಿಂದ ಸ್ಥಳೀಯರಿಗೆ ಉದ್ಯೋಗವಕಾಶಗಳು ದೊರಕುತ್ತವೆ, ಅಭಿವೃದ್ಧಿ ಕಾರ್ಯಗಳು ನಡೆಯುವಾಗ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ಸದರಿ ಜಮೀನು ನಗರ ಪ್ರದೇಶಕ್ಕೆ ಹೊಂದಿಕೊಂಡಿರುವುದರಿಂದ, ವಿನ್ಯಾಸದ ಅಭಿವೃದ್ಧಿಯಿಂದ ಸುತ್ತ ಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಹಾಗೂ ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ'** ವಲಯದಿಂದ **'ವಾಣಿಜ್ಯ'** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಒಳ ಮೀಸಲಾತಿ ವರದಿ ಜಾರಿ: ಪರ– ವಿರೋಧದ ಕೂಗು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ನೀಡುವ ಸಂಬಂಧ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗದ ವರದಿ ಜಾರಿ ಕುರಿತು ಪರ–ವಿರೋಧ ಅಭಿಪ್ರಾಯ ವ್ಯಕ್ತವಾಗಿದೆ. ನಗರದಲ್ಲಿ ಮಂಗಳವಾರ ವಿವಿಧ ಸಂಘಟನೆಗಳು ಈ ಸಂಬಂಧ ಪ್ರತ್ಯೇಕವಾಗಿ ಸಭೆ ನಡೆಸಿವೆ. ವರದಿ ಜಾರಿ ಮಾಡಬೇಕೆಂದು ಕರ್ನಾಟಕ ಮಾದಿಗ ಮತ್ತು ಉಪ ಜಾತಿಗಳ ಒಳ ಮೀಸಲಾತಿ ಒಕ್ಕೂಟ ಆಗ್ರಹಿಸಿದರೆ, ಮೀಸಲಾತಿ ಸಂರಕ್ಷಣಾ ಒಕ್ಕೂಟ–ಕರ್ನಾಟಕ ವಿರೋಧಿಸಿದೆ. ವರದಿ ಜಾರಿಗೊಳಿಸಬೇಕು ಎಂದು ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟ ಆಗ್ರಹಿಸಿದೆ.

18ರಿಂದ ಅಸಹಕಾರ ಚಳವಳಿ

ಇದೇ 16ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ನೀಡುವ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಆಯೋಗದ ವರದಿಯನ್ನು ಅಂಗೀಕರಿಸದಿದ್ದರೆ, 17ರಂದು ಜಿಲ್ಲಾ ಕೇಂದ್ರದಲ್ಲಿ ಸಭೆ ನಡೆಸಿ, 18ರಿಂದ ಅಸಹಕಾರ ಚಳವಳಿ ನಡೆಸಲು ಕರ್ನಾಟಕ ಮಾದಿಗ ಮತ್ತು ಉಪ ಜಾತಿಗಳ ಒಳ ಮೀಸಲಾತಿ ಒಕ್ಕೂಟ ನಿರ್ಧರಿಸಿದೆ.

ಕರ್ನಾಟಕ ಮಾದಿಗ ಸಂಘಟನೆಗಳ ಒಕ್ಕೂಟ ಆಯೋಜಿಸಿದ್ದ ಎಚ್.ಎನ್. ನಾಗಮೋಹನ್ ದಾಸ್ ಆಯೋಗದ ವರದಿಯ ಅನುಷ್ಠಾನದ ಕುರಿತ ಕಾರ್ಯಾಗಾರದಲ್ಲಿ ಬಿ.ವೈ.ವಿಜಯೇಂದ್ರ, ದುರ್ಯೋಧನ ಐಹೊಳೆ, ಎ.ನಾರಾಯಣಸ್ವಾಮಿ, ಗೋವಿಂದ ಕಾರಜೋಳ, ಬಸವರಾಜ ಮತ್ತಿಮಡು, ಎಸ್.ಆರ್.ವಿಶ್ವನಾಥ, ಹನುಮಂತಪ್ಪ ಅವರು ಕೈ ಎತ್ತಿ ಒಗ್ಗಟ್ಟು ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

ಸಂಸದ ಗೋವಿಂದ ಕಾರಜೋಳ ಮಾತನಾಡಿ, 'ನಾವು ಯಾವುದೇ ಸಮುದಾಯದ ವಿರುದ್ಧ ಹೋರಾಟ ಮಾಡುತ್ತಿಲ್ಲ. ಮಾದಿಗ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು. ನಾಗಮೋಹನ್ ದಾಸ್ ವರದಿಯನ್ನಾದರೂ ಜಾರಿ ಮಾಡಲಿ ಅಥವಾ ಮಾಧುಸ್ವಾಮಿ ವರದಿಯನ್ನಾದರೂ ಅನುಷ್ಠಾನಕ್ಕೆ ತರಲಿ' ಎಂದರು.

ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ ಮಾತನಾಡಿ, 'ಕೇವಲ ಮೀಸಲಾತಿ ನೀಡುವುದಲ್ಲ. ವಿಶೇಷವಾದ ಯೋಜನೆಗಳನ್ನು ಘೋಷಿಸಬೇಕು. ಸಿಇಟಿಯಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಮಾದಿಗರು ಉತ್ತೀರ್ಣರಾಗಿದ್ದಾರೆ. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಇತರೆ ಸಮುದಾಯದವರ ದಾಖಲಾತಿ ಪ್ರಮಾಣವು 2,500 ಇದ್ದರೆ, ನಾವು ಕೇವಲ 600 ಜನರು ದಾಖಲಾಗಿದ್ದೇವೆ. ಇದು ಶೈಕ್ಷಣಿಕ ಸ್ಥಿತಿಗತಿಯನ್ನು ತೋರಿಸುತ್ತದೆ' ಎಂದು ವಿವರಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕಾರ್ಯಾಗಾರ ಉದ್ಘಾಟಿಸಿದರು. ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿದರು. ಸಂಸದ ರಮೇಶ್ ಜಿಗಜಿಣಗಿ, ಶಾಸಕರಾದ ಬಸವರಾಜ ಮತ್ತಿಮಡು, ದುರ್ಯೋಧನ ಐಹೊಳೆ, ವಕ್ತಾರ ಎಚ್. ವೆಂಕಟೇಶ್ ದೊಡ್ಡೇರಿ, ಎಸ್.ಸಿ ಮೋರ್ಚಾ ಉಪಾಧ್ಯಕ್ಷ ಹೂಡಿ ಮಂಜುನಾಥ್, ನಿವೃತ್ತ ಐಎಎಸ್ ಅಧಿಕಾರಿ ಅನಿಲ್ ಕುಮಾರ್, ಮುಖಂಡ ಅಂಬಣ್ಣ, ಶಂಕರಪ್ಪ ಭಾಗವಹಿಸಿದ್ದರು.

ಹೋರಾಟದ ಎಚ್ಚರಿಕೆ

ವರದಿಯನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಏಕಪಕ್ಷೀಯವಾಗಿ ಅನುಮೋದಿಸಿದರೆ, ರಾಜ್ಯ ಸರ್ಕಾರದ ವಿರುದ್ಧ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಒಳ ಮೀಸಲಾತಿ ಕುರಿತ ರಾಜ್ಯ ಮಟ್ಟದ ಚಿಂತನಾಸಭೆಯಲ್ಲಿಎಚ್ಚರಿಕೆನೀಡಲಾಯಿತು.

ಮೀಸಲಾತಿ ಸಂರಕ್ಷಣಾ ಒಕ್ಕೂಟ–ಕರ್ನಾಟಕ ಆಯೋಜಿಸಿದ್ದ ಸಭೆಯಲ್ಲಿ ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ವಿಧಾನ ಪರಿಷತ್ ಮಾಜಿ ಸದಸ್ಯ ಪ್ರಕಾಶ್ ರಾಥೋಡ್, ಭೀಮ ಆರ್ಮಿಯ ರಾಜ ಗೋಪಾಲ್, ಆದರ್ಶ ಯಲ್ಲಪ್ಪ, ಅನಂತ್ ನಾಯಕ್ ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರು ಒಮ್ಮತದ ನಿರ್ಣಯಗಳನ್ನು ಕೈಗೊಂಡರು.

'ಸೋರಿಕೆಯಾಗಿರುವ ವರದಿಯ ಅಂಶಗಳು ಅಪೂರ್ಣ, ಅವೈಜ್ಞಾನಿಕ, ಅಸ್ಪಷ್ಟ ಮತ್ತು ನ್ಯಾಯ ಸಮ್ಮತವಲ್ಲದ ಶಿಫಾರಸ್ಸುಗಳನ್ನು ಒಳಗೊಂಡಿವೆ. ಕಳೆದ 50 ವರ್ಷಗಳಿಂದ 101 ಸಮುದಾಯಗಳ ಸ್ಥಿತಿಗತಿಗಳ ಮಾಹಿತಿ, ಸಮೀಕ್ಷೆಯ ಸಮಗ್ರ ದತ್ತಾಂಶಗಳನ್ನು ಬಿಡುಗಡೆಗೊಳಿಸಬೇಕು. ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಸಮುದಾಯಗಳಿಂದ ಆಕ್ಷೇಪಣೆ ಸ್ವೀಕರಿಸಲು ಮೂರು ತಿಂಗಳ ಕಾಲಾವಕಾಶ ನೀಡಬೇಕು' ಎಂದು ಒತ್ತಾಯಿಸಲಾಯಿತು.

'ವರದಿಯಲ್ಲಿ ಹೊಲಯ, ಛಲವಾದಿ, ಬಂಜಾರ, ಭೋವಿ, ಕೊರಮ, ಕೊರಚ, ಚರ್ಮಕಾರ, ಸಮಗಾರ, ಚಮ್ಮಾರ ಮತ್ತಿತರ ಸಮುದಾಯಗಳಿಗೆ ಅನ್ಯಾಯ ಆಗಿರುವುದು ಕಂಡು ಬಂದಿದೆ. ಸರ್ಕಾರ ಹೊಸ ಆಯೋಗ ಅಥವಾ ಸದನ ಸಮಿತಿ ರಚಿಸಿ, ಇದನ್ನು ಸರಿಪಡಿಸಬೇಕು' ಎಂದು ಪರಿಶಿಷ್ಟ ಜಾತಿ ಸಮುದಾಯಗಳ ಜಂಟಿ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಗೆ, ಎಲ್ಲ ಶಾಸಕರಿಗೆ ಹಕ್ಕೊತ್ತಾಯ ಸಲ್ಲಿಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

'ಬಲಗೈ ಸಮುದಾಯಕ್ಕೆ ಅನ್ಯಾಯ'

ನಾಗಮೋಹನ್ ದಾಸ್ ಆಯೋಗದ ವರದಿಯು ನ್ಯೂನತೆಗಳಿಂದ ಕೂಡಿದ್ದು, ಅವುಗಳನ್ನು ಸರಿಪಡಿಸಬೇಕು. ಇಲ್ಲದಿದ್ದರೆ ಒಳ ಮೀಸಲಾತಿ ಹಂಚಿಕೆ ಮಾಡುವ ಸಂದರ್ಭದಲ್ಲಿ ಬಲಗೈ ಸಮುದಾಯಗಳಿಗೆ ಅನ್ಯಾಯವಾಗಲಿದೆ ಎಂದು ಜೈಭೀಮ ಸಾಮಾಜಿಕ ಪರಿವರ್ತನಾ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ದಾಸಯ್ಯ ಆರೋಪಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಾಗಮೋಹನ್ ದಾಸ್ ವರದಿಯಲ್ಲಿ ಒಳ ಮೀಸಲಾತಿ ಹಂಚಿಕೆ ಮಾಡುವ ಪ್ರಸ್ತಾವದಲ್ಲಿ ಬಲಗೈ ಸಮುದಾಯವನ್ನು ಬೇರೆ–ಬೇರೆ ವರ್ಗಗಳಲ್ಲಿ ಸೇರಿಸಲಾಗಿದೆ. ಇದರಿಂದ ನಮ್ಮ ಸಮುದಾಯಕ್ಕೆ ಅನ್ಯಾಯ ಆಗುವ ಸಾಧ್ಯತೆ ಇದ್ದು, ಇದನ್ನು ಸರಿಪಡಿಸುವ ಕೆಲಸವಾಗಬೇಕು' ಎಂದು ಆಗ್ರಹಿಸಿದರು.

'ಎರಡು ಅಥವಾ ಹೆಚ್ಚಿನ ಜಾತಿಗಳ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಹೋಲಿಸಿದಾಗ ಸಾಮ್ಯತೆ ಕಂಡು ಬಂದಲ್ಲಿ ಅವುಗಳನ್ನು ಒಟ್ಟಾರೆ ಗುಂಪುಗಳನ್ನಾಗಿ ಸೇರಿಸಬೇಕು. ಆದರೆ ಇದನ್ನು ಮನಸೋ ಇಚ್ಛೆ ಉಲ್ಲಂಘನೆ ಮಾಡಿ, ಬಲಗೈ ಸಮುದಾಯವನ್ನು ಪ್ರವರ್ಗ–ಎ, ಪ್ರವರ್ಗ–ಬಿ ಪ್ರವರ್ಗ–ಸಿ ಹಾಗೂ ಪ್ರವರ್ಗ–ಇ ಗುಂಪಿನಲ್ಲಿ ಸೇರಿಸಲಾಗಿದೆ' ಎಂದು ದೂರಿದರು.

15ರಂದು ಜಿಲ್ಲಾ ಉಸ್ತುವಾರಿಗಳಿಗೆ ಘೇರಾವ್

ವರದಿ ಜಾರಿಗೆ ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ನೇತೃತ್ವದಲ್ಲಿ ಅಹೋರಾತ್ರಿ ಧರಣಿ ಮುಂದುವರಿದಿದೆ.

ಆಗಸ್ಟ್ 16ರಂದು ವಿಶೇಷ ಸಚಿವ ಸಂಪುಟ ಕರೆದು ವರದಿ ಕುರಿತು ಅಂತಿಮ ತೀರ್ಮಾನ ತೆಗೆದುಕೊಳ್ಳುವುದಾಗಿ ರಾಜ್ಯ ಸರ್ಕಾರ ಹೇಳಿದೆ. ಅದರ ಭಾಗವಾಗಿ ಸ್ವಾತಂತ್ರ್ಯ ದಿನಾಚರಣೆಯಂದು ಜಿಲ್ಲಾ ಕೇಂದ್ರಗಳಲ್ಲಿ ಉಸ್ತುವಾರಿ ಸಚಿವರಿಗೆ ಘೇರಾವ್ ಹಾಕಿ ಬೇಡಿಕೆ ಈಡೇರಿಸುವಂತೆ ಮನವಿ ಸಲ್ಲಿಸಲಾಗುವುದು ಎಂದು ಪ್ರತಿಭಟನ ಸ್ಥಳದಲ್ಲಿದ್ದ ಮುಖಂಡರು ಮಂಗಳವಾರ ಘೋಷಿಸಿದರು. ಒಕ್ಕೂಟದ ಪ್ರಧಾನ ಸಂಚಾಲಕ ಬಸವರಾಜ ಕೌತಾಳ್, ಮುಖಂಡರಾದ ಅಂಬಣ್ಣ ಅರೋಲಿಕರ್, ಕರಿಯಪ್ಪ ಗುಡಿಮನಿ, ಸಣ್ಣಮಾರೆಪ್ಪ ಮೊದಲಾದವರು ಪಾಲ್ಗೊಂಡಿದ್ದರು.

ಜಯದೇವ ಸಂಸ್ಥೆಯ ವೈದ್ಯರಿಂದ ಚಿಕಿತ್ಸೆ

ಘಾನಾದ ಬಾಲಕನಿಗೆ ಹೃದಯ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯ ಸಂಬಂಧಿ ಗಂಭೀರ ಸಮಸ್ಯೆಯಿಂದ ಬಳಲುತ್ತಿದ್ದ ಆಫ್ರಿಕಾ ಖಂಡದ ಘಾನಾದ ಆರು ವರ್ಷದ ಬಾಲಕನಿಗೆ ಇಲ್ಲಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯರು ಯಶಸ್ವಿಯಾಗಿ ತೆರೆದ ಹೃದಯ ಶಸ್ತ್ರ ಚಿಕಿತ್ಸೆ ನಡೆಸಿದ್ದಾರೆ.

ಎದೆ ನೋವು ಮತ್ತು ಉಸಿರಾಟ ಸಮಸ್ಯೆಯ ಲಕ್ಷಣಗಳೊಂದಿಗೆ ಸಂಸ್ಥೆಗೆ ಜುಲೈ 23ರಂದು ಭೇಟಿ ನೀಡಿದ್ದ ಬಾಲಕನನ್ನು ದಾಖಲಿಸಿಕೊಳ್ಳಲಾಯಿತು. ಘಾನಾದಲ್ಲಿ ಸಂಕೀರ್ಣ ಹೃದಯ ಶಸ್ತ್ರ-ಚಿಕಿತ್ಸೆಗೆ ಸೌಲಭ್ಯವಿಲ್ಲದಿರುವುದರಿಂದ ಇಲ್ಲಿಗೆ ಕರೆತರಲಾಗಿತ್ತು. ಬಾಲಕನ ಹೃದಯದ ಬಲ ಕುಹರದ ಹೊರ ಹರಿವಿನಲ್ಲಿ ಅಡಚಣೆ (ಆರ್‌ವಿಒಟಿ) ಇರುವುದು ಪರೀಕ್ಷೆಯಿಂದ ದೃಢಪಟ್ಟಿತು. ಜುಲೈ 29ರಂದು ಶಸ್ತ್ರ-ಚಿಕಿತ್ಸೆ ನಡೆಸಲಾಗಿತ್ತು. ಆ.8ರಂದು ಆಸ್ಪತ್ರೆಯಿಂದ ತೆರಳಿದ್ದು, ಹೃದಯ ಸಮರ್ಪಕವಾಗಿ ಕಾರ್ಯನಿರ್ವಹಿ-ಸುತ್ತಿದೆ ಎಂದು ಸಂಸ್ಥೆಯ ವೈದ್ಯರು ತಿಳಿಸಿದ್ದಾರೆ.

ಶಸ್ತ್ರಚಿಕಿತ್ಸೆಗೆ ಒಳಗಾದ ಬಾಲಕನೊಂದಿಗೆ ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್ ಹಾಗೂ ಸಂಸ್ಥೆಯ ವೈದ್ಯರ ತಂಡ

ಸಂಸ್ಥೆಯ ಮಕ್ಕಳ ಹೃದ್ರೋಗ ವಿಜ್ಞಾನದ ಪ್ರಾಧ್ಯಾಪಕ ಡಾ. ಜಯರಂಗನಾಥ್ ಮತ್ತು ಅವರ ತಂಡವು ಹೃದಯ ಶಸ್ತ್ರಚಿಕಿತ್ಸೆಗೆ ಶಿಫಾರಸು ಮಾಡಿತ್ತು. ಡಾ.ಪಿ.ಕೆ. ಸುನಿಲ್ ನೇತೃತ್ವದಲ್ಲಿ ವೈದ್ಯರ ತಂಡ ಈ ಶಸ್ತ್ರಚಿಕಿತ್ಸೆ ನಡೆಸಿದ್ದು, ಡಾ. ರಶ್ಮಿ, ಡಾ. ಹರೀಶ ಮುಖ್ರಿ ಹಾಗೂ ಡಾ. ಪುಷ್ಪ ಅವರನ್ನು ಈ ತಂಡ ಒಳಗೊಂಡಿದೆ.

ಘಾನಾದ ರೋಟರಿ ಇಂಟರ್‌ನ್ಯಾಷನಲ್, ಬೆಂಗಳೂರಿನ ರೋಟರಿ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 3190 ಮತ್ತು ರೋಟರಿ ನೀಡಿ ಹಾರ್ಟ್ ಫೌಂಡೇಷನ್ ಸಹಯೋಗದಲ್ಲಿ ಈ ಶಸ್ತ್ರ-ಚಿಕಿತ್ಸೆ ನಡೆಸಲಾಗಿದೆ.

'ಪ್ರತಿ ಸಾವಿರ ಶಿಶುಗಳಲ್ಲಿ ಎಂಟರಿಂದ ಹತ್ತು ಮಕ್ಕಳಿಗೆ ಈ ರೀತಿ ಸಂಕೀರ್ಣ ಜನ್ಮಜಾತ ಕಾಯಿಲೆ ಇರಲಿದೆ. ಹೃದಯ ರಂಧ್ರಗಳು ಕಾಣಿಸಿಕೊಂಡಾಗ ಜ್ವರ, ಕೆಮ್ಮು, ನ್ಯುಮೋನಿಯಾ, ಬೆಳವಣಿಗೆ ಕುಂಠಿತ, ಚರ್ಮ ಮತ್ತು ಉಗುರುಗಳು ನೀಲಿ ಬಣ್ಣಕ್ಕೆ ತಿರುಗುವಿಕೆ, ತೂಕ ನಷ್ಟದಂತಹ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್ ತಿಳಿಸಿದ್ದಾರೆ.

ಜಂಟಿ ನಿರ್ದೇಶಕರ ವಿರುದ್ಧ ತನಿಖೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಕಲಾವಿದರಿಗೆ ಸಂಭಾವನೆ ನೀಡಲು ಹಾಗೂ ಧನ ಸಹಾಯ ಬಿಡುಗಡೆ ಮಾಡಲು ಹಣದ ಬೇಡಿಕೆ ಇಟ್ಟಿರುವ ಆರೋಪಕ್ಕೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್ ಎನ್.ಛಲವಾದಿ ವಿರುದ್ಧ ಇಲಾಖಾ ತನಿಖೆ ನಡೆಸುವಂತೆ ರಾಜ್ಯ ಮಹಿಳಾ ಆಯೋಗ ಸೂಚಿಸಿದೆ.

ಈ ಸಂಬಂಧ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿರುವ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ, 'ಹಣಕ್ಕೆ ಬೇಡಿಕೆ ಇಟ್ಟಿರುವ ಕುರಿತು ದಲಿತ ಸಂಘಟನೆಗಳ ಒಕ್ಕೂಟ ಮತ್ತು ಕಲಾವಿದರ ಸಂಘಟನೆಗಳ ಒಕ್ಕೂಟದ ಮಹಿಳಾ ಸದಸ್ಯರು ದೂರು ನೀಡಿದ್ದಾರೆ. ಹಾಗಾಗಿ ಅಧಿಕಾರಿ ವಿರುದ್ಧ ಕಾನೂನು ರೀತಿಯ ತನಿಖೆ ಕೈಗೊಳ್ಳಬೇಕು ಹಾಗೂ ಕೈಗೊಂಡ ಕ್ರಮದ ವರದಿಯನ್ನು ಆಯೋಗಕ್ಕೆ ಕಳುಹಿಸಬೇಕು' ಎಂದು ಹೇಳಿದ್ದಾರೆ.

'ಪ್ರಸಕ್ತ ಸಾಲಿನ ಮಾರ್ಚ್‌ನಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿಗೆ ಹಣ ಬಿಡುಗಡೆ ಮಾಡಿದ್ದರೂ ಅಶೋಕ್ ಛಲವಾದಿ ಅವರು ಕಲಾವಿದರಿಗೆ ಬಿಡುಗಡೆ ಮಾಡದೇ ಹಣಕ್ಕಾಗಿ ಬೇಡಿಕೆ ಇಟ್ಟಿದ್ದಾರೆ. ಪ್ರಾಯೋಜನೆ, ಧನಸಹಾಯ, ಇಲಾಖೆ ಕಾರ್ಯಕ್ರಮ ನಡೆಯಬೇಕಾದರೂ ಹಣ ನೀಡದ ಹೊರತು ಕಡತವನ್ನು ಅನುಮೋದಿಸುವುದಿಲ್ಲ. ಅಧಿಕಾರಿ ವಿರುದ್ಧ ಪ್ರತಿಭಟನೆ ಮಾಡಿ ಅಮಾನತುಗೊಳಿಸುವಂತೆ ಮನವಿ ಮಾಡಿದ್ದರೂ ಸ್ವಾತಂತ್ರ್ಯೋ-ತ್ಸವ ಆಚರಣೆಯ ಅನುಷ್ಠಾನಾಧಿಕಾರಿಯಾಗಿ ನೇಮಿಸಲಾಗಿದೆ. ತಕ್ಷಣ ಅನುಷ್ಠಾನ ಅಧಿಕಾರಿ ಜವಾಬ್ದಾರಿಯಿಂದ ಅವರನ್ನು ಬದಲಾಯಿಸಿ ಕಲಾವಿದರಿಗೆ ನ್ಯಾಯ ಒದಗಿಸಬೇಕು' ಎಂದು ಕರ್ನಾಟಕ ರಾಜ್ಯ ಸಂವಿಧಾನ ಬಳಗವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎಂ.ವಿ.ವೆಂಕಟೇಶ್ ಅವರಿಗೆ ಪತ್ರ ಬರೆದು ಮನವಿ ಮಾಡಿದೆ.

ಶಿಕ್ಷಕರಿಂದ ಸೆ. 3ಕ್ಕೆ 'ಫ್ರೀಡಂ ಪಾರ್ಕ್' ಚಲೋ

ಬೆಂಗಳೂರು: ವೃಂದ ಮತ್ತು ನೇಮಕಾತಿಯ ಹೊಸ ನಿಯಮಗಳನ್ನು 2017ರ ನಂತರ ನೇಮಕವಾದ ಶಿಕ್ಷಕರಿಗೆ ಅನ್ವಯಿಸಬೇಕು. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡಬೇಕು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಸೆ. 3ರಂದು 'ಫ್ರೀಡಂ ಪಾರ್ಕ್' ಚಲೋ ಹಮ್ಮಿಕೊಂಡಿದೆ.

ಹೋರಾಟದ ಪೂರ್ವಭಾವಿಯಾಗಿ ಆ.12ರಂದು ಜಿಲ್ಲಾಮಟ್ಟದಲ್ಲಿ ಹೋರಾಟ ನಡೆಸಲಾಗುವುದು. ಆ. 25ರ ಒಳಗೆ ಬೇಡಿಕೆ ಈಡೇರಿಸದಿದ್ದರೆ 26ರಂದು ಶಾಲಾ ಶಿಕ್ಷಣ ಇಲಾಖೆಗೆ ಪತ್ರ ಬರೆಯಲಾಗುವುದು. ನಂತರ ಎಲ್ಲ ಶಿಕ್ಷಕರು ರಜೆ ಹಾಕಿ 'ಫ್ರೀಡಂ ಪಾರ್ಕ್' ಚಲೋ ಹಮ್ಮಿಕೊಳ್ಳುವರು. 1ರಿಂದ 5ನೇ ತರಗತಿಯವರೆಗೆ ಪಾಠ ಮಾಡುವ, 6ರಿಂದ 8ನೇ ತರಗತಿ ಪಾಠ ಬೋಧನೆ ಬಹಿಷ್ಕರಿಸುವ ಘೋಷಣೆ ಮಾಡಲಾಗುವುದು. ಸೆ. 4ರಂದು ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದು ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

'ವಾಕಥಾನ್' ವಾಕ್ ಫಾರ್ ಭಾರತ್: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ರಾಜೇಶ್ ಪದ್ಮಾರ್, ಮೌಲ್ಯ, ಮದನ್ ಕುಮಾರ್, ಪ್ರತೀಕ್, ಆಯೋಜನೆ: ದಿಶಾ ಭಾರತ್, ಸ್ಥಳ: 18ನೇ ಕ್ರಾಸ್, ಬಿಬಿಎಂಪಿ ಆಟದ ಮೈದಾನ, ಮಲ್ಲೇಶ್ವರ, ಬೆಳಿಗ್ಗೆ 6.30

ನಶಾಮುಕ್ತ ಭಾರತ ಅಭಿಯಾನದಡಿ ಪ್ರತಿಜ್ಞಾ ವಿಧಿ ಕಾರ್ಯಕ್ರಮ: ಉದ್ಘಾಟನೆ: ಶಮ್ಲಾ ಇಕ್ಬಾಲ್, ಅಧ್ಯಕ್ಷತೆ: ಕೆ.ಆರ್. ಜಲಜಾ, ಅತಿಥಿಗಳು: ರಾಘವೇಂದ್ರ ಟಿ., ನವೀನ್ ಜೋಸೆಫ್, ರಮೇಶ್, ಎಸ್. ನಟರಾಜ್, ಆಯೋಜನೆ: ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಸ್ಥಳ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10


ಶಮ್ಲಾ ಇಕ್ಬಾಲ್

ಸಿ.ಕೆ. ವೆಂಕಟರಾಮಯ್ಯ, ಗೌರೀಶ ಕಾಯ್ಕಿಣಿ, ಅ.ನ. ಕೃಷ್ಣರಾಯ, ಕೋ. ಚೆನ್ನಬಸಪ್ಪ, ಸಿದ್ಧಲಿಂಗಯ್ಯ ಅವರ ಸಮಗ್ರ ಸಾಹಿತ್ಯ ಸಂಪುಟಗಳ ಜನಾರ್ಪಣೆ: ಅಲ್ಲಮಪ್ರಭು ಬೆಟ್ಟದೂರು, ಸಂಪುಟಗಳ ಕುರಿತು: ಸಾವಿತ್ರಿ ಮುಜುಮದಾರ, ಅತಿಥಿ: ಕೆ.ಎಂ. ಗಾಯಿತ್ರಿ, ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

'ಕಳತಾವೂರ್ ಮಳಾವ್–06' ಸಜ್ಜನರ ಸಲ್ಲಾಪ–06 ಬಂಜಾರ ಸಿನಿಮಾ ವಿಶೇಷ: ಉದ್ಘಾಟನೆ: ಎ.ಆರ್. ಗೋವಿಂದಸ್ವಾಮಿ, ಅಧ್ಯಕ್ಷತೆ: ಕೃಷ್ಣೇಗೌಡ, ಉಪಸ್ಥಿತಿ: ಪಿ. ಉಮೇಶ್ ನಾಯಕ್, ಹೇಮಂತ್ ಕುಮಾರ್, ರವಿ ಲಮಾಣಿ, ಕುಮಾರ್ ರಾಠೋಡ್, ಆಯೋಜನೆ: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಅಭಿನಂದನಾ ಸಮಾರಂಭ: ಉದ್ಘಾಟನೆ: ಬಿ. ಸುರೇಶ, ಅಭಿನಂದಿತರು: ಶಶಿಧರ ಅಡಪ, ಮಾಲತೇಶ ಬಡಿಗೇರ, ಎಂ. ಚನ್ನಕೇಶವಮೂರ್ತಿ, ರತ್ನಾ ಸಕಲೇಶಪುರ, ಆಯೋಜನೆ: ಸುಸ್ಥಿರ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

FARNAZ

ವಾಟರ್‌ಪ್ರೂಫ್ ಸ್ಮಾರ್ಟ್ ರಿಂಗ್‌ಗಳು ನಮ್ಮ ನಿದ್ರಾವಿಧಾನ ಹಾಗೂ ದೇಹದ ತೂಕದಲ್ಲಿ ಆಗುವ ಏರಿಳಿತವನ್ನು ತಿಳಿಸುತ್ತವೆ

ಹಾರುವ ಕಾರುಗಳು ಬರುತಿವೆ, ಜಾಗ ಕೊಡಿ



ಈ ಹಾರುವ ಕಾರುಗಳು ಕಾರೂ ಅಲ್ಲ, ಹೆಲಿಕಾಪ್ಟರ್ ಕೂಡ ಅಲ್ಲ; ಇದು ರಸ್ತೆಯ ಮೇಲೂ ಚಲಿಸಬಲ್ಲದು, ಹೆಲಿಕಾಪ್ಟರ್ ತರಹವೇ ಹಾರುವ ಸಾಮರ್ಥ್ಯವನ್ನೂ ಹೊಂದಿದೆ. ಜತೆಗೆ ಎಲೆಕ್ಟ್ರಿಕ್ ಬ್ಯಾಟರಿಯಿಂದಲೂ ಓಡಿಸಬಹುದು. ಒಂದು ವರದಿಯ ಪ್ರಕಾರ 2035ರೊಳಗೆ ಜಗತ್ತಿನಲ್ಲಿ ಸುಮಾರು ಐದು ಲಕ್ಷ ಹಾರುವ ಕಾರುಗಳು ನಮ್ಮ ಸೂರಿನ ಮೇಲೆ ಹಾರಾಡುವ ಸಾಧ್ಯತೆಗಳಿವೆ

• ವಿಕ್ರಮ ಜೋಶಿ

ಜಗತ್ತಿನ ಯಾವುದೇ ಪ್ರಮುಖ ನಗರವನ್ನು ತೆಗೆದುಕೊಳ್ಳಿ, ಟ್ರಾಫಿಕ್ ಜಾಮ್ ಅಲ್ಲಿಯ ಅತ್ಯಂತ ಪ್ರಮುಖ ಸಮಸ್ಯೆಗಳಲ್ಲೊಂದು. 'ಟೋಮ್ ಟೋಮ್ ಟ್ರಾಫಿಕ್ ಇಂಡೆಕ್ಸ್' ಪ್ರಕಾರ ಶೇ 76ರಷ್ಟು ನಗರಗಳಲ್ಲಿ ವರ್ಷದಿಂದ ವರ್ಷಕ್ಕೆ ಸಂಚಾರದ ವೇಗ ಕಡಿಮೆಯಾಗುತ್ತಿದೆ. ಒಂದು ವ್ಯಕ್ತಿಯ ಅತ್ಯಮೂಲ್ಯವಾದ 150 ತಾಸುಗಳು ಪ್ರತಿ ವರ್ಷ ಈ ಟ್ರಾಫಿಕ್ ದಟ್ಟಣೆಯಿಂದಾಗಿ ಪೋಲಾಗುತ್ತಿದೆಯೆಂದರೆ ನಂಬಲು ಸಾಧ್ಯವೆ? ಟ್ರಾಫಿಕ್ ಜಾಮ್‌ನಿಂದಾಗಿ ಜನರ ಸಮಯವು ಪೋಲಾಗುವುದು ಒಂದು ವಿಷಯವಾದರೆ, ಅಲ್ಲಿ ಸಿಕ್ಕಿಬಿದ್ದ ವಾಹನಗಳು ಹೊರಸೂಸುವ ವಿಷಕಾರಿ ಅನಿಲಗಳ ಮಟ್ಟದಲ್ಲಿ ಆಗುವ ಗಣನೀಯ ಹೆಚ್ಚಳವು (ಶೇ 20-30) ಇನ್ನೊಂದು ಗಮನಾರ್ಹ ಸಂಗತಿ. ನಮ್ಮ ರಾಜ್ಯದ ರಾಜಧಾನಿಯಂತೂ ಟ್ರಾಫಿಕ್ ಜಾಮ್‌ಗೆ ವಿಶ್ವದಲ್ಲೇ ಪ್ರಖ್ಯಾತ. ವಿಶ್ವದ ಅತಿ ಹೆಚ್ಚು ಟ್ರಾಫಿಕ್ ದಟ್ಟಣೆಯುಳ್ಳ ನಗರಗಳಲ್ಲಿ ಬೆಂಗಳೂರಿಗೆ ಮೇಲಿನ ಸ್ಥಾನವು ಪ್ರತಿಬಾರಿಯೂ ಸಿಗುತ್ತದೆ! ಈ ಸಮಸ್ಯೆಯನ್ನು ಕಡಿಮೆ ಮಾಡಲು ಬಗೆ ಬಗೆಯ ಪ್ರಯತ್ನಗಳು ನಡೆದಿದ್ದರೂ, ದಿನದಿಂದ ದಿನಕ್ಕೆ ಕ್ಯಾನ್ಸರ್‌ನಂತೆಯೇ ಇದೂ ಉಲ್ಬಣಗೊಳ್ಳುತ್ತಿದೆ. ಈ ಸಮಸ್ಯೆಗೆ ದೀರ್ಘಕಾಲದಲ್ಲಿ ಸಿಗಬಹುದಾದ ಒಂದು ಅತ್ಯುತ್ತಮ ಪರಿಹಾರವೆಂದರೆ ಹಾರುವ ಕಾರುಗಳು!

ಈ ಹಾರುವ ಕಾರುಗಳು ನರಸಿಂಹ ಅವತಾರದ ಹಾಗೆ; ಆ ಕಡೆ ಕಾರೂ ಅಲ್ಲ, ಹೆಲಿಕಾಪ್ಟರ್ ಕೂಡ ಅಲ್ಲ. ರಸ್ತೆಯ ಮೇಲೂ ಚಲಿಸಬಲ್ಲದು, ಹೆಲಿಕಾಪ್ಟರ್ ತರಹವೇ ಹಾರುವ ಸಾಮರ್ಥ್ಯವನ್ನೂ ಹೊಂದಿದೆ. ಎಲೆಕ್ಟ್ರಿಕ್ ಬ್ಯಾಟರಿಯ ಮೇಲೆಯೂ ಓಡಿಸಬಹುದು; ಕೆಲವೊಂದು ಫ್ಲೈಯಿಂಗ್ ಕಾರುಗಳಲ್ಲಿ ಪಾರಂಪರಿಕವಾದ ಎಂಜಿನನ್ನು ಅಳವಡಿಸಲಾಗಿರುತ್ತದೆ. ನಿಲುಗಡೆಗೆ ಕಾರುಗಳಷ್ಟು ಸಣ್ಣ ಜಾಗ ಸಾಕಾಗದು; ಹೆಲಿಕಾಪ್ಟರ್‌ನಷ್ಟು ವಿಶಾಲವಾದ ಬಯಲೂ ಬೇಡ. ಕಾರಿಗಿಂತ ದುಬಾರಿ, ಹೆಲಿಕಾಪ್ಟರ್‌ಗಿಂತ ಬಹಳ ಸೋವಿ. ಹಾರುವ ಕಾರುಗಳಲ್ಲಿ ಮುಖ್ಯವಾಗಿ ಮೂರು ಬಗೆಗಳಿವೆ.

VTOL: 'VTOL' ಎಂದರೆ 'ವರ್ಟಿಕಲ್ ಟೇಕ್ ಆಫ್ ಆ್ಯಂಡ್ ಲ್ಯಾಂಡಿಂಗ್'. ಇದಕ್ಕೆ ರನ್‌ವೇ ಬೇಡ; ಹೆಲಿಕಾಪ್ಟರ್ ತರಹವೇ ನಿಂತಲ್ಲಿಂದಲ್ಲೇ ಹಾರಬಲ್ಲದು. ಜೊಬಿ ಏವಿಯೇಷನ್ ಕಂಪನಿಯ ಎಸ್-4 ಮಾದರಿಯು ಎಲೆಕ್ಟ್ರಿಕ್ ವಾಹನಗಳ ತಂತ್ರಜ್ಞಾನವನ್ನು ಒಳಗೊಂಡಿದ್ದು ಒಂದೇ ಒಂದು ಚಾರ್ಜ್‌ನಲ್ಲಿ ಸುಮಾರು 240 ಕಿ.ಮೀ. ಕ್ರಮಿಸಬಲ್ಲದು. ಸದ್ದಿಲ್ಲದ, ವಿಷಪೂರಿತ ಅನಿಲಗಳ ಸೂಸುವಿಕೆಯಿಲ್ಲದ ಈ ಹಾರುವ ಕಾರಿಗೆ ಈಗಾಗಲೇ ದುಬೈ ನಗರವು ಲೀಲಾಜಾಲವಾಗಿ ಹಾರಾಡಲು ಒಪ್ಪಿಗೆ ನೀಡಿದೆ. ಲಿಲಿಯಮ್ ಜೆಟ್ ಎನ್ನುವುದು ಇನ್ನೊಂದು ಉದಾಹರಣೆ. ಈ ಹಾರುವ ಕಾರನ್ನು ಕೇವಲ 45 ನಿಮಿಷಗಳಲ್ಲಿ ಚಾರ್ಜ್ ಮಾಡಬಹುದು.

STOL: 'STOL' ಎಂದರೆ ಶಾರ್ಟ್ ಟೇಕ್ ಆಫ್ ಲ್ಯಾಂಡಿಂಗ್ ವಾಹನ. ಇದನ್ನು 'ಆಕಾಶದ ಬಸ್ಸು' ಅಥವಾ 'ಸ್ಕೈ ಬಸ್' ಎಂದೂ ಕರೆಯಲಾಗುತ್ತದೆ. 'LAT ' ಎನ್ನುವುದು ಭಾರತದ ಸ್ಟಾರ್ಟ್ ಅಪ್. ನಮ್ಮ ಬೆಂಗಳೂರಿನಲ್ಲಿಯೇ ಇದೆ. ಸಾಮಾನ್ಯ ವಾಹನವೊಂದರ ನಿಲುಗಡೆಗೆ ಬೇಕಾಗುವ ಜಾಗಕ್ಕಿಂತಲೂ ತುಸು ದೊಡ್ಡ ಜಾಗವಿದ್ದರೆ ಇದನ್ನು ಇಳಿಸಿ, ಮತ್ತೆ ಹಾರಿಸಬಹುದು. ದೂರ ದೂರದ ನಗರಕ್ಕೆ ಹೋಗಲು ವಿಮಾನವಾದರೆ, ಹತ್ತಿರವೇ ಇರುವ ಪಟ್ಟಣಗಳಿಗೆ ಈ STOL ಮೂಲಕ ಪ್ರಯಾಣ ಮಾಡಬಹುದು.

ಫಿಕ್ಸಡ್ ವಿಂಗ್ ಏರ್‌ಕ್ರಾಫ್ಟ್ ವಿದ್ ರೋಡ್ ಕ್ಯಾಪಾಬಿಲಿಟಿ: ಈ ಬಗೆಯಲ್ಲಿ ಹಾರುವ ಕಾರಿಗೆ ನಿರ್ದಿಷ್ಟವಾದ ಅಳತೆಯ ಪಂಕವಿದ್ದು, ಇದು ರಸ್ತೆಯ ಮೇಲೂ ಚಲಿಸಬಲ್ಲದು. ರಸ್ತೆಯ ಮೇಲೆ ಓಡುವಾಗ ಇದರ ರೆಕ್ಕೆಗಳು ಒಳಗೆ ಸೇರಿಕೊಳ್ಳುತ್ತವೆ. ಎಮ್‌ಐಟಿಯು ವಿನ್ಯಾಸಗೊಳಿಸಿರುವ 'ಟೆರ್ರಾಫೆಂಗಿಯಾ ಟ್ರಾನ್ಸಿಷನ್' ಎನ್ನುವ ವಾಹನದಲ್ಲಿನ ರೆಕ್ಕೆಗಳು ಕೇವಲ ಮೂವತ್ತು ಸೆಕೆಂಡ್‌ಗಳಲ್ಲಿ ಮುಚ್ಚಿಕೊಳ್ಳಬಹುದು, ಇಲ್ಲವೇ ತೆರೆದುಕೊಳ್ಳಬಹುದು. ಈ ಬಗೆಯ ಹಾರುವ ಕಾರುಗಳಲ್ಲಿ ಪಾರಂಪರಿಕವಾದ ಎಂಜಿನ್ ಅಳವಡಿಸಲಾಗಿರುತ್ತದೆ. ಉದಾಹರಣೆಗೆ, ಕ್ಲೇನ್ ವಿಷನ್ ಏರ್‌ಕಾರ್. ಇದರಲ್ಲಿ ಬಿಎಮ್‌ಡ್ಬ್ಯುವಿನ ಪೆಟ್ರೋಲ್ ಎಂಜಿನ್ ಇದೆ; ಇದು ಪ್ರತಿ ಗಂಟೆಗೆ 250 ಕಿ.ಮೀ. ವೇಗದಲ್ಲಿ ಸುಮಾರು ಒಂದು ಸಾವಿರ ಕಿ.ಮೀ. ದೂರವನ್ನು ಕ್ರಮಿಸಬಲ್ಲದು. ಬಹುಶಃ 2026ರಲ್ಲಿ ಇದು ಮಾರುಕಟ್ಟೆಗೆ ಬರಲಿದೆ. ಇದರ ಬೆಲೆ ಏನಿಲ್ಲವೆಂದರೂ ಹತ್ತು ಕೋಟಿಗಿಂತ ಕಡಿಮೆ ಇರಲಾರದು!

ಹಾರುವ ಕಾರುಗಳಿಂದ ಲಾಭಗಳು

- ಹಾರುವ ಕಾರುಗಳು ಕೈಗೆಟುಕುವ ದರದಲ್ಲಿ ಸಿಕ್ಕರೆ, ಹೆಚ್ಚು ಜನರು ಕೊಳ್ಳುವಂತಾದರೆ ಆಗ ನಗರಗಳಲ್ಲಿ ಟ್ರಾಫಿಕ್ ಜಾಮ್ ಕಡಿಮೆಯಾಗುವುದು. ಅಂದಾಜಿನ ಪ್ರಕಾರ ಶೇ 50-80ರಷ್ಟು ಸಮಯವನ್ನೂ ಉಳಿಸಬಹುದು.
- ಈ ತಂತ್ರಜ್ಞಾನ ಹೊಸ ಆರ್ಥಿಕತೆಗೆ ಅವಕಾಶವನ್ನು ಕಲ್ಪಿಸಿಕೊಡಲಿದೆ.
- ಎಲ್ಲದಕ್ಕೂ ಮಿಗಿಲಾಗಿ ಕಾರ್ಬನ್ ಡೈ–ಆಕ್ಸೈಡ್ ಹಾಗೂ ಇನ್ನಿತರ ವಿಷಪೂರಿತ ಅನಿಲಗಳ ಹೊರಸೂಸುವಿಕೆಯು ಶೇ 35-50ರಷ್ಟು ಕಡಿಮೆಯಾಗಲಿದೆ.
- ಹಾರುವ ಕಾರುಗಳು ನಮ್ಮ ಮನುಕುಲಕ್ಕೆ ಹೊಸ ಬಗೆಯ ಜೀವನಶೈಲಿಯನ್ನು ಕಲಿಸಿಕೊಡಲಿದೆ.

ಆದರೆ ಹಾರುವ ಕಾರು ನಾವು ಅಂದುಕೊಂಡಷ್ಟು ಸುಲಭವಾಗಿ ಸಿಗಬಲ್ಲ ವರವಲ್ಲ. ಅದನ್ನು ತಂತ್ರಜ್ಞಾನದ ಸಂಕೀರ್ಣತೆಯ ಆಗಸದಿಂದ ಸುಲಭವಾದ ಬಳಕೆಯ ಧರೆಗೆ ತರಲು ಹಲವಾರು ಅಡತಡೆಗಳು ಎದುರಾಗಲಿವೆ:

- ಇದು ದುಬಾರಿ ಉತ್ಪನ್ನ. ಅತಿ ಶ್ರೀಮಂತರೇ ಇದರ ಮೊದಲ ಬಳಕೆದಾರರಾಗಬಲ್ಲರು. ನಿರ್ವಹಣೆಯ ವೆಚ್ಚ ಸ್ವಯಂಚಾಲಿತ ಟ್ಯಾಕ್ಸಿ, ಹೆಲಿಕಾಪ್ಟರ್‌ಗಳಿಗಿಂತಲೂ ಕಡಿಮೆಯಾದರೂ, ಆರಂಭಿಕ ವೆಚ್ಚವು ಅಧಿಕವಾಗಿರುತ್ತದೆ.
- ಕಾನೂನು, ನಿಯಂತ್ರಕ ಮಂಡಳಿಗಳ ಒಪ್ಪಿಗೆ, ಸರ್ಕಾರದ ಪರವಾನಿಗೆ ಇವೆಲ್ಲವೂ ಸಿಗಲು ಕೆಲವು ಕಾಲವೇ ಬೇಕಾದೀತು.
- ನಮ್ಮಲ್ಲಿಯ ಅರ್ಧದಷ್ಟು ಜನರಿಗೆ ಈ ತಂತ್ರಜ್ಞಾನವು ಕಾರ್ಯರೂಪದಲ್ಲಿ ಯಶಸ್ವಿಯಾಗಬಲ್ಲದು ಎಂಬ ನಂಬಿಕೆಯೇ ಇಲ್ಲ.

ಜನರು ಸಂಶಯಾಸ್ಪದವಾಗಿ ನೋಡಿದಾಗಲೇ ತಂತ್ರಜ್ಞಾನವನ್ನು ಇನ್ನಷ್ಟು ಪ್ರಬುದ್ಧಗೊಳಿಸಲು ಸಾಧ್ಯ. ಒಂದು ವರದಿಯ ಪ್ರಕಾರ 2035ರೊಳಗೆ ಜಗತ್ತಿನಲ್ಲಿ ಐದು ಲಕ್ಷ ಹಾರುವ ಕಾರುಗಳು ನಮ್ಮ ಸೂರಿನ ಮೇಲೆ ಹಾರಾಡುವ ಸಾಧ್ಯತೆಗಳಿವೆ. ನೀವು ಹಾರಲು ತಯಾರಾಗಿದ್ದೀರಾ?

ಡೆಲಿವರಿ ಡ್ರೋನ್‌ಗಳು ಬರಲಿವೆ

• ಸುಧೀರ ಎಚ್.ಎಸ್.

ನೀವು ಆರ್ಡರ್ ಮಾಡಿದ ವಸ್ತುಗಳು ಗಂಟೆಗಳ ಬದಲಿಗೆ ಕೆಲವೇ ನಿಮಿಷಗಳಲ್ಲಿ ನಿಮ್ಮ ಮನೆಗೆ ತಲುಪಿದರೆ ಹೇಗಿರುತ್ತದೆ? ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (IISc) ಮತ್ತು ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಈ ಕನಸನ್ನು ನನಸು ಮಾಡಲು ಮಹತ್ವದ ಹೆಜ್ಜೆಯೊಂದನ್ನು ಇಟ್ಟಿದ್ದಾರೆ. ಅವರು ಅಭಿವೃದ್ಧಿಪಡಿಸಿರುವ ಹೊಸ ಅಲ್ಗಾರಿದಮ್ (ಗಣಿತದ ಸೂತ್ರ), ಡ್ರೋನ್‌ಗಳ ಮೂಲಕ ವಸ್ತುಗಳನ್ನು ವೇಗವಾಗಿ ತಲುಪಿಸಲು ಸಹಾಯ ಮಾಡುತ್ತದೆ. ಇದು ಸೀಮಿತ ಬ್ಯಾಟರಿ ಸಾಮರ್ಥ್ಯ ಮತ್ತು ಕಡಿಮೆ ತೂಕದ ಪಾರ್ಸೆಲ್‌ಗಳನ್ನು ಮಾತ್ರ ಸಾಗಿಸುವ ಡ್ರೋನ್‌ಗಳ ಮಿತಿಗಳನ್ನು ಪರಿಗಣಿಸಿ ರೂಪಿಸಲಾಗಿದೆ.

ನಗರಗಳಲ್ಲಿ ಹೆಚ್ಚುತ್ತಿರುವ ಟ್ರಾಫಿಕ್ ದಟ್ಟಣೆ ಮತ್ತು ಪರಿಸರ ಮಾಲಿನ್ಯಕ್ಕೆ ಡ್ರೋನ್‌ಗಳು ಉತ್ತಮ ಪರಿಹಾರ ನೀಡಬಲ್ಲವು ಎಂದು ಅಮೆಜಾನ್ ಪ್ರೈಮ್ ಏರ್ ಮತ್ತು ಡಿಎಚ್‌ಎಲ್‌ನಂತಹ ಜಾಗತಿಕ ಕಂಪನಿಗಳು ಈಗಾಗಲೇ ಡ್ರೋನ್ ವಿತರಣ ವ್ಯವಸ್ಥೆಯ ಪ್ರಯೋಗವನ್ನು ನಡೆಸುತ್ತಿವೆ. ಈ ಡ್ರೋನ್‌ಗಳು ಕಡಿಮೆ ವೆಚ್ಚದಲ್ಲಿ ಮತ್ತು ಮನುಷ್ಯರ ಸಹಾಯವಿಲ್ಲದೆ ಕೆಲಸ ಮಾಡುತ್ತವೆ. ಆದರೆ, ಇದಕ್ಕೆ ಕೆಲವು ಸವಾಲುಗಳಿವೆ: ಡ್ರೋನ್‌ಗಳ ಬ್ಯಾಟರಿ ಬಾಳಿಕೆ ತುಂಬಾ ಕಡಿಮೆ. ಅವುಗಳು ಹೆಚ್ಚು ಭಾರವಾದ ವಸ್ತುಗಳನ್ನು ಸಾಗಿಸಲು ಸಾಧ್ಯವಿಲ್ಲ. ಹಾಗಾಗಿ, ಯಾವ ಪಾರ್ಸೆಲ್ ಅನ್ನು ಯಾವ ಡ್ರೋನ್‌ಗೆ, ಯಾವ ಸಮಯದಲ್ಲಿ ಕಳುಹಿಸಿದರೆ ಎಲ್ಲ ವಿತರಣೆಗಳನ್ನು ಅತಿ ಕಡಿಮೆ ಸಮಯದಲ್ಲಿ ಮುಗಿಸಬಹುದು ಎಂಬುದು ಒಂದು ದೊಡ್ಡ ಸವಾಲು. ಇದನ್ನು 'ಡ್ರೋನ್ ವೇರ್‌ಹೌಸ್ ಪ್ರಾಬ್ಲಂ' (Drone Warehouse Problem) ಎಂದು ಕರೆಯುತ್ತಾರೆ.

ವಿಜ್ಞಾನಿಗಳ ಪರಿಹಾರ

ಐಐಎಸ್‌ಸಿ ವಿಜ್ಞಾನಿಗಳು ಈ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಕೊಂಡಿದ್ದಾರೆ. ಅವರ ಹೊಸ 'ಅಲ್ಗಾರಿದಮ್' ಎಲ್ಲಾ ಪಾರ್ಸೆಲ್‌ಗಳನ್ನು ಅತಿ ಕಡಿಮೆ ಸಮಯದಲ್ಲಿ ತಲುಪಿಸುವ ಭರವಸೆಯನ್ನು ನೀಡುತ್ತದೆ. ವಿಜ್ಞಾನಿಗಳು, ಈ ಸಮಸ್ಯೆಯನ್ನು ಪರಿಹರಿಸಲು ಸಿದ್ಧಪಡಿಸಿರುವ ಸೂತ್ರದಲ್ಲಿ ಗಣಿತದ ಒಂದು ವಿಶೇಷ ಸಂಖ್ಯೆಯನ್ನು ಬಳಸಿದ್ದಾರೆ. ಅದರ ಹೆಸರು 'ಗೋಲ್ಡನ್ ರೇಷಿಯೊ' ಅಥವಾ 'ಫೈ' (Φ). ಈ ಗೋಲ್ಡನ್ ರೇಷಿಯೊ (ಸುಮಾರು 1.62) ಅನ್ನು ಪ್ರಕೃತಿ, ಕಲೆ ಮತ್ತು ಮಾನವದೇಹದಲ್ಲಿಯೂ ಕಾಣಬಹುದು. ಇದು ಸೌಂದರ್ಯ ಮತ್ತು ದಕ್ಷತೆಗಳನ್ನು ಸೂಚಿಸುತ್ತದೆ. ವಿಜ್ಞಾನಿಗಳು ಸಿದ್ಧಪಡಿಸಿರುವ ಸೂತ್ರದಲ್ಲಿ ಈ ಗೋಲ್ಡನ್ ರೇಷಿಯೊವನ್ನು ಬಳಸಿಕೊಂಡು, ಪಾರ್ಸೆಲ್‌ಗಳನ್ನು ಕಡಿಮೆ ಸಮಯದಲ್ಲಿ ತಲುಪಿಸಲು ಸಾಧ್ಯ ಎಂದು ತೋರಿಸಿಕೊಟ್ಟಿದ್ದಾರೆ.

ಅಲ್ಗಾರಿದಮ್: ಈ ಹೊಸ ಸೂತ್ರವನ್ನು ರೂಪಿಸಲು 'ಲಾಂಗೆಸ್ಟ್ ಪ್ರೊಸೆಸಿಂಗ್ ಟೈಮ್ ಫಸ್ಟ್' (LPT) ಎಂಬ ಹಳೆಯ ಸೂತ್ರವನ್ನೇ ವಿಜ್ಞಾನಿಗಳು ಸ್ವಲ್ಪ ಬದಲಾಯಿಸಿದ್ದಾರೆ. ಸರಳವಾಗಿ ಹೇಳಬೇಕೆಂದರೆ, ಒಂದೇ ಸಮಯದಲ್ಲಿ ಹಲವು ಕೆಲಸಗಳಿರುವಾಗ, ಅತಿ ದೊಡ್ಡ ಕೆಲಸವನ್ನು ಅತಿ ಬೇಗ ಮುಗಿಸುವವರಿಗೆ ನೀಡುವುದು ಈ ತಂತ್ರದ ಉದ್ದೇಶ. ವಿಜ್ಞಾನಿಗಳು ಈ ತಂತ್ರಕ್ಕೆ ಡ್ರೋನ್‌ಗಳ ಬ್ಯಾಟರಿ ಸಾಮರ್ಥ್ಯ ಮತ್ತು ಅವುಗಳ ವೇಗದಂತಹ ಅಂಶಗಳನ್ನು ಸೇರಿಸುವ ಮೂಲಕ ಮಾರ್ಪಾಡು ಮಾಡಿದ್ದಾರೆ.

ಮೊದಲಿಗೆ, ಎಲ್ಲಾ ಪಾರ್ಸೆಲ್‌ಗಳನ್ನು ಗೋದಾಮಿನಿಂದ ಇರುವ ದೂರಕ್ಕೆ ಅನುಗುಣವಾಗಿ, ಅಂದರೆ ಹೆಚ್ಚು ದೂರದ ಪಾರ್ಸೆಲ್ ಅನ್ನು ಮೊದಲು, ಕಡಿಮೆ ದೂರದ ಪಾರ್ಸೆಲ್ ಅನ್ನು ನಂತರ ಎಂದು ಪಟ್ಟಿ ಮಾಡಲಾಗುತ್ತದೆ. ನಂತರ, ಡ್ರೋನ್‌ಗಳನ್ನು ಅವುಗಳ ಬ್ಯಾಟರಿ ಸಾಮರ್ಥ್ಯದ ಆಧಾರದ ಮೇಲೆ ವರ್ಗೀಕರಿಸಲಾಗುತ್ತದೆ. ಈ ರೀತಿ ಪಟ್ಟಿ ಮಾಡಿದ ನಂತರ, ಹೆಚ್ಚು ದೂರದ ಪಾರ್ಸೆಲ್ ಅನ್ನು ಯಾವ ಡ್ರೋನ್ ಬೇಗ ತಲುಪಿಸಬಲ್ಲದು, ಎಂದು ಲೆಕ್ಕ ಹಾಕಿ, ಆ ಡ್ರೋನ್‌ಗೆ ಆ ಪಾರ್ಸೆಲ್ ಅನ್ನು ನೀಡಲಾಗುತ್ತದೆ. ಈ ವಿಧಾನದಿಂದ, ಗೋದಾಮಿನ ಎಲ್ಲ ಪಾರ್ಸೆಲ್‌ಗಳನ್ನು ಕನಿಷ್ಠ ಸಮಯದಲ್ಲಿ ವಿತರಿಸಲು ಸಾಧ್ಯವಾಗುತ್ತದೆ. ತಾವು ಸಿದ್ಧಪಡಿಸಿದ ಸೂತ್ರದಲ್ಲಿ ಮತ್ತಷ್ಟು ವೇಗ ಪಡೆಯಲು 'ಡೈನಮಿಕ್ ಮೇಂಟೆನೆನ್ಸ್ ಆಫ್ ಲೋವರ್ ಎನ್‌ವೆಲಪ್ ಲೈನ್ಸ್' ಎಂಬ ಗಣಿತದ ವಿಧಾನವನ್ನು ಈ ಸಂಶೋಧಕರು ಬಳಸಿಕೊಂಡಿದ್ದಾರೆ. ಈ ವಿಧಾನದಿಂದ ಡ್ರೋನ್‌ಗಳು ಮತ್ತು ಪಾರ್ಸೆಲ್‌ಗಳ ಸಂಖ್ಯೆ ಹೆಚ್ಚಾದಂತೆ, ಗಣಿತಸೂತ್ರದ ಕಾರ್ಯಕ್ಷಮತೆ ಹಿಂದಿನ ಸೂತ್ರಗಳಿಗಿಂತ ನಿಧಾನವಾಗಿ ಕಡಿಮೆಯಾಗುತ್ತದೆ. ಇದರಿಂದ, ಈ ಸೂತ್ರ ದೊಡ್ಡ ದೊಡ್ಡ ಸಮಸ್ಯೆಯನ್ನು ಪರಿಹರಿಸಲು ಹೆಚ್ಚು ಉಪಯುಕ್ತವಾಗಿದೆ.

ಲಾಜಿಸ್ಟಿಕ್ಸ್ ಕ್ರಾಂತಿ: ಹಲವು ಕಂಪನಿಗಳು ಈಗಾಗಲೇ ಡ್ರೋನ್ ವಿತರಣ ವ್ಯವಸ್ಥೆಗೆ ಸರಳ ಪರಿಹಾರಗಳನ್ನು ಬಳಸುತ್ತಿವೆ. ಆದರೆ ಅವು ಡ್ರೋನ್‌ಗಳ ಸೀಮಿತ ಬ್ಯಾಟರಿ ಅಥವಾ ಸಾಮರ್ಥ್ಯದಂತಹ ವಿಷಯಗಳನ್ನು ಪೂರ್ಣವಾಗಿ ಪರಿಗಣಿಸುವುದಿಲ್ಲ. ಈ ಹೊಸ ಅಲ್ಗಾರಿದಮ್ ಈ ಎರಡೂ ಅಂಶಗಳನ್ನು ಪರಿಗಣಿಸಿ, ಬಲವಾದ ಗಣಿತೀಯ ಖಾತರಿಗಳೊಂದಿಗೆ ಕೆಲಸ ಮಾಡುತ್ತದೆ. ಈ ಹೊಸ ಗಣಿತಸೂತ್ರವು ಇಂದಿನ ದೊಡ್ಡ ದೊಡ್ಡ ವಾಣಿಜ್ಯ ಸಂಸ್ಥೆಗಳಾದ ಅಮೆಜಾನ್, ಡಿಎಚ್‌ಎಲ್ ಅಥವಾ ನಮ್ಮದೇ ಆದ ಫ್ಲಿಪ್‌ಕಾರ್ಟ್, ಮೀಶೋ, ಬ್ಲಿಂಕ್-ಇಟ್‌ಗಳಿಗೆ ಬಹಳ ಸಹಾಯಕವಾಗಲಿದೆ. ಈ ಸಂಸ್ಥೆಗಳು, ಪಾರ್ಸೆಲ್‌ಗಳನ್ನು ತಲುಪಿಸುವ ಕೆಲಸಕ್ಕೆ ಡ್ರೋನ್‌ಗಳನ್ನು ಬಳಸಲು ಇದು ಆಶಾದಾಯಕವಾಗಿದೆ.

ವಿಜ್ಞಾನಿಗಳು ರೂಪಿಸಿದ ಗಣಿತದ ಸೂತ್ರವನ್ನು ತಕ್ಷಣವೇ ಕಾರ್ಯಗತಗೊಳಿಸುವುದು ಸ್ವಲ್ಪ ಕಷ್ಟಕರವಾದರೂ, ಇದು ತಂತ್ರಜ್ಞಾನದಲ್ಲಿ ಒಂದು ದೊಡ್ಡ ಹೆಜ್ಜೆಯಾಗಿದೆ. ನೀವು ಖರೀದಿಸಿದ ವಸ್ತುಗಳು ನಿಮ್ಮ ಮನೆಯ ಬಾಗಿಲಿಗೆ ಬೇಗ ಬರುವುದಕ್ಕೆ ಇನ್ನೇನು ಹೆಚ್ಚು ಸಮಯ ಬೇಕಾಗದು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ಜೀವ ಕ್ರಿಯೆಗಳು

18) ಮೀನುಗಳು ಆಕ್ಸಿಜನ್ ಅನ್ನು ಹೇಗೆ ಪಡೆದುಕೊಳ್ಳುತ್ತವೆ.?

ಉತ್ತರ:– ಮೀನುಗಳು ತಮ್ಮ ಬಾಯಿಯ ಮೂಲಕ ನೀರನ್ನು ಒಳತೆಗೆದುಕೊಂಡು ಕಿವಿರುಗಳ ಕಡೆಗೆ ಬಲವಾಗಿ ತಳ್ಳುತ್ತವೆ. ಅಲ್ಲಿ ಕರಗಿರುವ ಆಕ್ಸಿಜನ್ ರಕ್ತದಿಂದ ಪಡೆದುಕೊಳ್ಳುತ್ತವೆ.

19) ಮಾನವನ ಶ್ವಾಸಕೋಶ ಚಿತ್ರ ಬರೆದು, ಅದರ ರಚನೆ ಮತ್ತು ಕಾರ್ಯ ನಿರ್ವಹಣೆಯನ್ನು ವಿವರಿಸಿ

ಉತ್ತರ:– ಮನುಷ್ಯರಲ್ಲಿ (ಚಿತ್ರ ನೋಡಿ) ಮೂಗಿನ ಹೊಳ್ಳೆಗಳ ಮೂಲಕ ಗಾಳಿ ಒಳ ತೆಗೆದುಕೊಳ್ಳಲ್ಪಡುತ್ತದೆ. ಮೂಗಿನ ಹೊಳ್ಳೆಯೊಳಗೆ ಹಾದು ಹೋಗುವ ಗಾಳಿಯು ಹೊಳ್ಳೆಯ ಒಳದಾರಿಯಲ್ಲಿರುವ ಸೂಕ್ಷ್ಮ ಕೂದಲುಗಳಿಂದ ಸೋಸಲ್ಪಡುತ್ತದೆ. ಹೊಳ್ಳೆಯ ಒಳದಾರಿಯು ಲೋಳೆಯಿಂದ ಕೂಡಾ ಆವರಿಸಿದೆ. ಇದೂ ಈ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.



ಇಲ್ಲಿಂದ ಗಾಳಿಯು ಗಂಟಲಿನ ಮೂಲಕ ಶ್ವಾಸಕೋಶದೊಳಗೆ ಚಲಿಸುತ್ತದೆ. ಗಂಟಲಿನಲ್ಲಿ ಮೃದ್ವಸ್ಥಿಯ ಉಂಗುರಗಳಂಥ ರಚನೆಗಳಿವೆ. ಇವುಗಳು ಗಾಳಿ ಹಾದುಹೋಗುವ ರಚನೆ ಕುಸಿಯದಂತೆ ನೋಡಿಕೊಳ್ಳುತ್ತವೆ. ಚಿತ್ರದಲ್ಲಿರುವಂತೆ ಮಾನವನ ಶ್ವಾಸಕಾಂಗವ್ಯೂಹ ಶ್ವಾಸನಾಳವು ಶ್ವಾಸಕೋಶದೊಳಗೆ ಅತಿಸಣ್ಣ ನಳಿಕೆಗಳಾಗಿ ವಿಭಜನೆ ಹೊಂದಿ ಅಂತಿಮವಾಗಿ ಬಲೂನಿನಂತಹ ರಚನೆಗಳಾಗಿ ಬದಲಾಗುತ್ತವೆ. ಅವುಗಳನ್ನು ಗಾಳಿಗೂಡುಗಳು ಎನ್ನುವರು. ಈ ಗಾಳಿಗೂಡುಗಳು ಒಂದು ಮೇಲ್ಮೈಯನ್ನು ಒದಗಿಸುತ್ತವೆ. ಅಲ್ಲಿ ಅನಿಲಗಳ ವಿನಿಮಯ ನಡೆಯುತ್ತದೆ. ಗಾಳಿಗೂಡುಗಳ ಗೋಡೆಯು ವಿಶಾಲ ವ್ಯಾಪ್ತಿಯ ರಕ್ತನಾಳಗಳ ಜಾಲವನ್ನು ಹೊಂದಿವೆ. ನಾವು ಗಾಳಿಯನ್ನು ಒಳತೆಗೆದುಕೊಂಡಾಗ ನಮ್ಮ ಪಕ್ಕೆಲುಬುಗಳು ಮೇಲಕ್ಕೆ ಏರುತ್ತವೆ ಮತ್ತು ವಪೆಯು ಚಪ್ಪಟೆಗೊಳ್ಳುತ್ತದೆ. ಇದರ ಪರಿಣಾಮವಾಗಿ ಎದೆಗೂಡು ದೊಡ್ಡದಾಗುತ್ತದೆ. ಇದರಿಂದಾಗಿ ಗಾಳಿಯು ಶ್ವಾಸಕೋಶದೊಳಗೆ ಹೀರಲ್ಪಡುತ್ತದೆ ಮತ್ತು ಹಿಗ್ಗಿದ ಗಾಳಿಗೂಡುಗಳನ್ನು ತುಂಬುತ್ತದೆ. ರಕ್ತವು ದೇಹದ ಇತರ ಭಾಗಗಳಿಂದ ಕಾರ್ಬನ್ ಡೈಆಕ್ಸೈಡ್‌ಅನ್ನು ಗಾಳಿಗೂಡುಗಳಲ್ಲಿ ಬಿಡುಗಡೆಮಾಡಲು ತರುತ್ತದೆ ಮತ್ತು ಆಲ್ವಿಯೋಲಾರ್ ಗಾಳಿಯಲ್ಲಿರುವ ಆಕ್ಸಿಜನ್‌ಅನ್ನು ಆಲ್ವಿಯೋಲಾರ್ ರಕ್ತನಾಳಗಳಲ್ಲಿರುವ ರಕ್ತವು ದೇಹದ ಎಲ್ಲಾ ಜೀವಕೋಶಗಳಿಗೆ ಸರಬರಾಜು ಮಾಡಲು ಪಡೆದುಕೊಳ್ಳುತ್ತದೆ. ಉಸಿರಾಟ ಚಕ್ರದ ಸಮಯದಲ್ಲಿ ಗಾಳಿಯನ್ನು ಒಳತೆಗೆದುಕೊಂಡು ಹೊರಬಿಡುವಾಗ ಶ್ವಾಸಕೋಶಗಳು ಯಾವಾಗಲೂ ಸ್ವಲ್ಪ ಪ್ರಮಾಣದ ಗಾಳಿಯನ್ನು ಉಳಿಸಿಕೊಂಡಿರುತ್ತವೆ. ಆದ್ದರಿಂದ, ಆಕ್ಸಿಜನ್‌ಅನ್ನು ಹೀರಿಕೊಳ್ಳಲು ಮತ್ತು ಕಾರ್ಬನ್ ಡೈಆಕ್ಸೈಡ್‌ಅನ್ನು ಬಿಡುಗಡೆ ಮಾಡಲು ಸಾಕಷ್ಟು ಸಮಯ ಇರುತ್ತದೆ.

ಪ್ರಾಣಿಗಳ ದೇಹದ ಗಾತ್ರವು ದೊಡ್ಡದಾಗಿದ್ದಾಗ ವಿಸರಣಾ ಒತ್ತಡವೊಂದೇ ದೇಹದ ಎಲ್ಲಾ ಭಾಗಗಳಿಗೆ ಆಕ್ಸಿಜನ್ ಪೂರೈಸುವ ಜವಾಬ್ದಾರಿಯನ್ನು ನಿರ್ವಹಿಸಲಾರದು. ಬದಲಾಗಿ ಉಸಿರಾಟದ ವರ್ಣಕಗಳು ಶ್ವಾಸಕೋಶದಲ್ಲಿನ ಗಾಳಿಯಿಂದ ಆಕ್ಸಿಜನ್‌ಅನ್ನು ಪಡೆಯುತ್ತವೆ ಮತ್ತು ಬಿಡುಗಡೆ ಮಾಡುವ ಮೊದಲು ಆಕ್ಸಿಜನ್ ಕೊರತೆಯಿರುವ ಅಂಗಾಂಶಗಳಿಗೆ ಕೊಂಡೊಯ್ಯುತ್ತವೆ. ಮನುಷ್ಯರಲ್ಲಿ ಹಿಮೋಗ್ಲೋಬಿನ್ ಉಸಿರಾಟದ ವರ್ಣಕವಾಗಿದ್ದು ಅದು ಆಕ್ಸಿಜನ್‌ನೆಡೆಗೆ ಹೆಚ್ಚಿನ ಆಕರ್ಷಣೆಯನ್ನು ಹೊಂದಿದೆ. ಈ ವರ್ಣಕವು ಕೆಂಪು ರಕ್ತ ಕಣಗಳಲ್ಲಿರುತ್ತದೆ. ಆಕ್ಸಿಜನ್‌ಗಿಂತ ಕಾರ್ಬನ್ ಡೈಆಕ್ಸೈಡ್ ಹೆಚ್ಚಾಗಿ ನೀರಿನಲ್ಲಿ ಕರಗುತ್ತದೆ ಮತ್ತು ಬಹುತೇಕ ಇದರಿಂದಾಗಿ ನಮ್ಮ ರಕ್ತದಲ್ಲಿ ವಿಲೀನಗೊಂಡ ರೂಪದಲ್ಲಿ ಸಾಗಿಸಲ್ಪಡುತ್ತದೆ.

20) ಉಭಯವಾಸಿಗಳು ಮತ್ತು ಬಹುತೇಕ ಸರೀಸೃಪಗಳಂಥ ಪ್ರಾಣಿಗಳು ಎಷ್ಟು ಕೋಣೆಗಳ ಹೃದಯವನ್ನು ಹೊಂದಿವೆ ?

ಉತ್ತರ:– ಮೂರು

21) ಮೀನುಗಳು ಎಷ್ಟು ಕೋಣೆಗಳ ಹೃದಯವನ್ನು ಹೊಂದಿವೆ?

ಉತ್ತರ:– ಎರಡು

23) ರಕ್ತದೊತ್ತಡದ ಬಗ್ಗೆ ಬರೆಯಿರಿ

ಉತ್ತರ:– ಒಂದು ರಕ್ತನಾಳದ ಗೋಡೆಯ ಮೇಲೆ ರಕ್ತವು ಉಂಟುಮಾಡುವ ಬಲವನ್ನು ರಕ್ತದೊತ್ತಡ ಎನ್ನುವರು. ಈ ಒತ್ತಡವು ಅಭಿಧಮನಿಗಳಿಗಿಂತ ಅಪಧಮನಿಗಳಲ್ಲಿ ಸಾಕಷ್ಟು ಅಧಿಕವಾಗಿರುತ್ತದೆ. ಹೃತ್ಕುಕ್ಷಿಗಳ ಸಂಕುಚನದಿಂದಾದ ಅಪಧಮನಿಗಳಲ್ಲಿನ ರಕ್ತದ ಒತ್ತಡವನ್ನು ಸಂಕುಚನದ (systolic) ಒತ್ತಡ ಎನ್ನುವರು ಮತ್ತು ಹೃತ್ಕುಕ್ಷಿಗಳ ವಿಕಸನದಿಂದ ಉಂಟಾಗುವ ಅಪಧಮನಿಗಳಲ್ಲಿನ ಒತ್ತಡವನ್ನು ವ್ಯಾಕೋಚನದ (diastolic) ಒತ್ತಡ ಎನ್ನುವರು. ಸಾಮಾನ್ಯ ಸಂಕುಚನದ ಒತ್ತಡವು ಸುಮಾರು 120mm ಪಾದರಸ ಮತ್ತು ವ್ಯಾಕೋಚನದ ಒತ್ತಡವು 80mm ಪಾದರಸಗಳಷ್ಟಿರುತ್ತದೆ.

24) ಯಾವುದನ್ನು ಲೋಮನಾಳಗಳು ಎನ್ನುವರು?

ಉತ್ತರ:– ಅಪಧಮನಿಯು ಒಂದು ಅಂಗವನ್ನು ಅಥವಾ ಅಂಗಾಂಶವನ್ನು ತಲುಪಿದ ನಂತರ, ರಕ್ತವನ್ನು ಪ್ರತಿಯೊಂದು ಜೀವಕೋಶದ ಸಂಪರ್ಕಕ್ಕೆ ತರಲು ಸಣ್ಣ ಸಣ್ಣ ನಾಳಗಳಾಗಿ ವಿಭಜಿಸುತ್ತದೆ. ಅತ್ಯಂತ ಸಣ್ಣ ನಾಳಗಳು ಒಂದು ಜೀವಕೋಶದಷ್ಟು ದಪ್ಪ ಭಿತ್ತಿಯನ್ನು ಹೊಂದಿದ್ದು ಅದನ್ನು ಲೋಮನಾಳ ಎಂದು ಕರೆಯುವರು.

25) ಒಂದು ವೇಳೆ ಈ ನಾಳ ವ್ಯವಸ್ಥೆಯಲ್ಲಿ ಸೋರಿಕೆ ಉಂಟಾದರೆ ಏನಾಗುತ್ತದೆ? ಗಾಯಗೊಂಡು ರಕ್ತ ಸ್ರಾವವಾಗುತ್ತದೆ. ಪರಿಸ್ಥಿತಿ ನಿಯಂತ್ರಿಸಲು ಗಾಯವಾದ ಪ್ರದೇಶಗಳಲ್ಲಿ ರಕ್ತವು ಹೆಪ್ಪುಗಟ್ಟುವಂತೆ ಮಾಡಿ ಈ ಸೋರಿಕೆಗಳನ್ನು ನಿಲ್ಲಿಸಲಾಗುತ್ತದೆ. ಹಾಗಾದರೆ ಈ ಕಾರ್ಯದಲ್ಲಿ ಯಾವುದು ಪ್ರಧಾನ ಪಾತ್ರ ನೀಡುತ್ತದೆ?

ಉತ್ತರ:– ಕಿರುತಟ್ಟೆ

26) ದುಗ್ಧರಸದ ಬಗ್ಗೆ ಬರೆಯಿರಿ

ಉತ್ತರ:– ಮಾನವನ ದೇಹದಲ್ಲಿ ಸಾಗಾಣಿಕೆಯಲ್ಲಿ ತೊಡಗಿಸಿ ಕೊಂಡಿರುವ ದ್ರವಗಳಲ್ಲಿ ಒಂದು ದುಗ್ಧರಸ (lymph) ಇದನ್ನು ಅಂಗಾಂಶ ದ್ರವ ಎಂದು ಸಹಾ ಕರೆಯುತ್ತಾರೆ. ಲೋಮನಾಳಗಳ ಭಿತ್ತಿಯಲ್ಲಿ ಕಂಡು ಬರುವ ರಂಧ್ರಗಳ ಮೂಲಕ ಸ್ವಲ್ಪ ಪ್ರಮಾಣದ ಪ್ಲಾಸ್ಮ, ಪ್ರೋಟೀನ್‌ಗಳು ಮತ್ತು ರಕ್ತ ಜೀವಕೋಶಗಳು ಅಂಗಾಂಶಗಳಲ್ಲಿನ ಅಂತರ್ ಕೋಶೀಯ ಅವಕಾಶಗಳೊಳಗೆ ಪ್ರವೇಶಿಸಿ ಅಂಗಾಂಶ ದ್ರವ ಅಥವಾ ದುಗ್ಧರಸವನ್ನು ಉಂಟುಮಾಡುತ್ತವೆ. ಇದು ರಕ್ತದಲ್ಲಿನ ಪ್ಲಾಸ್ಮಾದಂತೆಯೇ ಇರುತ್ತದೆ ಆದರೆ ಬಣ್ಣರಹಿತವಾಗಿದ್ದು ಕಡಿಮೆ ಪ್ರೋಟೀನನ್ನು ಹೊಂದಿರುತ್ತದೆ. ಅಂತರ್‌ಕೋಶೀಯ ಅವಕಾಶಗಳ ಮೂಲಕ ದುಗ್ಧರಸವು ದುಗ್ಧ ಲೋಮನಾಳಗಳಲ್ಲಿ ಹರಿಯುತ್ತದೆ, ಅವುಗಳು ಒಂದುಗೂಡಿ ದೊಡ್ಡ ದುಗ್ಧ ನಾಳಗಳನ್ನು ಉಂಟುಮಾಡುತ್ತವೆ. ಅವು ಅಂತಿಮವಾಗಿ ದೊಡ್ಡದಾದ ಅಭಿಧಮನಿಗಳಿಗೆ ತೆರೆಯುತ್ತವೆ.

CHEMISTRY

CHEMICAL KINETICS

44. A first order reaction is 60% completed in 80 minutes. Calculate – (i) rate constant and (ii) half life period of the reaction.

Soln:- **The rate constant k, is given by**

$$k = \frac{2.303}{t} \times \log \frac{a}{(a-x)}$$

$$\Rightarrow k = \frac{2.303}{80} \times \log \frac{100}{(100-60)}$$

$$= \frac{2.303}{80} \times \log \frac{100}{40}$$

$$= \frac{2.303}{80} \times 0.3979 = 0.01145 \text{ min}^{-1}$$

$$\text{and } t_{1/2} = \frac{0.693}{k} = \frac{0.693}{0.01145}$$

$$\therefore t_{1/2} = 60.52 \text{ min.}$$

45. In a first order reaction, show that the time taken for 75% completion of the reaction is twice the time taken for the 50% completion of the reaction.

Soln:- For 50% completion of the reaction,

$$t_1 = \frac{1}{k} \times 2.303 \times \log \frac{100}{50}$$

$$= \frac{1}{k} \times 2.303 \times \log 2$$

For 75% completion of the reaction,

$$t_2 = \frac{1}{k} \times 2.303 \times \log \frac{100}{25}$$

$$= \frac{1}{k} \times 2.303 \times \log 4 \qquad (\because 4 = 2^2)$$

$$= \frac{1}{k} \times 2.303 \times \log 2^2$$

$$= \frac{1}{k} \times 2.303 \times 2 \log 2$$

$$\therefore t_2 = 2\left(\frac{1}{k} \times 2.303 \times \log 2\right)$$

$$\Rightarrow t_2 = 2t_1$$

46. What is the significance of the following terms - (i) Arrhenius factor, A (ii) $e^{-Ea/RT}$ in the Arrhenius equation

$$k = A.\, e^{-Ea/RT}.$$

Ans:- (i) The Arrhenius factor, A is known as the frequency factor and is related to the number of binary molecular collisions per dm^3 per second.

(ii) The term $e^{-Ea/RT}$ expresses the fraction of the collisions which becomes effective in a reaction.

47. Give different forms of the Arrhenius equation.

Ans:- The different forms of the Arrhenius equation are -

(a) $k = A.\, e^{-Ea/RT}$

(b) $\log k = -\frac{E_a}{2.303\, RT} + \log A$

(c) $\log\left(\frac{k_2}{k_1}\right) = \frac{E_a}{2.303\, R}\left[\frac{T_2 - T_1}{T_1 T_2}\right]$

where, A is the Arrhenius constant,
e is the napier's base of logarithms,
R is the ideal gas constant and
E_a is the activation energy of the reaction,
rate constant of a reaction is k_1 at the temperature T_1 and its rate constant is k_2 at another temperature T_2.

48. The time required for 10% completion of the first order reaction at 298 K is equal to that required for its 25% completion at 308 K. Calculate the temperature coefficient of the reaction and the energy of activation.

Soln:-In the time t, let 10% reaction be completed at 298K.

$$\therefore k_{298} = \frac{2.303}{t} \log \frac{100}{100-10}$$

$$= \frac{2.303}{t} \log \frac{100}{90} \text{ ....(i)}$$

In the same interval of time t, 25% of the reaction is complete at 308 K

$$\therefore k_{308} = \frac{2.303}{t} \log \frac{100}{75} \text{ ....(ii)}$$

****

Unit 4 – The d- and f-Block Elements

1. Write a brief note on d – Block elements?

Ans:- The d – Block elements are present in group 3 to Group 12 and lie in between s and p – block elements.

The d–Block elements (or) transition metals are defined as those elements which contain partially filled d–sub shells either in their atoms or in their common oxidation states.

2. Why are d – Block elements called transition elements?

Ans:- d – Block elements are called transition elements because they are transitional between the highly metallic elements with ionic character of the s – block elements and largely covalent character of p – block elements.

3. Name the pseudo – transition elements?

Ans:- The elements of the group 12 that is Zinc, Cadmium and mercury are the pseudo–transition elements.

4. Name the 3rd and 4th transition elements of the first transition series.

Ans:- Vanadium and Chromium

5. What are the factors on which the colours of transition metal ions depend?

Ans:- The colours of the transition metal ions depends on are –

(1) Presence of partly filled d – orbitals.
(2) Nature of the ligands attached to the central metal ion.

6. Though zinc is considered as a transition metal its salt solutions are colourless. Explain.

Ans:- In salt solutions zinc is in its +2 oxidation state. In this state it has no unpaired electrons and hence the solution remains colourless.

7. What are diamagnetic materials?

Ans:- The materials that are repelled by the magnetic field are called the diamagnetic materials. These substances do not contain unpaired electrons. *Eg:* NaCl, $ZnSO_4$ etc.,

8. Mention the properties on which the Catalytic behaviour of transition metals depends on?

Ans:- The catalytic behaviour of transition metals depends on the following –

(i) the capacity to show variable oxidation states
(ii) the presence of vacant d - orbitals

9. Write the general electronic configuration of the d-block elements. *(Contd…….)*

₹10 ಲಕ್ಷ ಮೌಲ್ಯದ ಉಪಕರಣ ಜಪ್ತಿ

ಡೇಟಾ ಸೆಂಟರ್ ಮೇಲೆ ಸಿಸಿಬಿ ದಾಳಿ
6 ಸಿಮ್ ಬಾಕ್ಸ್, 133 ಸಿಮ್ ಕಾರ್ಡ್ ವಶಕ್ಕೆ

ಈ ಸಿಮ್ ಕಾರ್ಡ್‌ಗಳನ್ನು ಬಳಸಿಕೊಂಡು ಸೈಬರ್ ವಂಚನೆ ನಡೆಸಿರುವ ಅನುಮಾನವು ಇದೆ. ತನಿಖೆ ಮುಂದುವರಿದಿದೆ

ಸೀಮಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಬರ್ ವಂಚನೆಗೆ ಒಳಗಾದವರಿಗೆ ಕಾನೂನು ಸೇವೆ ಒದಗಿಸಿ ಕೊಡುವುದಾಗಿ ನಂಬಿಸಿ ಹಣ ಪಡೆದು ವಂಚಿಸುತ್ತಿದ್ದ ಬೃಹತ್ ಸೈಬರ್ ವಂಚನೆ ಜಾಲ ಪ್ರಕರಣದ ತನಿಖೆ ಮುಂದುವರಿಸಿರುವ ಸಿಸಿಬಿ ಪೊಲೀಸರು, ವಂಚನೆ ನಡೆಸಲು ಬಳಸುತ್ತಿದ್ದ ₹10 ಲಕ್ಷ ಮೌಲ್ಯದ ಉಪಕರಣಗಳನ್ನು ಜಪ್ತಿ ಮಾಡಿದ್ದಾರೆ.

ಆಗಸ್ಟ್ 2ರಂದು ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆ ಪ್ರಕರಣ ಆಧರಿಸಿ, ವೈಟ್‌ಫೀಲ್ಡ್‌ನ ಡೇಟಾ ಸೆಂಟರ್ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ, ಆರು ಸಿಮ್ ಬಾಕ್ಸ್‌ಗಳು, 133 ಸಿಮ್ ಕಾರ್ಡ್‌ಗಳು, 12 ಡೇಟಾ ಸ್ಟೋರೇಜ್ ಸರ್ವರ್ (ಐಪಿಬಿಎಕ್ಸ್, ಅಪ್ಲಿಕೇಶನ್ ಮತ್ತು ಡೇಟಾಬೇಸ್) ಒಂದು ನೆಟ್ ವರ್ಕ್ ರೌಟರ್ ಅನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಕಳೆದ ವಾರ ನಡೆದಿದ್ದ ಕಾರ್ಯಾಚರಣೆಯಲ್ಲಿ ತಮಿಳುನಾಡಿನ ಬಿ.ಇ ಪದವೀಧರ ತುಫೈಲ್ ಅಹಮದ್ (37) ಎಂಬಾತನನ್ನು ಬಂಧಿಸಲಾಗಿತ್ತು. ಆತನನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಮಾಹಿತಿ ನೀಡಿದ್ದ. ಆ ಮಾಹಿತಿ ಆಧರಿಸಿ ಡೇಟಾ ಸೆಂಟರ್ ಮೇಲೆ ದಾಳಿ ನಡೆಸಲಾಯಿತು ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

'ಈ ಪ್ರಕರಣದಲ್ಲಿ ಒಬ್ಬ ಆರೋಪಿಯನ್ನು ಮಾತ್ರ ಬಂಧಿಸಲಾಗಿದೆ. ಮತ್ತಿಬ್ಬರು ವಿದೇಶದಲ್ಲಿ ನೆಲಸಿರುವ ಶಂಕೆಯಿದ್ದು ಅವರನ್ನು ಪತ್ತೆಹಚ್ಚುವ ಕೆಲಸ ನಡೆಯುತ್ತಿದೆ' ಎಂದು ತಿಳಿಸಿದರು.

ವೊಡಾಫೋನ್ ಲಿಮಿಟೆಡ್‌ನ ನೋಂದಣಿ ಅಧಿಕಾರಿಯೊಬ್ಬರು ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಗ್ಲೀಮ್ ಗ್ಲೋಬಲ್ ಸರ್ವೀಸಸ್ ಹೆಸರಿನಲ್ಲಿ ಸಿಮ್‌ಗಳನ್ನು ಖರೀದಿಸಿ, ಅವುಗಳನ್ನು ವೈಟ್‌ಫೀಲ್ಡ್ ಐರನ್ ಮೌಂಟನ್ ಡೇಟಾ ಸೆಂಟರ್‌ನಲ್ಲಿ ಅಕ್ರಮವಾಗಿ ಅಳವಡಿಸಿದ ಸಿಮ್ ಬಾಕ್ಸ್ ಬಳಸಲಾಗುತ್ತಿದೆ. ಅಂತರರಾಷ್ಟ್ರೀಯ ಕರೆಗಳನ್ನು ಅಕ್ರಮವಾಗಿ ಸ್ಥಳೀಯ ಕರೆಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ರಾಷ್ಟ್ರೀಯ ಭದ್ರತೆಗೆ ಧಕ್ಕೆ ಉಂಟು ಮಾಡಲಾಗುತ್ತಿದೆ. ಅಲ್ಲದೇ ಸರ್ಕಾರ ಹಾಗೂ ಟೆಲಿಕಾಂ ಸಂಸ್ಥೆಗೂ ಆರ್ಥಿಕ ನಷ್ಟ ಉಂಟು ಮಾಡಲಾಗುತ್ತಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿತ್ತು.

'ಆರೋಪಿಯನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದಾಗ, ಡೇಟಾ ಸೆಂಟರ್‌ನಲ್ಲಿ ಸಿಮ್ ಬಾಕ್ಸ್ ಅಳವಡಿಸಿಕೊಂಡು ಕರೆಗಳನ್ನು ಪರಿವರ್ತನೆ ಮಾಡುತ್ತಿರುವುದಾಗಿ ಒಪ್ಪಿಕೊಂಡಿದ್ದ. ಮತ್ತಿಬ್ಬರು ವಿದೇಶದಲ್ಲಿದ್ದು, ಅವರ ಸಂಪರ್ಕದಲ್ಲಿ ಕೃತ್ಯ ಎಸಗುತ್ತಿರುವುದಾಗಿ ತಿಳಿಸಿದ್ದ. ವಿದೇಶದಲ್ಲಿರುವ ವ್ಯಕ್ತಿಗಳ ಮಾರ್ಗದರ್ಶನದಲ್ಲಿ ವೊಡಾಫೋನ್ ಸಿಮ್‌ಗಳನ್ನು ಖರೀದಿಸಿ ನಕಲಿ ಕಂಪನಿಗಳ ಹೆಸರಿನಲ್ಲಿ ಐಪಿಬಿಎಕ್ಸ್ ಸರ್ವರ್‌ಗಳು ಹಾಗೂ ಸಿಮ್ ಬಾಕ್ಸ್‌ಗಳನ್ನು ಅಳವಡಿಸಿರುವುದಾಗಿ ತಿಳಿಸಿದ್ದ. ಆ ಮಾಹಿತಿ ಆಧರಿಸಿ ವೈಟ್‌ಫೀಲ್ಡ್‌ನಲ್ಲಿದ್ದ ಸೆಂಟರ್ ಮೇಲೆ ದಾಳಿ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು.

ಕರೆಗಳ ಪರಿವರ್ತನೆ ಅಪರಾಧ

'ಐಎಸ್‌ಡಿ ಕರೆಗಳನ್ನು ಸ್ಥಳೀಯ ಕರೆಯಾಗಿ ಪರಿವರ್ತಿಸುವುದು ಅಪರಾಧ. ಬೇರೆ ದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲಸಿರುವ ಭಾರತೀಯರು, ತಮ್ಮ ಕುಟುಂಬದವರ ಜತೆಗೆ ಮಾತನಾಡಲು ಐಎಸ್‌ಡಿ ಕರೆಗಳನ್ನು ಬಳಸಬೇಕು. ಈ ಕರೆಗಳ ದರ ಸ್ಥಳೀಯ ಕರೆಗಳಿಗಿಂತ ದುಬಾರಿ. ಕರೆಗಳನ್ನು ಪರಿವರ್ತಿಸುವುದರಿಂದ ಸ್ಥಳೀಯ ಕರೆಗಳ ದರದಲ್ಲೇ ಅಂತರರಾಷ್ಟ್ರೀಯ ಕರೆಗಳನ್ನು ಮಾಡಬಹುದು. ಎರಡೂ ದೇಶಗಳಲ್ಲಿ ಒಂದೇ ತಂತ್ರಜ್ಞಾನ ಬಳಸಿದಾಗ ಮಾತ್ರ ಇದು ಸಾಧ್ಯ. ಈ ಉದ್ದೇಶದಿಂದ ಆರೋಪಿಗಳು ದುಬಾರಿ ಕರೆಗಳನ್ನು ಸ್ಥಳೀಯ ಕರೆಗಳನ್ನಾಗಿ ಬದಲಾಯಿಸುತ್ತಿದ್ದರು. ಕೃತ್ಯಕ್ಕೆ ಸಹಕಾರ ನೀಡಿದ ಸ್ಥಳೀಯರಿಗೆ ಹವಾಲದ ಮೂಲಕ ಹಣ ಸಂದಾಯ ಮಾಡುತ್ತಿದ್ದರು' ಎಂದೂ ಪೊಲೀಸರು ಹೇಳಿದರು.

ನಗದು, ಚಿನ್ನ ಕದ್ದಿದ್ದ ಮ್ಯಾನೇಜರ್ ಸೆರೆ

₹89.09 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ವಸ್ತು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸಕ್ಕಿದ್ದ ಉದ್ಯಮಿಯ ಕಚೇರಿಯಲ್ಲಿ ಹಂತ ಹಂತವಾಗಿ ಚಿನ್ನಾಭರಣ ಹಾಗೂ ನಗದು ದೋಚಿದ್ದ ಆರೋಪಿಯನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಯನಗರ ನಿವಾಸಿ ಅಶೋಕ್ ಪಾರಸ್ರಾಮಪುರಿಯಾ ಅವರ ದೂರಿನ ಮೇರೆಗೆ ವ್ಯವಸ್ಥಾಪಕ ಕಾರ್ತಿಕ್ ಎಂಬಾತನನ್ನು ಬಂಧಿಸಿ, ₹89.09 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿಯ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಗ್ರಾನೈಟ್ ಉದ್ಯಮಿ ಅಶೋಕ್ ಅವರ ಕಚೇರಿಯಲ್ಲಿ 20 ವರ್ಷಗಳಿಂದ ವ್ಯವಸ್ಥಾಪಕನಾಗಿರುವ ಕಾರ್ತಿಕ್ ಸಾಲ ಮಾಡಿದ್ದ. ಅದನ್ನು ತೀರಿಸಲು ಕಳ್ಳತನ ಮಾಡಲು ಸಂಚು ರೂಪಿಸಿ 8 ವರ್ಷಗಳ ಹಿಂದೆಯೇ ಕಚೇರಿಯ ಕಬೋರ್ಡ್ ನಕಲಿ ಕೀಯನ್ನು ಸಿದ್ಧಪಡಿಸಿಟ್ಟುಕೊಂಡಿದ್ದ. ಆ ಕೀ ಬಳಸಿ ಮಾಲೀಕರು ಇಲ್ಲದ ವೇಳೆ ಸ್ವಲ್ಪ ಸ್ವಲ್ಪವೇ ಚಿನ್ನಾಭರಣ, ಬೆಳ್ಳಿ, ನಗದನ್ನು ದೋಚುತ್ತಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಕಾರ್ತಿಕ್ ಬಗ್ಗೆ ಅನುಮಾನಗೊಂಡ ಮಾಲೀಕರು, ಪೊಲೀಸರಿಗೆ ದೂರು ನೀಡಿದ್ದರು. ತನಿಖೆ ಕೈಗೊಂಡ ಪೊಲೀಸರು ಜುಲೈ 28ರಂದು ನಕಲಿ ಕೀ ಹಾಗೂ ನಗದು ಸಮೇತ ಕಾರ್ತಿಕ್‌ನನ್ನು ಆತನ ಮನೆಯಲ್ಲೇ ವಶಕ್ಕೆ ಪಡೆದು, ವಿಚಾರಣೆಗೊಳಪಡಿಸಿದಾಗ ಸಾಲ ತೀರಿಸಲು ಕಳ್ಳತನ ಎಸಗಿರುವುದಾಗಿ ಬಾಯ್ಬಿಟ್ಟಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕದ್ದ ಚಿನ್ನದ ಪೈಕಿ ತ್ಯಾಗರಾಜನಗರದ ಜ್ಯುವೆಲ್ಲರಿ ಅಂಗಡಿ ಹಾಗೂ ಫೈನಾನ್ಸ್ ಕಂಪನಿಯಲ್ಲಿ ಅಡವಿಟ್ಟು ಹಣ ಪಡೆದುಕೊಂಡಿದ್ದ. ಸದ್ಯ ಅವುಗಳನ್ನು ವಶಪಡಿಸಿಕೊಂಡಿದ್ದು, ಆರೋಪಿ ಕಾರ್ತಿಕ್‌ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಯು ಕುಟುಂಬ ನಿರ್ವಹಣೆ, ವಿಲಾಸಿ ಜೀವನ ಹಾಗೂ ಜೂಜಿಗಾಗಿ ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡಿದ್ದು, ಸಾಲಗಾರರ ಒತ್ತಡ ಹೆಚ್ಚಾಗಿತ್ತು. ಹೀಗಾಗಿ ಆರೋಪಿ ಕೆಲಸ ಮಾಡುತ್ತಿದ್ದ ಮನೆಯಲ್ಲೇ ಕಳ್ಳತನ ಮಾಡಿ, ಚಿನ್ನಾಭರಣ ಮಾರಾಟ, ಅಡಮಾನ ಇರಿಸಿ ಬೆಳ್ಳಿ ವಸ್ತುಗಳ ಖರೀದಿ ಜತೆಗೆ, ಸಾಲ ತೀರಿಸಿದ್ದಾನೆ ಎಂದು ಪೊಲೀಸರು ಹೇಳಿದರು.

ಬಿ.ಇ ಪದವೀಧರರಿಂದ ಡ್ರಗ್ಸ್ ಪೆಡ್ಲಿಂಗ್

ಬೆಂಗಳೂರು: ಉತ್ತರ ಉಪ ವಿಭಾಗದ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ನಾಲ್ಕು ಪ್ರತ್ಯೇಕ ಪ್ರಕರಣದಲ್ಲಿ ಮಾದಕವಸ್ತು ಮಾರಾಟ ಮಾಡುತ್ತಿದ್ದ ಆರು ಆರೋಪಿಗಳನ್ನು ಬಂಧಿಸಿದ್ದಾರೆ.

ಫರ್ಹಾನ್ ಹುಸೈನ್(29), ಉಪೇಶ್ ಬಹದ್ದೂರ್(20), ಸನ್ಮಾನ್ ಖುರೇಷಿ (25), ಮಹಮದ್ ಶೋಯೆಬ್(28), ಚಂದನ್(24) ಮತ್ತು ಉಮರ್ ಸಾಹುದ್(26) ಬಂಧಿತರು.

ಆರೋಪಿಗಳಿಂದ ಜಪ್ತಿ ಮಾಡಿಕೊಳ್ಳಲಾದ ನಗದು, ಚಾಕು ಹಾಗೂ ಡ್ರಗ್ಸ್

ಆರೋಪಿಗಳಿಂದ ₹61 ಲಕ್ಷ ಮೌಲ್ಯದ 6.2 ಕೆ.ಜಿ ಗಾಂಜಾ, 278 ಗ್ರಾಂ ಎಂಡಿಎಂಎ, 75 ಗ್ರಾಂ ಚರಸ್, ₹ 69 ಸಾವಿರ ನಗದು ವಶಪಡಿಸಿಕೊಳ್ಳಲಾಗಿದೆ.

ಆರೋಪಿಗಳ ಪೈಕಿ ಮಹಮದ್ ಶೋಯೆಬ್, ಚಂದನ್ ಹಾಗೂ ಉಮರ್ ಸಾಹುದ್ ಒಟ್ಟಿಗೆ ಎಂಜಿನಿಯರಿಂಗ್ ಓದಿದ್ದರು. ಎಂಜಿನಿಯರಿಂಗ್ ಓದುವ ಸಂದರ್ಭದಲ್ಲೇ ಗಾಂಜಾ ತೆಗೆದುಕೊಳ್ಳುತ್ತಿದ್ದರು. ಓದು ಮುಗಿದ ಬಳಿಕ ಹೆಚ್ಚಿನ ಹಣ ಸಂಪಾದನೆಗಾಗಿ ಡ್ರಗ್ಸ್ ಪೆಡ್ಲಿಂಗ್ ದಂಧೆಗೆ ಇಳಿದಿದ್ದರು. ಜಾಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಎಚ್‌ಎಂಟಿ ಕ್ವಾಟ್ರಸ್ ಬಳಿ ಗಾಂಜಾ ಮಾರಾಟಕ್ಕೆ ಬಂದಾಗ ಪೊಲೀಸರ ಬಲೆಗೆ ಬಿದ್ದಿದ್ದಾರೆ.

'ಆರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಪ್ರಕರಣದಲ್ಲಿ ಭಾಗಿಯಾಗಿರುವ ಮತ್ತಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದು ಅವರಿಗಾಗಿ ಶೋಧ ನಡೆಸಲಾಗಿದೆ' ಎಂದು ಪೊಲೀಸರು ಹೇಳಿದರು.

ನಟಿ ರಮ್ಯಾ ಪ್ರಕರಣ: ಮತ್ತೊಬ್ಬ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ, ಮಾಜಿ ಸಂಸದೆ ರಮ್ಯಾ ಅವರಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ಅಶ್ಲೀಲ ಸಂದೇಶ ಕಳುಹಿಸಿ ಬೆದರಿಕೆ ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಆರೋಪಿಯನ್ನು ಸಿಸಿಬಿ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ರಮ್ಯಾ

ವಿಜಯಪುರದ ಸಂತೋಷ್ ಬಂಧಿತ ಆರೋಪಿ. ಈತ ವಿಜಯಪುರದಲ್ಲಿ ಗಾರೆ ಕೆಲಸ ಮಾಡಿಕೊಂಡಿದ್ದ. ರಮ್ಯಾ ಅವರಿಗೆ ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಸಂದೇಶ ಕಳುಹಿಸಿದ್ದ. ಆರೋಪಿ ಬಳಸುತ್ತಿದ್ದ ಖಾತೆಯ ಐ.ಪಿ ವಿಳಾಸ ಪತ್ತೆಹಚ್ಚಿ ಬಂಧಿಸಲಾಗಿದೆ ಎಂದು ಸೈಬರ್ ಪೊಲೀಸರು ಹೇಳಿದರು.

ಪ್ರಕರಣ ದಾಖಲಾದ ಬಳಿಕ ಓಬಣ್ಣ, ಗಂಗಾಧರ್, ರಾಜೇಶ್, ಭುವನ್‌ಗೌಡ, ಮಂಜುನಾಥ್ ಹಾಗೂ ಪ್ರಮೋದ್‌ಗೌಡ ಎಂಬುವವರನ್ನು ಬಂಧಿಸಲಾಗಿದ್ದು ಬಂಧಿತರ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ.

ನಟ ದರ್ಶನ್ ಅವರ ಅಭಿಮಾನಿಗಳು ಎಂದು ಹೇಳಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶ ಕಳುಹಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ರಮ್ಯಾ ಅವರು ಜುಲೈ 28ರಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರಿಗೆ ದೂರು ನೀಡಿದ್ದರು. ಆ ದೂರು ಆಧರಿಸಿ ಸೈಬರ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

'ಮೈಸೂರು ಮ್ಯಾರಥಾನ್' ಲೋಗೊ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ - ಐತಿಹಾಸಿಕ ನಗರಿ ಮೈಸೂರು, ಫಿಟ್‌ನೆಸ್, ಪರಂಪರೆಯನ್ನು ಬಿಂಬಿಸಲು ಅಕ್ಟೋಬರ್ 26ರಂದು ಮೈಸೂರು ಮ್ಯಾರಥಾನ್ ಆಯೋಜಿಸಲಾಗಿದ್ದು, ಅದರ ಲಾಂಛನ (ಲೋಗೊ) ಪೋಸ್ಟ್ ಕಾರ್ಡ್ ಅನ್ನು ನಗರದಲ್ಲಿ ಸೋಮವಾರ ಬಿಡುಗಡೆ ಮಾಡಲಾಯಿತು.

ಮೈಸೂರು ಮ್ಯಾರಥಾನ್ ಲೋಗೊ ಮತ್ತು ಪಿಕ್ಚರ್ ಪೋಸ್ಟ್‌ಕಾರ್ಡ್ ಅನ್ನು ಬೆಂಗಳೂರಿನ ಜಿ.ಪಿ.ಒ.ದಲ್ಲಿ ಬಿಡುಗಡೆ ಮಾಡಲಾಯಿತು

ಎನ್‌ಇಬಿ ಸ್ಪೋರ್ಟ್ಸ್ ಆ್ಯಂಡ್ ಎಂಟರ್‌ಟೈನ್‌ಮೆಂಟ್ ಲಿಮಿಟೆಡ್, ಭಾರತೀಯ ಅಂಚೆ, ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ ಮೈಸೂರು ಮ್ಯಾರಥಾನ್ ಹಮ್ಮಿಕೊಳ್ಳಲಾಗಿದೆ. ಮ್ಯಾರಥಾನ್, ಹಾಫ್ ಮ್ಯಾರಥಾನ್, 10ಕೆ ಮತ್ತು 5ಕೆ ವಿಭಾಗಗಳಲ್ಲಿ ಓಟ ನಡೆಯಲಿದ್ದು, ಆಸಕ್ತರು ಭಾಗವಹಿಸಬಹುದು. ಚಾಮುಂಡಿ ಬೆಟ್ಟದ ರಮಣೀಯ ಭೂಪ್ರದೇಶಗಳ ಮೂಲಕ ಓಟ ಸಾಗುವುದರಿಂದ ನೈಸರ್ಗಿಕ ಸೌಂದರ್ಯ ಮತ್ತು ದೈಹಿಕ ಸಹಿಷ್ಣುತೆಯ ಅಪರೂಪದ ಮಿಶ್ರಣವು ಓಟಗಾರರಿಗೆ ಸಿಗಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕೆ. ಪ್ರಕಾಶ್ ಮಾತನಾಡಿ, 'ಅಕ್ಟೋಬರ್ 9 ರಂದು ಆಚರಿಸಲಾಗುವ ವಿಶ್ವ ಅಂಚೆ ದಿನದ ಅಂಗವಾಗಿ ಮ್ಯಾರಥಾನ್ ಹಮ್ಮಿಕೊಳ್ಳಲಾಗಿದೆ' ಎಂದು ವಿವರ ನೀಡಿದರು.

ಆಸಕ್ತರು https://www.mysamay.in/public/event/info/3afc8819-d56f-4f5f-bed6-27fa1b444439 ಮೂಲಕ ನೋಂದಣಿ ಮಾಡಬಹುದು. ಮಾಹಿತಿಗೆ 70538 06493 ಸಂಪರ್ಕಿಸಬಹುದು ಎಂದು ಸಂಘಟಕರು ತಿಳಿಸಿದ್ದಾರೆ.

ಯುವ ಲೇಖನ ಸ್ಪರ್ಧೆಗೆ ಆಹ್ವಾನ

ಹುಬ್ಬಳ್ಳಿ: ಸಮಾಜಮುಖಿ ಪ್ರಕಾಶನವು 16 ರಿಂದ 32 ವಯಸ್ಸಿನ ಯುವಜನರಿಗೆ 'ಯುವ ಲೇಖನ ಸ್ಪರ್ಧೆ' ಏರ್ಪಡಿಸಿದೆ. ಆಯ್ದ 5 ಲೇಖನಗಳಿಗೆ ತಲಾ ₹ 5 ಸಾವಿರ ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಲಾಗುವುದು.

'ಕನ್ನಡಿಗರು ಉದ್ಯಮಶೀಲತೆಯಲ್ಲಿ ಏಕೆ ಹಿಂದೆ ಬಿದ್ದಿದ್ದಾರೆ? ಕನ್ನಡಿಗರು ಯಶಸ್ವಿ ಉದ್ಯಮಿಗಳಾಗಲು ಏನು ಮಾಡಬೇಕು' ಎಂಬ ವಿಷಯದ ಕುರಿತು ಲೇಖನ ಬರೆಯಬೇಕು. ಲೇಖನವು 1,600 ರಿಂದ 2,000 ಪದಗಳ ಮಿತಿಯಲ್ಲಿ ಇರಬೇಕು. ಲೇಖನದ ಜೊತೆಗೆ ಹುಟ್ಟಿದ ದಿನಾಂಕದ ಯಾವುದಾದರೂ ದಾಖಲೆಯ ಪ್ರತಿ, ಪೂರ್ಣ ಅಂಚೆ ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಭಾವಚಿತ್ರ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಲೇಖನ ಸಲ್ಲಿಕೆಗೆ ಕೊನೆಯ ದಿನ 15 ಸೆಪ್ಟೆಂಬರ್. ಇಮೇಲ್ ವಿಳಾಸ: samajamukhi2017@gmail.com

ಆ್ಯಪ್ ಮೂಲಕ ಸ್ಥಳ ಕಾಯ್ದಿರಿಸುವ ವ್ಯವಸ್ಥೆ, ತಿಂಗಳ ಪಾಸ್‌ಗೆ ಅವಕಾಶ

ಕೆ.ಆರ್. ಮಾರುಕಟ್ಟೆಯಲ್ಲಿ 'ಸ್ಮಾರ್ಟ್ ಪಾರ್ಕಿಂಗ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಭಿವೃದ್ಧಿ, ಕಾರ್ಯಾಚರಣೆ ಮತ್ತು ನಿರ್ವಹಣೆ' ಯೋಜನೆಯಡಿ ಕೆ.ಆರ್. ಮಾರುಕಟ್ಟೆಯಲ್ಲಿ 'ಸ್ಮಾರ್ಟ್ ಪಾರ್ಕಿಂಗ್' ವ್ಯವಸ್ಥೆಯನ್ನು ಒದಗಿಸಲು ಬಿಬಿಎಂಪಿ ಮುಂದಾಗಿದೆ.

ಕೆ.ಆರ್. ಮಾರುಕಟ್ಟೆಯ ಕಟ್ಟಡದ ಬೇಸ್‌ಮೆಂಟ್‌ನಲ್ಲಿ ಒಂದು ಲಕ್ಷ ಚದರ ಅಡಿಯಷ್ಟು ಪ್ರದೇಶದಲ್ಲಿ 'ಸ್ಮಾರ್ಟ್ ಪಾರ್ಕಿಂಗ್' ವ್ಯವಸ್ಥೆ ಕಲ್ಪಿಸಲಾಗುತ್ತಿದ್ದು, ಆ್ಯಪ್ ಅಥವಾ ಪೋರ್ಟಲ್ ಮೂಲಕ ವಾಹನ ಸವಾರರು ಸ್ಥಳವನ್ನು ಕಾಯ್ದಿರಿಸಬಹುದು.

ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿರುವ ಕೆ.ಆರ್. ಮಾರುಕಟ್ಟೆಯಲ್ಲಿರುವ ಕಟ್ಟಡದ ನೆಲಮಹಡಿಯಲ್ಲಿ 'ಸ್ಮಾರ್ಟ್ ಪಾರ್ಕಿಂಗ್'ಗಾಗಿ 10 ವರ್ಷಗಳಿಗೆ ₹4.32 ಕೋಟಿ ಮೊತ್ತಕ್ಕೆ ಟೆಂಡರ್ ಆಹ್ವಾನಿಸಲಾಗಿದೆ. ಆಗಸ್ಟ್ 28ರಂದು ಟೆಂಡರ್ ತೆರೆಯಲಾಗುತ್ತಿದೆ.

ವಾಹನಗಳು ನಿಲುಗಡೆಗೆ ಬಂದಾಗ ಕ್ಯೂಆರ್ ಕೋಡ್ ಟಿಕೆಟ್ ಅಥವಾ ಅದಕ್ಕೂ ಅತ್ಯುನ್ನತ ವ್ಯವಸ್ಥೆ ಅಳವಡಿಸಿಕೊಳ್ಳಬೇಕು. ಮೊಬೈಲ್ ಆ್ಯಪ್ ಅಥವಾ ಸ್ಮಾರ್ಟ್ ವೆಬ್ ಪೋರ್ಟಲ್ ಮೂಲಕ 'ಪ್ರೀ–ಬುಕಿಂಗ್'ಗೆ ಅವಕಾಶ ನೀಡಬೇಕು. ತಿಂಗಳ ಪಾಸ್‌ಗಳನ್ನು ನೀಡಬೇಕು. ರಾತ್ರಿ ವೇಳೆ ಪಾರ್ಕಿಂಗ್‌ಗೆ ಪಾಸ್ ನೀಡಬೇಕು. 12 ಗಂಟೆಯಿಂದ 24 ಗಂಟೆಯವರೆಗಿನ ನಿಲುಗಡೆಗೆ ದ್ವಿಚಕ್ರ ವಾಹನಕ್ಕೆ ₹175 ಹಾಗೂ ಕಾರಿಗೆ ₹275 ಶುಲ್ಕ ನಿಗದಿಪಡಿಸಲಾಗಿದೆ. 24 ಗಂಟೆಯೂ ಭದ್ರತಾ ಸಿಬ್ಬಂದಿ ಇರಬೇಕು, ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು ಎಂಬ ಷರತ್ತು ವಿಧಿಸಲಾಗಿದೆ.

'ಸ್ವಾತಂತ್ರ್ಯ ಉದ್ಯಾನದಲ್ಲಿ ನಿರ್ಮಿಸಲಾಗಿರುವ ಬಹುಮಹಡಿ ಪಾರ್ಕಿಂಗ್‌ನಲ್ಲಿರುವ ಸ್ಮಾರ್ಟ್ ವ್ಯವಸ್ಥೆಗಳನ್ನು ಇಲ್ಲಿ ಅಳವಡಿಸಲಾಗುತ್ತದೆ' ಎಂದು ಬಿಬಿಎಂಪಿ ಯೋಜನೆ ವಿಭಾಗದ ಕಾರ್ಯಕಾರಿ ಎಂಜಿನಿಯರ್ ಮುನಿಯಪ್ಪ ತಿಳಿಸಿದರು.

600	ವಾಹನಗಳಿಗೆ ನಿಲುಗಡೆ ವ್ಯವಸ್ಥೆ
400	ದ್ವಿಚಕ್ರ ವಾಹನಗಳು
200	ಕಾರುಗಳು
ಶುಲ್ಕ	
₹15	ದ್ವಿಚಕ್ರ ವಾಹನ (ಮೊದಲ ಒಂದು ಗಂಟೆಗೆ)
₹1,500	30ಗಳ ಪಾಸ್
₹25	ಕಾರು (ಮೊದಲ ಒಂದು ಗಂಟೆಗೆ)
₹5,000	30ಗಳ ಪಾಸ್

ಪ್ರಯಾಣಿಕರ ಸಂಖ್ಯೆ				
	4,51,816 ನೇರಳೆ ಮಾರ್ಗ	2,91,677 ಹಸಿರು ಮಾರ್ಗ	52,215 ಹಳದಿ ಮಾರ್ಗ	2,52,323 ಇಂಟರ್‌ಚೇಂಜ್

ಫೀಡರ್ ಬಸ್ ಸೇವೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಂಗಳವಾರ ಚಾಲನೆ ನೀಡಿದರು (ಎಡಚಿತ್ರ) ಮೆಟ್ರೊ ರೈಲಿನಲ್ಲಿ ಸಂಚರಿಸಿದ ಪ್ರಯಾಣಿಕರು (ಬಲ ಚಿತ್ರ)

ದಾಖಲೆ ಬರೆದ ‘ನಮ್ಮ ಮೆಟ್ರೊ’

ಹಳದಿ ಮಾರ್ಗ ಸೇರ್ಪಡೆ ಬಳಿಕ ಒಂದೇ ದಿನ 10.48 ಲಕ್ಷ ಮಂದಿ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ದ ನೇರಳೆ, ಹಸಿರು ಹಾಗೂ ಹಳದಿ ಮಾರ್ಗದಲ್ಲಿ ಸೋಮವಾರ 10.48 ಲಕ್ಷ ಮಂದಿ ಪ್ರಯಾಣಿಸಿದ್ದು ಇದು ದಾಖಲೆಯಾಗಿದೆ. ಈ ಹಿಂದೆ 9.66 ಲಕ್ಷ (ಜೂನ್ 4) ಮಂದಿ ಪ್ರಯಾಣಿಸಿದ್ದು ದಾಖಲೆ ಆಗಿತ್ತು.

ಹಳದಿ ಮಾರ್ಗದ ಸೇರ್ಪಡೆಯಿಂದಾಗಿ ಒಂದೇ ದಿನದಲ್ಲಿ ಮೆಟ್ರೊ ಪ್ರಯಾಣಿಕರ ಸಂಖ್ಯೆ 10 ಲಕ್ಷದ ಗಡಿದಾಟಿದೆ.

ನೇರಳೆ ಮಾರ್ಗದಲ್ಲಿ 4,51,816, ಹಸಿರು ಮಾರ್ಗದಲ್ಲಿ 2,91,677, ಹಳದಿ ಮಾರ್ಗದಲ್ಲಿ 52,215 ಮಂದಿ ಪ್ರಯಾಣಿಸಿದ್ದಾರೆ. 2,52,323 ಮಂದಿ ಒಂದು ಮಾರ್ಗದಿಂದ ಮತ್ತೊಂದು ಮಾರ್ಗಕ್ಕೆ (ಇಂಟರ್‌ಚೇಂಜ್) ಸಂಚಾರ ಬದಲಾಯಿಸಿದ್ದಾರೆ. ಒಟ್ಟು 10,48,031 ಮಂದಿ ಪ್ರಯಾಣಿಸಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಟಿಕೆಟ್ ಮಾದರಿ: 10,48,031 ಪ್ರಯಾಣಿಕರ ಪೈಕಿ, ಸ್ಮಾರ್ಟ್ ಕಾರ್ಡ್ ಬಳಸಿ 5,03,837 ಮಂದಿ, ಟೋಕನ್ ಮೂಲಕ 3,03,165, ಕ್ಯೂಆರ್ ಕೋಡ್ ಬಳಸಿ 2,08,382 ಹಾಗೂ ರಾಷ್ಟ್ರೀಯ ಸಾಮಾನ್ಯ ಮೊಬಿಲಿಟಿ ಕಾರ್ಡ್ (ಎನ್‌ಸಿಎಂಸಿ) ಮೂಲಕ 32,198 ಹಾಗೂ ಗ್ರೂಪ್ ಟಿಕೆಟ್ ಮೂಲಕ 450 ಮಂದಿ ಪ್ರಯಾಣಿಸಿದ್ದಾರೆ.

ಫೀಡರ್ ಬಸ್ ಸೇವೆಗೆ ಚಾಲನೆ: ಆರ್‌ವಿ ರಸ್ತೆಯಿಂದ ಬೊಮ್ಮಸಂದ್ರದವರೆಗೆ ಹಳದಿ ಮಾರ್ಗದಲ್ಲಿ ಮೆಟ್ರೊ ರೈಲುಗಳ ಸಂಚಾರ ಸೋಮವಾರ ಆರಂಭವಾಗಿದೆ. ಇದರ ಬೆನ್ನಲ್ಲೇ ಫೀಡರ್ ಬಸ್ ಸೇವೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಂಗಳವಾರ ಚಾಲನೆ ನೀಡಿದರು. ಎಲೆಕ್ಟ್ರಾನಿಕ್ಸ್ ಸಿಟಿ ವಿಪ್ರೊ ಗೇಟ್, ಕೊಡತಿ ವಿಪ್ರೊ ಗೇಟ್, ಬೊಮ್ಮಸಂದ್ರ, ಕೋನಪ್ಪನ ಅಗ್ರಹಾರದಿಂದ ಫೀಡರ್ ಬಸ್ ಸೇವೆ ಇರಲಿದೆ.

ಮೂರು ಮಾರ್ಗದ ವಿವಿಧ ನಿಲ್ದಾಣಗಳಿಂದ ಪ್ರತಿ ದಿನ 1.20 ಲಕ್ಷಕ್ಕೂ ಅಧಿಕ ಪ್ರಯಾಣಿಕರು ಮೆಟ್ರೊ ಫೀಡರ್ ಬಸ್ ಸೇವೆ ಪಡೆಯುತ್ತಿದ್ದಾರೆ.

ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರನ್ನು ಬೆಂಗಳೂರು ವಕೀಲರ ಸಂಘದ (ಎಎಬಿ) ವತಿಯಿಂದ ಹೈಕೋರ್ಟ್‌ನ ವಕೀಲರ ಸಭಾಂಗಣದಲ್ಲಿ ಸನ್ಮಾನಿಸಿ ಬೀಳ್ಕೊಡಲಾಯಿತು.ಸಂಘದ ಪದಾಧಿಕಾರಿಗಳಾದ ಎಸ್‌.ರಾಜು, ಸಂಧ್ಯಾ ಯು.ಪ್ರಭು, ಅರವಿಂದ ಕಾಮತ್, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್‌.ಶಾಂತಿಭೂಷಣ್, ಎಎಬಿ ಅಧ್ಯಕ್ಷ ವಿವೇಕ್ ರೆಡ್ಡಿ, ಬಿ.ಆರ್‌.ಹರಿಣಿ, ಖಜಾಂಚಿ ಶ್ವೇತಾ ರವಿಶಂಕರ್, ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ನ್ಯಾ.ಜಯಂತ್ ಬ್ಯಾನರ್ಜಿ, ಪ್ರಧಾನ ಕಾರ್ಯದರ್ಶಿ ಎಚ್‌.ವಿ.ಪ್ರವೀಣ್ ಗೌಡ, ಚಂದ್ರಕಾಂತ ಪಾಟೀಲ ಮತ್ತು ವೀಣಾ ರಾವ್ ಇದ್ದರು

‘ರಾಜಕಾರಣಿಗಳಲ್ಲಿ ನಡುಕ ಹುಟ್ಟಿಸಿದ್ದರು...’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನ ನ್ಯಾಯಾಧೀಶರಾಗಿದ್ದ ಸಂದರ್ಭದಲ್ಲಿ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರ ಕಾರ್ಯವೈಖರಿ ವಿಚಾರಣೆಗೆ ಎದುರಾಗುವ ರಾಜಕಾರಣಿಗಳಿಗೆ ನಡುಕ ಹುಟ್ಟಿಸುತ್ತಿತ್ತು. ಇವರೊಬ್ಬ ಅಪ್ಪಟ ಸಾರ್ವಜನಿಕ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದ ನ್ಯಾಯಮೂರ್ತಿ’ ಎಂದು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ ರೆಡ್ಡಿ ಬಣ್ಣಿಸಿದರು.

ಹೈಕೋರ್ಟ್ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರು ಮಂಗಳವಾರ ನಿವೃತ್ತರಾದರು. ಬೆಂಗಳೂರು ವಕೀಲರ ಸಂಘದ (ಎಎಬಿ) ವತಿಯಿಂದ ಹೈಕೋರ್ಟ್‌ನ ವಕೀಲರ ಸಭಾಂಗಣದಲ್ಲಿ ಸನ್ಮಾನಿಸಿ ಅವರನ್ನು ಬೀಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ವಿವೇಕ ರೆಡ್ಡಿ, ‘ಕಾನೂನು ಎಂಬುದು ತರ್ಕವಲ್ಲ. ಅದೊಂದು ಅನುಭವ ಎಂಬುದನ್ನು ತಮ್ಮ ಮೂರು ದಶಕಗಳಿಗೂ ಹೆಚ್ಚಿನ ಸೇವಾವಧಿಯಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ಮತ್ತು ಹೈಕೋರ್ಟ್ ನ್ಯಾಯಮೂರ್ತಿಯಾಗಿ ರಾಮಚಂದ್ರ ಹುದ್ದಾರ ಅವರು ತೋರಿಸಿಕೊಟ್ಟಿದ್ದಾರೆ’ ಎಂದರು.

ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ರಾಮಚಂದ್ರ ಹುದ್ದಾರ ಅವರು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಆಗಿ, ಅಕಾಡೆಮಿ ಅಧ್ಯಕ್ಷರಾಗಿ, ಜಿಲ್ಲಾ ನ್ಯಾಯಾಧೀಶರಾಗಿ ಸಲ್ಲಿಸಿರುವ ತಾಳ್ಮೆಯ ಮತ್ತು ಯಶಸ್ಸುಭರಿತ ಸೇವೆ ಸದಾ ಮಾದರಿಯಾಗಿದೆ’ ಎಂದರು. ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ‘ನಿವೃತ್ತಿ ಜೀವನ ಸುಖಕರವಾಗಿರಲಿ’ ಎಂದು ಹಾರೈಸಿದರು.

ಕೆಸರುಮಯ ರಸ್ತೆ; ಸಂಚಾರಕ್ಕೆ ತೊಂದರೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವ ಹೊಸಹಳ್ಳಿ ಗ್ರಾಮದಿಂದ ಚನ್ನ ತಿಮ್ಮಯ್ಯನ ಪಾಳ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯು ಮಳೆಯಿಂದ ಕೆಸರು ಗದ್ದೆಯಂತಾಗಿದ್ದು, ಸಂಚಾರಕ್ಕೆ ಅಡಚಣೆ ಆಗಿದೆ.

ರಸ್ತೆಯು ಸಂಪೂರ್ಣ ಹಾಳಾಗಿದ್ದು, ದ್ವಿಚಕ್ರ ವಾಹನಗಳ ಸಂಚಾರ ಪ್ರಯಾಸವಾಗಿದೆ. ಅಲ್ಲಲ್ಲಿ ಗುಂಡಿ ಬಿದ್ದಿದ್ದು, ನಿಯಂತ್ರಣ ಕಳೆದುಕೊಂಡು ಸವಾರರು ಕೆಳಗೆ ಬಿದ್ದಿರುವ ಉದಾಹರಣೆಯೂ ಉಂಟು. ಮಳೆಗಾಲದಲ್ಲಿ ಈ ರಸ್ತೆಯಲ್ಲಿ ನಡೆದುಕೊಂಡು ಹೋಗಲು ಹರಸಾಹಸ ಪಡಬೇಕು. ಕಾಲುಗಳಿಗೆ ಕೆಸರು ಮೆತ್ತಿಕೊಂಡು, ಸಾಕಷ್ಟು ತೊಂದರೆ ಆಗಲಿದೆ.

ಈ ರಸ್ತೆಯಲ್ಲಿ ನಿತ್ಯ ಕಾರ್ಖಾನೆಗಳಿಗೆ ಹೋಗುವ ಕಾರ್ಮಿಕರು, ಶಾಲಾ ಮಕ್ಕಳು, ರೈತರು ಓಡಾಡುತ್ತಾರೆ.

‘ಎರಡು ಗ್ರಾಮಗಳ ಸಾರ್ವಜನಿಕರಿಗೆ ಸಂಪರ್ಕ ಸೇತುವೆಯಾಗಿ ಇದೊಂದೇ ರಸ್ತೆ ಇದೆ. ಹಾಗಾಗಿ ಅನಿವಾರ್ಯವಾಗಿ ಈ ರಸ್ತೆಯಲ್ಲಿ ಸಂಚರಿಸಬೇಕಿದೆ’ ಎಂದು ಹೊಸಹಳ್ಳಿ ಗ್ರಾಮದ ಹೇಮಂತ್ ಬೇಸರ ವ್ಯಕ್ತಪಡಿಸಿದರು.

‘ರಸ್ತೆಯ ಎರಡು ಕಡೆ ಚರಂಡಿ ವ್ಯವಸ್ಥೆ ಇಲ್ಲದಿರುವುದೇ ರಸ್ತೆ ಹಾಳಾಗಲು ಕಾರಣ. ರಸ್ತೆಯನ್ನು ಕೂಡಲೇ ದುರಸ್ತಿ ಮಾಡಿಕೊಡಬೇಕು. ಶಾಸಕರು ಹಾಗೂ ಸಂಬಂಧ ಪಟ್ಟ ಇಲಾಖೆ ಯವರು ಗಮನ ಹರಿಸಬೇಕು’ ಎಂದು ನಾಗರಿಕರು ಒತ್ತಾಯಿಸಿದರು.

ಕೋರ್ಟ್‌ಗೆ ದರ್ಶನ್ ಹಾಜರು

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಸೇರಿ 9 ಮಂದಿ ಆರೋಪಿಗಳು ನಗರದ ಸೆಷನ್ಸ್ ಕೋರ್ಟ್‌ಗೆ ಮಂಗಳವಾರ ಹಾಜರಾದರು. ಎಲ್ಲರ ಹಾಜರಾತಿ ಪಡೆದ ನ್ಯಾಯಾಧೀಶರು, ವಿಚಾರಣೆಯನ್ನು ಸೆಪ್ಟೆಂಬರ್ 9ಕ್ಕೆ ಮುಂದೂಡಿದರು.

ಜಾಮೀನು ನೀಡುವಾಗ ಪ್ರತಿ ತಿಂಗಳು ಕೋರ್ಟ್‌ಗೆ ಕಡ್ಡಾಯವಾಗಿ ಹಾಜರಾಗಬೇಕು ಎಂದು ಷರತ್ತು ವಿಧಿಸಿದ್ದರಿಂದ ದರ್ಶನ್, ಪವಿತ್ರಾ ಗೌಡ, ಪುಟ್ಟಸ್ವಾಮಿ, ರಾಘವೇಂದ್ರ, ನಂದೀಶ್, ನಾಗರಾಜ್, ಲಕ್ಷ್ಮಣ್, ದೀಪಕ್, ರವಿಶಂಕರ್ ಹಾಜರಾಗಿದ್ದರು. ದರ್ಶನ್, ಪವಿತ್ರಾಗೌಡ ಸೇರಿ ಏಳು ಆರೋಪಿಗಳ ಜಾಮೀನು ಅರ್ಜಿ ವಿಚಾರಣೆ ಸುಪ್ರೀಂಕೋರ್ಟ್‌ ನಲ್ಲಿ ನಡೆಯುತ್ತಿದೆ.

ಪಿಐಎಲ್ ವಜಾ: ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಸರ್ಕಾರ ಸುಧಾರಣಾ ಮಸೂದೆ’ ಜಾರಿಗೆ ತರುವ ನಿಟ್ಟಿನಲ್ಲಿ 34 ಇಲಾಖೆಗಳ ಮಂತ್ರಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ವಿಶೇಷ ಕಾರ್ಯದರ್ಶಿಗಳ ಜೊತೆ ಚರ್ಚಿಸಲು ನಿರ್ದೇಶಿಸಬೇಕು’ ಎಂದು ಕೋರಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದ್ದು, ಅರ್ಜಿದಾರರಿಗೆ ₹1 ಲಕ್ಷ ದಂಡ ವಿಧಿಸಿದೆ.

ಈ ಸಂಬಂಧ ಬೆಂಗಳೂರಿನ ಮುರುಳಿಕೃಷ್ಣ ಬ್ರಹ್ಮಾನಂದಂ (69) ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಹಾಗೂ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರ ಮುರುಳಿಕೃಷ್ಣ ಅವರು, ‘ನಾನು ಕರ್ನಾಟಕ ಸರ್ಕಾರ ಸುಧಾರಣಾ ಮಸೂದೆಯನ್ನು ರೂಪಿಸಿದ್ದೇನೆ. ಮಸೂದೆಯ ವಿಚಾರವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರುವಂತೆ ಪ್ರಧಾನ ಕಾರ್ಯದರ್ಶಿಗೆ ಸೂಚಿಸಬೇಕು. ಈ ದಿಸೆಯಲ್ಲಿ ಒತ್ತಾಯಿಸಲು ತಮ್ಮ ಪಕ್ಷದ ಶಾಸಕರು ಮತ್ತು ಸಂಸದರಿಗೆ ಸೂಚಿಸುವಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರಿಗೆ ನಿರ್ದೇಶಿಸಬೇಕು. ಅಧಿವೇಶನದಲ್ಲಿ ಚರ್ಚಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಸಂವಿಧಾನದಲ್ಲಿ ನ್ಯಾಯಾಂಗವು ರಾಜ್ಯವಲ್ಲ. ನ್ಯಾಯಾಂಗ ಸರ್ಕಾರದ ಭಾಗವಲ್ಲ. ನಿಮ್ಮ ಅರ್ಜಿಯು ತಪ್ಪು ಗ್ರಹಿಕೆಯಿಂದ ಕೂಡಿದೆ. ಹಾಗಾಗಿ, ದಂಡ ವಿಧಿಸಲಾಗುತ್ತಿದೆ’ ಎಂದು ಎಚ್ಚರಿಸಿತು.

ಇದಕ್ಕೆ ಅರ್ಜಿದಾರರು, ‘ದಯಮಾಡಿ ದಂಡ ವಿಧಿಸಬಾರದು. ಇದು ನನ್ನ ಮೊದಲ ಮತ್ತು ಕೊನೆಯ ಸಾರ್ವಜನಿಕ ಹಿತಾಸಕ್ತಿ ಅರ್ಜಿ’ ಎಂದು ಮನವಿ ಮಾಡಿದರಾದರೂ ಇದನ್ನು ಒಪ್ಪದ ನ್ಯಾಯಪೀಠ, ‘ಇದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ತತ್ವವಾಗಿದೆ. ಪ್ರಕರಣಕ್ಕೆ ಮೌಲ್ಯ ತರದಿದ್ದರೆ ಅದು ಸಾರ್ವಜನಿಕ ಹಿತಾಸಕ್ತಿ ಎನಿಸುವುದಿಲ್ಲ. ಇಂತಹ ಅರ್ಜಿಗಳಿಂದ ಕೋರ್ಟ್‌ನ ಅಮೂಲ್ಯ ಸಮಯ ವ್ಯರ್ಥವಾಗುತ್ತದೆ. ಇದರಿಂದ ಇತರೆ ದಾವೆದಾರರೂ ಕಾಯುವಂತಾಗಿದೆ’ ಎಂದು ದಂಡವನ್ನು ದೃಢಪಡಿಸಿತು.

ಫಿಡೆಲ್ ಕ್ಯಾಸ್ಟ್ರೊ ಸ್ಮರಣಾರ್ಥ ಕ್ಯೂಬಾ ಸೌಹಾರ್ದ ಸಮಿತಿ ಹಮ್ಮಿಕೊಂಡಿದ್ದ ಸಮಾರಂಭ

‘ಕ್ರಾಂತಿಯ ಕಿಚ್ಚಿಗೆ ಕ್ಯೂಬಾ ಮಾದರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾರ್ಕ್ಸ್‌ವಾದಿ ಚಿಂತನೆಯ ನೆಲೆಯಲ್ಲೇ ಅರ್ಧ ಶತಮಾನದ ಕಾಲ ಕ್ಯೂಬಾವನ್ನು ಆಳಿದ ಫಿಡೆಲ್ ಕ್ಯಾಸ್ಟ್ರೊ ಜಗತ್ತಿನಾದ್ಯಂತ ಹಲವು ಹೋರಾಟಗಳಿಗೆ ಸ್ಫೂರ್ತಿಯಾದವರು. ಈಗಲೂ ಕ್ಯೂಬಾದ ಜನರಲ್ಲಿ ಆ ಹೋರಾಟದ ಮನೋಭಾವ ಕಾಣಬಹುದಾಗಿದ್ದು, ಕ್ರಾಂತಿಯ ಕಿಚ್ಚಿಗೆ ಕ್ಯೂಬಾ ಮಾದರಿ’ ಎಂದು ಈ ಹಿಂದೆ ಆ ದೇಶಕ್ಕೆ ಭೇಟಿ ನೀಡಿದ್ದ ವಿವಿಧ ಕ್ಷೇತ್ರಗಳ ಪ್ರಮುಖರು ಸ್ಮರಿಸಿಕೊಂಡರು.

ಫಿಡೆಲ್ ಕ್ಯಾಸ್ಟ್ರೊ ಶತಮಾನೋತ್ಸವ ವರ್ಷಾಚರಣೆ ಪ್ರಯುಕ್ತ ಕ್ಯೂಬಾ ಸೌಹಾರ್ದ ಸಮಿತಿ ಕರ್ನಾಟಕ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಪ್ರೀತಿಯ ಫಿಡೆಲ್...’ ಸಮಾರಂಭದ ಭಾಗವಾಗಿ ನಡೆದ ಸಂವಾದದಲ್ಲಿ, ಕವಯಿತ್ರಿ ಮಮತಾ ಸಾಗರ್, ವೈದ್ಯ ಡಾ. ಅನಿಲ್ ಕುಮಾರ್, ಪ್ರಗತಿಪರ ಚಿಂತಕ ಸಿದ್ದನಗೌಡ ಪಾಟೀಲ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಸ್ಪ್ಯಾನಿಶ್ ಸ್ಟಡೀಸ್‌ನ ನಿರ್ದೇಶಕ ರಂಜಿತ್ ಕುಮಾರ್ ಪಾಲ್ಗೊಂಡಿದ್ದರು. ಕ್ಯೂಬಾಗೆ ಭೇಟಿ ನೀಡಿದ್ದ ಅನುಭವವನ್ನು ಅವರು ಹಂಚಿಕೊಂಡರು. ಪತ್ರಕರ್ತ ಜಿ.ಎನ್. ಮೋಹನ್ ಅವರು ಸಂವಾದ ನಿರ್ವಹಿಸಿದರು.

‘ಅಮೆರಿಕವು ಕ್ಯೂಬಾದ ಮೇಲೆ ದಿಗ್ಬಂಧನ ಹೇರಿದ ಬಳಿಕ ಈ ದೇಶ ಸಂಕಷ್ಟಕ್ಕೆ ಸಿಲುಕಿತು. ಆದರೆ, ಕಠಿಣ ನಿಲುವುಗಳಿಂದ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತು’ ಎಂದು ಸಂವಾದದಲ್ಲಿ ಪಾಲ್ಗೊಂಡವರು ಅಭಿಪ್ರಾಯಪಟ್ಟರು. ಇದೇ ವೇಳೆ ಕ್ಯೂಬಾದ ಜನರಿಗಾಗಿ ನಿಧಿಯನ್ನೂ ಸಂಗ್ರಹಿಸಲಾಯಿತು.

ಮಮತಾ ಸಾಗರ್ ಮಾತನಾಡಿ, ‘ಕ್ಯೂಬಾ ಚಿಕ್ಕ ಮೆಣಸಿನಕಾಯಿ ರೀತಿಯಿದ್ದು, ಹೆಚ್ಚು ಖಾರವಾಗಿದೆ’ ಎಂದು ಅಭಿಪ್ರಾಯಪಟ್ಟರು.

ಸಂವಾದದಲ್ಲಿ ಜಿ.ಎನ್‌. ಮೋಹನ್ (ಮಧ್ಯದಲ್ಲಿ ಕುಳಿತವರು) ಮಾತನಾಡಿದರು. (ಎಡದಿಂದ) ಮಮತಾ ಸಾಗರ್, ಸಿದ್ದನಗೌಡ ಪಾಟೀಲ, ರಂಜಿತ್ ಕುಮಾರ್ ಮತ್ತು ಡಾ. ಅನಿಲ್ ಕುಮಾರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಡಾ.ಅನಿಲ್ ಕುಮಾರ್, ‘ಕ್ಯೂಬಾದಲ್ಲಿ ಸಣ್ಣ ಮಗುವಿನಿಂದ ವೃದ್ಧರವರೆಗೆ ಎಲ್ಲ ವಯೋಮಾನದವರು ಕ್ರಾಂತಿಯನ್ನು ಜೀವಂತವಾಗಿ ಉಳಿಸಿಕೊಳ್ಳಬೇಕೆಂಬ ಭಾವನೆ ಹೊಂದಿದ್ದಾರೆ. ಅಮೆರಿಕದಂತಹ ದೇಶವನ್ನು ಎದುರಿಸುವ ಧೈರ್ಯ ಅವರಲ್ಲಿದೆ’ ಎಂದರು.

ಬಳಿಕ ನಡೆದ ಕಾರ್ಯಕ್ರಮದಲ್ಲಿ ಪ್ರಕಾಶ್ ಕೆ. ಅವರು ಅನುವಾದಿಸಿರುವ ‘ಕ್ಯಾಸ್ಟ್ರೋ ಕತೆ’ ಹಾಗೂ ಜಿ.ಎನ್. ಮೋಹನ್ ಅವರ ‘ನನ್ನೊಳಗಿನ ಹಾಡು ಕ್ಯೂಬಾ’ ಕೃತಿಯ ತಮಿಳು ಮತ್ತು ತೆಲಗು ಅನುವಾದಗಳು ಬಿಡುಗಡೆಯಾದವು.

ಚಿಟಿಕೆ ಸುದ್ದಿ

ಯೂರಿಯಾ ತಿಂದು 3 ಹಸುಗಳ ಸಾವು

ಮಳವಳ್ಳಿ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಚನ್ನೇಗೌಡನದೊಡ್ಡಿ ಗ್ರಾಮದಲ್ಲಿ ಮಂಗಳವಾರ ಪಶು ಆಹಾರ ಎಂದು ಭಾವಿಸಿ ಯೂರಿಯಾ ತಿಂದು ಮೂರು ಹಸುಗಳು ಸಾವನ್ನಪ್ಪಿವೆ.

ರೈತ ಸಿದ್ದಲಿಂಗೇಗೌಡ ಅವರ ಎರಡು ಹಸುಗಳು, ಮಹದೇವ ಅವರಿಗೆ ಸೇರಿದ ಒಂದು ಹಸು ಮೃತಪಟ್ಟಿದೆ. ಹಸುಗಳನ್ನು ಹೊರಗಡೆ ಕಟ್ಟಲು ಬಿಟ್ಟಾಗ ಈ ಅವಘಡ ಸಂಭವಿಸಿದೆ.

ವಡ್ಡರಹಳ್ಳಿ ಪಶು ವೈದ್ಯಾಧಿಕಾರಿ ವೈದ್ಯಕೀಯ ಪರೀಕ್ಷೆ ನಡೆಸಿದರು. 'ಹಸುಗಳಿಂದಲೇ ಕುಟುಂಬದ ನಿರ್ವಹಣೆ ಆಗುತ್ತಿತ್ತು. ದಿಕ್ಕೇ ತೋಚದಂತಾಗಿದೆ' ಎಂದು ಸಿದ್ದಲಿಂಗೇಗೌಡ ಹೇಳಿದರು.

₹ 25 ಸಾವಿರ ಲಂಚ ಮುಖ್ಯಾಧಿಕಾರಿ ಸೆರೆ

ಚಂದ್ರಕಾಂತ್

ಚಿಕ್ಕಮಗಳೂರು: ಗುತ್ತಿಗೆದಾರರ ಬಾಕಿ ಬಿಲ್ ಪಾವತಿಗೆ ₹25 ಸಾವಿರ ಲಂಚ ಪಡೆಯುತ್ತಿದ್ದ, ಕೊಪ್ಪ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಯನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ರಸ್ತೆ ಕಾಮಗಾರಿ ನಿರ್ವಹಿಸಿದ್ದ ಗುತ್ತಿಗೆದಾರ ದೇಸಾಯಿ ಬಾಕಿ ಬಿಲ್ ಪಾವತಿಗೆ ಕೋರಿದ್ದರು. ₹7.50 ಲಕ್ಷ ಪಾವತಿಗೆ ₹50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಮಂಗಳವಾರ ₹25 ಸಾವಿರ ಪಡೆಯುವಾಗ ಸಿಕ್ಕಿಬಿದ್ದರು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಸ್ವಾಮೀಜಿ ವಿರುದ್ಧ ಜಾತಿ ನಿಂದನೆ ಪ್ರಕರಣ

ತುಮಕೂರು: ಪರಿಶಿಷ್ಟ ಮಹಿಳೆಗೆ ದೇಗುಲದ ಒಳಗೆ ಬಿಡದೆ ಜಾತಿನಿಂದನೆ ಮಾಡಿದ ಆರೋಪದ ಮೇರೆಗೆ ಕುಣಿಗಲ್ ತಾಲ್ಲೂಕು ಹಂಗರಹಳ್ಳಿ ವಿದ್ಯಾಚೌಡೇಶ್ವರಿ ದೇವಸ್ಥಾನದ ಬಾಲಮಂಜುನಾಥ ಸ್ವಾಮೀಜಿ ಸೇರಿ ಐವರ ವಿರುದ್ಧ ಪ್ರಕರಣ ದಾಖಲಾಗಿದೆ.

'ದೇವಸ್ಥಾನಕ್ಕೆ ಕರ್ಪೂರ ಹಚ್ಚಲು ಹೋದಾಗ ತಡೆದರು. ಮಾದಿಗಳು ಬರುತ್ತಿದ್ದಾಳೆ. ದೇವಾಲಯದ ಬಾಗಿಲು ಹಾಕಿ' ಎಂದು ಸ್ವಾಮೀಜಿ ಆಪ್ತರಿಗೆ ಸೂಚಿಸಿದ್ದರು. ಒಳಗೆ ಹೋಗದಂತೆ ಆಪ್ತರು ಬಾಗಿಲು ಹಾಕಿದರು ಎಂದು ಮಾಗಡಿ ತಾಲ್ಲೂಕಿನ ಚಂದುರಾಯನಹಳ್ಳಿ ನಿವಾಸಿ ಎಸ್.ಜಿ.ವನಜಾ ಸೋಮವಾರ ದೂರು ನೀಡಿದ್ದರು.

ದೂರಿನ ಆಧಾರದ ಮೇಲೆ ಸ್ವಾಮೀಜಿ, ಅವರ ಚಿಕ್ಕಮ್ಮ ನಾಗಮ್ಮ, ತಾಯಿ ರಾಜಮ್ಮ, ಆಪ್ತ ಅಭಿಷೇಕ್, ಮಂಜುನಾಥ್ ವಿರುದ್ಧ ಡಿಸಿಆರ್‌ಇ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

16ರಂದು ಕೃಷ್ಣಾ ಆರತಿ, ಪುಣ್ಯಸ್ನಾನ

ಬಾಗಲಕೋಟೆ: 'ಕುಂಭಮೇಳ ಮಾದರಿಯಲ್ಲಿ ಆ.16 ರಂದು ಕೃಷ್ಣಾ ಪುಣ್ಯಸ್ನಾನ–ಕೃಷ್ಣಾ ಆರತಿ ನಡೆಯಲಿದೆ' ಎಂದು ನಿರಾಣಿ ಸಮೂಹ ಸಂಸ್ಥೆಗಳ ಕಾರ್ಯನಿರ್ವಾಹಕ ನಿರ್ದೇಶಕ ಸಂಗಮೇಶ ನಿರಾಣಿ ಹೇಳಿದರು.

ಕೃಷ್ಣಾ ಆರತಿ ಸೇವಾ ಸಮಿತಿ ಮತ್ತು ಎಂ.ಆರ್.ಎನ್. ಫೌಂಡೇಶನ್ ವತಿಯಿಂದ ಜಮಖಂಡಿ ತಾಲ್ಲೂಕಿನ ಹಿಪ್ಪರಗಿಯ ಸಂಗಮೇಶ್ವರ ಮಠದ ಬಳಿ ಕೃಷ್ಣಾ ನದಿ ತೀರದಲ್ಲಿ ಕಾರ್ಯಕ್ರಮ ನಡೆಯಲಿದೆ. ಅಘೋರಿಗಳು, ನಾಗಾ ಸಾಧುಗಳು, ಮಠಾಧೀಶರು ಪಾಲ್ಗೊಳ್ಳುವರು. 250ಕ್ಕೂ ಹೆಚ್ಚು ಪಲ್ಲಕ್ಕಿಗಳು ಭಾಗವಹಿಸಲಿವೆ' ಎಂದು ಮಂಗಳವಾರ ತಿಳಿಸಿದರು.

'ಕೃಷ್ಣಾ ಮೇಲ್ದಂಡೆ ಯೋಜನೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಕಾವೇರಿ ನದಿಗ ಸಿಗುವ ಆದ್ಯತೆ ಕೃಷ್ಣಾ ನದಿಗೂ ಸಿಗಬೇಕು' ಎಂದು ಒತ್ತಾಯಿಸಿದರು.

ಒಂದೇ ಮೀಸಲಾತಿ ಸಿಗಲಿ: ವಚನಾನಂದ ಶ್ರೀ

ಹುಬ್ಬಳ್ಳಿ: 'ವೀರಶೈವ ಲಿಂಗಾಯತ ಸಮುದಾಯದ ಎಲ್ಲಾ ಒಳಪಂಗಡಗಳಿಗೆ ಒಂದೇ ಮೀಸಲಾತಿ ಸಿಕ್ಕಾಗ ಎಲ್ಲರಿಗೂ ಸಾಮಾಜಿಕ ನ್ಯಾಯ ಸಿಗುತ್ತದೆ' ಎಂದು ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೇಳಿದರು.

' ಹಿಂದೆ ಬಿಜೆಪಿ ಸರ್ಕಾರ ವೀರಶೈವ ಲಿಂಗಾಯತ ಸಮುದಾಯಕ್ಕೆ 2ಡಿ ಘೋಷಿಸಿದಾಗ, ನಾವು ಒಪ್ಪಿರಲಿಲ್ಲ. ಅದು ನ್ಯಾಯಾಲಯದ ಅಂಗಳದಲ್ಲಿದೆ' ಎಂದು ಮಂಗಳವಾರ ತಿಳಿಸಿದರು.

'ಕೂಡಲಸಂಗಮದಲ್ಲಿನ ಪೀಠದ ಸಮಸ್ಯೆಯನ್ನು ನಮ್ಮ ಸಮುದಾಯದ ಹಿರಿಯರು ಬಗೆಹರಿಸುವರು' ಎಂದರು.

'ಧಾರವಾಡಿ ಎಮ್ಮೆ' ತಳಿ ಸಂವರ್ಧನೆಗಿಲ್ಲ ಕ್ರಮ

2021ರಲ್ಲೇ ರಾಷ್ಟ್ರೀಯ ಮಾನ್ಯತೆ: ಸ್ಥಳೀಯ ತಳಿ ಸಂರಕ್ಷಣೆಗೆ ಸರ್ಕಾರಕ್ಕೆ ಇಚ್ಛಾಶಕ್ತಿ ಕೊರತೆ

• ಗೋವರ್ಧನ ಎಸ್.ಎನ್.

ಹುಬ್ಬಳ್ಳಿ: ವಿಶೇಷ ತಳಿಯಾದ 'ಧಾರವಾಡಿ ಎಮ್ಮೆ'ಗೆ 2021ರಲ್ಲೇ ರಾಷ್ಟ್ರೀಯ ಮಾನ್ಯತೆ ಸಿಕ್ಕಿದೆ. ಆದರೆ, ತಳಿ ಸಂವರ್ಧನೆಗೆ ಈವರೆಗೆ ಸರ್ಕಾರದಿಂದ ಯಾವುದೇ ಕ್ರಮವಾಗಿಲ್ಲ.

ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಪಶು ಸಂಗೋಪನೆ ವಿಭಾಗವು 2021ರಲ್ಲಿ ನಡೆಸಿದ್ದ ಸಭೆಯಲ್ಲಿ 'ಧಾರವಾಡಿ ತಳಿ' ಎಮ್ಮೆಗೆ 'ಇಂಡಿಯಾ ಬಫೆಲೊ_0800_ಧಾರವಾಡಿ_01018' ಎಂದು ತಳಿ ಪ್ರವೇಶ ಸಂಖ್ಯೆ ನೀಡಿತು. ಎಮ್ಮೆಗಳಲ್ಲೇ ರಾಷ್ಟ್ರೀಯ ಮಾನ್ಯತೆ ಪಡೆದ ರಾಜ್ಯದ ಮೊದಲ ತಳಿ ಎಂಬ ಹಿರಿಮೆಯೊಂದಿಗೆ, ಜಾಗತಿಕ ಮನ್ನಣೆ ದೊರೆತ ದೇಶದ 18 ಎಮ್ಮೆ ತಳಿಗಳ ಸಾಲಿಗೆ ಇದು ಸೇರ್ಪಡೆಯಾಯಿತು.

ವಿವಿಧ ತಳಿಯ ಜಾನುವಾರುಗಳ ರಕ್ಷಣೆ ಹಾಗೂ ಅಭಿವೃದ್ಧಿಗೆ ದೇಶದ ಹಲವೆಡೆ ಸಂವರ್ಧನಾ ಕೇಂದ್ರಗಳಿವೆ. ಧಾರವಾಡ ಸಮೀಪದ ತೇಗೂರಿನಲ್ಲಿ ಮುರ್‍ರಾ ಹಾಗೂ ಸುರ್ತಿ ತಳಿ ಎಮ್ಮೆಗಳ ಸಂವರ್ಧನಾ ಪ್ರಕ್ರಿಯೆ ನಡೆಯುತ್ತಿದೆ. ಅಳಿವಿನಂಚಿನ ಕೃಷ್ಣಾ ವ್ಯಾಲಿ ಆಕಳುಗಳನ್ನೂ ಸಂರಕ್ಷಿಸಲಾಗಿದೆ. ಆದರೆ, ಸ್ಥಳೀಯ ತಳಿಯ ಅಭಿವೃದ್ಧಿ ಕೇಂದ್ರ ಸ್ಥಾಪಿಸದಿರುವುದು ರೈತರ, ಹೈನುಗಾರರ ಅಸಮಾಧಾನಕ್ಕೆ ಕಾರಣವಾಗಿದೆ.

'ಕೃಷಿ ವಿ.ವಿ ಪ್ರಾಣಿ ವಿಜ್ಞಾನ ವಿಭಾಗದ ಪ್ರಯತ್ನದ ಫಲವಾಗಿ ಶುದ್ಧ ತಳಿಯ ಧಾರವಾಡಿ ಎಮ್ಮೆಗೆ ರಾಷ್ಟ್ರೀಯ ಮಾನ್ಯತೆ ಸಿಕ್ಕಿತು. ತಳಿ ಸಂವರ್ಧನೆಗೆ ಪೂರಕ ಬೆಳವಣಿಗೆಗಳು ಆಗಲಿಲ್ಲ' ಎಂದು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ವಿಶ್ವನಾಥ ಕುಲಕರ್ಣಿ ತಿಳಿಸಿದರು.

'ಈ ತಳಿಯ ಉತ್ಕೃಷ್ಟವಾದ 200 ಎಮ್ಮೆಗಳನ್ನು ಸಾಕಣೆದಾರರಿಂದ ಖರೀದಿಸಿ, ಫಾರಂನಲ್ಲಿ ಸಂರಕ್ಷಿಸಬೇಕು. ಹಾಲಿನ ಸಾಮರ್ಥ್ಯ ಸೇರಿ ವಿವಿಧ ವಿಷಯಗಳ ಕುರಿತು ಎರಡು ವರ್ಷ ಸಂಶೋಧನೆ ಮಾಡಬೇಕು. ಈ ತಳಿಯ ಎಮ್ಮೆಗೆ ಜನಿಸಿದ ಕೋಣಗಳಿಂದ ವೀರ್ಯ ಪಡೆದು, ಕೃತಕ ಗರ್ಭಧಾರಣೆಯಿಂದ ಅವುಗಳ ತಳಿ ಅಭಿವೃದ್ಧಿಪಡಿಸಬೇಕು' ಎಂದರು.

> ಧಾರವಾಡಿ ತಳಿ ಸಂವರ್ಧನೆ ಪಶು ಇಲಾಖೆ ವ್ಯಾಪ್ತಿಗೆ ಬರಲ್ಲ. ಹೀಗಾಗಿ ಪ್ರಸ್ತಾವ ಸಲ್ಲಿಸಲು ಆಗದು. ಅದಕ್ಕೆ ಪ್ರತ್ಯೇಕ ವಿಭಾಗವಿದೆ
> **ಡಾ. ಸದಾಶಿವ ಉಪ್ಪಾರ್,** ಉಪನಿರ್ದೇಶಕ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

> ಕಲಿಕೆ ಉದ್ದೇಶಕ್ಕಾಗಿ 12 ಎಮ್ಮೆಗಳನ್ನು ಪೋಷಿಸಲಾಗುತ್ತಿದೆ. ತಳಿ ಸಂವರ್ಧನೆಗಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುತ್ತೇವೆ. ಅನುದಾನ ಸಿಕ್ಕರೆ ಅನುಕೂಲ
> **ಡಾ. ಅನಿಲ್ ಕುಮಾರ್ ಜಿ.ಕೆ,** ಮುಖ್ಯಸ್ಥ, ಪ್ರಾಣಿ ವಿಜ್ಞಾನ ವಿಭಾಗ, ಕೃಷಿ ವಿಶ್ವವಿದ್ಯಾಲಯ

> ಧಾರವಾಡಿ ತಳಿ ಅಭಿವೃದ್ಧಿಗೆ ಸರ್ಕಾರ ಶೀಘ್ರವೇ ಕ್ರಮ ವಹಿಸಬೇಕು. ರೈತರಿಗೆ ಸಬ್ಸಿಡಿ ದರದಲ್ಲಿ ಈ ತಳಿಯ ಎಮ್ಮೆ ನೀಡಬೇಕು
> **ವೀರೇಶ ಸೊಬರದಮಠ,** ರೈತ ಮುಖಂಡ

'ಪೇಢೆ, ಕುಂದಾ, ಕರದಂಟಿಗೆ ಬಳಕೆ'

ಧಾರವಾಡಿ ಎಮ್ಮೆ

2021ರ ಅಂಕಿ ಅಂಶ ಪ್ರಕಾರ, ಉತ್ತರ ಕರ್ನಾಟಕದ 14 ಜಿಲ್ಲೆಗಳಲ್ಲಿ ಕಾಣಸಿಗುವ 'ಧಾರವಾಡಿ ತಳಿ'ಯ ಎಮ್ಮೆಗಳ ಸಂಖ್ಯೆ 12.05 ಲಕ್ಷ ಇದೆ.

ಈ ತಳಿ ಎಮ್ಮೆ ಜೀವಿತಾವಧಿಯಲ್ಲಿ ಐದಕ್ಕೂ ಹೆಚ್ಚು ಬಾರಿ ಕರು ಹಾಕುತ್ತದೆ. 10 ತಿಂಗಳವರೆಗೆ 970 ಲೀಟರ್ ಹಾಲು ನೀಡಲಿದೆ. ಕೊಟ್ಟಿಗೆಯಲ್ಲೇ ಸಾಕಿದಾಗ 'ಸುರ್ತಿ' ತಳಿಯ ಎಮ್ಮೆಯಷ್ಟೇ (1,200 ಲೀಟರ್) ಹಾಲು ಕೊಟ್ಟಿತ್ತು.

'ಈ ತಳಿ ಎಮ್ಮೆಗಳ ಹಾಲಿನಲ್ಲಿ ಶೇ 7ರಷ್ಟು ಕೊಬ್ಬಿನ ಅಂಶ ಇದೆ. ಧಾರವಾಡ ಪೇಢೆ, ಬೆಳಗಾವಿ ಕುಂದಾ, ಜಮಖಂಡಿ ಕಲ್ಲಿ ಪೇಢೆ, ಗೋಕಾಕ ಮತ್ತು ಅಮೀನಗಡ ಕರದಂಟು ತಿನಿಸುಗಳಿಗೆ ಬಳಕೆಯಾಗುತ್ತದೆ' ಎಂದು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ವಿಶ್ವನಾಥ ಕುಲಕರ್ಣಿ ತಿಳಿಸಿದರು.

13ನೇ ಜಾಗದಲ್ಲೂ ಸಿಗಲಿಲ್ಲ ಕುರುಹು

ಧರ್ಮಸ್ಥಳ: ಮೃತದೇಹದ ಅವಶೇಷ ಶೋಧ: 20 ಅಡಿ ಆಳದವರೆಗೆ ಗುಂಡಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಬೆಳವಣಿಗೆಗೆ ಸಂಬಂಧಿಸಿದಂತೆ ಸಾಕ್ಷಿ ದೂರುದಾರ ತೋರಿಸಿದ್ದ 13ನೇ ಜಾಗದಲ್ಲಿ ಮಂಗಳವಾರ ಶೋಧ ನಡೆದಿದ್ದು, ಶವದ ಅವಶೇಷದ ಕುರುಹು ಸಿಗಲಿಲ್ಲ.

ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಸಮೀಪದ ಅಣೆಕಟ್ಟೆಯ ಪಕ್ಕದ ಬಯಲಿನ ಈ ಜಾಗದಲ್ಲಿ 'ಅನೇಕ ಮೃತದೇಹಗಳನ್ನು ಹೂತಿದ್ದೆ' ಎಂದು ಪ್ರಕರಣದ ಸಾಕ್ಷಿ ದೂರುದಾರ ತಿಳಿಸಿದ್ದ. ಹಾಗಾಗಿ ಇಲ್ಲಿನ ಶೋಧ ಕಾರ್ಯ ತೀವ್ರ ಕುತೂಹಲ ಕೆರಳಿಸಿತ್ತು.

ಇಲ್ಲಿ ಅಣೆಕಟ್ಟೆ ಹಾಗೂ ರಸ್ತೆ ನಿರ್ಮಿಸುವಾಗ 10 ಅಡಿಗಳಷ್ಟು ಮಣ್ಣು ಹಾಕಿ ನೆಲವನ್ನು ಎತ್ತರಿಸಲಾಗಿತ್ತು. ಹಾಗಾಗಿ ನೆಲ ಅಗೆಯಲು ಸಣ್ಣ, ದೊಡ್ಡ ಯಂತ್ರ ಬಳಸಿ 15ರಿಂದ 20 ಅಡಿ ಆಳದವರೆಗೆ ಗುಂಡಿ ತೋಡಲಾಯಿತು. ಯಾವುದೇ ಕುರುಹೂ ಸಿಗಲಿಲ್ಲ. ಸಾಕ್ಷಿ ದೂರುದಾರ ಸ್ಥಳದಲ್ಲಿಯೇ ಇದ್ದು ಎಲ್ಲಿ ಅಗೆದರೆ ಮೃತದೇಹದ ಕುರುಹು ಸಿಗಬಹುದು ಎಂದು ತೋರಿಸಿದ.

ಸ್ಥಳಕ್ಕೆ ಭೇಟಿ ನೀಡಿದ್ದ ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಾಂತಿ ಶೋಧ ಕಾರ್ಯಾಚರಣೆಗೆ ಮಾರ್ಗದರ್ಶನ ಮಾಡಿದರು. ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್, ಎಸ್‌ಐಟಿ ಎಸ್.ಪಿಗಳಾದ ಜಿತೇಂದ್ರ ಕುಮಾರ್ ದಯಾಮ, ಸಿ.ಎ.ಸೈಮನ್ ಸ್ಥಳದಲ್ಲಿದ್ದರು.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧಿಕಾರಿಗಳೂ ಶೋಧ ಕಾರ್ಯ ನಡೆದ ಜಾಗಕ್ಕೆ ಭೇಟಿ ನೀಡಿದರು.

ಇದುವರೆಗೆ, ಶೋಧ ಕಾರ್ಯಾಚರಣೆಯನ್ನು ಮಾಧ್ಯಮದವರು ಚಿತ್ರೀಕರಿಸುವುದನ್ನು ತಡೆಯಲು ಆ ಜಾಗದ ಸುತ್ತ ಹಸಿರು ಬಣ್ಣದ ಪರದೆ ಕಟ್ಟಲಾಗುತ್ತಿತ್ತು. ಆದರೆ 13ನೇ ಜಾಗದಲ್ಲಿ ಶೋಧ ಕಾರ್ಯವನ್ನು ದೂರದಿಂದ ಚಿತ್ರೀಕರಿಸಲು ಅವಕಾಶ ಕಲ್ಪಿಸಲಾಯಿತು.

ಸಾಕ್ಷಿ ದೂರುದಾರ ಮೃತದೇಹಗಳನ್ನು ಹೂತಿರುವುದಾಗಿ ಹೇಳಿ, ಇದುವರೆಗೆ 17 ಜಾಗಗಳನ್ನು ತೋರಿಸಿದ್ದು, ಅವುಗಳಲ್ಲಿ ಎರಡು ಕಡೆ ಮೃತದೇಹಗಳ ಅವಶೇಷ ಸಿಕ್ಕಿದೆ.

ಧರ್ಮಸ್ಥಳ ಸ್ನಾನಘಟ್ಟದ ಸಮೀಪ ಸಾಕ್ಷಿ ದೂರುದಾರ ತೋರಿಸಿದ್ದ 13ನೇ ಜಾಗದಲ್ಲಿ ಜಿಪಿಆರ್ ಬಳಸಿ ಶೋಧ ಕಾರ್ಯ ನಡೆಸುವುದನ್ನು ಎಸ್‌ಐಟಿಯ ಡಿಜಿಪಿ ಪ್ರಣವ್ ಮೊಹಾಂತಿ ವೀಕ್ಷಿಸಿದರು ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್.

ಜಿಪಿಆರ್ ಬಳಕೆ

13ನೇ ಜಾಗದ ಬಳಿ ವಿದ್ಯುತ್ ಮಾರ್ಗ ಹಾದು ಹೋಗಿತ್ತು. ಮೂರು ವಿದ್ಯುತ್ ಕಂಬಗಳಿದ್ದವು. ಆ ಜಾಗ ಕಿರು ಅಣೆಕಟ್ಟೆಯಿಂದ ಸುಮಾರು 15 ಮೀಟರ್ ದೂರದಲ್ಲಿದೆ. ಹಾಗಾಗಿ ಗ್ರೌಂಡ್ ಪೆನೆಟ್ರೇಟಿಂಗ್ ರೇಡಾರ್ (ಜಿಪಿಆರ್) ಬಳಸಿ ನೆಲದಡಿಯ ಸಂರಚನೆ ತಿಳಿದು, ನೆಲ ಅಗೆಯುವ ಕಾರ್ಯ ನಡೆಸಲಾಯಿತು.

'ಈ ಜಾಗದಲ್ಲಿ ಜಿಪಿಆರ್ ಬಳಸಿದ್ದು, ಅಲ್ಲಿ ನೆಲದಡಿಯ ಸಂರಚನೆ ಹೇಗಿದೆ ಎಂಬುದನ್ನು ತಿಳಿದುಕೊಳ್ಳಲು. ಅಲ್ಲಿ ಅಗೆದರೂ ಯಾವುದೇ ಅಪಾಯ ಇಲ್ಲ ಎಂಬುದನ್ನು ಖಾತರಿಯಾದ ಬಳಿಕ ಕಾರ್ಯ ಆರಂಭಿಸಲಾಯಿತು.

ಕೃತಕ ಬುದ್ಧಿಮತ್ತೆ: ಪ್ರಭಾವಿಗಳ ಪಟ್ಟಿಯಲ್ಲಿ ಸಚಿವ ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್

ಬೆಂಗಳೂರು: ಅನಲಿಟಿಕ್ಸ್ ಇಂಡಿಯಾ ಮ್ಯಾಗಜಿನ್ ನಡೆಸಿದ ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ (ಎಐ) ವಲಯದ ಭಾರತದ 100 ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಒಂಬತ್ತನೇ ಸ್ಥಾನ ಪಡೆದಿದ್ದಾರೆ.

ಭಾರತದ ವಿಜ್ಞಾನಿಗಳು ಮತ್ತು ಸಂಶೋಧಕರು, ನವೋದ್ಯಮ ಸಂಸ್ಥಾಪಕರು, ತಂತ್ರಜ್ಞಾನ ಪರಿಣತರು, ನೀತಿ ನಿರೂಪಕರು, ಸಾರ್ವಜನಿಕ ವಲಯದ ನಾಯಕರು ಎಐ ಬಗ್ಗೆ ಹೇಗೆ ಕಾರ್ಯಪ್ರವೃತ್ತವಾಗಿದ್ದಾರೆ ಎನ್ನುವುದನ್ನು ಮಾನದಂಡವಾಗಿಟ್ಟುಕೊಂಡು ಈ ಆಯ್ಕೆ ಮಾಡಲಾಗಿದೆ.

ಪ್ರಿಯಾಂಕ್ ಖರ್ಗೆ ಭಾರತದ ಎಐ ಪ್ರಭಾವಶಾಲಿ ನೀತಿ ನಿರೂಪಕರಲ್ಲಿ ಒಬ್ಬರು. ದೂರದೃಷ್ಟಿಯೊಂದಿಗೆ ಖರ್ಗೆ ಅವರು ಕರ್ನಾಟಕದ ಎಐ ನೀತಿ ರೂಪಿಸಿ ಕಾರ್ಯಗತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ನಾವೀನ್ಯ ಮತ್ತು ತಂತ್ರಜ್ಞಾನದ ಬೆಳವಣಿಗೆಯನ್ನು ವಿಕೇಂದ್ರೀಕರಿಸುವ ಗುರಿಯೊಟ್ಟಿಗೆ ಬೆಂಗಳೂರು ನಗರದಾಚೆಗೂ ಇದನ್ನು ವಿಸ್ತರಿಸುವ ಪ್ರಯತ್ನ ಮಾಡಿದ್ದಾರೆ. ಅವರ ಆಡಳಿತವು ಯುವ-ಕೇಂದ್ರಿತ ಮತ್ತು ಎಲ್ಲರನ್ನೂ ಒಳಗೊಳ್ಳುವಂತಿದೆ ಎಂದು ತಿಳಿಸಲಾಗಿದೆ.

ಡಿಜಿಟಲ್ ನಾವೀನ್ಯದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿ ಎಐನ ಭಾರತದ ಮೊದಲ ಶ್ರೇಷ್ಠತೆಯ ಕೇಂದ್ರವನ್ನು ಪ್ರಾರಂಭಿಸುವಲ್ಲಿ ಪ್ರಿಯಾಂಕ್ ಅವರು ಉಸ್ತುವಾರಿ ವಹಿಸಿದ ಕಾರಣಕ್ಕೆ ಅವರನ್ನು ಆಯ್ಕೆಗೆ ಪರಿಗಣಿಸಲಾಗಿದೆ.

ಕೇಂದ್ರ ಸಚಿವ ಪೀಯೂಷ್ ಗೋಯಲ್, ತೆಲಂಗಾಣ ಐಟಿ ಮತ್ತು ಬಿಟಿ ಸಚಿವ ಡಿ.ಶ್ರೀಧರ ಬಾಬು ಕೂಡ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿರುವ ಪ್ರಮುಖರು.

ಎನ್‌ಇಪಿ ಜಾರಿ ಕೋರಿಕೆ: ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್ ಈ ಸಂಬಂಧ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಜಾಗೊಳಿಸಿದೆ.

'ಎನ್‌ಇಪಿ ಜಾರಿಗೆ ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್ ವಕೀಲ ಗಿರೀಶ್ ಭಾರದ್ವಾಜ್ ಹಾಗೂ ಆರ್. ಆನಂದ ಮೂರ್ತಿ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಹಾಗೂ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ಸರ್ಕಾರದ ನೀತಿ ನಿರೂಪಣೆ ವಿಚಾರದಲ್ಲಿ ಅನಗತ್ಯವಾಗಿ ಮಧ್ಯಪ್ರವೇಶ ಮಾಡುವುದಿಲ್ಲ. ಅರ್ಜಿದಾರರ ಮೂಲಭೂತ ಹಕ್ಕು ಅಥವಾ ಶಾಸನಬದ್ಧ ಹಕ್ಕು ಉಲ್ಲಂಘನೆಯಾಗಿದೆ ಎಂಬುದನ್ನು ತೋರಿಸದ ಹೊರತು ನ್ಯಾಯಾಲಯ ಸಂವಿಧಾನದ 226ನೇ ವಿಧಿಯಡಿ ತನ್ನ ಹಕ್ಕು ಚಲಾಯಿಸಲಾಗದು' ಎಂದು ನ್ಯಾಯಪೀಠ ಹೇಳಿದೆ.

ಹೈಕೋರ್ಟ್ ಸುದ್ದಿ

ವರ್ಮಾಗೆ ಜಾಮೀನು

'ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ₹95 ಕೋಟಿ ಮೊತ್ತವನ್ನು ಅಕ್ರಮವಾಗಿ ವರ್ಗಾವಣೆ ಮಾಡಲಾಗಿದೆ' ಎಂಬ ಆರೋಪದ ಪ್ರಕರಣದಲ್ಲಿ ಎರಡನೇ ಆರೋಪಿ ಹೈದರಾಬಾದ್‌ನ ಸತ್ಯನಾರಾಯಣ ವರ್ಮಾಗೆ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಈ ಕುರಿತ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ವಿಚಾರಣೆ ನಡೆಸಿ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದ್ದಾರೆ.

'ಅರ್ಜಿದಾರರು ₹2 ಲಕ್ಷ ಮೊತ್ತದ ಬಾಂಡ್ ಮತ್ತು ಇಷ್ಟೇ ಮೊತ್ತಕ್ಕೆ ಇಬ್ಬರ ವೈಯಕ್ತಿಕ ಭದ್ರತೆ ಒದಗಿಸಬೇಕು. ತಮ್ಮ ಪಾಸ್‌ಪೋರ್ಟ್ ಅನ್ನು ಕೋರ್ಟ್‌ಗೆ ಒಪ್ಪಿಸಬೇಕು. ಸಾಕ್ಷ್ಯ ನಾಶಕ್ಕೆ ಯತ್ನಿಸಬಾರದು' ಎಂಬ ಷರತ್ತುಗಳನ್ನು ವಿಧಿಸಲಾಗಿದೆ. ಇ.ಡಿ ದಾಖಲಿಸಿಕೊಂಡಿರುವ ಈ ಪ್ರಕರಣದಲ್ಲಿ ಅರ್ಜಿದಾರ ಸತ್ಯನಾರಾಯಣ ವರ್ಮಾ ಪರ ಹೈಕೋರ್ಟ್ ವಕೀಲ ಕೆ.ಬಿ.ಮೋನೇಶ್ ಕುಮಾರ್ ವಾದ ಮಂಡಿಸಿದ್ದರು.

'ಹುದ್ದೆ ಇಲ್ಲ ಎನ್ನುವಂತಿಲ್ಲ'

'ಹುದ್ದೆ ಖಾಲಿಯಿಲ್ಲ ಎಂಬ ಕಾರಣಕ್ಕಾಗಿ ಅನುಕಂಪದ ಆಧಾರದಡಿ ಹುದ್ದೆ ಪಡೆಯಲು ಸಲ್ಲಿಸಲಾಗುವ ಮನವಿಗಳನ್ನು ತಿರಸ್ಕರಿಸುವುದು ಸಲ್ಲ. ಅನುಕಂಪದ ಆಧಾರವನ್ನು ಪರಿಗಣಿಸುವ ಸಂದರ್ಭದಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಬದ್ಧರಾಗಿರಬೇಕು. ಹುದ್ದೆ ಖಾಲಿ ಇಲ್ಲ ಎಂದು ಅರ್ಜಿ ತಿರಸ್ಕರಿಸುವುದು ನಿಯಮಗಳಿಗೆ ವಿರುದ್ಧ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ತನ್ನ ತಂದೆ ಮೃತಪಟ್ಟ ಬಳಿಕ ಅನುಕಂಪದ ಉದ್ಯೋಗಕ್ಕಾಗಿ ಸಲ್ಲಿಸಿದ್ದ ಮನವಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ ತಿರಸ್ಕರಿಸಿತ್ತು. ಈ ಕ್ರಮವನ್ನು ಪ್ರಶ್ನಿಸಿ ಬಾಗಲಕೋಟೆಯ ಸಂತೋಷ್ ಯಮನಪ್ಪ ವಡಕರ್ (34) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮೃತರು ಸೇವೆ ಸಲ್ಲಿಸುತ್ತಿದ್ದ ಶಿಕ್ಷಣ ಸಂಸ್ಥೆಯಲ್ಲಿ ಖಾಲಿ ಹುದ್ದೆ ಲಭ್ಯವಿಲ್ಲ ಎಂದಾದಲ್ಲಿ, ರಾಜ್ಯ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ, ಅನುದಾನ-ಸಹಾಯ ಇತ್ಯಾದಿ) ತಿದ್ದುಪಡಿ ನಿಯಮಗಳು–2010ರ ಷರತ್ತು 1(ಎ) ಮತ್ತು (ಬಿ) ಅನುಸಾರ ಶಿಕ್ಷಣ ಇಲಾಖೆಯ ನಿರ್ದೇಶಕರು ಖಾಲಿ ಹುದ್ದೆಯನ್ನು ಗುರುತಿಸಬೇಕು. ಒಂದು ವೇಳೆ ಖಾಲಿ ಹುದ್ದೆ ಲಭ್ಯವಾಗದೇ ಇದ್ದಲ್ಲಿ ಇಲಾಖೆಯ ಅಧೀನದ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಹುದ್ದೆ ಹುಡುಕಿ ಹಂಚಿಕೆ ಮಾಡಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಹಣ ನೀಡದಿದ್ದಕ್ಕೆ ಮಳಿಗೆಗೆ ಕನ್ನ ಬಾಲಕನ ಬಂಧನ

ಬೀದರ್: ನಗರದ ನ್ಯೂ ಆದರ್ಶ ಕಾಲೊನಿಯ ಎರಡು ಮಳಿಗೆಗಳಲ್ಲಿ ಭಾನುವಾರ ನಡೆದಿದ್ದ ಕಳವು ಕೃತ್ಯಗಳಿಗೆ ಸಂಬಂಧಿಸಿ ಗಾಂಧಿ ಗಂಜ್ ಠಾಣೆ ಪೊಲೀಸರು, ಕಾನೂನಿನ ಸಂಘರ್ಷಕ್ಕೆ ಒಳಪಟ್ಟ 17 ವರ್ಷದ ಬಾಲಕನನ್ನು ಬಂಧಿಸಿದ್ದು, ಬಾಲ ನ್ಯಾಯಮಂಡಳಿಗೆ ಒಪ್ಪಿಸಿದ್ದಾರೆ.

ಬಂಧಿತನಿಂದ ₹4.65 ಲಕ್ಷ ಮೌಲ್ಯದ ಎಲೆಕ್ಟ್ರಾನಿಕ್ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಐಫೋನ್, ಕೆನಾನ್ ಕಂಪನಿಯ ಎರಡು ಕ್ಯಾಮೆರಾ, ಲ್ಯಾಪ್‌ಟಾಪ್, ಮೊಬೈಲ್ ಬಿಡಿಭಾಗಗಳು, 11 ಹಳೆಯ ಮೊಬೈಲ್‌ಗಳು, ಕೃತ್ಯಕ್ಕೆ ಬಳಸಿದ್ದ ಬೈಕ್ ಇವುಗಳಲ್ಲಿ ಸೇರಿವೆ.

'ಮನೆಯಲ್ಲಿ ಪೋಷಕರು ಹಣ ಕೊಡಲು ನಿರಾಕರಿಸಿದ್ದಕ್ಕೆ ಈ ಕೃತ್ಯ ಎಸಗಿದ್ದಾನೆ. ಕೃತ್ಯಕ್ಕೆ ಸಂಬಂಧಿಸಿ ಎರಡು ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ರಾಜಣ್ಣ ಪರ ಬಿಜೆಪಿ ಸ್ವರ

ಒಂದನೇ ಪುಟದಿಂದ...

ಆಗ ಕಾನೂನು ಸಚಿವ, 'ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣ ಉತ್ತರ ನೀಡುತ್ತೇನೆ' ಎಂದರು. ಮಧ್ಯಾಹ್ನ 12 ಗಂಟೆ ಸುಮಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸದನಕ್ಕೆ ಬಂದರಾದರೂ ವಿರೋಧ ಪಕ್ಷಗಳ ಆಗ್ರಹಕ್ಕೆ ಉತ್ತರ ನೀಡಲಿಲ್ಲ.

ಶೂನ್ಯ ವೇಳೆಯ ಬಳಿಕ ಎಚ್.ಕೆ. ಪಾಟೀಲ, 'ರಾಜಣ್ಣ ಅವರು ಸಚಿವ ಸಂಪುಟದಿಂದ ನಿರ್ಗಮಿಸಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಧಿಸೂಚನೆಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ' ಎಂದರು. ಆಗ ಸುರೇಶ್ ಕುಮಾರ್ ಮತ್ತಿತರರು, 'ಮುಖ್ಯಮಂತ್ರಿ ಸದನದಲ್ಲಿದ್ದಾರೆ. ಖುದ್ದು ಅವರೇ ಉತ್ತರ ನೀಡಬೇಕು' ಎಂದು ಒತ್ತಾಯಿಸಿದರು.

ಅಧಿಸೂಚನೆ ಮಂಡಿಸಿದ ಎಚ್.ಕೆ. ಪಾಟೀಲ, 'ಈ ರೀತಿಯ ಪ್ರಕರಣದಲ್ಲಿ ಸಂಪುಟದಿಂದ ಹೊರಹೋದವರು ಖುದ್ದಾಗಿ ಸದನದಲ್ಲಿ ಹೇಳಿಕೆ ನೀಡಲು ಅವಕಾಶವಿರುತ್ತದೆ; ಅದು ಕೂಡ ಸಭಾಧ್ಯಕ್ಷರ ಸೂಚನೆ ಮೇರೆಗೆ. ಆ ಭಾಗದಲ್ಲೂ ಹಿಂದೆ ಸಚಿವರಾಗಿದ್ದ 10-12 ಮಂದಿ ರಾಜೀನಾಮೆ ನೀಡಿದ್ದಾರೆ. ಸಂಪುಟದಿಂದ ವಜಾಗೊಂಡಿದ್ದಾರೆ. ಅದು ಎಲ್ಲಿಯೂ ಚರ್ಚೆ ಆಗಿಲ್ಲ. ಉಪರಾಷ್ಟ್ರಪತಿ ಸ್ಥಾನಕ್ಕೆ ಜಗದೀಪ್ ಧನಕರ್ ರಾಜೀನಾಮೆ ನೀಡಿದ್ದಾರೆ. ಅದರ ಬಗ್ಗೆಯೂ ಚರ್ಚೆ ಆಗಿಲ್ಲ' ಎಂದರು.

ಆಗ, ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಮತ್ತು ಆರಗ ಜ್ಞಾನೇಂದ್ರ ಸಚಿವರ ಜೊತೆ ವಾಗ್ವಾದಕ್ಕೆ ಮುಂದಾದರು. 'ಬಿಜೆಪಿಯಿಂದ ಬಸನಗೌಡ ಪಾಟೀಲ ಯತ್ನಾಳರನ್ನು ಯಾವ ಕಾರಣಕ್ಕೆ ಕೈಬಿಡಲಾಯಿತು. ಸತ್ಯ ಹೇಳಿದರು ಎಂದು ಉಚ್ಚಾಟಿಸಲಾಗಿದೆಯೇ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

'ಯತ್ನಾಳರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ರಾಜಣ್ಣ ವಜಾ ಸಾರ್ವಜನಿಕ ವಿಚಾರ. ಅದರ ಬಗ್ಗೆ ಸರ್ಕಾರ ಉತ್ತರ ನೀಡಬೇಕು' ಎಂದು ಸುನಿಲ್ ಕುಮಾರ್ ಆಗ್ರಹಿಸಿದರು.

'ರಾಜಣ್ಣ ಅವರನ್ನು ಸಂಪುಟದಿಂದ ದಿಢೀರ್ ವಜಾಗೊಳಿಸಿದ ಖಚಿತ ಕಾರಣವನ್ನು ಸದನಕ್ಕೆ ತಿಳಿಸಬೇಕು' ಎಂದು ವಿಧಾನಪರಿಷತ್‌ನಲ್ಲೂ ವಿರೋಧ ಪಕ್ಷಗಳ ಸದಸ್ಯರು ಪಟ್ಟು ಹಿಡಿದರು.

ಆತ್ಮಹತ್ಯೆಗೆ ಯತ್ನ

ರಾಜಣ್ಣ ಅಭಿಮಾನಿ ಶಿವಲಿಂಗ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದು, ಸ್ಥಳದಲ್ಲಿದ್ದವರು ತಡೆದರು. ಸೋಂಪುರ ರಂಗನಾಥ್, ಸಿದ್ದಾಪುರ ರಂಗಶಾಮಣ್ಣ ಎಂಬುವರು ವಿಷದ ಬಾಟಲಿ ಹಿಡಿದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದರು.

ಪಟ್ಟಣದ ಎಂ.ಎನ್.ಕೆ ಸಮುದಾಯ ಭವನದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ರಾಜಣ್ಣ ಅಭಿಮಾನಿಗಳು ಸೇರಿದ್ದರು. ಮತ್ತೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿದ ಬೆಂಬಲಿಗರು, ನಂತರ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸಿದರು.

'ಸರ್ಕಾರ ಜಮೀನು ಕೊಟ್ಟ ಉದ್ದೇಶವೇ ಬೇರೆ, ಈಗ ಆಗುತ್ತಿರುವುದೇ ಬೇರೆ'

ನಟ ವಿಷ್ಣು ಸ್ಮಾರಕ ನೆಲಸಮದ ಸುತ್ತ...

• ವಿನಾಯಕ ಕೆ.ಎಸ್.

ಬೆಂಗಳೂರು: ಕೆಂಗೇರಿ–ಉತ್ತರಹಳ್ಳಿ ರಸ್ತೆಯಲ್ಲಿನ ಅಭಿಮಾನ್ ಸ್ಟುಡಿಯೋದಲ್ಲಿ ನಟ ವಿಷ್ಣುವರ್ಧನ್ ಸ್ಮಾರಕ ನೆಲಸಮಗೊಳಿಸಿರುವುದು ಆ ಭೂಮಿ ಕುರಿತ ವಿವಾದಕ್ಕೆ ಮತ್ತೆ ಮರುಜೀವ ನೀಡಿದೆ.

ಅದು ಕೆಲ ದಶಕಗಳ ಹಿಂದೆ ಚಿತ್ರೋದ್ಯಮದ ಅಭಿವೃದ್ಧಿಗಾಗಿ ಸರ್ಕಾರವೇ ನೀಡಿದ್ದ ಜಾಗವಾಗಿದ್ದರೂ ಆಯಾ ಕಾಲದ ಆಡಳಿತಾರೂಢ ಸರ್ಕಾರ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಚಿತ್ರರಂಗದ ಮೇರು ನಟನಿಗೆ ಇಂದು ಆರಡಿ–ಮೂರಡಿ ಜಾಗವೂ ಸಿಗದ ದುಃಸ್ಥಿತಿ ಎದುರಾಗಿದೆ ಎಂದು ವಿಷ್ಣುವರ್ಧನ್ ಅಭಿಮಾನಿಗಳು ಆಪಾದಿಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ, ಮೈಲಸಂದ್ರ ಗ್ರಾಮದ ಅಂದಿನ ಸ.ನಂ.26ರಲ್ಲಿ 1970ರಲ್ಲಿ ಅಂದಿನ ಸರ್ಕಾರ ನಟ ಟಿ.ಎನ್. ಬಾಲಕೃಷ್ಣ ಅವರಿಗೆ ಸ್ಟುಡಿಯೊ ನಿರ್ಮಾಣಕ್ಕಾಗಿ 20 ಎಕರೆ ಜಮೀನು ನೀಡಿತ್ತು. ಈ ಭೂಮಿಯನ್ನು ಮಾರಾಟ, ಗುತ್ತಿಗೆ ಮತ್ತು ಆಧಾರ ಮಾಡಬಾರದೆಂದು ಷರತ್ತು ವಿಧಿಸಿತ್ತು.

ಸ್ಟುಡಿಯೊ ಕಟ್ಟಲೆಂದು ದೀರ್ಘಾವಧಿ ಗುತ್ತಿಗೆಯ ಮೇಲೆ ನೀಡಿದ ಜಮೀನಿನಲ್ಲಿ, ಸ್ಟುಡಿಯೊ ಮೇಲ್ದರ್ಜೆಗೇರಿಸಲು ಬೇಕಾದ ಹಣಕ್ಕಾಗಿ ಹತ್ತು ಎಕರೆ ಜಮೀನು ಮಾರುವುದಾಗಿ ಬಾಲಣ್ಣನವರ ಮಕ್ಕಳು ಸರ್ಕಾರಕ್ಕೆ ಹೇಳುತ್ತಾರೆ. ನಾಲ್ಕು ಷರತ್ತುಗಳ ಮೇಲೆ ವಿಶೇಷ ಜಿಲ್ಲಾಧಿಕಾರಿಗಳು 2003ರಲ್ಲಿ ಅದಕ್ಕೆ ಅನುಮತಿಯನ್ನೂ ನೀಡುತ್ತಾರೆ. ಮಾರುವ ಮೊದಲು ಬಾಲಣ್ಣನ ಮಕ್ಕಳಾದ ಗಣೇಶ್ ಮತ್ತು ಶ್ರೀನಿವಾಸ್ ತಲಾ ಹತ್ತು ಎಕರೆಯಾಗಿ ವಿಭಾಗಿಸಿ ತಮ್ಮ ಹೆಸರಿಗೆ ಮಾಡಿಕೊಂಡಿದ್ದರು. ಶ್ರೀನಿವಾಸ್ ಹತ್ತು ಎಕರೆ ಜಮೀನನ್ನು ಅಂದೇ ಮಾರಿದ್ದರು. ಗಣೇಶ್ ಪಾಲಿಗೆ ಬಂದ ಹತ್ತು ಎಕರೆ ಉಳಿದುಕೊಂಡಿದೆ. ಆದರೆ ಅಭಿಮಾನ್ ಸ್ಟುಡಿಯೋ ಮಾತ್ರ ಅಲ್ಲಿಂದ ಇಲ್ಲಿತನಕ ಯಾವುದೇ ಅಭಿವೃದ್ಧಿ ಕಂಡಿಲ್ಲ.

'ಮಾಲ್ ಕಟ್ಟುವ ಹುನ್ನಾರ': 'ಈಗ ನನ್ನ ಇಬ್ಬರು ಸಹೋದರರು ತೀರಿಕೊಂಡಿದ್ದಾರೆ. ಶ್ರೀನಿವಾಸ್ ಅವರ ಪುತ್ರ ಕಾರ್ತಿಕ್ ಮತ್ತೊರ್ವ ಸಹೋದರ ಗಣೇಶ್‌ಗೆ ಸೇರಿದ ಜಾಗವನ್ನು ಈಗ ತಮ್ಮದಾಗಿಸಿಕೊಂಡಿದ್ದಾರೆ. ಹತ್ತು ಎಕರೆ ಮಾರಾಟವಾದಾಗ ನಾನು ಅದರಲ್ಲಿ ಪಾಲು ಕೇಳಿ ನ್ಯಾಯಾಲಯದ ಮೆಟ್ಟಿಲು ಏರಿದೆ. ಜಮೀನು ಮಾರಿದ ಎರಡು ವರ್ಷಗಳ ಒಳಗೆ ಸ್ಟುಡಿಯೊ ಅಭಿವೃದ್ಧಿ ಕುರಿತು ಸರ್ಕಾರದ ಗಮನಕ್ಕೆ ತರಬೇಕು ಎಂದು ಅಂದಿನ ವಿಶೇಷ ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದರು. ಯಾವುದೇ ಅಭಿವೃದ್ಧಿಯಾಗದ ಕಾರಣ ಈ ಜಮೀನು ಸರ್ಕಾರ ಹಿಂಪಡೆಯುವುದಾಗಿ 2015ರಲ್ಲಿ ಬೆಂಗಳೂರು ಜಿಲ್ಲಾಧಿಕಾರಿಗಳು ನೋಟಿಸ್ ಕೂಡ ನೀಡುತ್ತಾರೆ. ಆದರೆ ಈಗ ಕಾರ್ತಿಕ್ ಮಧುರೈ ಕಂಪನಿಯೊಂದರ ಜತೆ ಕೈಜೋಡಿಸಿ ಉಳಿದ ಭೂಮಿಯಲ್ಲಿ ಮಾಲ್ ನಿರ್ಮಿಸಲು ಸಿದ್ಧವಾಗಿದ್ದಾರೆಂಬ ಮಾಹಿತಿ ಇದೆ. ಸಾಲ ಪಡೆದು ಭೂಮಿ ನೀಡುತ್ತಿದ್ದಾರೋ, ಮಾರಾಟ ಮಾಡಿದ್ದಾರೋ ಅಥವಾ ಭೋಗ್ಯಕ್ಕೆ ನೀಡುತ್ತಿದ್ದಾರೋ ಗೊತ್ತಿಲ್ಲ' ಎಂದು ಬಾಲಣ್ಣ ಪುತ್ರಿ ಗೀತಾ ಬಾಲಿ ಆರೋಪಿಸಿದ್ದಾರೆ.

ನಟ ವಿಷ್ಣುವರ್ಧನ್ ಸಮಾಧಿ ನೆಲಸಮಕ್ಕೆ ಮೊದಲು ಮತ್ತು ನಂತರ

ಜಮೀನು ಹಂಚಿಕೆಯ ಷರತ್ತುಗಳು ಏನು?

- 1970 ಮಾರ್ಚ್ 3ರ ಸರ್ಕಾರದ ಆದೇಶದ ನಂ.ಆರ್‌ಡಿ.37. ಜಿಐನ್‌ಎ.69ರಂತೆ, ಮಂಜೂರಾದ ಜಮೀನನ್ನು ಯಾವ ಉದ್ದೇಶಕ್ಕಾಗಿ ಆಗಿದೆಯೋ ಅಂದರೆ ಮಂಜೂರಾದ 10 ಎಕರೆ ಪರಭಾರೆ ಮಾಡಿ, ಉಳಿದ 10 ಎಕರೆ ಜಮೀನನ್ನು ಅಭಿವೃದ್ಧಿಗೆ ಉಪಯೋಗಿಸತಕ್ಕದ್ದು.
- ಮಾರಾಟ ಮಾಡಲು ಅನುಮತಿ ನೀಡಿದ ಭೂಮಿಯ ಅಭಿವೃದ್ಧಿಯನ್ನು ಅಭಿಮಾನ್ ಸ್ಟುಡಿಯೋ ನಿರ್ಮಾಣ ಮತ್ತು ನಿರ್ಮಾಣಕ್ಕೆ ಯಾವುದೇ ರೀತಿ ಅಡ್ಡಿಬಾರದಂತೆ ಉಪಯೋಗಿಸುವ ಷರತ್ತಿನ ಮೇಲೆ ನೀಡಲಾಗಿದೆ.
- ಬಾಕಿ ಉಳಿದಿರುವ 10 ಎಕರೆ ಜಮೀನನ್ನು ಯಾವುದೇ ಕಾಲದಲ್ಲಿ ಅಥವಾ ಭೂಮಿಯನ್ನು ಮಾರಲು; ಗುತ್ತಿಗೆಗೆ ಕೊಡಲು; ಅಡಮಾನ ಮಾಡಲು ಹಾಗೂ ವರ್ಗಾಯಿಸಲು ಅಥವಾ ಬೇರೆ ಯಾವುದೇ ರೀತಿಯಲ್ಲಿ ಪರಭಾರೆ ಮಾಡಲು ಉದ್ದೇಶಿಸಿದ್ದರೆ ಪ್ರಶ್ನಿತ ಜಮೀನನ್ನು ಯಾವುದೇ ತಿಳಿವಳಿಕೆ ನೀಡದೆ ಸರ್ಕಾರದ ವಶಕ್ಕೆ ಪಡೆದುಕೊಳ್ಳಲಾಗುವುದು.

'ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ'

'ವಿಷ್ಣುವರ್ಧನ್ ಸ್ಮಾರಕ ಇರುವ ಜಾಗವನ್ನು ಖಾಸಗಿ ಕಟ್ಟಡ ಎಂದು ಬಾಲಣ್ಣ ಕುಟುಂಬದವರು ಹೈಕೋರ್ಟ್‌ನಲ್ಲಿ ಹೇಳಿದ್ದರು. ಅಲ್ಲಿ ಸ್ಮಾರಕ ಇತ್ತು ಎಂದು ದೂರಿನಲ್ಲಿ ತಿಳಿಸಲಿಲ್ಲ. ಹೀಗಾಗಿ ನ್ಯಾಯಾಲಯ ಆ ಕಟ್ಟಡ ತೆರವಿಗೆ ಆದೇಶ ನೀಡಿತು. ಈ ಸುಳ್ಳು ಮಾಹಿತಿಯಿಂದಾಗಿ ಸ್ಮಾರಕ ನೆಲಸಮವಾಗಿದೆ. ಸತ್ಯವನ್ನು ಮುಚ್ಚಿಟ್ಟು ಕುಟುಂಬದರು ಜಮೀನನ್ನು ತಮ್ಮದಾಗಿಸಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಆದರೆ ಸರ್ಕಾರಕ್ಕಿಂತ ಮೇಲೂ ಯಾರೂ ಅಲ್ಲ. ಸರ್ಕಾರ ಮನಸ್ಸು ಮಾಡಿದರೆ ಈಗಲೂ ಉಳಿದ ಜಾಗ ವಾಪಸ್ ಪಡೆದು ವಿಷ್ಣು ಸ್ಮಾರಕದ ಜಾಗವನ್ನು ಉಳಿಸಿಕೊಳ್ಳಬಹುದು. ಈಗಾಗಲೇ ಬೇರೆಡೆ ಸ್ಮಾರಕ ಇರುವುದರಿಂದ, ಸರ್ಕಾರಕ್ಕೆ ಆ ಜಾಗದ ಬಗ್ಗೆ ಒಲವು ಇಲ್ಲದೇ ಇರುವುದರಿಂದ ಸ್ಮಾರಕ ಜಾಗಕ್ಕಾಗಿ ನಮ್ಮ ಸಂಘಟನೆ ಹಾಕಿದ್ದ ಇನ್ನೊಂದು ಪ್ರಕರಣವನ್ನು ನ್ಯಾಯಾಲಯ ವಜಾಗೊಳಿಸಿತು. ಸರ್ಕಾರಕ್ಕೆ ಭೂಮಿ ಮರಳಿ ಪಡೆಯುವ ಇಚ್ಛಾಶಕ್ತಿ ಬೇಕಷ್ಟೆ' ಎಂದು ವಿಷ್ಣುಸೇನಾ ಸಮಿತಿಯ ವೀರಕಪುತ್ರ ಶ್ರೀನಿವಾಸ್ ಪ್ರತಿಪಾದಿಸಿದ್ದಾರೆ.

ಈ ಸಂಬಂಧ ಬಾಲಣ್ಣ ಕುಟುಂಬ ಪರ ದೂರುದಾರ ಕಾರ್ತೀಕ್ ಅವರನ್ನು ಸಂಪರ್ಕಿಸಲು ಯತ್ನಿಸಲಾಗಿದ್ದು, ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಉದ್ಯೋಗ ವಾಣಿ

UDUPI COCHIN SHIPYARD LIMITED
Malpe, Karnataka
A Government of India Enterprise
Ministry of Ports, Shipping and Waterways, Government of India

Ref No. UCSL/IMS/HR/VN/F/11-SUP/MEP/2025/53 Dated 08 August 2025

RECRUITMENT
SUPERVISORY POSTS ON CONTRACT BASIS

Sl. No	Name of Posts	No. of Posts
01	Supervisor (Mechanical)	6
02	Supervisor (Electrical)	2
03	Supervisor (Painting)	2

For more details on age, qualification, remuneration, reservations, etc with regards to this advertisement visit www.cochinshipyard.in or www.udupicsl.com

Last date for Application: 05 September 2025.

Sd/-
MANAGER (HR & IR)

ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್
(ಮಹಾರತ್ನ ಕಂಪನಿ)
ನೋಂದಾಯಿತ ಕಛೇರಿ : 17, ಜೆಮ್‌ಶೆಡ್‌ಜೀ ಟಾಟಾ ರಸ್ತೆ, ಮುಂಬಯಿ–400020
CIN NO: L23201MH1952GOI008858

ಅಗತ್ಯವಿದೆ

ಹೆಚ್‌ಪಿ ಗ್ರೀನ್ ಆರ್ ಅಂಡ್ ಡಿ ಕೇಂದ್ರ, ಬೆಂಗಳೂರು,
ಇಲ್ಲಿಗೆ ನಿಗದಿತ ಅವಧಿ ಯೋಜನಾ ಸಹಾಯಕರು (ಎಫ್‌ಟಿಪಿಎ)
(ಎಂ.ಎಸ್‌ಸಿ/ಬಿ.ಎಸ್‌ಸಿ/ಬಿಇ ಅಥವಾ ಬಿ.ಟೆಕ್/ಡಿಪ್ಲಮೋ/ಪಿಜಿ ಡಿಪ್ಲಮೋ)

ಮಹಾರತ್ನ ಕೇಂದ್ರ ಸಾರ್ವಜನಿಕ ವಲಯದ ಕಂಪನಿಯಾದ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ತನ್ನ ಹೆಪಿ ಗ್ರೀನ್ ಆರ್ ಅಂಡ್ ಡಿ ಕೇಂದ್ರ, ಬೆಂಗಳೂರು, ಇಲ್ಲಿಗೆ ನಿಗದಿತ ಅವಧಿ ಯೋಜನಾ ಸಹಾಯಕರನ್ನು ತೊಡಗಿಸಿಕೊಳ್ಳಲು ಯೋಜಿಸಿದೆ. ವಿವರಗಳಿಗಾಗಿ, ಮತ್ತು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದಕ್ಕಾಗಿ, ನಮ್ಮ ವೆಬ್‌ಸೈಟ್ **www.hindustanpetroleum.com** ಗೆ ಭೇಟಿ ನೀಡಿ. ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಆರಂಭ ದಿನಾಂಕ **15–08–2025**. ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ **14.09.2025**.

Delivering Happiness
/hpcl | /hpcl | /hpcl
www.hindustanpetroleum.com

ಸಾರಿಗೆ ನೌಕರರ ಬೇಡಿಕೆ ಈಡೇರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ ಎಂಬ ಕಾರಣಕ್ಕೆ ಸಾರಿಗೆ ನಿಗಮಗಳು 30,000 ನೌಕರರಿಗೆ ನೀಡಿರುವ ಆಪಾದನಾ ಪತ್ರ ಮತ್ತು ಕಾರಣ ಕೇಳಿರುವ ನೋಟಿಸ್‌ಗಳನ್ನು ಬೇಷರತ್ತಾಗಿ ರದ್ದು ಮಾಡಬೇಕು. ಸಾರಿಗೆ ನೌಕರರ ಬೇಡಿಕೆ ಈಡೇರಿಸಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆಗ್ರಹಿಸಿದೆ.

ಹೈಕೋರ್ಟ್‌ನ ನಿರ್ದೇಶನದಂತೆ ಮುಷ್ಕರವನ್ನು ಕೈಬಿಟ್ಟಿದ್ದೇವೆ. ಮುಷ್ಕರ ವಿಫಲವಾಗಿದೆ ಎಂದು ಅಧಿಕಾರಿಗಳು ಭಾವಿಸಿ ನೌಕರರನ್ನು ಅಗೌರವದಿಂದ ನಡೆಸಿಕೊಳ್ಳಬಾರದು. ಮುಷ್ಕರಕ್ಕೂ ಮುಂಚೆ ಅಥವಾ ಮುಷ್ಕರದ ಸಮಯ ದಲ್ಲಿ ನೌಕರರ ಇಷ್ಟಕ್ಕೆ ವಿರುದ್ಧವಾಗಿ ವರ್ಗಾವಣೆ ಮಾಡಿದ್ದರೆ, ವರ್ಗಾವಣೆ ರದ್ದುಪಡಿಸಬೇಕು ಎಂದು ಒತ್ತಾಯಿಸಿದೆ.

ಇತರ ಬೇಡಿಕೆಗಳನ್ನು ಆಡಳಿತ ವರ್ಗದ ಮಟ್ಟದಲ್ಲಿ ಸಂಧಾನ ನಡೆಸಿ ಬಗೆಹರಿಸಬೇಕು ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್, ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳಿ ಅಧ್ಯಕ್ಷ ಬಿ. ಜಯದೇವರಾಜೇ ಅರಸು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಷನ್ (ಸಿಐಟಿಯು) ಅಧ್ಯಕ್ಷ ಎಚ್.ಡಿ. ರೇವಪ್ಪ, ಕೆಎಸ್‌ಆರ್‌ಟಿಸಿ ಎಸ್‌ಸಿ, ಎಸ್‌ಟಿ ಎಂಪ್ಲಾಯಿಸ್ ಯೂನಿಯನ್ ಅಧ್ಯಕ್ಷ ವೆಂಕಟರಮಣಪ್ಪ, ಪರಿಶಿಷ್ಟ ಜಾತಿ/ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಆರ್. ಮೋಹನ್‌ರಾಜ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ಅಧ್ಯಕ್ಷ ಜಗದೀಶ್ ಕೆ.ಆರ್. ಆಗ್ರಹಿಸಿದ್ದಾರೆ.

ನಗೋಯಾ: ಆರ್ಥಿಕ ವಿನಿಮಯ

ಬೆಂಗಳೂರು: ಆರ್ಥಿಕ ವಿನಿಮಯ ಉತ್ತೇಜನದ ಜೊತೆಗೆ ಕೈಗಾರಿಕೆ ಪ್ರವೃತ್ತಿಗಳನ್ನು ಪರಸ್ಪರ ಹಂಚಿಕೊಳ್ಳಲು ಜಪಾನ್‌ನ ನಗೋಯಾ ನಗರ ಹಾಗೂ ಬೆಂಗಳೂರು ಮುಂದಾಗಿವೆ.

ನಗೋಯಾದ ಮೇಯರ್ ಇಚಿರೋ ಹಿರೊಸಾವಾ ಮತ್ತು ಬಿಬಿಎಂಪಿಯ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಅವರು ಸೋದರಿ ನಗರಗಳ ಉತ್ತೇಜನಕ್ಕಾಗಿ ಒಪ್ಪಂದದ ಜಂಟಿ ಘೋಷಣೆಗೆ (ಜೆಡಿಐ) ಸೋಮವಾರ ಸಹಿ ಹಾಕಿದರು.

'ನಗೋಯಾ ನಗರವು ಸುಂದರವಾದ ಸ್ಥಳವಾಗಿದ್ದು, ಅಲ್ಲಿನ ಸಂಸ್ಥೆಗಳು ಹೆಚ್ಚಾಗಿ ಬೆಂಗಳೂರು ನಗರಕ್ಕೆ ಬರಬೇಕೆಂದು ಇಚ್ಛೆಸುತ್ತೇನೆ' ಎಂದು ತುಷಾರ್ ಗಿರಿನಾಥ್ ಹೇಳಿದರು.

'ಬಿಬಿಎಂಪಿ ಜೊತೆ ನಗೋಯಾದ ಒಪ್ಪಂದದಿಂದ ವ್ಯಾಪಾರ ಬೆಳವಣಿಗೆಗೆ ಭಾರಿ ಉತ್ತೇಜನ ಸಿಗಲಿದೆ. ಇದರಿಂದ ಜಪಾನ್‌ನ ಸಾಕಷ್ಟು ಸಂಸ್ಥೆಗಳು ಬೆಂಗಳೂರು ನಗರಕ್ಕೆ ಬರಲು ಸಹಕಾರಿ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

'ಭಾವನಾತ್ಮಕ ಹೇಳಿಕೆ ಬೇಡ'

ಧರ್ಮಸ್ಥಳ ಪ್ರಕರಣ • ಸಿಎಲ್‌ಪಿ ಸಭೆಯಲ್ಲಿ ಸಚಿವರು, ಶಾಸಕರಿಗೆ ಮುಖ್ಯಮಂತ್ರಿ ಸಲಹೆ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: 'ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಸಹಜ ಸಾವುಗಳ ಕುರಿತ ತನಿಖೆಗೆ ಎಸ್‌ಐಟಿ ರಚಿಸಿರುವ ಬಗ್ಗೆ ಜನರಿಂದ ಒಳ್ಳೆಯ ಅಭಿಪ್ರಾಯ ಬಂದಿದೆ. ಧರ್ಮಸ್ಥಳದ ವಿಚಾರದಲ್ಲಿ ಯಾರೂ ಭಾವನಾತ್ಮಕವಾಗಿ ಹೇಳಿಕೆ ನೀಡಬೇಡಿ' ಎಂದು ಸಚಿವರು, ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ ಎಂದು ಗೊತ್ತಾಗಿದೆ.

ನಗರದ ರ‍್ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಮಂಗಳವಾರ ರಾತ್ರಿ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ನಡೆಯಿತು.

ಈ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ, 'ಧರ್ಮಸ್ಥಳದಲ್ಲಿ 13 ಸ್ಥಳಗಳಲ್ಲಿ ಎಸ್‌ಐಟಿ ಶೋಧ ನಡೆಸಿದೆ. ಅದರಲ್ಲಿ ಒಂದು ಕಡೆ ಮಾತ್ರ ಮೂಳೆಗಳು ಸಿಕ್ಕಿವೆ. ಅದು ಕೂಡ ಮಹಿಳೆಯದ್ದಲ್ಲ, ಪುರುಷನದ್ದು. 13ನೇ ಪಾಯಿಂಟ್‌ನಲ್ಲೂ ಮೂಳೆಗಳು ಸಿಗದೇ ಹೋದರೆ ಎಸ್‌ಐಟಿ ನಡೆಸುತ್ತಿರುವ ಶೋಧವನ್ನು ನಿಲ್ಲಿಸಬೇಕಾಗಬಹುದು. ಈ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನ ಮಾಡುತ್ತೇವೆ. ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ನಡೆಯುತ್ತಿರುವ ಚರ್ಚೆಗಳ ಬಗ್ಗೆ ಯಾರೂ ಆತಂಕ ಪಡಬೇಡಿ ಎಂದು ಸಲಹೆ ನೀಡಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ್ದ ಕಾಲ್ತುಳಿತ ಘಟನೆಯನ್ನು ಸಭೆಯಲ್ಲಿ ಪ್ರಸ್ತಾಪಿಸಿದ ಮುಖ್ಯಮಂತ್ರಿ, ಈ ಘಟನೆಯ ಸ್ಪಷ್ಟ ಚಿತ್ರಣ ನೀಡಿದ್ದಾರೆ. ಘಟನೆಯಲ್ಲಿ ಮೊದಲ ಸಾವು ಸಂಭವಿಸಿದ ತಕ್ಷಣ ಅಧಿಕಾರಿಗಳು ನನಗೆ ಮಾಹಿತಿ ನೀಡಿಲ್ಲ. 5.30ರವರೆಗೆ ಸಾವುಗಳ ಸಂಖ್ಯೆಯ ಬಗ್ಗೆಯೂ ಖಚಿತವಾಗಿ ಮಾಹಿತಿ ನೀಡಿರಲಿಲ್ಲ. ಕಾನೂನು ಸಲಹೆಗಾರ ಪೊನ್ನಣ್ಣ ಕರೆ ಮಾಡುವವರೆಗೆ ಸಾವುಗಳ ಬಗ್ಗೆ ನನಗೆ ಮಾಹಿತಿ ನೀಡಿರಲಿಲ್ಲವೆಂದು ಹೇಳಿದ್ದಾರೆ. ವಿರೋಧ ಪಕ್ಷಗಳ ಆರೋಪಗಳಿಗೆ ಸ್ಪಷ್ಟ ಉತ್ತರ ನೀಡುವಂತೆ ಶಾಸಕರಿಗೆ ಸಲಹೆ ನೀಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

'ಉಸ್ತುವಾರಿ ಸಚಿವರು ಶಾಸಕರ ನಡುವೆ ಅಭಿಪ್ರಾಯ ವ್ಯತ್ಯಾಸ, ಸಮಸ್ಯೆಗಳನ್ನು ಬಗೆಹರಿಸಲು 2–3 ತಿಂಗಳಿಗೊಮ್ಮೆಯಾದರೂ ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ ನಡೆಸಬೇಕು' ಎಂದು ಆಳಂದ ಶಾಸಕ ಬಿ.ಆರ್. ಪಾಟೀಲ ಸಲಹೆ ನೀಡಿದ್ದಾರೆ ಎಂದು ಗೊತ್ತಾಗಿದೆ.

'ಅನುದಾನ ಕೊರತೆ ವಿಚಾರದಲ್ಲಿ ವಿಧಾನ ಪರಿಷತ್ ಸದಸ್ಯರು ಧ್ವನಿ ಎತ್ತಿದ್ದಾರೆ. ಶಾಸಕರಿಗೆ ಕೊಟ್ಟಂತೆ ತಮಗೂ ಹೆಚ್ಚುವರಿ ಅನುದಾನ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಅದೆಲ್ಲ ಈಗ ಆಗಲ್ಲ ಎಂದು ನೇರವಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ' ಎಂದೂ ಗೊತ್ತಾಗಿದೆ.

ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಸ್ಥಳ: ಡಿ.ಕೆ. ಶಿವಕುಮಾರ್ ತಾಕೀತು

ಬೆಂಗಳೂರು: ಮಹಾತ್ಮಗಾಂಧಿ ಅವರ ಅಧ್ಯಕ್ಷತೆಯ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷ ಆಗಿರುವುದರಿಂದ ರಾಜ್ಯದಾದ್ಯಂತ 100 ನೂತನ ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲು ತೀರ್ಮಾನಿಸಿದ್ದು, ಈವರೆಗೂ 50 ಕಡೆಯೂ ಸ್ಥಳ ಅಂತಿಮವಾಗಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಅಸಮಾಧಾನ ಹೊರ ಹಾಕಿದ್ದಾರೆ ಎಂದು ಗೊತ್ತಾಗಿದೆ.

ಮುಂದಿನ ತಿಂಗಳು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರಿಂದ 100 ಕಚೇರಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಬೇಕಾಗಿದೆ. ಹೀಗಾಗಿ ಈ ವೇಳೆಗೆ ಎಲ್ಲ ಕಡೆ ಸಿದ್ಧತೆ ಪೂರ್ಣಗೊಂಡಿರಬೇಕು ಎಂದು ತಾಕೀತು ಮಾಡಿದ್ದಾರೆ ಎಂದೂ ಮೂಲಗಳು ಹೇಳಿವೆ.

100 ಕಚೇರಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲು ದಿನಾಂಕ ನಿಗದಿ ಮಾಡುವಂತೆ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರಿಗೆ ಕೇಳಿದ್ದೆವು. ಅವರು ಪೂರಕವಾಗಿ ಸ್ಪಂದಿಸಿದ್ದರೂ ಈವರೆಗೂ ಐದು ಸ್ಥಳಗಳೂ ಅಂತಿಮವಾಗಿಲ್ಲ. ಇದು ಉತ್ತಮ ಧೋರಣೆಯಲ್ಲ. ಜಿಲ್ಲಾ ಸಚಿವರು ಜವಾಬ್ದಾರಿ ವಹಿಸಿಕೊಂಡು ಕೂಡಲೇ ಸ್ಥಳ ಗುರುತಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು ಎಂದು ತಿಳಿದುಬಂದಿದೆ.

ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ ಆರಾಧಾನಾ ಮಹೋತ್ಸವ ಪ್ರಯುಕ್ತ ಮಂಗಳವಾರ ನಡೆದ ಮಹಾ ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು ಚಿತ್ರ: ಶ್ರೀನಿವಾಸ ಇನಾಂದಾರ್

ಮಂತ್ರಾಲಯ: ಮಹಾರಥೋತ್ಸವ

ಪ್ರಜಾವಾಣಿ ವಾರ್ತೆ

ಮಂತ್ರಾಲಯ (ರಾಯಚೂರು): ಮಂತ್ರಾಲಯದಲ್ಲಿ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನೆ ಪ್ರಯುಕ್ತ ಮಂಗಳವಾರ ಉತ್ತರಾರಾಧನೆ ಹಾಗೂ ಮಹಾರಥೋತ್ಸವ ಜರುಗಿತು.

ಬೆಳಿಗ್ಗೆ ಮಠದ ಆವರಣದಿಂದ ಗುರುಸಾರ್ವಭೌಮ ವಿದ್ಯಾಪೀಠದ ಆವರಣದವರೆಗೆ ರಾಘವೇಂದ್ರ ಸ್ವಾಮಿಗಳ ಉತ್ಸವ ಮೂರ್ತಿಯ ಮೆರವಣಿಗೆ ನಡೆಯಿತು. ರಥದ ಮೇಲೆ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಮಾಡಲಾಯಿತು

ಭಜನಾ ಮಂಡಳಿಗಳು, ಡೊಳ್ಳು ಕುಣಿತ, ಬ್ಯಾಂಡ್ ವಾದನ ಹಾಗೂ ಕಲಾ ತಂಡಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದವು. ಭಕ್ತರು ಸಾಂಪ್ರದಾಯಿಕ ವಸ್ತ್ರಗಳನ್ನು ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಮೂಲಕ ಸಂಭ್ರಮಿಸಿದರು.

ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಆಶೀರ್ವಚನ ನೀಡಿದರು. ಇದಕ್ಕೂ ಮೊದಲು ವಸಂತೋತ್ಸವದ ನಂತರ ಶ್ರೀಗಳು ಭಕ್ತರತ್ತ ಗುಲಾಲು ತೂರಿದರು. ಮೂಲ ಬೃಂದಾವನಕ್ಕೆ ಚಿನ್ನಾಭರಣಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು.

ಬಿಡಿಎ ಅಧಿಕಾರಿಗಳಿಗೆ ರೈತರ ತರಾಟೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಪೆರಿಫೆರಲ್ ವರ್ತುಲ ರಸ್ತೆ–ಪಿಆರ್‌ಆರ್1 (ಬೆಂಗಳೂರು ಬ್ಯುಸಿನೆಸ್ ಕಾರಿಡಾರ್) ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನುಗಳಿಗೆ ದರ ನಿಗದಿ ಸಂಬಂಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿಕಾರಿಗಳು (ಬಿಡಿಎ) ಸೋಮವಾರ ಆಯೋಜಿಸಿದ್ದ ಸಂಧಾನ ಸೂತ್ರದ ಸಭೆಗೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ.

ವರ್ತೂರು, ಬ್ಯಾಲಕೆರೆ, ಆವಲಹಳ್ಳಿ, ಚೀಮಸಂದ್ರ, ಬಿದರೇನ ಅಗ್ರಹಾರ, ಕಾಡುಗೋಡಿ, ಸೀಗೆಹಳ್ಳಿ, ಕಸಘಟ್ಟಪುರ, ಚಿಕ್ಕಬಾಣಾವರ, ಚೊಕ್ಕನಹಳ್ಳಿ, ನಗರೇಶ್ವರ ನಾಗೇನಹಳ್ಳಿ ದೊಡ್ಡಗುಬ್ಬಿಯಲ್ಲಿ ದರ ನಿಗದಿ ಪಡಿಸಲು ಜಮೀನಿನ ರೈತರೊಂದಿಗೆ ಸಂಧಾನ ಸೂತ್ರದ ಸಭೆಯನ್ನು ಆಯೋಜಿಸಿತ್ತು.

ಸಭೆ ಆಯೋಜಿಸಿದ್ದ ಚಿಕ್ಕ ಬಾಣಾವರ ಪುರಸಭೆ ಬಳಿ ರೈತ ಹೋರಾಟಗಾರ ಬಿ.ಎಂ.ಚಿಕ್ಕಣ್ಣ ನೇತೃತ್ವದಲ್ಲಿ ಜಮಾಯಿಸಿದ ರೈತರು, 'ಸಭೆ ಆಯೋಜನೆ ಕುರಿತು ನೋಟಿಸ್ ನೀಡಿಲ್ಲ. ಮಧ್ಯವರ್ತಿಗಳ ಮೂಲಕ ಸಭೆ ಆಯೋಜಿಸಲಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಗ್ರಂಥಾಲಯಗಳ ಬಲಪಡಿಸುವಲ್ಲಿ ಸವಾಲುಗಳಿದ್ದರೂ ಪ್ರಾಮಾಣಿಕ ಕೆಲಸ'

'ಸ್ಪರ್ಧಾತ್ಮಕ ಪರೀಕ್ಷೆ: ಗ್ರಂಥಾಲಯವೇ ಸಂಪನ್ಮೂಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಹೆಚ್ಚಿನ ಸಂಪನ್ಮೂಲ ಒದಗಿಸಿ, ಸಾರ್ವಜನಿಕ ಗ್ರಂಥಾಲಯಗಳನ್ನು ಬಲಪಡಿಸಬೇಕಾದ ಅಗತ್ಯವಿದೆ ಎಂದು ಶಾಲಾ ಶಿಕ್ಷಣ ಸಚಿವ ಎಸ್. ಮಧು ಬಂಗಾರಪ್ಪ ಹೇಳಿದರು.

ಗ್ರಂಥಾಲಯ ವಿಜ್ಞಾನ ಪಿತಾಮಹ ಡಾ. ಎಸ್.ಆರ್. ರಂಗನಾಥನ್ ಅವರ 133ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಮಂಗಳವಾರ ಆಯೋಜಿಸಿದ್ದ ಗ್ರಂಥಪಾಲಕರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ದುಬಾರಿ ಕೋಚಿಂಗ್ ಕೇಂದ್ರಗಳಿಗೆ ಹೋಗಲು ಸಾಧ್ಯವಿಲ್ಲದ ವಿದ್ಯಾರ್ಥಿಗಳು ದಿನವಿಡೀ ಗ್ರಂಥಾಲಯಗಳಲ್ಲಿ ಓದುತ್ತಾರೆ. ಹೀಗಾಗಿ ಅವರಿಗೆ ಎಲ್ಲ ರೀತಿಯ ಸಂಪನ್ಮೂಲ ಒದಗಿಸ ಬೇಕಾಗುತ್ತದೆ ಎಂದು ತಿಳಿಸಿದರು.

ಎಸ್.ಆರ್. ರಂಗನಾಥನ್ ಅವರ ಭಾವಚಿತ್ರಕ್ಕೆ ಮಧು ಬಂಗಾರಪ್ಪ ಅವರು ಪುಷ್ಪನಮನ ಸಲ್ಲಿಸಿದರು. ರಶ್ಮಿ ಮಹೇಶ್, ಪುರುಷೋತ್ತಮ ಬಿಳಿಮಲೆ, ಕರಿಗೌಡ ಬೀಚನಹಳ್ಳಿ ಉಪಸ್ಥಿತರಿದ್ದರು

'ಸಾರ್ವಜನಿಕ ಗ್ರಂಥಾಲಯಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಪುಸ್ತಕಗಳನ್ನು ಹೆಚ್ಚಿಸಲು, ಬೇಕಾದ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರ ಬಗ್ಗೆ ಪ್ರತಿಯೊಬ್ಬ ಗ್ರಂಥಪಾಲಕರೂ ಒತ್ತು ನೀಡಬೇಕು. ಗ್ರಂಥಾಲಯ ಬಲಪಡಿಸುವಲ್ಲಿ ಸವಾಲುಗಳಿದ್ದರೂ ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಕೆಲಸ ಮಾಡುತ್ತದೆ' ಎಂದರು.

'ಸರ್ಕಾರಿ ಪಿಯುಸಿ ವಿದ್ಯಾರ್ಥಿಗಳಿಗೆ ಜೆಇಇ ಹಾಗೂ ನೀಟ್‌ಗೆ ಉಚಿತ ತರಬೇತಿಯನ್ನು ಆರಂಭಿಸಲಾಗಿದೆ. ಪ್ರಸ್ತುತ 25 ಸಾವಿರ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದು, ಇಂತಹ ಸೌಲಭ್ಯ ಒದಗಿಸುವ ಏಕೈಕ ರಾಜ್ಯವಾಗಿದೆ. ಈ ತರಬೇತಿಯಿಂದ ಗೌರಿಬಿದನೂರಿನ ಎನ್. ಸಂಕೇತ್ ರಾಜ್ ಐಐಟಿ ಖರಗಪುರ್‌ಗೆ ಪ್ರವೇಶ ಪಡೆದಿದ್ದಾರೆ' ಎಂದರು.

'ಮೂರು ಪರೀಕ್ಷಾ ಪದ್ಧತಿ ಹಾಗೂ ಪರೀಕ್ಷಾ ಪ್ರಕ್ರಿಯೆಯ ಪಾರದರ್ಶಕತೆಗೆ ವೆಬ್‌ಕಾಸ್ಟಿಂಗ್ ಸೇರಿದಂತೆ ಶಿಕ್ಷಣ ಇಲಾಖೆಯಲ್ಲಿ ಇನ್ನೂ ಹಲವು ನೂತನ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ಮಧು ಬಂಗಾರಪ್ಪ ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷ ಕರಿಗೌಡ ಬೀಚನಹಳ್ಳಿ, ಎನ್‌ಎಎಲ್ ಗ್ರಂಥಾಲಯ ಮುಖ್ಯಸ್ಥ ಬಿ.ಎಸ್. ಶಿವರಾಮ್, ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಸಾರ್ವಜನಿಕ ಗ್ರಂಥಾಲಯ ಇಲಾಖೆ ಆಯುಕ್ತ ಎಚ್.ಬಸವರಾಜೇಂದ್ರ ಇದ್ದರು.

ಶೌಚಾಲಯಗಳ ನಡುವೆ ಗೋಡೆ ನಿರ್ಮಾಣ, ತಪ್ಪಿದ ಮುಜುಗರ

ಪ್ರಜಾವಾಣಿ ವಾರ್ತೆ

ಸ್ಯಾಟ್‌ಲೈಟ್ ಬಸ್ ನಿಲ್ದಾಣದಲ್ಲಿ ಮಹಿಳಾ ಮತ್ತು ಪುರುಷರ ಶೌಚಾಲಯ ನಡುವೆ ಗೋಡೆ ನಿರ್ಮಿಸಲಾಗಿದೆ

ಬೆಂಗಳೂರು: ನಗರದ ಸ್ಯಾಟ್‌ಲೈಟ್ ಬಸ್ ನಿಲ್ದಾಣದಲ್ಲಿ ಟಿಕೆಟ್ ಕೌಂಟರ್ ಬಳಿಯ ಪುರುಷ ಹಾಗೂ ಮಹಿಳಾ ಶೌಚಾಲಯ ನಡುವೆ ಗೋಡೆ ನಿರ್ಮಿಸುವ ಮೂಲಕ ಮಹಿಳೆಯರಿಗೆ ಆಗುತ್ತಿದ್ದ ಮುಜುಗರವನ್ನು ತಪ್ಪಿಸಲಾಗಿದೆ.

ಟಿಕೆಟ್ ಕೌಂಟರ್ ಬಳಿಯ ಪುರುಷ ಶೌಚಾಲಯದ ಅವ್ಯವಸ್ಥೆ ಕುರಿತು ಲೇಖಕಿ ಕುಸುಮಾ ಆಯರಹಳ್ಳಿ ಅವರು ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದರು. ಇದನ್ನು ಗಮನಿಸಿದ ಪತ್ರಕರ್ತರೊಬ್ಬರು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹಾಗೂ ಅಧಿಕಾರಿಗಳ ಗಮನಕ್ಕೆ ತಂದರು. ತಕ್ಷಣ ಕಾರ್ಯ ಪ್ರವೃತ್ತರಾದ ಅಧಿಕಾರಿಗಳು, ಅಲ್ಲಿಗೆ ತಾತ್ಕಾಲಿಕವಾಗಿ ಪರದೆ ಹಾಕಿಸಿದರು. ನಂತರ ಅಲ್ಲಿ ಗೋಡೆ ನಿರ್ಮಿಸುವ ಮೂಲಕ ಶಾಶ್ವತ ಪರಿಹಾರ ಕಂಡುಕೊಳ್ಳಲಾಗಿದೆ. ಇದರಿಂದ ಟಿಕೆಟ್ ಕೌಂಟರ್‌ನಲ್ಲಿನ ಮಹಿಳಾ ಸಿಬ್ಬಂದಿ ಹಾಗೂ ಟಿಕೆಟ್ ಖರೀದಿಸಲು ಸಾಲಿನಲ್ಲಿ ನಿಂತುಕೊಳ್ಳುತ್ತಿದ್ದ ಮಹಿಳಾ ಪ್ರಯಾಣಿಕರಿಗೆ ದುರ್ವಾಸನೆ ತಪ್ಪಿದೆ.

'ಹಲವು ವರ್ಷಗಳಿಂದ ಈ ಸಮಸ್ಯೆ ಇದೆ. ಆದರೆ, ಎಲ್ಲರೂ ನೋಡಿಕೊಂಡು ಸುಮ್ಮನೆ ಇದ್ದರು. ಮೈಸೂರಿಗೆ ತೆರಳುವ ವೇಳೆ ಈ ದೃಶ್ಯ ನೋಡಿ ಅಸಹ್ಯವಾಯಿತು. ಅಧಿಕಾರಿಗಳಿಗೆ ಲಿಖಿತ ದೂರು ಕೊಡಲು ಸಮಯವಿರಲಿಲ್ಲ. ಹಾಗಾಗಿ ತಕ್ಷಣ ಫೋಟೊ ತೆಗೆದು ಜಾಲತಾಣದಲ್ಲಿ ಪೋಸ್ಟ್ ಮಾಡಿದೆ. ಸ್ನೇಹಿತರೊಬ್ಬರು ಸಚಿವರ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಿದ್ದಾರೆ. ಇಲಾಖೆ ತಕ್ಷಣ ಸ್ಪಂದಿಸಿರುವುದು ಒಳ್ಳೆಯ ಬೆಳವಣಿಗೆ' ಎಂದು ಕುಸುಮಾ ತಿಳಿಸಿದ್ದಾರೆ.

HEALTH SPECIAL

CONNECT

BHARATHI ENTERPRISES
Speech & Hearing Centre
Hearing Aid Sales & Service
Independence Day Offer
signia
Rechargeable & Invisible Hearing Aid
FREE Hearing Checkup & Demo
Now Open at MATHIKERE
#1067, 1st Floor, Ramaiah College Bus Stop Gokula 1st Stage, 2nd Phase, H.M.T Main Road
Ph.: 080-49743235, 9686664867
FRAZER TOWN, Coles Road, Mob: 9980682527
KAMMANAHALLI, KEB Road, Mob: 9901487270
KASTURI NAGAR, Channasandra Main Road, Mob: 9686664867
www.bharathihearingcarecentre.com | bharathihearing@gmail.com

Jobs 60+
ಉದ್ಯೋಗ ಮೇಳ
080 42426565 / +91 9243737214 / 8951441316
www.nightingalesjobs60plus.com
jobs60plus@nightingaleseldercare.com

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್
10 Days only
SPOT CASH
13-08-2025 - 23-08-2025
ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್, ನಂ.58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ, 5ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು
Call: 9632781499

Y.M.C.A College of Physical Education
Nrupathunga Road, Bangalore- 560001
recognized by NCTE & affiliated to Bangalore City University.
Admission Notice
Admissions Open for B.P.Ed and D.P.Ed courses for 2025-2026
For B.P.Ed 2 years course (Eligibility is pass in any Degree with 50% or 45% with sports certificate)
For D.P.Ed 2 years course (Eligibility is pass in P.U.C/12 Std with 50% or 45% with sports certificate)
Contact: 080-22211848, 9844041573, 9342817807, 8694062060
Website: www.ymcablr.org E-Mail: ymcabangalore19@gmail.com
JOB ASSURED AFTER THE COURSE
Dr.Daniel Rathnakar.J General Secretary & Correspondent
Dr.A.Maleques Principal

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
IN THE COURT OF CIVIL JUDGE & J.M.F.C. AT SORAB.
O.S 153/2023
Plaintiff :- Ganesh Rao
V/S
Defendents :-Radhika & others
Notice
To,
1. Manikere Ganesh S/o Late Sundhar Rao Vasanth plat Virumbakam Chennai Thamilunadu
2. Prakash Bhatt Manrkere S/o Late Sundharao Anantha Nivasa 4th cross 5th main Shri Rampuram Bangalore
3. Amith S/o Durgadhas 1/103 Eshwari Housing Co society Mahanth Road East Mumbai
4. Sanjith S/o Sharashchandhra 1/103 Eshwari Housing Co society Mahanth Road, East Mumbai
5. Vasanth Thavanandhi S/o Late Shivarao E1 Sahyadhri apartment Pattar Ganj New Delhi
6. Suvarna W/o Subhas Ederi 8/20 Thalmakki Vadi Javji Dadaji Marg Grant Road Mumbai
Shri Ganesh Rao S/o Ramadhasa @ Ramamurthi had instituted a suit for partition seeking 1/12 share regarding schedule properties. In the above case you are defendant No 5 to 9 and 12 respectively. This case is fixed for enquiry on 26-09-2025 at 11 A.M. Hence you are hereby informed to be present personally or through pleader. If not court conceder you as exparty and adjudicate the matter according to the merits of the case.
Schedule
1)1Acre 03 Guntas of land out of 2 Acre 12 Guntas of 2 Ace 13 Guntas land bearing Sy No 167 of Thavanandhi village. Bounded by Sy.No 168 in east, Sy No171 in west, Sy.No 168 and 170 in north boundary stones in south.
2) House situated in Assessment No 18 of Thavanandhi village which comes under Thavanandhi Grama panchayath Sorab Taluk Shivamogga District measuring 50 x 40 feets.
Date. 13/08/2025
By order of court
K.S.Sathyanarayana
Advocate Sorab
Sorab

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

JOB OPPORTUNITIES

Manager

ISME Bangalore INTERNATIONAL SCHOOL OF MANAGEMENT EXCELLENCE
REQUIRES
ADMISSION MANAGER - with at least 4-6yrs. exp. in Business Development, willing to travel
ADMISSION COUNSELLOR - Having Min. 3yrs. Exp.in admissions, student counselling, with excellent communication & computer skills.
Staying within 10 km of the campus or ready to shift near the campus. Send resume to hr@isme.in.
080-28019800. ISME, Sarjapur Road, Bangalore.

Teachers/ Professors

REQUIRES
• PROFESSOR - OBG
• ASSOCIATE PROFESSORS Community/ Medicine/ Physiology & Bio- Chemistry
• ASSISTANT PROFESSORS Anatomy / Materia Medica Repertory / Forensic Medicine/ Pharmacy /OBG Practice of Medicine
Anuradha Homoeopathic Medical College
Srigandha Kaval, Hegganahalli Cross, Bangalore- 560091
Principal - 9731562744
Chairman - 9845051023
Email:anuradhahomoeopathy@gmail.com OR anuradhacollege@gmail.com

ELITE PUBLIC SCHOOL Kempegowda Layout Laggere Bengaluru Requires MA(English)/, B Ed Qualified Teachers: 9447727526/ 9980200444

WANTED PRINCIPAL for a Reputed School with CBSE Syllabus. Contact: 9611787964 Email: sudhamurthyv@gmail.com

Engg/ Production Technical

WANTED B.E. Mechanical Engineer Trainees for an Aircraft component Manufacturing Industry. Training Period 1 YEAR, Stipend 0-6 Months- Rs.18000, 7-12 Months- Rs.20000. Mail your resume to- hrd@ayyappa-cnc.com

General

REQUIRED IMMEDIATELY Communication Skilled MANAGERS, LADY EXECUTIVES. MARKETING EXECUTIVES. Good Salary. Walkin V&V GROUP, Behind IIMB, Bannerghatta Road: 99000-54462

Accounts & Finance

REQUIRED ACCOUNTANT B'Com, with 3-Years experience in Tally, GST filing,for Domlur Office. age below 35-Years 9845444922

PERSONAL

Change of Name

I, SHWETHA. N., Residing at #25, 2nd main, Kalathur Layout, Jalahalli East, Bengaluru- 560013 have changed my name as SHWETHA NARAYAN, vide affidavit dated 19/07/2025 before Notary Chandrakala, Bengaluru.

CHANGE OF NAME
I, Christine Oliva Frenandes , residing at No.5, 3rd Main, 5th Cross, Radha Reddy Layout, Doddakannahalli, Bengaluru-560035, have changed my name to CHRISTENE FERNANDES vide affidavit dated 12.08.2025 before notary B.M. Chandrashekar, Bengaluru.

CHANGE OF NAME
I, MAHADEVAPRASAD D P, R/at #36, Chandra Hill View Apartment, Flat No 303, 4th Phase, Ravi Hill View Layout, Ittamadu BSK 3rd Stage, Bengaluru-560085. declare that in my SSLC marks card, my father's name has been wrongly mentioned as PRABHAKAR D R his Correct name is D V PRABHAKAR vide affidavit dated 12.08.2025 before notary H G Venkataramu, Bengaluru.

I, MOHAMMED SHAFFI AHMED, residing at Bengaluru-36, have changed my name as SHAFI AHMED, vide affidavit dated 12/08/2025 before Notary K.S. Bammappanavar, Bengaluru

CHANGE OF NAME
I, SRIKANTH. R JOSHI, S/o. RAGHAVENDRA JOSHI, residing at No 510/1, 11th Cross, West of Chord Road, Mahalakshmipuram, Mahalakshmi layout post, Bangalore north, Bangalore 560086 have changed my name from SRIKANTH. JOSHI to SRIKANTH. R JOSHI, vide affidavit dated: 30.07.2025 before advocate and notary Ratna .N, Bengaluru.

I, VIJAYALAKSHMI P.N W/o T.N Raghuveera, R/at No. 778, 3rd Main Road, 4th Block, Rajajinagar, Bangalore- 560010 have changed my name to VIJAYALAKSHMI T.R vide affidavit dated: 9/8/2025 Before Notary Sumangala Hegde Bangalore.

Lost

ದಾಖಲೆ ಕಳೆದು ಹೋಗಿದೆ
ವಿನೋದ್ ಪಿ. S/o ಪುಟ್ಟರಾಜು, ನಂ. 296, 9ನೇ ಮೈನ್, 7ನೇ ಕ್ರಾಸ್, ರಾಮಾಂಜನೇಯ ರಸ್ತೆ, ಹನುಮಂತನಗರ, ಬೆಂಗಳೂರು–560019ರಲ್ಲಿ ವಾಸವಾಗಿರುವ ನಾನು, ನನ್ನ ನಿವೇಶನದ ಕ್ರಯಪತ್ರ ದಸ್ತಾವೇಜು ಸಂಖ್ಯೆ: 16693 ದಿನಾಂಕ: 4–2–2006, ಸೈಟ್ ನಂ. 1 ಮತು 2, ವಿನೋದ್ ಪಿ. ರವರ ಹೆಸರಿಗೆ ಶುದ್ಧಕ್ರಯ ಪತ್ರವಾಗಿರುತ್ತದೆ. ಪ್ರಯಾಣ ಮಾಡುವಾಗ ಮೂಲ ಶುದ್ಧಕ್ರಯ ಪತ್ರ ಕಳೆದು ಕೊಂಡಿರುತ್ತೇನೆ. ಯಾರಿಗಾದರೂ ಸಿಕ್ಕಿದ್ದಲ್ಲಿ ಈ ಕೆಳಗಿನ ಸಂಖ್ಯೆಗೆ ಕರೆ ಮಾಡಿ.
ಮೊಬೈಲ್ ಸಂಖ್ಯೆ: 7411245022

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Sites

Anjanapura

BDA SITE 20'X30' for sale in Anjanapura 5th 'G' Block, for immediate registration 66L, Direct:9740854024

BUSINESS

Business Offers

Finance

MSME LOANS Available for Any Startup Companies,Any Existing Companies NOTE:Also One Approved Loan Available Contact-7204995189

DH Classifieds More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9886213331 | 080-45557163/164

ಗುಜರಾತ್ ಪೆಟ್ರೋಸಿಂಥಿಸ್ ಅಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, Iನೇ ಹಂತ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, ಮಹದೇವಪುರ ಅಂಚೆ, ಬೆಂಗಳೂರು - 560 048. CIN : L23209KA1977PLC043357
E-mail : info@gpl.in, secretarial@gujaratpetrosynthese.com Website: www.gpl.in

ಜೂನ್ 30, 2025ರ ತ್ರೈಮಾಸಿಕಕ್ಕೆ ಅಂತ್ಯಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳು

(ರೂ. ಸಾವಿರಗಳಲ್ಲಿ)

ಕ್ರ. ಸಂ.	ವಿವರಗಳು	ಜೂನ್ 2025 ತ್ರೈಮಾಸಿಕಕ್ಕೆ ಅಂತ್ಯಗೊಂಡ	ಜೂನ್ 2024 ತ್ರೈಮಾಸಿಕಕ್ಕೆ ಅಂತ್ಯಗೊಂಡ	ಮಾರ್ಚ್ 2025 ವರ್ಷಕ್ಕೆ ಅಂತ್ಯಗೊಂಡ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	58,804	48,362	2,01,372
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ/ಮತ್ತು ವಿಶೇಷ ವಸ್ತುಗಳು)	7,213	6,058	22,100
3	ನಿವ್ವಳ ಲಾಭ/ (ನಷ್ಟ) ತೆರಿಗೆಯ ಅವಧಿಯ ಮುಂಚೆ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	7,213	6,058	22,100
4	ನಿವ್ವಳ ಲಾಭ / (ನಷ್ಟ) ತೆರಿಗೆಯ ಅವಧಿಯ ನಂತರ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	5,921	(1,076)	14,603
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ/(ನಷ್ಟ) ಅವಧಿಗೆ(ತೆರಿಗೆಯನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯನಂತರ)	5,921	(1,076)	14,603
6	ಈಕ್ವಿಟಿ ಷೇರುಬಂಡವಾಳ (ಮುಖಬೆಲೆ ರೂ.10 ಪ್ರತಿಷೇರಿಗೆ)	5,969	5,969	5,969
7	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ			4,39,528
8	ಪ್ರತಿ ಷೇರಿನಗಳಿಕೆ (ಪ್ರತಿ ರೂ.10ಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರಿಸುವುದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ) 1. ಮೂಲಭೂತ: 2. ಡೈಲ್ಯೂಟೆಡ್:	0.99	(0.18)	2.45

ಸೂಚನೆಗಳು: A) ಈ ಮೇಲಿನವು 30ನೇ ಜೂನ್ 2025ರ ತ್ರೈಮಾಸಿಕಕ್ಕೆ ಕೊನೆಗೊಂಡ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿರುತದೆ ಹಾಗೂ ಆಗಸ್ಟ್ 12, 2025 ರಂದು ಲೆಕ್ಕ ಪರಿಶೋಧನಾ ಸಮಿತಿಯಿಂದ ಈ ಮೇಲ್ಕಂಡ ಫಲಿತಾಂಶಗಳು ಪುನಾರಾವಲೋಕನಗೊಂಡಿದ್ದು, ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಿಗಣಿಸಿ, ದಾಖಲಿಸಿ, 2015ರ ಸೆಬಿಯ ನಿಯಂತ್ರಣಗಳ(ಲಿಸ್ಟಿಂಗ್ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇಯ ನಿಯಂತ್ರಣದಡಿ ಸ್ಟಾಕ್‌ಎಕ್ಸ್ಚೇಂಜ್‌ನಲ್ಲಿ ಸಲ್ಲಿಸಲಾಗಿದೆ. ಈ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.gpl.in ನಲ್ಲೂ ಲಭ್ಯವಿದೆ. ಈ ಕೆಳಗಿನ ಕ್ಯೂ. ಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಪೂರ್ಣ ಸ್ವರೂಪವನ್ನು ಪಡೆಯಬಹುದು. B) ಕಂಪನಿಯು ಒಂದು ಸೆಗ್ಮೆಂಟ್‌ನಲ್ಲಿ ಮಾತ್ರ ಕಾರ್ಯ ನಿರ್ವಹಿಸುತದೆ. C) ಅಗತ್ಯವಿದ್ದಲ್ಲಿ ಹೋಲಿಕೆ ಮಾಡಲು, ಹಿಂದಿನ ತ್ರೈಮಾಸಿಕ / ಅವಧಿಯ ಅಂಕಿ ಅಂಶಗಳನ್ನು ಮರು ಸಂಗ್ರಹಿಸಲಾಗಿದೆ/ ಮರು ಜೋಡಿಸಲಾಗಿದೆ.

ಸ್ಥಳ : ಮುಂಬೈ
ದಿನಾಂಕ : 12/08/2025

ಗುಜರಾತ್ ಪೆಟ್ರೋಸಿಥಿಂಸ್ ಲಿಮಿಟೆಡ್‌ನ ಪರವಾಗಿ
ಸಹಿ/– ಊರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕರು ಡಿ.ಐ.ಎನ್: 00319482

ಚಿಟಿಕೆ ಸುದ್ದಿ

ರಾಜಭವನ ವೀಕ್ಷಣೆಗೆ ಅವಕಾಶ

ಬೆಂಗಳೂರು: 79ನೇ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಆ.16, 17 ಮತ್ತು 18ರಂದು ರಾಜಭವನ ವೀಕ್ಷಣೆಗೆ ಸಂಜೆ 6 ರಿಂದ 7.30ರವರೆಗೆ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ. ವೀಕ್ಷಣೆಗೆ ಆಗಮಿಸುವವರು ಸರ್ಕಾರದಿಂದ ನೀಡಿರುವ ಗುರುತಿನ ಕಾರ್ಡ್ ಕಡ್ಡಾಯವಾಗಿ ತರಬೇಕು. ಆವರಣದೊಳಗೆ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟಿರುವ ಸ್ಥಳಗಳನ್ನು ಬಿಟ್ಟು ಬೇರೆಡೆಗೆ ಪ್ರವೇಶಿಸಬಾರದು. ಭದ್ರತಾ ಸಿಬ್ಬಂದಿ ನೀಡುವ ಸೂಚನೆಗಳನ್ನು ಪಾಲಿಸಬೇಕು ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಸೂಚಿಸಿದ್ದಾರೆ.

ಪ್ರತಿಭಾ ಪುರಸ್ಕಾರ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಸಹಕಾರ ಸಂಘದಿಂದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೊಮಾ, ಪದವಿ, ತಾಂತ್ರಿಕ, ವೈದ್ಯಕೀಯ ಮತ್ತು ಸ್ನಾತಕೋತ್ತರ ಅಂತಿಮ ಪರೀಕ್ಷೆಗಳಲ್ಲಿ ಶೇ 60ಕ್ಕೂ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ. ಅರ್ಹರು ಸಂಘಕ್ಕೆ ಮಾಹಿತಿ ಒದಗಿಸಬಹುದು. ಆಗಸ್ಟ್ 17ರಂದು ನಡೆಯುವ ಸಹಕಾರ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಸಮಾರಂಭದ ದಿನವನ್ನು ನಿಗದಿ ಮಾಡಿ, ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ ಎಂದು ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ತಿಳಿಸಿದ್ದಾರೆ.

ಶ್ರೀಕೃಷ್ಣ ಜನ್ಮಾಷ್ಟಮಿ

ಬೆಂಗಳೂರು: ಇಸ್ಕಾನ್ ರಾಜರಾಜೇಶ್ವರಿ ನಗರ ಶಾಖೆ ವತಿಯಿಂದ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಆಗಸ್ಟ್ 15ರಂದು ಆಚರಿಸಲಾಗುತ್ತದೆ. ಕಾರ್ಯಕ್ರಮವು ಮಧ್ಯಾಹ್ನ 3 ರಿಂದ 10ರವರೆಗೆ ವೈಟ್ ಪರ್ಲ್ ಕನ್ವೆನ್ಷನಲ್ ಹಾಲ್‌ನಲ್ಲಿ (ಪಪಯ್ಯ) ನಡೆಯಲಿದ್ದು, ಕೀರ್ತನೆ, ಅಭಿಷೇಕ, ಆರತಿ, ಪ್ರಸಾದ ವಿತರಣೆ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಗೋಪಾಲರ ಮನರಂಜನಾ ತರಗತಿಗಳು (ಮಕ್ಕಳಿಗೆ) ಮತ್ತು ಭಗವದ್ಗೀತೆ ತರಗತಿಗಳು (ವಯಸ್ಕರಿಗೆ) ಕೂಡ ನಡೆಯಲಿದೆ. ಮಾಹಿತಿಗೆ 9620818044, 7387006376, 8197250127, 8105310013 ಸಂಪರ್ಕಿಸಬಹುದು.

ಕಾಡಾನೆ ದಾಳಿಗೆ ಕಾರ್ಯಪಡೆ ಸಿಬ್ಬಂದಿ ಬಲಿ

ಕನಕಪುರ/ರಾಮನಗರ: ರೈತರ ಜಮೀನಿಗೆ ನುಗ್ಗಿದ್ದ ಕಾಡಾನೆಗಳನ್ನು ಓಡಿಸುವ ಕಾರ್ಯಾಚರಣೆ ಸಂದರ್ಭದಲ್ಲಿ ಕಾಡಾನೆಯೊಂದು ನಡೆಸಿದ ದಾಳಿಗೆ ಆನೆ ಕಾರ್ಯಪಡೆ ಸಿಬ್ಬಂದಿಯೊಬ್ಬರು ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕಬ್ಬಾಳು ವ್ಯಾಪ್ತಿಯ ಕಂಚನಹಳ್ಳಿ ಅರಣ್ಯ ಪ್ರದೇಶದಲ್ಲಿ ಮಂಗಳವಾರ ನಡೆದಿದೆ.



ಶ್ರೇಯಸ್

ಚನ್ನಪಟ್ಟಣದ ಎಲೇಕೇರಿ ಶ್ರೇಯಸ್ (20) ಮೃತರು. ಡಿಪ್ಲೊಮಾ ಮುಗಿಸಿದ್ದ ಅವರು, ಸಾತನೂರು ಪ್ರಾದೇಶಿಕ ಅರಣ್ಯ ವಲಯದಲ್ಲಿ ಒಂದು ವರ್ಷದಿಂದ ಆನೆ ಕಾರ್ಯಪಡೆಯಲ್ಲಿ ಕೆಲಸ ಮಾಡುತ್ತಿದ್ದರು.

'ಕಾರ್ಯಪಡೆಯ 20ಕ್ಕೂ ಹೆಚ್ಚು ಸಿಬ್ಬಂದಿ ಆನೆಗಳನ್ನು ಕಾಡಿಗೆ ಓಡಿಸುವ ಕಾರ್ಯಾಚರಣೆ ಕೈಗೊಂಡಿದ್ದಾಗ ಈ ಘಟನೆ ನಡೆದಿದೆ' ಎಂದು ಡಿಸಿಎಫ್ ರಾಮಕೃಷ್ಣಪ್ಪ ತಿಳಿಸಿದರು.

ಚಿತ್ರಾವಳಿ

ಒಡಿಶಾ ರಾಜ್ಯದ ಭುವನೇಶ್ವರದಲ್ಲಿರುವ ಕಳಿಂಗ ಶಿಕ್ಷಣ ಸಂಸ್ಥೆಗೆ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಭೇಟಿ ನೀಡಿ, ಬುಡಕಟ್ಟು ಸಮುದಾಯ ವಿದ್ಯಾರ್ಥಿಗಳೊಂದಿಗೆ ಸಮಾಲೋಚಿಸಿದರು

ನಗರದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿ ಆಯೋಜಿಸಿದ್ದ ಸಮಾರಂಭದಲ್ಲಿ ಬ್ರಿಟನ್‌ನ ಡೆಪ್ಯುಟಿ ಹೈಕಮಿಷನರ್‌ಗಳಾದ ಹರ್ಜಿಂದರ್ ಕಾಂಗ್ (ಎಡದಿಂದ ಮೂರನೆಯವರು), ಚಂದ್ರು ಅಯ್ಯರ್, ಬಿಸಿಐಸಿ ಅಧ್ಯಕ್ಷ ಪ್ರಶಾಂತ್ ಗೋಖಲೆ, ಹಿರಿಯ ಉಪಾಧ್ಯಕ್ಷ ಸಿಕೆ ರವಿ, ಉಪಾಧ್ಯಕ್ಷ ಪ್ರಶಾಂತ್ ರೆಡ್ಡಿ ಪಾಲ್ಗೊಂಡಿದ್ದರು.

ವ್ಯಗ್ರ ಬೀದಿ ನಾಯಿಗಳಿಗೆ 'ಆಶ್ರಯ ಕೇಂದ್ರ'?

ಕಚ್ಚುವ ಅಭ್ಯಾಸವುಳ್ಳ ಬೀದಿ ನಾಯಿಗಳನ್ನು ಶಾಶ್ವತವಾಗಿ ಕೇಂದ್ರದಲ್ಲಿರಿಸಲು ಬಿಬಿಎಂಪಿ ಚಿಂತನೆ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿರುವ ವ್ಯಗ್ರ ಹಾಗೂ ಕಚ್ಚುವುದನ್ನೇ ಅಭ್ಯಾಸ ಮಾಡಿಕೊಂಡಿರುವ ಬೀದಿ ನಾಯಿಗಳನ್ನು (ಆಲ್ಫಾ ಡಾಗ್) ಶಾಶ್ವತವಾಗಿ 'ಆಶ್ರಯ ಕೇಂದ್ರ'ದಲ್ಲಿ ಇಟ್ಟು ಪೋಷಣೆ ಮಾಡಲು ಬಿಬಿಎಂಪಿ ಚಿಂತನೆ ನಡೆಸಿದೆ.

ಬೀದಿ ನಾಯಿಗಳು ಕಚ್ಚುವ ಪ್ರಕರಣಗಳು ನಗರದಲ್ಲಿ ಹೆಚ್ಚಾಗುತ್ತಿವೆ. ಪ್ರಾಣಿ ಸಂತಾನ ನಿಯಂತ್ರಣ (ಎಬಿಸಿ) ನಿಯಮದಂತೆ, ಕಚ್ಚುವ ಬೀದಿ ನಾಯಿಗಳನ್ನು ಹಿಡಿದು ಶಸ್ತ್ರಚಿಕಿತ್ಸೆ ಅಥವಾ ರೇಬಿಸ್ ಚುಚ್ಚುಮದ್ದು ನೀಡಿ ಹತ್ತು ದಿನ ನಿಗಾದಲ್ಲಿ, ಅವುಗಳಿದ್ದ ಸ್ಥಳಕ್ಕೆ ಬಿಡಲಾಗುತ್ತಿದೆ. 'ಇದಾದ ಮೇಲೂ, ಕಚ್ಚುವುದನ್ನೇ ಅಭ್ಯಾಸ ಮಾಡಿಕೊಂಡಿರುವ ನಾಯಿಗಳು ಮತ್ತೆ ಕಚ್ಚುವ ಪ್ರಕರಣಗಳು ದಾಖಲಾಗುತ್ತಿವೆ.

ಕಚ್ಚುವ ಅಭ್ಯಾಸವುಳ್ಳ ಅಥವಾ ವ್ಯಗ್ರ ಬೀದಿ ನಾಯಿಗಳನ್ನು ನಿಗಾ ಕೇಂದ್ರದಲ್ಲಿರಿಸಿ ಚಿಕಿತ್ಸೋಪಚಾರ ನಡೆಸಿದರೂ ಅವುಗಳು ಕಚ್ಚುವ ಚಾಳಿ ಬಿಡುತ್ತಿಲ್ಲ. ಹೀಗಾಗಿ, ಅಂತಹ ಬೀದಿ ನಾಯಿಗಳನ್ನು ಶಾಶ್ವತವಾಗಿ ಇರಿಸಿ, ಪೋಷಣೆ ಮಾಡಲು 'ಆಶ್ರಯ ತಾಣ'ಗಳನ್ನು ನಿರ್ಮಿಸಲು ಬಿಬಿಎಂಪಿ ಪಶುಸಂಗೋಪನೆ ವಿಭಾಗದ ಅಧಿಕಾರಿಗಳು ಚಿಂತನೆ ನಡೆಸಿದ್ದಾರೆ. 'ಇದಕ್ಕಿರುವ ಕಾನೂನು ತೊಡಕುಗಳನ್ನು ನಿವಾರಿಸಿಕೊಂಡು, ಪ್ರಾಣಿದಯಾ ಸಂಘದ ಸಲಹೆಗಳನ್ನು ಪಡೆದು ಹೊಸ ಯೋಜನೆ ಅನುಷ್ಠಾನ ಮಾಡಲು ಯೋಚಿಸಿದ್ದೇವೆ.

'ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಬೀದಿ ನಾಯಿಗಳನ್ನು ಹಿಡಿದು, ಅವುಗಳನ್ನು ಆಶ್ರಯ ತಾಣಗಳಿಗೆ ಸ್ಥಳಾಂತರಿಸಿ' ಎಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. 'ಈ ಆದೇಶವನ್ನು ನಗರದಲ್ಲೂ ಪಾಲಿಸಬೇಕು' ಎಂಬ ಆಗ್ರಹ ವಿಧಾನ ಪರಿಷತ್‌ನಲ್ಲೂ ಕೇಳಿ ಬಂದಿರುವುದರಿಂದ ಆ ಬಗ್ಗೆ ಚರ್ಚೆ ಆರಂಭವಾಗಿದೆ.

'ಎಲ್ಲ ಬೀದಿ ನಾಯಿಗಳಿಗೂ 'ಆಶ್ರಯ ಕೇಂದ್ರ' ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವ್ಯಗ್ರ ಹಾಗೂ ಕಚ್ಚುವ ಅಭ್ಯಾಸ ಇರುವ ಬೀದಿ ನಾಯಿಗಳನ್ನಾದರೂ 'ಆಶ್ರಯ ಕೇಂದ್ರ'ಗಳಲ್ಲಿ ಶಾಶ್ವತವಾಗಿ ಉಳಿಸಿಕೊಳ್ಳಲು ಯೋಜನೆ ರೂಪಿಸಬೇಕಾಗಿದೆ. ಇದು ಇನ್ನೂ ಆರಂಭಿಕ ಚರ್ಚೆಯಾಗಿದ್ದು, ಇದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗಬೇಕಿದೆ' ಎಂದು ಬಿಬಿಎಂಪಿ ಪಶು ಸಂಗೋಪನೆ ವಿಭಾಗದ ಅಧಿಕಾರಿಗಳು ತಿಳಿಸಿದರು.

ಮುಖ್ಯಾಂಶಗಳು

- ಎಬಿಸಿ ಕಾರ್ಯಕ್ರಮದಂತೆ ಈಗ ಚಿಕಿತ್ಸೋಪಚಾರ
- 10 ದಿನದ ನಂತರ ಅದೇ ಸ್ಥಳಕ್ಕೆ ಬೀದಿ ನಾಯಿ
- ಮತ್ತೆ ಕಚ್ಚುವ ಬೀದಿ ನಾಯಿಗಳಿಂದ ಸಂಕಷ್ಟ

ನಿಗಾ ಕೇಂದ್ರದಲ್ಲಿ ಹೆಚ್ಚು ದಿನ 'ಆಲ್ಫಾ ಡಾಗ್'!

'ಕಚ್ಚುವ ಬೀದಿ ನಾಯಿಗಳನ್ನು ಹಿಡಿದು, ನಿಗಾ ಕೇಂದ್ರದಲ್ಲಿ ಇರಿಸಿ, ಅವುಗಳಿಗೆ ಎಬಿಸಿ ಕಾರ್ಯಕ್ರಮದಂತೆ 10 ದಿನ ಚಿಕಿತ್ಸೋಪಚಾರ ಮಾಡಲಾಗುತ್ತದೆ. ಆ ನಂತರ ಅವುಗಳನ್ನು ಮತ್ತೆ ಅದೇ ಸ್ಥಳದಲ್ಲಿ ಬಿಡಲಾಗುತ್ತದೆ. ಅವು ಮತ್ತೆ ಕಚ್ಚುತ್ತಿವೆ. ಹೀಗಾಗಿ, 'ಅಂತಹ 'ಆಲ್ಫಾ ಡಾಗ್'ಗಳನ್ನು ಹೆಚ್ಚು ದಿನ ನಿಗಾ ಕೇಂದ್ರದಲ್ಲಿ ಉಳಿಸಿಕೊಳ್ಳಲು ನಿಯಮಗಳಲ್ಲಿರುವ ಅವಕಾಶಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಬಿಬಿಎಂಪಿ ಪಶುಸಂಗೋಪನೆ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

'ನಿಗಾ ಕೇಂದ್ರದಲ್ಲಿರುವ 'ಆಲ್ಫಾ ಡಾಗ್' ಗಳ ವರ್ತನೆಯಲ್ಲಿ ಸುಧಾರಣೆ ಕಂಡ ಮೇಲೆ ಅವುಗಳನ್ನು ಬಿಡುವುದು ಎಂಬ ಯೋಜನೆ ಇದೆ. ಆದ್ದರಿಂದ, ವೈದ್ಯರು, ಪ್ರಾಣಿದಯಾ ಸಂಘಟನೆಯ ಎಲ್ಲರನ್ನೂ ಒಳಗೊಂಡ ಒಂದು ಸಮಿತಿ ರಚಿಸಿ, ಆ ಸಮಿತಿಯ ನಿರ್ಧಾರದಂತೆ ಎಷ್ಟು ದಿನ 'ಆಲ್ಫಾ ಡಾಗ್'ಗಳನ್ನು ನಿಗಾ ಕೇಂದ್ರದಲ್ಲಿ ಉಳಿಸಿಕೊಳ್ಳಬೇಕು ಎಂದು ತೀರ್ಮಾನಿಸಲಾಗುತ್ತದೆ. ಈ ಬಗ್ಗೆ ಚರ್ಚೆ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಅಂತಿಮಗೊಳ್ಳುವ ಸಾಧ್ಯತೆ ಇದೆ' ಎಂದರು.

ವಿದ್ಯಾರ್ಥಿಗಳಿಬ್ಬರಿಗೆ ಬೀದಿ ನಾಯಿ ಕಡಿತ

ಜ್ಞಾನಭಾರತಿ ಆವರಣದೊಳಗಿರುವ ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಇಬ್ಬರು ವಿದ್ಯಾರ್ಥಿಗಳ ಮೇಲೆ ಬೀದಿ ನಾಯಿಗಳ ಗುಂಪು ದಾಳಿ ಮಾಡಿ ಕಚ್ಚಿದ್ದು, ಒಬ್ಬ ವಿದ್ಯಾರ್ಥಿಗೆ ತೀವ್ರ ಗಾಯಗಳಾಗಿವೆ.

'ಮಂಗಳವಾರ ಬೆಳಿಗ್ಗೆ ವಾಯುವಿಹಾರದ ಸಂದರ್ಭದಲ್ಲಿ ಬೀದಿ ನಾಯಿಗಳು ದಾಳಿ ಮಾಡಿದ್ದರಿಂದ ವಿದ್ಯಾರ್ಥಿಯೊಬ್ಬರಿಗೆ 10 ಕಡೆ ಗಂಭೀರ ಸ್ವರೂಪದ ಗಾಯಗಳಾಗಿವೆ. ಮಂಗಳವಾರ ಸಂಜೆಯವರೆಗೂ ವಿದ್ಯಾರ್ಥಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗಿದೆ' ಎಂದು ಬಿಬಿಎಂಪಿ ಪಶುಸಂಗೋಪನೆ ವಿಭಾಗದ ಸಹಾಯಕ ನಿರ್ದೇಶಕರು ತಿಳಿಸಿದರು.

'ಮತ್ತೊಬ್ಬ ವಿದ್ಯಾರ್ಥಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮಂಗಳವಾರ ಸಂಜೆವೇಳೆಗೆ ಇಬ್ಬರೂ ಚೇತರಿಸಿಕೊಂಡಿದ್ದು, ಆರೋಗ್ಯ ಸ್ಥಿರವಾಗಿದೆ' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನ್ನಷ್ಟೇ ಕೇಳುವ ಬಿಲ್ಡರ್‌ಗಳು: ಶಾಸಕ ಮುನಿರತ್ನ

'ಮೆಟ್ರೊ ನಿಲ್ದಾಣಕ್ಕೆ ಮುನಿರತ್ನ ಆ್ಯಂಡ್ ಕಂಪನಿ ಹೆಸರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಟ್ಟ ಹಲಸೂರು ಮೆಟ್ರೊ ನಿಲ್ದಾಣ ನಿರ್ಮಾಣಕ್ಕೆ ಮುನಿರತ್ನ ಹಣ ನೀಡಿದರೆ, ಆ ನಿಲ್ದಾಣಕ್ಕೆ ಮುನಿರತ್ನ ಆ್ಯಂಡ್ ಕಂಪನಿ ಎಂದೇ ಹೆಸರಿಡಲು ಸಿದ್ಧ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕುಟುಕಿದರು.



ಡಿ.ಕೆ. ಶಿವಕುಮಾರ್

ವಿಧಾನ ಸಭೆಯಲ್ಲಿ ಬಿಜೆಪಿಯ ಮುನಿರತ್ನ, 'ಬೆಟ್ಟ ಹಲಸೂರು ಮೆಟ್ರೊ ನಿಲ್ದಾಣ ನಿರ್ಮಾಣಕ್ಕೆ ಎಂಬೆಸಿ ಸಂಸ್ಥೆ ಹಣ ನೀಡಿಲ್ಲ ಎಂಬ ಕಾರಣಕ್ಕೆ ಆ ನಿಲ್ದಾಣ ನಿರ್ಮಾಣ ಕೈಬಿಟ್ಟಿರುವುದು ಎಷ್ಟು ಸರಿ' ಎಂದು ಪ್ರಶ್ನಿಸಿದರು.

ಅದಕ್ಕೆ ಉತ್ತರಿಸಿದ ಶಿವಕುಮಾರ್, 'ಸಿಎಸ್‌ಆರ್ ನಿಧಿಯಿಂದ ಮೆಟ್ರೊ ನಿಲ್ದಾಣ ನಿರ್ಮಿಸಿದರೆ ಆ ನಿಲ್ದಾಣಕ್ಕೆ ನಿಧಿ ನೀಡಿದ ಕಂಪನಿಯ ಹೆಸರಿಡಲು ಅವಕಾಶ ಮಾಡಿಕೊಡುತ್ತೇವೆ. ಈ ಮಾದರಿಗೆ ಪ್ರಧಾನಿ ಕೂಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮುನಿರತ್ನ ಅವರಿಗೆ ಸೇರಿದ 70-80 ಎಕರೆ ಜಮೀನು ಬೆಟ್ಟ ಹಲಸೂರು ನಿಲ್ದಾಣದ ಸಮೀಪವಿದೆ. ಅದಕ್ಕೆ ಅವರು ಈ ಪ್ರಶ್ನೆ ಎತ್ತಿದ್ದಾರೆ' ಎಂದರು.

ಮಧ್ಯಪ್ರವೇಶಿಸಿದ ಮುನಿರತ್ನ, 'ಶಿವಕುಮಾರ್ ಅವರು ಬಿಲ್ಡರ್‌ಗೆ ಕರೆ ಮಾಡಿ ಹಣ ಕಟ್ಟುತ್ತೀಯಾ ಇಲ್ಲವಾ ಎಂದು ಕೇಳಿದ 24 ತಾಸಿನಲ್ಲಿ ಎಂಬೆಸಿ ಬಿಲ್ಡರ್‌ನವರು ಹಣ ಕಟ್ಟುತ್ತಾರೆ. ಶಿವಕುಮಾರ್ ಅವರ ಮಾತನ್ನಷ್ಟೇ ಬಿಲ್ಡರ್‌ಗಳು ಕೇಳುತ್ತಾರೆ' ಎಂದರು. ಅದಕ್ಕೆ ಶಿವಕುಮಾರ್, 'ಆ ಭಾಗದಲ್ಲಿ ಎಂಬೆಸಿ ಅವರದ್ದು ಸುಮಾರು 250 ಎಕರೆ ಜಮೀನಿದೆ. ಅವರು ಮೆಟ್ರೊ ನಿಲ್ದಾಣಕ್ಕೆ ತಮ್ಮ ಹೆಸರು ಬರಬೇಕೆಂದು ಒಪ್ಪಂದ ಮಾಡಿಕೊಂಡಿದ್ದಾರೆ. ₹ 140 ಕೋಟಿ ಮೊತ್ತದಲ್ಲಿ ನಿರ್ಮಿಸಲಾಗುವ ಮೆಟ್ರೊ ನಿಲ್ದಾಣಕ್ಕೆ ₹ 120 ಕೋಟಿ ನೀಡುವುದಾಗಿ ಹೇಳಿದ್ದರು. ಅದರಲ್ಲಿ ಕೇವಲ ₹ 1 ಕೋಟಿ ನೀಡಿದ್ದಾರೆ' ಎಂದು ತಿಳಿಸಿದರು.

ಆಗ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಎಂಬೆಸಿಯವರು ಬಾಕಿ ₹ 119 ಕೋಟಿ ನೀಡಲಿ ಎಂದು ಡಿಸಿಎಂ ಧಮ್ಕಿ ಹಾಕಲಿ ಎಂದಷ್ಟೇ ಮುನಿರತ್ನ ಹೇಳುತ್ತಿದ್ದಾರೆ' ಎಂದರು.

ಅದಕ್ಕೆ ಶಿವಕುಮಾರ್, 'ನಾನೇಕೆ ಧಮ್ಕಿ ಹಾಕಲಿ? ಬೇಕಾದರೆ ಒಪ್ಪಂದ ರದ್ದು ಮಾಡೋಣ. ಮುನಿರತ್ನ ಹಣ ಕೊಟ್ಟರೆ 'ಮುನಿರತ್ನ ಆ್ಯಂಡ್ ಕಂಪನಿ' ಎಂದೇ ಹೆಸರಿಡೋಣ' ಎಂದರು.

'ಈ ಮೆಟ್ರೊ ನಿಲ್ದಾಣದ ಬಗ್ಗೆ ಸ್ಥಳೀಯ ಶಾಸಕ ಕೃಷ್ಣ ಬೈರೇಗೌಡ ಕೂಡ ನನ್ನ ಜೊತೆ ಚರ್ಚಿಸಿದ್ದಾರೆ. ಕೃಷ್ಣ ಬೈರೇಗೌಡ ಅವರದ್ದು ಸಾರ್ವಜನಿಕ ಬೇಡಿಕೆ, ಮುನಿರತ್ನ ಅವರದ್ದು ಖಾಸಗಿ ಬೇಡಿಕೆ. ಇಷ್ಟೇ ವ್ಯತ್ಯಾಸ' ಎಂದೂ ತಿರುಗೇಟು ನೀಡಿದರು.

'ಅಂತರ್ಜಲ ಮರುಪೂರಣ: ನೀತಿ ರೂಪಿಸಲು ಚರ್ಚೆ'

'ನಗರದಲ್ಲಿ 2,395 ಕಡೆ ಮಳೆ ನೀರುಗಾಲುವೆ ಒತ್ತುವರಿ ತೆರವುಗೊಳಿಸಿದ್ದೇವೆ. ಅಂತರ್ಜಲ ಮರುಪೂರಣ ಕೂಡ ಇಲ್ಲಿ ಸಮಸ್ಯೆಯಾಗಿದೆ. ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳಲ್ಲಿ ಸಂಪೂರ್ಣ ಕಾಂಕ್ರೀಟ್ ಹಾಕುತ್ತಿದ್ದಾರೆ. ಇದಕ್ಕೆ ನೀತಿ ರೂಪಿಸಲು ಮುಂದಾಗಿದ್ದೇವೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಬೆಂಗಳೂರಿನಲ್ಲಿ ಚರಂಡಿ ವ್ಯವಸ್ಥೆ ಸರಿಯಿಲ್ಲದ ಕಾರಣ, ಮಳೆ ಬಂದಾಗ ಅಂಡರ್‌ಪಾಸ್ ಸೇರಿದಂತೆ ಎಲ್ಲೆಡೆ ನೀರು ನಿಲ್ಲುತ್ತದೆ. ಇನ್ನು ಕಾಲುವೆಗಳ ಮೂಲಕ ಮಳೆನೀರು ಇಂಗು ಬಾವಿ ರೂಪಿಸಬೇಕು' ಎಂದು ಬಿಜೆಪಿಯ ಸಿ.ಎನ್. ಅಶ್ವತ್ಥ್ ನಾರಾಯಣ ಅವರ ಸಲಹೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಮಳೆನೀರು ಇಂಗಿಸುವ ವಿಚಾರವಾಗಿ ಚರ್ಚಿಸಿ ತೀರ್ಮಾನಿಸೋಣ' ಎಂದು ಹೇಳಿದರು.

'ಆನ್‌ಲೈನ್ ಗೇಮಿಂಗ್: ವರದಿ ಬಂದ ಬಳಿಕ ಕ್ರಮ'

ಬೆಂಗಳೂರು: 'ಆನ್‌ಲೈನ್ ಗೇಮಿಂಗ್‌ಗೆ ನಿಯಂತ್ರಣ ಹೇರುವ ಸಂಬಂಧ ಡಿಜಿಪಿ ಪ್ರಣಬ್ ಮೊಹಾಂತಿ ನೇತೃತ್ವದಲ್ಲಿ ರಚಿಸಲಾಗಿರುವ ಸಮಿತಿ ಸೆಪ್ಟೆಂಬರ್‌ನಲ್ಲಿ ವರದಿ ನೀಡಲಿದೆ. ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಎಸ್. ಸುರೇಶ್ ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಮಾದಕ ವಸ್ತುಗಳ ವ್ಯಸನದ ರೀತಿಯಲ್ಲೇ ಆನ್‌ಲೈನ್ ಗೇಮಿಂಗ್ ಕೂಡ ಯುವಜನತೆಯ ಭವಿಷ್ಯಕ್ಕೆ ದೊಡ್ಡ ಹಾನಿ ಉಂಟುಮಾಡುತ್ತಿದೆ. ಆ ಕಾರಣಕ್ಕೆ 2021ರಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತಂದು ಕೆಲವು ಅಂಶಗಳನ್ನು ಸೇರಿಸಲಾಗಿತ್ತು. ಇದನ್ನು ಹೈಕೋರ್ಟ್ 2022ರ ಫೆ. 14ರಂದು ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿದ್ದು, ವಿಚಾರಣೆ ಬಾಕಿ ಇದೆ' ಎಂದರು.

'ಆನ್‌ಲೈನ್ ಗೇಮ್ ನಡೆಸುವವರ ಜೊತೆ ಕಳೆದ ಏಪ್ರಿಲ್ 8ರಂದು ಸಭೆ ನಡೆಸಿ ಚರ್ಚಿಸಿದ್ದು, ನಿಯಂತ್ರಣಕ್ಕೆ ಅವರೂ ಒಪ್ಪಿದ್ದಾರೆ. ಅದರಂತೆ ಪ್ರಣಬ್ ಮೊಹಾಂತಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. 'ಗೇಮ್ ಆಫ್ ಚಾನ್ಸ್', 'ಗೇಮ್ ಆಫ್ ಸ್ಕಿಲ್' ಸೇರಿದಂತೆ ಇತರೆ ವಿಚಾರಗಳ ಬಗ್ಗೆ ಸ್ಪಷ್ಟತೆ ಬೇಕಿದೆ' ಎಂದರು.

'ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥ ವಕೀಲರನ್ನು ನಿಯೋಜಿಸಿ ತಡೆಯಾಜ್ಞೆ ತೆರವುಗೊಳಿಸಲು ಕ್ರಮ ವಹಿಸಬೇಕು. ಜತೆಗೆ ಸಮಿತಿಯಿಂದ ಶೀಘ್ರವಾಗಿ ವರದಿಯಿಂದ ಪಡೆದು ನಿಯಂತ್ರಣ ಹೇರಬೇಕು' ಎಂದು ಬಿಜೆಪಿಯ ಸುರೇಶ್ ಕುಮಾರ್ ಒತ್ತಾಯಿಸಿದರು. ಆರಗ ಜ್ಞಾನೇಂದ್ರ ಕೂಡ ದನಿಗೂಡಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ, 'ಆನ್‌ಲೈನ್ ಗೇಮಿಂಗ್ ವ್ಯವಹಾರವು 4.5 ಬಿಲಿಯನ್ ಡಾಲರ್‌ನಷ್ಟಿದ್ದು, ಮೂರು ವರ್ಷಗಳಲ್ಲಿ ಒಂಬತ್ತು ಬಿಲಿಯನ್ ಡಾಲರ್‌ಗೆ ವಿಸ್ತರಿಸಲಿದೆ. ದೇಶದಲ್ಲಿ 59 ಕೋಟಿ ಮಂದಿ ಆನ್‌ಲೈನ್ ಗೇಮಿಂಗ್ ಆಡುತ್ತಿದ್ದು, 14 ಕೋಟಿ ಮಂದಿ ಹಣ ಕೊಟ್ಟು ಆನ್‌ಲೈನ್ ಗೇಮ್ ಆಡುತ್ತಾರೆ. ಇತ್ತೀಚೆಗೆ ಪೂರ್ವ ಯುರೋಪ್, ಚೀನಾ, ದಕ್ಷಿಣ ಅಮೆರಿಕ ಮೂಲದ ವಿದೇಶಿ ಸರ್ವರ್ ಆಧಾರಿತ ಆನ್‌ಲೈನ್ ಗೇಮಿಂಗ್ ಆಡುತ್ತಿದ್ದಾರೆ. ಅದರಲ್ಲಿ ನಷ್ಟವಾದರೆ ಪತ್ತೆ ಹಚ್ಚುವುದು ಕೂಡ ಕಷ್ಟ. ಹೀಗಾಗಿ, ಕೇಂದ್ರ- ರಾಜ್ಯ ಸರ್ಕಾರ ಒಟ್ಟಾಗಿ ನಿಯಂತ್ರಣ ಹೇರಬೇಕು' ಎಂದು ಹೇಳಿದರು.

ಈ ವಿಷಯದಲ್ಲಿ ಅರ್ಧ ಗಂಟೆ ವಿಶೇಷ ಚರ್ಚೆಗೆ ಅವಕಾಶ ನೀಡುವುದಾಗಿ ಪ್ರಕಟಿಸಿದ ಸಭಾಧ್ಯಕ್ಷ ಯು.ಟಿ. ಖಾದರ್, ಈ ಚರ್ಚೆಗೆ ತೆರೆ ಎಳೆದರು.

ಪ್ರತಿಧ್ವನಿಸಿದ ಕಾಡುಗೋಡಿ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೋಡಿ ಪ್ಲಾಂಟೇಷನ್‌ನ ಸರ್ವೆ ನಂಬರ್ 1ರಲ್ಲಿ 711 ಎಕರೆ ಇದ್ದರೂ, ಬಡ ರೈತರಿಗೆ ಸೇರಿದ 120 ಎಕರೆ ಕೃಷಿ ಜಮೀನನ್ನು ಅರಣ್ಯ ಇಲಾಖೆ ತೆರವುಗೊಳಿಸಿದೆ ಎಂಬ ವಿರೋಧ ಪಕ್ಷಗಳ ಆರೋಪ ವಿಧಾನ-ಪರಿಷತ್‌ನಲ್ಲಿ ಎರಡು ಗಂಟೆಗಳ ಚರ್ಚೆಗೆ ದಾರಿ ಮಾಡಿಕೊಟ್ಟಿತು.

ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, 'ಸ್ವಾತಂತ್ರ್ಯ ಪೂರ್ವದಲ್ಲಿ (1901) ಕಾಡುಗೋಡಿಯ 711 ಎಕರೆಯನ್ನು ಮೀಸಲು ಅರಣ್ಯ ಪ್ರದೇಶ ಎಂದು ಘೋಷಿಸಲಾಗಿತ್ತು. ಆರೇಳು ದಶಕಗಳ ಹಿಂದೆಯೇ ಇಲ್ಲಿ ಹಲವರಿಗೆ ಜಮೀನು ಮಂಜೂರು ಮಾಡಲಾಗಿತ್ತು. ರೈತರಿಗೆ ಪರಿಹಾರ ನೀಡಿ 153 ಎಕರೆಯನ್ನು ಭೂಸ್ವಾಧೀನಪಡಿಸಿಕೊಂಡಿದ್ದ ಕೆಐಎಡಿಬಿ, ಕೈಗಾರಿಕೆಗಳಿಗೆ ನೀಡಿದೆ. ರೈಲ್ವೆ ಯೋಜನೆಗೆ 228 ಎಕರೆ ನೀಡಲಾಗಿದೆ. ರಿಯಲ್ ಎಸ್ಟೇಟ್‌ಗೆ, ಬೆಂಗಳೂರು ಜಲ ಮಂಡಳಿಗೆ, ಮೆಟ್ರೊ ರೈಲು ಯೋಜನೆಗೂ ಜಮೀನು ನೀಡಲಾಗಿದೆ. ವ್ಯವಸಾಯ ಸೇವಾ ಸಹಕಾರ ಸಂಘ, ಗೃಹ ನಿರ್ಮಾಣ ಸಂಘಗಳ ಮೂಲಕ ಸಾವಿರಾರು ಜನರು ಮನೆಗಳನ್ನು ನಿರ್ಮಾಣ ಮಾಡಿಕೊಂಡು ವಾಸ ಮಾಡುತ್ತಿದ್ದಾರೆ. ಆದರೆ, ಅರಣ್ಯ ಇಲಾಖೆ 2016ರ ನಂತರದ ನಿಯಮಗಳನ್ನು ಬಳಸಿಕೊಂಡು ಬಡ ರೈತರ 120 ಎಕರೆ ತೆರವುಗೊಳಿಸಿದೆ. ತಾಕತ್ತಿದ್ದರೆ ಎಲ್ಲ ಅರಣ್ಯ ಭೂಮಿ ಮರುವಶಕ್ಕೆ ಪಡೆಯಿರಿ' ಎಂದು ಸವಾಲು ಹಾಕಿದರು.

ಹಳೆಯ ನಿಯಮಗಳನ್ನು ಅನ್ವಯ ಮಾಡಿ ಬಡ ರೈತರಿಗೆ ಅನ್ಯಾಯ ಮಾಡಬಾರದು. ಕಂದಾಯ ಇಲಾಖೆ ಮಂಜೂರು ಮಾಡಿದ ಮೇಲೆ ತೆರವು ಏಕೆ? ಸರ್ಕಾರವೇ ಜನರ ಪಾಲಿಗೆ ಭಸ್ಮಾಸುರ ಆಗಬಾರದು

ಸಿ.ಟಿ. ರವಿ, ಬಿಜೆಪಿ

ಅಂಕಿ ಅಂಶಗಳು

- **711** ಎಕರೆ — ಕಾಡುಗೋಡಿ ಅರಣ್ಯ
- **228** ಎಕರೆ — ರೈಲ್ವೆ ಯೋಜನೆಗೆ
- **153** ಎಕರೆ — ಕೆಐಎಡಿಬಿಗೆ
- **120** ಎಕರೆ — ಒತ್ತುವರಿ ತೆರವು
- **45** ಎಕರೆ — ಮೆಟ್ರೊ ರೈಲು ಯೋಜನೆಗೆ

ಇದಕ್ಕೆ ಉತ್ತರಿಸಿದ ಅರಣ್ಯ ಸಚಿವ ಈಶ್ವರ ಖಂಡ್ರೆ, ಅರಣ್ಯ ಕಾನೂನು, ಕೋರ್ಟ್ ಆದೇಶಗಳ ಪ್ರಕಾರವೇ ಕಾಡುಗೋಡಿಯಲ್ಲಿ ಒತ್ತುವರಿಯಾಗಿದ್ದ 120 ಎಕರೆ ಅರಣ್ಯ ಭೂಮಿಯನ್ನು ಮರುವಶಪಡಿಸಿಕೊಳ್ಳಲಾಗಿದೆ. ಯಾವುದೇ ಕಟ್ಟಡ, ವಾಸಸ್ಥಳ ತೆರವು ಮಾಡಿಲ್ಲ. ಒಂದು ಬಾರಿ ಅರಣ್ಯ ಎಂದು ಅಧಿಸೂಚನೆಯಾದ ಪ್ರದೇಶ ಎಂದಿಗೂ ಅರಣ್ಯ ಭೂಮಿ. ಒತ್ತುವರಿ ತೆರವು ಮಾಡಿ, ಗಡಿ ಗುರುತಿಸಲಾಗಿದೆ. ತಾತ್ಕಾಲಿಕ ತಡೆ ಗೋಡೆ ನಿರ್ಮಿಸಿ, ಸ್ಥಳೀಯ ಪ್ರಭೇದದ ಸಸಿಗಳನ್ನು ನೆಡಲಾಗಿದೆ ಎಂದರು.

ಸರ್ಕಾರದ ಅಂಗ ಸಂಸ್ಥೆಗಳಿಗೆ ನೀಡಿದ ಭೂಮಿಗೆ ಪರ್ಯಾಯ ಭೂಮಿ ಪಡೆಯಲಾಗುತ್ತದೆ. 1985ರಲ್ಲಿ ಕೆಐಎಡಿಬಿ ಭೂಸ್ವಾಧೀನ ಪಡಿಸಿಕೊಂಡಾಗ ಅರಣ್ಯ ಇಲಾಖೆ ಗಮನಹರಿಸಿರಲಿಲ್ಲ. ನಂತರ ಈ ವಿಚಾರ ಕೋರ್ಟ್‌ನಲ್ಲಿದೆ. ಮೆಟ್ರೊ ರೈಲು ಯೋಜನೆಗೆ 45 ಎಕರೆಯನ್ನು 30 ವರ್ಷಗಳಿಗೆ ಗುತ್ತಿಗೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

'ಪ್ರಕರಣ ಕುರಿತು ಸದನ ಸಮಿತಿ ರಚಿಸಬೇಕು' ಎಂದು ಬಿಜೆಪಿಯ ಸಿ.ಟಿ. ರವಿ, ಕೇಶವ ಪ್ರಸಾದ್ ಸೇರಿದಂತೆ ಹಲವರು ಪಟ್ಟುಹಿಡಿದರು.

'ತಮ್ಮ ಬಳಿ ಇರುವ ಎಲ್ಲ ದಾಖಲೆ ಕೊಡಿ. ಕಾನೂನು ಇಲಾಖೆ, ಅಡ್ವೊಕೇಟ್ ಜನರಲ್ ಅಭಿಪ್ರಾಯ ಪಡೆದ ನಂತರ ಮತ್ತೆ ಚರ್ಚೆ ನಡೆಸಲಾಗುವುದು' ಎಂದು ಸಚಿವ ಈಶ್ವರ ಖಂಡ್ರೆ ಚರ್ಚೆಗೆ ತೆರೆ ಎಳೆದರು.

'ಕೇಂದ್ರದಿಂದ 2.84 ಲಕ್ಷ ಟನ್ ಗೊಬ್ಬರ ಬಾಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ 2.84 ಲಕ್ಷ ಟನ್‌ಗಳಷ್ಟು ಗೊಬ್ಬರ ಬಾಕಿ ಉಳಿಸಿಕೊಂಡಿದೆ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ವಿಧಾನ ಪರಿಷತ್ತಿನ ಮಂಗಳವಾರದ ಕಲಾಪದ ಶೂನ್ಯವೇಳೆಯಲ್ಲಿ ಜೆಡಿಎಸ್‌ನ ಟಿ.ಎ. ಶರವಣ ಅವರು ರಸಗೊಬ್ಬರದ ಕೊರತೆ ಬಗ್ಗೆ ಪ್ರಸ್ತಾಪಿಸಿದರು. 'ರಾಜ್ಯ ಸರ್ಕಾರವು ಅಗತ್ಯವಿರುವಷ್ಟು ಪ್ರಮಾಣದ ಗೊಬ್ಬರವನ್ನು ಪೂರೈಸಿ ಎಂದು ಕೇಂದ್ರಕ್ಕೆ ಮೊದಲೇ ಪತ್ರ ಬರೆದು ಸಿದ್ಧತೆ ಮಾಡಿಕೊಳ್ಳಬೇಕಿತ್ತು. ಇದರಿಂದ ರೈತರು ತೊಂದರೆ ಅನುಭವಿಸುವುದು ತಪ್ಪುತ್ತಿತ್ತು' ಎಂದರು.

ಚಲುವರಾಯಸ್ವಾಮಿ ಅವರು, 'ಈ ಸಾಲಿನ ಮುಂಗಾರಿಗೆ ರಾಜ್ಯಕ್ಕೆ 12.95 ಲಕ್ಷ ಟನ್‌ಗಳಷ್ಟು ಗೊಬ್ಬರದ ಅಗತ್ಯವಿದೆ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಆದರೆ ಕೇಂದ್ರವು ರಾಜ್ಯಕ್ಕೆ ಮಂಜೂರು ಮಾಡಿದ್ದು 11.17 ಲಕ್ಷ ಟನ್ ಮಾತ್ರ. ಮುಂಚಿತವಾಗಿ ಮನವಿ ಸಲ್ಲಿಸಿದ್ದರೂ, ಅದಕ್ಕಿಂತ ಕಡಿಮೆ ಗೊಬ್ಬರ ಮಂಜೂರು ಮಾಡಿತು' ಎಂದರು.

'ಗೊಬ್ಬರ ಆಮದು, ತಯಾರಿಕೆ, ಹಂಚಿಕೆ ಎಲ್ಲವೂ ಕೇಂದ್ರ ಸರ್ಕಾರದ್ದೇ ಹೊಣೆಗಾರಿಕೆ. ಏಪ್ರಿಲ್-ಜುಲೈ ಅವಧಿಗೆ ಹಂಚಿಕೆಯಾಗಿದ್ದ ಗೊಬ್ಬರದಲ್ಲಿ ಕೇಂದ್ರವು ನಮಗೆ 1.27 ಲಕ್ಷ ಟನ್‌ಗಳಷ್ಟು ಕಡಿಮೆ ಗೊಬ್ಬರ ಪೂರೈಸಿತ್ತು. ಹೀಗಿದ್ದೂ ಲಭ್ಯವಿರುವ ಗೊಬ್ಬರವನ್ನು ಸಮರ್ಥವಾಗಿ ವಿತರಣೆ ಮಾಡುತ್ತಿದ್ದೆವು. ವಿರೋಧ ಪಕ್ಷಗಳ ನಾಯಕರು ಸುಮ್ಮನೆ 'ಗೊಬ್ಬರ ಕೊರತೆ' ಎಂದು ಆರೋಪ ಮಾಡಿದ್ದರಿಂದ ಸಮಸ್ಯೆ ಎದುರಾಯಿತು. ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ನಮಗೆ ಹಂಚಿಕೆಯಾದ ಒಟ್ಟು ಗೊಬ್ಬರದಲ್ಲಿ ಇನ್ನೂ 2.84 ಲಕ್ಷ ಟನ್ ಪೂರೈಕೆಯಾಗಿಲ್ಲ' ಎಂದರು.

ಹಸಿರು ಬೆಂಗಳೂರಿಗೆ ಪೂರಕವಾಗಿ ಅರಣ್ಯ ಇಲಾಖೆ ಕಾರ್ಯಕ್ರಮ

ಪರಿಸರ ಸಮತೋಲನಕ್ಕೆ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಸಿರು ಬೆಂಗಳೂರಿಗೆ ಪೂರಕವಾಗಿ ಯೋಜನೆಗಳನ್ನು ರೂಪಿಸುವ ಪ್ರಯತ್ನಗಳು ಅರಣ್ಯ, ಪರಿಸರ ಇಲಾಖೆಯಿಂದ ಶುರುವಾಗಿವೆ.

ಕರ್ನಾಟಕ ಅರಣ್ಯ ವನ್ಯಜೀವಿ ಮತ್ತು ಹವಾಮಾನ ಬದಲಾವಣೆ ಪ್ರತಿಷ್ಠಾನದ ಮೂಲಕ ಬೆಂಗಳೂರು ನಗರದಲ್ಲಿ ಜಲಸಂರಕ್ಷಣೆ, ಹಸಿರು ಹೊದಿಕೆ ಪ್ರಮಾಣ ಹೆಚ್ಚಳ, ಸದ್ಯ ಇರುವ ಅರಣ್ಯ ರಕ್ಷಣೆ, ಪರಿಸರ ಮಾಲಿನ್ಯ ತಗ್ಗಿಸುವ ನೀಲನಕ್ಷೆ ತಯಾರಿಸಿ ಖಾಸಗಿ ಸಹಭಾಗಿತ್ವ ಪಡೆಯುವುದಕ್ಕೆ ಒತ್ತು ನೀಡಲಾಗಿದೆ.

ಅರಣ್ಯ ವನ್ಯಜೀವಿ ಮತ್ತು ಪರಿಸರ ಸಂರಕ್ಷಣೆ ಉತ್ತೇಜಿಸಲು ಮಂಗಳವಾರ ನಗರದಲ್ಲಿ ನಡೆದ ಪಾಲುದಾರರ ಪ್ರಥಮ ಸಮ್ಮೇಳನ ಉದ್ಘಾಟಿಸಿದ ಸಚಿವ ಈಶ್ವರ ಖಂಡ್ರೆ, ಬೆಂಗಳೂರು ನಗರದಲ್ಲಿ ಹಸಿರು ಹೊದಿಕೆ ಹೆಚ್ಚಿಸುವ ಸಂಬಂಧ ಅಧ್ಯಯನ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ರಾಜಧಾನಿಯ ಜನಸಂಖ್ಯೆ 1.50 ಕೋಟಿ ಸಮೀಪಿಸುತ್ತಿದೆ. ದೆಹಲಿಯ ರೀತಿ ಗ್ಯಾಸ್ ಛೇಂಬರ್ ಆಗದಂತೆ ಕರ್ನಾಟಕ ರೂಪಿಸಿರುವ ಯೋಜನೆಗಳ ಜಾರಿಗೆ ಸಾಂಸ್ಥಿಕ ಸಂಸ್ಥೆಗಳು ಕೈಜೋಡಿಸ ಬೇಕು ಎಂದು ಸಲಹೆ ನೀಡಿದರು.

ಮುಖ್ಯಾಂಶಗಳು

- ಖಾಸಗಿ ಸಹಭಾಗಿತ್ವ ಪಡೆಯಲು ನಿರ್ಧಾರ
- ಮಹಾನಗರದಲ್ಲಿವೆ 12 ಲಕ್ಷದಿಂದ 14 ಲಕ್ಷ ಮರಗಳು

ಲಾಲ್‌ಬಾಗ್, ಕಬ್ಬನ್ ಪಾರ್ಕ್ ನಿರ್ಮಾಣವಾಗಿ ಶತಮಾನ ಗಳು ಕಳೆದಿವೆ. ಆ ಬಳಿಕ ಬೆಂಗಳೂರಿ ನಲ್ಲಿ ಮತ್ತೊಂದು ಬೃಹತ್ ಉದ್ಯಾನ ಆಗಿರಲಿಲ್ಲ. ಈಗ ಯಲಹಂಕ ಬಳಿಯ ಮಾದಪ್ಪನ ಹಳ್ಳಿಯಲ್ಲಿ 153 ಎಕರೆ ಪ್ರದೇಶದಲ್ಲಿ ₹250 ಕೋಟಿ ವೆಚ್ಚದಲ್ಲಿ ಜೈವಿಕ ಉದ್ಯಾನ ನಿರ್ಮಿಸಲು ಸರ್ಕಾರ ಮುಂದಾಗಿದೆ ಎಂದರು.



ಹವಾಮಾನ ವೈಪರೀತ್ಯಗಳ ನಿರ್ವಹಣೆ ಯೋಜನೆ ಮಂಡಿಸಿದ ಎಪಿಸಿಸಿಎಫ್ ವಿಜಯಮೋಹನರಾಜ್, ಬೆಂಗಳೂರಿನಲ್ಲಿ 12 ಲಕ್ಷದಿಂದ 14 ಲಕ್ಷ ಮರಗಳಿವೆ. ಅವುಗಳಿಗೆ ಆಧಾರ್ ಮಾದರಿಯಲ್ಲೇ ಗುರುತು ನೀಡುವ ಯೋಜನೆಯೂ ಇದೆ. ಸ್ಮಾರ್ಟ್ ಟೀ ಟ್ಯಾಗ್‌ನಿಂದ ಮರ ಸಂರಕ್ಷಣೆ ವ್ಯವಸ್ಥಿತವಾಗಿ ಸಾಧ್ಯವಾಗಲಿದೆ. ಬೆಂಗಳೂರು ಸುತ್ತಮುತ್ತ 27900 ಹೆಕ್ಟೇರ್ ಅರಣ್ಯ ಪ್ರದೇಶವಿದೆ. 900 ಕಿ.ಮಿ ಅರಣ್ಯ ಗಡಿಯಿದೆ. ಬೆಂಗಳೂರು ಜಲಮೂಲ ಉಳಿಸಲು ಮರಗಳು, ಅರಣ್ಯ ಪಾತ್ರವೂ ಹಿರಿದು ಎಂದರು.

ಅನ್ ಬಾಕ್ಸಿಂಗ್ ಯೋಜನೆ ರೂಪಿಸಿದ ಉದ್ಯಮಿ ಪ್ರಶಾಂತ್ ಪ್ರಕಾಶ್, ಬೆಂಗಳೂರಿನ 100 ಕೆರೆಗಳ ಸಂರಕ್ಷಣೆಗೆ ನಮ್ಮ ಪ್ರಯತ್ನ ನಡೆದಿದೆ. 100 ಸೂಕ್ಷ್ಮ ಅರಣ್ಯ ಪ್ರದೇಶ ರಚನೆಗೆ ಪೂರಕವಾಗಿ ಸಸಿ ನೆಡುವ ವಿಸ್ತೃತ ಕಾರ್ಯ ಕೈಗೆತ್ತಿಕೊಂಡಿದ್ದೇವೆ. ಉದ್ಯಮಿಗಳ ಗುಂಪು ಇದಕ್ಕಾಗಿ ಕೆಲಸ ಮಾಡುತ್ತಿದ್ದು, ಅರಣ್ಯ ಇಲಾಖೆ ಫೌಂಡೇಷನ್ ಮೂಲಕವೂ ಸಹಭಾಗಿತ್ವ ಹೊಂದಲಿದೆ ಎಂದು ಹೇಳಿದರು.

ಐಸಿಐಸಿಐ ಫೌಂಡೇಷನ್‌ನ ವೆಂಕಟೇಶ್, ಡಬ್ಲ್ಯುಎಂಜಿಯ ಶ್ರೀಧರ್ ಅವರು ತಮ್ಮ ಸಂಸ್ಥೆ ಕೈಗೊಂಡ ಸಹಭಾಗಿತ್ವದ ವಿವರಣೆ ನೀಡಿದರು.

ಮುರದಟ್ಟಿಯ ಕಿರುಬನಕಲ್ಲು ಗುಡ್ಡದಲ್ಲಿ ಹುಲಿ ಮರಿ ಮೃತಪಟ್ಟಿದೆ

ಹಸಿವು: ಎರಡು ಹುಲಿ ಮರಿ ಸಾವು

ಹನೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಕಾವೇರಿ ವನ್ಯಧಾಮದ ಶಾಗ್ಯ ಗಸ್ತಿನ ಹೊಳೆ ವ್ಯಾಪ್ತಿಯ ಮುರದಟ್ಟಿ ಕಿರುಬನಕಲ್ಲು ಗುಡ್ಡದಲ್ಲಿ ಎರಡು ಹುಲಿ ಮರಿ ಮೃತಪಟ್ಟಿವೆ.

ಸೋಮವಾರ ಗಂಡು ಹುಲಿಮರಿ ಕಳೇಬರ ಸಿಕ್ಕಿತ್ತು. ಮಂಗಳವಾರ ಅರಣ್ಯ ಇಲಾಖೆ ಸಿಬ್ಬಂದಿ, ಪಶು ವೈದ್ಯಾಧಿಕಾರಿಗಳ ತಂಡ ಕೂಂಬಿಂಗ್ ನಡೆಸಿದಾಗ 50 ಮೀಟರ್ ದೂರದ ಗುಹೆಯೊಂದರ ಬಳಿ ಮತ್ತೊಂದು ಹೆಣ್ಣು ಹುಲಿಮರಿ ಕಳೇಬರ ದೊರಕಿತು.

'ಇವು 15 ದಿನ ಅವಧಿಯವು. ತಾಯಿಯಿಂದ ಬೇರ್ಪಟ್ಟು ಹಸಿವಿನಿಂದ ಸತ್ತಿರುವುದು ಮರಣೋತ್ತರ ಪರೀಕ್ಷೆಯಲ್ಲಿ ತಿಳಿದು ಬಂದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ವಯಂಚಾಲಿತ ಆಸ್ತಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಧಾರ್ ಆಧಾರಿತ ಸ್ವಯಂಚಾಲಿತ ಆಸ್ತಿ ವರ್ಗಾವಣೆ ವ್ಯವಸ್ಥೆಯನ್ನು ಪ್ರಾರಂಭಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ.

'ನಾಗರಿಕರು ತಮ್ಮ ಆಸ್ತಿಯ ಬಾಕಿ ಇರುವ ಖಾತೆ ವರ್ಗಾವಣೆಗಳನ್ನು ಆನ್‌ಲೈನ್ ಮೂಲಕ ಈ ಸ್ವಯಂ ಚಾಲಿತವಾಗಿ ತಿದ್ದುಪಡಿಗಳನ್ನು ಪಡೆಯಬಹುದು' ಎಂದು ಹೇಳಿದ್ದಾರೆ.

ವೆಬ್‌ಸೈಟ್ https://bbmpeaasthi.karnataka.gov.in ಗೆ ಭೇಟಿ ನೀಡಿ, 'ಪ್ರಮುಖ ಸೂಚನೆಗಳು' ಅಡಿಯಲ್ಲಿ 'ekhata Automatic Mutations - Get Your Mutation' ಲಿಂಕ್ ಕ್ಲಿಕ್ ಮಾಡಬೇಕು. ಇಪಿಐಡಿ ಸಂಖ್ಯೆಯ ಮೂಲಕ ಬಾಕಿ ಇರುವ ಇ-ಖಾತಾ ಮ್ಯುಟೇಷನ್ ಹುಡುಕಬೇಕು. ಮಾರಾಟಗಾರರು/ನೀಡುವವರು ಮತ್ತು ಖರೀದಿದಾರರು/ ಸ್ವೀಕರಿಸುವವರ ಆಧಾರ್ ಇ-ಕೆವೈಸಿ ದೃಢೀಕರಣ ಮಾಡಬೇಕು. ಮಾರಾಟಗಾರರು/ನೀಡುವವರ ಆಧಾರ್, ಇ-ಖಾತೆ ಹೊಂದಿರುವ ಮಾಲೀಕರ ಆಧಾರ್‌ನೊಂದಿಗೆ ಹೆಸರಿನೊಂದಿಗೆ ಹೊಂದಾಣಿಕೆ ಯಾದರೆ, ಏಳು ದಿನಗಳ ಆಕ್ಷೇಪಣಾ ಅವಧಿ ನಂತರ ವಿವಾದರಹಿತ ಮ್ಯುಟೇಷನ್ ಸ್ವಯಂಚಾಲಿತವಾಗಿ ಅನುಮೋದನೆಗೊಳ್ಳುತ್ತದೆ ಎಂದು ಅವರು ಮಾಹಿತಿ ನೀಡಿದ್ದಾರೆ.

PUBLIC NOTICE

My Client M/s Insightek is desirous of purchasing the Schedule Property Item No.1 & 2 belonging to M/s Die Crafts, Proprietor, L.K. Venkatesh.

Any Person/s having Claim on the Schedule property may contact the undersigned within 15 days from the date of this public notice with supporting documents of their Claim. In the absence of any Claim or Objection my client M/s Insightek may proceed with the purchase of the Said Schedule Property.

SCHEDULE OF PROPERTIES

Item No.1: All that piece and parcel of the vacant property bearing Site No. 90 in Sy. Nos 128 to 134, situated at Nayanappa Setty Palya, 35th Division, No.292 in House List 340, situated in 65th Division, Madivala 2nd Cross Road, N.S. Palya Industrial Area in all measuring East to West 60 feet, or 18.28 Mtrs. North to South 30 Feet, or 9.14 Mtrs, in all measuring 167.22 Square Meters or 1800 Sq. Feet, with RCC Building with Red Oxide measuring 1431 Sq. Feet, presently coming under the administrative jurisdiction of Bruhat Bangalore Mahanagara Palike and having Property No 5 and E-PID No. 9975305606 in ward No. 176 of BTM layout Range, Bangalore with all rights of easements, appurtenances, either latent or patent attached to the Schedule property and bounded as follows:

East by : Pvt. Property
West by : Road
North by : Site No.89
South by : Site No.91

Item No.2: All that piece and parcel of the vacant property bearing Site No. 91 in Sy. Nos 128 to 134, situated at Nayanappa Setty Palya, 35th Division, No.292 in House List No.341, situated in 65th Division, Madivala, 2nd Cross Road, N.S. Palya Industrial Area in all measuring East to West 60 feet, or 18.28 Mtrs. North to South 30 Feet, or 9.14 Mtrs, in all measuring 167.22 Square Meters or 1800 Sq. Feet, with RCC Building with Red Oxide measuring 1431 Sq. Feet, and ACC building with Red Oxide in the First Floor measuring 508 Sq. Feet, presently coming under the administrative jurisdiction of Bruhat Bangalore Mahanagara Palike and having Property No 6 and E-PID No. 9174772128 in ward No. 176 of BTM layout Range, Bangalore with all rights of easements, appurtenances, either latent or patent attached to the Schedule property and bounded as follows:

East by : Pvt. Property
West by : Road
North by : Property No. 90
South by : Road

Shridhara Murthy, Advocate
No.79/80, 1st Floor, Kothanur Dinne Main Road, Oppt to Smartbazar, JP Nagar 7th Phase, Bangalore – 560078.
M/s Insightek- Mob No. +91 98802 77107

ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ **ಶ್ರೀ ತಾರಿಕ್ ಅಜೀಂ ಪ್ರೇಮ್‌ಜಿ, ಶ್ರೀ ಅಜೀಂ ಹಶಮ್ ಪ್ರೇಮ್‌ಜಿ** ಅವರ ಪುತ್ರ, **ನಂ.574, ದೊಡ್ಡಕನ್ನೆಳ್ಳಿ, ಸರ್ಜಾಪುರ ರಸ್ತೆ, ಬೆಂಗಳೂರು-560035** ಇಲ್ಲಿ ವಾಸವಿರುವ ಇವರು ಮೆಸರ್ಸ್ ಟೋಟಲ್ ಎನ್ವಿರಾನ್ಮೆಂಟ್ ಬಿಲ್ಡಿಂಗ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, 'ಇಮ್ಯಾಜಿನ್' ನಂ.78, ITPL ಮುಖ್ಯ ರಸ್ತೆ, EPIP ವಲಯ ವೈಟ್‌ಫೀಲ್ಡ್, ಬೆಂಗಳೂರು ಇವರಿಂದ ಹೂಡಿ ಗ್ರಾಮ, ಕೃಷ್ಣರಾಜಪುರ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ಇಲ್ಲಿನ ನಂ.5172 ಹೊಂದಿರುವ 'WINDMILLS OF YOUR MIND' ಎಂಬ ವಸತಿ ಅಪಾರ್ಟ್‌ಮೆಂಟ್‌ನ 16, 17 ಮತ್ತು 18ನೇ ಮಹಡಿಗಳಲ್ಲಿ ನಿರ್ಮಿಸಿರುವ ಅಪಾರ್ಟ್‌ಮೆಂಟನ್ನು ದಿನಾಂಕ 16ನೇ ಜನವರಿ 2014ರ ಕ್ರಯ ಪತ್ರದಂತೆ ಖರೀದಿಸಿದ್ದಾರೆ, ಹಾಗು ಇದು ಬೆಂಗಳೂರಿನ ಮಹದೇವಪುರದ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ದಸ್ತಾವೇಜು ನಂ.5323-2013-14 ಎಂದು ನೋಂದಾಯಿತವಾಗಿದ್ದು ಬುಕ್ 1 ಮತ್ತು CD ನಂ. MDPD 138ರಲ್ಲಿ ಶೇಖರವಾಗಿದೆ. ಸದರಿಯ ವರು ಪ್ರಸ್ತುತ ಹೇಳುತ್ತಿರುವುದೇನೆಂದರೆ ಷೆಡ್ಯೂಲ್ ಆಸ್ತಿಯ ಮೂಲ ಕ್ರಯ ಪತ್ರವು ಕಳೆದು ಹೋಗಿದ್ದು ಅಥವಾ ಎಲ್ಲಿಯೋ ಇಟ್ಟು ಮರೆತಿರುವುದಾಗಿ ಹೇಳುತ್ತಿದ್ದು ಹಾಗು ಅವರ ಅತ್ಯುತ್ತಮ ಪ್ರಯತ್ನಗಳ ಹೊರತಾಗಿಯೂ ಅವರು ಅದನ್ನು ಪತ್ತೆಹಚ್ಚಲು ಸಾಧ್ಯವಾಗಿಲ್ಲ. ಸದರಿ ಕ್ರಯ ಪತ್ರದ ಮೂಲ ಪ್ರತಿ ಯಾರಿಗಾದರೂ ದೊರಕಿದಲ್ಲಿ ಅದನ್ನು ಮೇಲೆ ತಿಳಿಸಿದ ಶ್ರೀ ತಾರಿಕ್ ಅಜೀಂ ಪ್ರೇಮ್‌ಜಿ ಅವರಿಗೆ ತಲುಪಿಸಲು ಇಲ್ಲಿ ವಿನಂತಿಸಲಾಗಿದೆ. ಸದರಿ **ಶ್ರೀ ತಾರಿಕ್ ಅಜೀಂ ಪ್ರೇಮ್‌ಜಿ** ಅವರು ಮೇಲೆ ಉಲ್ಲೇಖಿಸಲಾದ ಕ್ರಯ ಪತ್ರ ಕಳೆದಿರುವ ಬಗ್ಗೆ ಇಂದು 11/ 08 / 2025 ರಂದು ಸ್ಥಳೀಯ ಪೊಲೀಸರಿಗೆ ದೂರು ನೀಡಿದ್ದಾರೆ. **ಶ್ರೀ ತಾರಿಕ್ ಅಜೀಂ ಪ್ರೇಮ್‌ಜಿ** ಹೊರತುಪಡಿಸಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯು ಸದರಿ ಮೂಲ ಕ್ರಯ ಪತ್ರದೊಂದಿಗೆ ವ್ಯವಹರಿಸಿದರೆ, ಅಂತಹ ವ್ಯವಹಾರಗಳು **ಶ್ರೀ ತಾರಿಕ್ ಅಜೀಂ ಪ್ರೇಮ್‌ಜಿ** ಅಥವಾ ಅವರ ಉತ್ತರಾಧಿಕಾರಿ/ಗಳನ್ನು ಷೆಡ್ಯೂಲ್ ಆಸ್ತಿ ಅಥವಾ ಹಕ್ಕುಗಳಿಗೆ ಬದ್ಧರನ್ನಾಗಿಸುವುದಿಲ್ಲ ಮತ್ತು ಇದರಿಂದ ಆಗುವ ಅಪಾಯ / ತೊಂದರೆಗಳಿಗೆ ಹಾಗು ಖರ್ಚು ವೆಚ್ಚಗಳಿಗೆ ಅವರೇ ನೇರ ಹೊಣೆಗಾರರಾಗಿರುತ್ತಾರೆ.

ಬಿ.ಎಸ್. ಶಂಕರನಾರಾಯಣ್,
ವಕೀಲರು,
ನಂ.101, ಈಡನ್ ಪಾರ್ಕ್, ನಂ.20,
ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು-560001.
ಫೋನ್: 080 - 22217971

ಬೆಂಗಳೂರು ದಿನಾಂಕ: 12-08-2025

ಸದನ: ಮಾತು-ಗಮ್ಮತ್ತು

'ಕೇಂದ್ರಕ್ಕೆ ಹೋಗೋಣ ಬನ್ನಿ'

'ದಾಳಿಂಬೆ ಬೆಳೆಗಾರರಿಗೆ ರಾಜ್ಯ ಸರ್ಕಾರದಿಂದ ಪ್ರತಿ ಹೆಕ್ಟೇರ್‌ಗೆ ₹9,000ದಷ್ಟು ಸಹಾಯಧನ ನೀಡಲಾಗುತ್ತಿದ್ದು, ಇದು ಯಾವುದಕ್ಕೂ ಸಾಲುವುದಿಲ್ಲ. ತೆಂಗು ಬೆಳೆಗಾರರಿಗೆ ಹೆಕ್ಟೇರ್‌ಗೆ ₹35,000 ನೀಡಲಾಗುತ್ತಿದೆ. ದಾಳಿಂಬೆ ಬೆಳೆಗಾರರಿಗೆ ರಾಜ್ಯ ಸರ್ಕಾರವು ಹೆಕ್ಟೇರ್‌ಗೆ ₹1 ಲಕ್ಷ ನೀಡಬೇಕು' ಎಂದು ಬಿಜೆಪಿಯ ಪಿ.ಎಚ್.ಪೂಜಾರ್ ಅವರು ಪ್ರಶ್ನೋತ್ತರದ ಅವಧಿಯಲ್ಲಿ ಒತ್ತಾಯಿಸಿದರು.

ತೋಟಗಾರಿಕಾ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರು ನೀಡಿದ ಯಾವ ಉತ್ತರಕ್ಕೂ ತೃಪ್ತರಾಗದ ಪೂಜಾರ್, ₹1 ಲಕ್ಷ ಕೊಡಲೇಬೇಕು ಎಂದು ಪಟ್ಟುಹಿಡಿದರು. ಒಂದು ಹಂತದಲ್ಲಿ, 'ತೆಂಗು ಅಭಿವೃದ್ಧಿ ಮಂಡಳಿಗಳಿಗೆ ಕೇಂದ್ರ ಸರ್ಕಾರವು ಸಹಾಯಧನ ನೀಡುತ್ತದೆ. ಅದರ ಜತೆಗೆ ರಾಜ್ಯ ಸರ್ಕಾರವೂ ಒಂದು ಪಾಲು ಸೇರಿಸಿ ₹35,000 ನೀಡುತ್ತಿದೆ' ಎಂದರು.

ಅವರ ಮಾತು ಮುಗಿಯುವ ಮುನ್ನವೇ ಸಚಿವ ಮಲ್ಲಿಕಾರ್ಜುನ ಅವರು, 'ನೀವೂ ಬನ್ನಿ, ಎಲ್ಲರೂ ಸೇರಿ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗೋಣ. ದಾಳಿಂಬೆ ಬೆಳೆಗೆ ಪ್ಯಾಕೇಜ್ ಕೇಳೋಣ' ಎಂದು ಹೇಳಿದರು.

ಆಗ ಪೂಜಾರ್ ಅವರು ಮಾತನ್ನು ಅಲ್ಲಿಗೇ ನಿಲ್ಲಿಸಿ, ಕೂತರು.

'ಅವರ ಹೆಸರನ್ನು ತೆಗೆದುಕೊಳ್ಳಬೇಡಿ'

ನೇಕಾರರಿಗೆ ರಾಜ್ಯ ಸರ್ಕಾರದಿಂದ ಸಿಗುತ್ತಿರುವ ಸೌಲಭ್ಯ ಮತ್ತು ನೆರವಿನ ಬಗ್ಗೆ ಬಿಜೆಪಿಯ ಕೇಶವ ಪ್ರಸಾದ್ ಎಸ್. ಕೇಳಿದ್ದ ಪ್ರಶ್ನೆಗೆ ಜವಳಿ ಸಚಿವ ಶಿವಾನಂದ ಎಸ್. ಪಾಟೀಲ ಉತ್ತರಿಸಿದರು. ಕಡೆಗೆ, ಬಿಜೆಪಿಯ ಹಣಮಂತ ನಿರಾಣಿ ಅವರ ಹೆಸರು ಹೇಳಿ ಮಾತು ಮುಗಿಸಿದರು. ತಕ್ಷಣವೇ ಎದ್ದು ನಿಂತ ನಿರಾಣಿ, 'ಸಭಾಧ್ಯಕ್ಷರೇ, ನನಗೆ ಮಾತನಾಡಲು ಒಂದು ನಿಮಿಷ ಅವಕಾಶ ನೀಡಿ' ಎಂದರು.

ಸಭಾಪತಿ ಬಸವರಾಜ ಹೊರಟ್ಟಿ ಅವರು, 'ಇದು ಪ್ರಶ್ನೋತ್ತರ. ನಿನ್ನ ಪ್ರಶ್ನೆ ಇದ್ದಾಗಷ್ಟೇ ಮಾತನಾಡಬೇಕು' ಎಂದರು. ನಿರಾಣಿ, 'ಅವರು ನನ್ನ ಹೆಸರು ತೆಗೆದುಕೊಂಡಿದ್ದಾರೆ. ಹೀಗಾಗಿ ನಾನು ಮಾತನಾಡಲೇಬೇಕು' ಎಂದು ಪಟ್ಟುಹಿಡಿದರು.

ಒಂದೆರಡು ಕ್ಷಣ ಸುಮ್ಮನಿದ್ದ ಹೊರಟ್ಟಿ ಅವರು ಸಚಿವರನ್ನು ಉದ್ದೇಶಿಸಿ, 'ಇನ್ನು ಮುಂದೆ ಅವರ ಹೆಸರು ತೆಗೆದುಕೊಳ್ಳಬೇಡಿ' ಎಂದರು. 'ನಿಮ್ಮ ಹೆಸರು ತೆಗೆದುಕೊಳ್ಳುವುದಿಲ್ಲವಂತೆ, ನೀವಿನ್ನು ಕೂರಿ' ಎಂದು ನಿರಾಣಿ ಅವರನ್ನು ಕೂರಿಸಿದರು.

ವಿಧಾನ ಪರಿಷತ್ ಕಲಾಪದಲ್ಲಿ ಸಚಿವರಾದ ಚಲುವರಾಯಸ್ವಾಮಿ, ಎಸ್.ಎಸ್ ಮಲ್ಲಿಕಾರ್ಜುನ, ಎಂ.ಬಿ ಪಾಟೀಲ ಮಾತುಕತೆಯಲ್ಲಿ ತೊಡಗಿದ್ದರು ಪ್ರಜಾವಾಣಿ ಚಿತ್ರ

'ರಾಜ್ಯದ ಕೆಲಸ ಮಾಡಲೆಂದೇ ಕೇಂದ್ರಕ್ಕೆ ಕಳುಹಿಸಿದ್ದು'

ರಸಗೊಬ್ಬರ ಪೂರೈಕೆಯಲ್ಲಿನ ವ್ಯತ್ಯಯದ ಬಗ್ಗೆ ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಮಾತನಾಡುತ್ತಾ, 'ಶಿವರಾಜ್ ಸಿಂಗ್ ಚೌಹಾಣ್ ಅವರು, ಮಾವು ಬೆಳೆಗೆ ಸಂಬಂಧಿಸಿದಂತೆ ನಾನು ಮಾಡಿದ್ದ ಮನವಿಯನ್ನು ಒಂದು ದಿನದಲ್ಲೇ ಈಡೇರಿಸಿದ್ದರು' ಎನ್ನುತ್ತಿದ್ದಂತೆ ಜೆಡಿಎಸ್‌ನ ಟಿ.ಎ.ಶರವಣ ಎದ್ದುನಿಂತರು. 'ನಮ್ಮ ನಾಯಕರು ನೆರವು ನೀಡಿದ್ದರು. ಅದನ್ನೂ ಹೇಳಿ' ಎಂದರು.

ಇದರಿಂದ ಸಿಟ್ಟಿಗೆದ್ದ ಚಲುವರಾಯಸ್ವಾಮಿ, 'ಕೇಂದ್ರ ಕೃಷಿ ಸಚಿವರು ಮಂಜೂರು ಮಾಡಿದ ಮೇಲೆ, ತಾನೇ ಮಾಡಿಸಿದೆ ಎಂದು ಕ್ರೆಡಿಟ್ ತೆಗೆದುಕೊಳ್ಳಲು ನಿಮ್ಮ ನಾಯಕರು ಕರೆ ಮಾಡಿದ್ದು. ನಿನ್ನನ್ನು ಜನತಾದಳದಿಂದ ಆಯ್ಕೆ ಮಾಡಿದ್ದಾರೆ, ಹೀಗಾಗಿ ನೀನು ಅವರ ಬಗ್ಗೆ ಮಾತನಾಡಬೇಕು ಎಂಬುದು ನನಗೂ ಅರ್ಥವಾಗುತ್ತದೆ. ರಾಜ್ಯದ ಕೆಲಸ ಮಾಡಲೆಂದೇ ಜನರು ನಿಮ್ಮ ನಾಯಕರನ್ನು ಕೇಂದ್ರಕ್ಕೆ ಕಳುಹಿಸಿದ್ದು. ನೀನು ಸುಮ್ಮನೆ ಕೂರು' ಎಂದು ಗುದ್ದು ನೀಡಿದರು.

'ಹೃದಯ ಇದ್ದಿದ್ದರೆ ಕ್ಷಮಿಸಿ ಎನ್ನಬೇಕಿತ್ತು'

ಆರ್‌ಸಿಬಿ ಕಾಲ್ತುಳಿತ: ಸಿ.ಎಂ, ಡಿಸಿಎಂ ರಾಜೀನಾಮೆಗೆ ಆರ್.ಅಶೋಕ ಆಗ್ರಹ

ಪ್ರಜಾವಾಣಿ ವಾರ್ತೆ

ಆರ್.ಅಶೋಕ

ಬೆಂಗಳೂರು: 'ಆರ್‌ಸಿಬಿ ಕಾಲ್ತುಳಿತದ ಪ್ರಕರಣದಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಗೃಹ ಸಚಿವರು ಆರೋಪಿ ನಂ 1, 2, 3. ಇಡೀ ಘಟನೆಯ ಇವರೇ ಹೊಣೆ ಹೊರಬೇಕು, ರಾಜೀನಾಮೆ ನೀಡಬೇಕು ಮತ್ತು ಸಿಬಿಐ ತನಿಖೆ ನಡೆಸಬೇಕು' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದರು.

ವಿಧಾನಸಭೆಯಲ್ಲಿ ನಿಯಮ 69ರ ಅಡಿ ವಿಷಯ ಪ್ರಸ್ತಾಪಿಸಿ, ಆ ದಿನದ ವಿದ್ಯಮಾನವನ್ನು ವಿವರಿಸಿದರು. ತಮ್ಮ ಆರೋಪಗಳಿಗೆ ಪೂರಕವಾಗಿ ಪೊಲೀಸರ ವಾಕಿಟಾಕಿ ಸಂಭಾಷಣೆಯ ವಿವರ, ಕಾರ್ಯಕ್ರಮ ಆಯೋಜನೆಗೆ ಸರ್ಕಾರ ಹೊರಡಿಸಿದ್ದ ಸುತ್ತೋಲೆ ಮತ್ತಿತರ ದಾಖಲೆ ಮುಂದಿಟ್ಟು, ಇಡೀ ದುರಂತಕ್ಕೆ ಸರ್ಕಾರವೇ ನೇರ ಹೊಣೆ ಎಂದು ಹರಿಹಾಯ್ದರು. 'ಪ್ರಜಾವಾಣಿ' ಸಂಪಾದಕೀಯದ ಸಾಲುಗಳನ್ನು ಪ್ರಸ್ತಾಪಿಸಿ ಸಿದ್ದರಾಮಯ್ಯ ಅವರನ್ನು ತಿವಿದರು.

ಭಾಷಣದ ಪ್ರಮುಖ ಅಂಶಗಳು:

- ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರಿಗೆ ಕಿಂಚಿತ್ತಾದರೂ ಮಾನವೀಯತೆ ಇದ್ದಿದ್ದರೆ, ಒಳ್ಳೆಯ ಹೃದಯ ಇದ್ದಿದ್ದರೆ ಮೃತಪಟ್ಟ 11 ಅಮಾಯಕ ಜೀವಗಳಿಗೆ, ಮಕ್ಕಳನ್ನು ಕಳೆದುಕೊಂಡ ಹೆತ್ತವರನ್ನು ಉದ್ದೇಶಿಸಿ ತಪ್ಪಾಯಿತು ಕ್ಷಮಿಸಿ ಎಂದು ಕೇಳಬೇಕಿತ್ತು
- ಮುಂದೆ ಇಂತಹ ಘಟನೆ ನಡೆಯದೇ ಇರಲು ನಿಯಮ ರೂಪಿಸಬೇಕು. ನೋವಿನಲ್ಲಿ ಕೈತೊಳೆಯುತ್ತಿರುವ ತಂದೆ-ತಾಯಿಗೆ ನ್ಯಾಯ ಸಿಗಬೇಕು
- ಆರ್‌ಸಿಬಿ ವಿಜಯೋತ್ಸವಕ್ಕೆ ವಿಧಾನಸೌಧಕ್ಕೆ ಬನ್ನಿ, ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬನ್ನಿ ಎಂದು ಡಿ.ಕೆ. ಶಿವಕುಮಾರ್ ಆಹ್ವಾನ ನೀಡಿದ್ದರು. ವಿಜಯೋತ್ಸವ ಮೆರವಣಿಗೆ, ಸಂಚಾರ ನಿಯಂತ್ರಣದ ಬಗ್ಗೆಯೂ ಮಾಹಿತಿ ನೀಡಿ ಅಭಿಮಾನಿಗಳನ್ನು ಪ್ರಚೋದಿಸಿದರು
- ವೇದಿಕೆ ಮೇಲೆ 20-25 ಗಣ್ಯರು ಇರಬೇಕೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ನೀಡಿತ್ತು. ಆದರೆ ಸಂತೆಯಂತೆ ನಡೆದ ಕಾರ್ಯಕ್ರಮದಲ್ಲಿ ಸುಮಾರು 250 ಕ್ಕೂ ಜನ ವೇದಿಕೆಯಲ್ಲಿದ್ದರು. ಇದಕ್ಕೆ ಅನುಮತಿ ನೀಡಿದ್ದು ಯಾರು?
- ಸಚಿವ ಜಮೀರ್ ಅಹ್ಮದ್ ಅವರ ಮಗನನ್ನು ಆಯಕಟ್ಟಿನ ಜಾಗದಲ್ಲಿ ಕೂರಿಸಲಾಗಿತ್ತು. ಆದರೆ ಮುಖ್ಯಮಂತ್ರಿ ಮೊಮ್ಮಗ ಎಲ್ಲೋ ಬದಿಯಲ್ಲಿ ನಿಂತಿದ್ದರು. ಸಚಿವರ ಕುಟುಂಬದವರು ಸೆಲ್ಫಿ ತೆಗೆದುಕೊಳ್ಳುವುದರಲ್ಲೇ ನಿರತರಾಗಿದ್ದರು. ಸ್ಟೇಡಿಯಂ ಬಳಿ ಅಮಾಯಕರು ಪ್ರಾಣ ಕಳೆದುಕೊಂಡರು
- ಮೈಕಲ್ ಡಿ ಕುನ್ಹ ಆಯೋಗದ ವರದಿ ಪ್ರಕಾರ ಕ್ರೀಡಾಂಗಣದ ಬಳಿ 515 ಸಿಬ್ಬಂದಿ ನಿಯೋಜಿಸಲಾಗಿತ್ತು. ಆದರೆ, ಬಂದೋಬಸ್ತ್ ರಿಜಿಸ್ಟರ್‌ನಲ್ಲಿ 194 ಮಂದಿ ಮಾತ್ರ ಸಹಿ ಮಾಡಿದ್ದರು. ಹಿರಿಯ ಅಧಿಕಾರಿಗಳು ಕಾಲ್ತುಳಿತ ಸಾವಿನ ಬಗ್ಗೆ ಸಚಿವರ ಗಮನಕ್ಕೆ ತಂದರೂ ಕಾರ್ಯಕ್ರಮ ನಿಲ್ಲಿಸಲಿಲ್ಲ

'ಆರ್‌ಸಿಬಿ ಬಾಗಿ ಎಂದರೆ, ತೆವಳಿದ ಸರ್ಕಾರ'

'ಆರ್‌ಸಿಬಿ ಬಾಗಿ ಎಂದದ್ದಕ್ಕೆ ಸರ್ಕಾರ ತೆವಳಿತು. ಅಷ್ಟಕ್ಕೂ ಈ ಆರ್‌ಸಿಬಿ ಯಾರು? ಅದೇನು ಕರ್ನಾಟಕದ ತಂಡವಾ ಅಥವಾ ಭಾರತದ ತಂಡವಾ? ಆ ತಂಡದಲ್ಲಿ ಕರ್ನಾಟಕದ ಎಷ್ಟು ಆಟಗಾರರು ಇದ್ದಾರೆ' ಎಂದು ಪ್ರಶ್ನಿಸಿದವರು ಬಿಜೆಪಿಯ ಎಸ್.ಸುರೇಶ್ ಕುಮಾರ್.

'ಆರ್‌ಸಿಬಿ ಸಮೂಹ ಸನ್ನಿಗೆ ಸರ್ಕಾರ ತುತ್ತಾಯಿತು. ರಾಜಕಾರಣಿಗಳು ತಮ್ಮ ಮಕ್ಕಳನ್ನು ಕರೆದುಕೊಂಡು ಹೋದರು. ಇದು ಶೋಭೆ ತರುವ ವಿಚಾರವೇ? ಆರ್‌ಸಿಬಿ ತಂಡ ಹಣಕ್ಕಾಗಿ ಆಡಿದೆಯೇ ಹೊರತು ಕರ್ನಾಟಕಕ್ಕಾಗಲಿ, ಭಾರತಕ್ಕಾಗಿ ಆಡಿಲ್ಲ' ಎಂದರು.

'ಉಪ ಮುಖ್ಯಮಂತ್ರಿ ಆರ್‌ಸಿಬಿ ಬಾವುಟ ಹಿಡಿದುಕೊಂಡು, ಕಪ್‌ಗೆ ಮುತ್ತು ಕೊಟ್ಟುಕೊಂಡು ಮೆರವಣಿಗೆಯಲ್ಲಿ ಹೋದರು. ಇದು ಯಾವ ಸಂದೇಶ ಕೊಡುತ್ತದೆ. ಇಷ್ಟೊಂದು ಘೋರ ದುರಂತ ಆಗಿದ್ದರೂ ಯಾರೊಬ್ಬರೂ ಈವರೆಗೆ ಬೇಷರತ್ ಕ್ಷಮೆ ಕೇಳಲಿಲ್ಲ. ಒಬ್ಬರು ಕಣ್ಣೀರು ಹಾಕಿದರು. ಅದರ ಹಿಂದೆ ಮೊಸಳೆಯೂ ಇತ್ತು. ಅಂತಃಕರಣ ಇರಲಿಲ್ಲ' ಎಂದು ಕುಟುಕಿದರು.

'ಮೆರವಣಿಗೆಗೆ ಅವಕಾಶ ನೀಡದ್ದಕ್ಕೆ ಟೀಕಿಸಿದ್ದು ಯಾರು?'

'ತೆರೆದ ವಾಹನದಲ್ಲಿ ಮೆರವಣಿಗೆಗೆ ಅವಕಾಶ ನೀಡದ ಗೃಹ ಸಚಿವರ ನಡೆಯನ್ನು ಖಂಡಿಸಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು ನಿಮ್ಮದೇ ಪಕ್ಷವಲ್ಲವೇ. ಅದನ್ನೂ ಪ್ರಸ್ತಾಪಿಸಿಲ್ಲ ವೇಕೇ' ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದ್ದಾರೆ.

'ಹಲವು ವರ್ಷಗಳ ಅಭಿಮಾನಿಗಳ ಕನಸನ್ನು ಆರ್‌ಸಿಬಿ ಈ ವರ್ಷ ನನಸು ಮಾಡಿದೆ. ಆದರೆ, ತೆರೆದ ಬಸ್‌ನಲ್ಲಿ ಆಟಗಾರರ ವಿಜಯೋತ್ಸವಕ್ಕೆ ಅನುಮತಿ ನಿರಾಕರಿಸುವ ಮೂಲಕ ಆಕಸ್ಮಿಕ ಗೃಹ ಸಚಿವ ಪರಮೇಶ್ವರ ಅವರು ತಾವೊಬ್ಬ ಅಸಮರ್ಥ ಹಾಗೂ ಅದಕ್ಷ ಎಂಬುದನ್ನು ಸಾಬೀತು ಮಾಡಿದ್ದಾರೆ. ತಮ್ಮ ನೆಚ್ಚಿನ ಆಟಗಾರರನ್ನು ಅತಿ ಹತ್ತಿರದಿಂದ ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾಯುತ್ತಿದ್ದು, ಅಭಿಮಾನಿಗಳ ಸಂಭ್ರಮಕ್ಕೆ ಕಲ್ಲು ಹಾಕಿದ ಪರಮೇಶ್ವರ' ಎಂದು ಬಿಜೆಪಿ ಅಧಿಕೃತ 'ಎಕ್ಸ್' ಖಾತೆಯಲ್ಲಿ ಸಂದೇಶ ಹಾಕಿತ್ತು. ಆ ಬಗ್ಗೆಯೂ ನೀವು ಹೇಳಬೇಕಲ್ಲವೆ' ಎಂದು ಶಿವಕುಮಾರ್ ಪ್ರಶ್ನಿಸಿದ್ದಾರೆ.

> **ಸರ್ಕಾರದ ತಪ್ಪಿಲ್ಲ, ಪೊಲೀಸರದ್ದೇ ತಪ್ಪು. ಅವರ ತಪ್ಪಿನಿಂದಲೇ ಈ ಅವಘಡ ನಡೆದಿದೆ. ನೀವು ಸರ್ಕಾರವನ್ನು ಏಕೆ ಗುರಿ ಮಾಡುತ್ತೀರಿ? ನಾವು ವಾಸ್ತವ ಬಿಚ್ಚಿಡುತ್ತೇವೆ**
> **ಕೆ.ಎಂ.ಶಿವಲಿಂಗೇಗೌಡ,** ಕಾಂಗ್ರೆಸ್ ಶಾಸಕ

> **ಕರಿಯಪ್ಪ, ಬಿಳಿಯಪ್ಪ ಎಂದು ಹೇಳದೇ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಗೃಹ ಸಚಿವ ಮತ್ತು ಇಡೀ ಸರ್ಕಾರದ ತಪ್ಪಿದೆ ಅಂತ ನೇರವಾಗಿ ಹೇಳಿ, ಯಾಕೆ ಹಿಂಜರಿಯುತ್ತೀರಿ**
> **ಬಸನಗೌಡ ಪಾಟೀಲ ಯತ್ನಾಳ,** ಬಿಜೆಪಿ ಉಚ್ಚಾಟಿತ ಶಾಸಕ

ಹಿಂದೂ ಕ್ಷೇತ್ರಗಳ ಅಪಪ್ರಚಾರ: ಸುನಿಲ್ ಕುಮಾರ್

ಧರ್ಮಸ್ಥಳ ಪ್ರಕರಣ ಪ್ರತಿಧ್ವನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದಲ್ಲಿ ನಡೆದಿವೆ ಎನ್ನಲಾದ ಅಸಹಜ ಸಾವುಗಳ ಕುರಿತ ಎಸ್‌ಐಟಿ ತನಿಖೆ ವಿಚಾರ ವಿಧಾನಸಭೆಯಲ್ಲಿ ಮಂಗಳವಾರ ಪ್ರತಿಧ್ವನಿಸಿತು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ವಿ. ಸುನಿಲ್ ಕುಮಾರ್, 'ಎಸ್‌ಐಟಿಯಿಂದ ಮಧ್ಯಂತರ ವರದಿ ಪಡೆದು ಸದನಕ್ಕೆ ಮಂಡಿಸಬೇಕು' ಎಂದು ಆಗ್ರಹಿಸಿದರು. ಅದಕ್ಕೆ, ಗೃಹ ಸಚಿವ ಜಿ. ಪರಮೇಶ್ವರ, 'ಎಸ್‌ಐಟಿ ವರದಿ ನೀಡಿದ ಬಳಿಕವಷ್ಟೇ ಮಾಹಿತಿ ಹಂಚಿಕೊಳ್ಳಲು ಸಾಧ್ಯ' ಎಂದು ಸಮಜಾಯಿಷಿ ನೀಡಿದರು.

'ಧರ್ಮಸ್ಥಳದ ವಿಚಾರದಲ್ಲಿ ಸತ್ಯಾಂಶ ಹೊರಬರಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ, ತನಿಖೆ ನೆಪದಲ್ಲಿ ಹಿಂದೂ ಧಾರ್ಮಿಕ ಕ್ಷೇತ್ರಗಳನ್ನು ಅವಹೇಳನ ಮಾಡುವ ಪ್ರಕ್ರಿಯೆ ಕೆಲವು ದಿನಗಳಿಂದ ನಡೆಯುತ್ತಿದೆ. ಇಡೀ ಧರ್ಮಸ್ಥಳವನ್ನು ಗುರಿ ಮಾಡುವ ಪ್ರವೃತ್ತಿ ಬೆಳೆದಿರುವುದು ಕಾಣುತ್ತಿದೆ. ನಮ್ಮೆಲ್ಲರ ಶ್ರದ್ಧೆ, ನಂಬಿಕೆ ಮೇಲೆ ಆಘಾತ ಉಂಟುಮಾಡಿದೆ' ಎಂದು ಸುನಿಲ್ ಕುಮಾರ್ ಹೇಳಿದರು.

'ಅನಾಮಿಕ ವ್ಯಕ್ತಿ ಕೆಲವು ಸ್ಥಳ ತೋರಿಸಿ, ಬಳಿಕ ಹಲವು ಸ್ಥಳಗಳನ್ನು ಗುರುತಿಸಿದ್ದಾನೆ. ಈವರೆಗೆ ಹಲವು ಕಡೆ ಗುಂಡಿ ತೋಡಿದರೂ ಏನೂ ಸಿಕ್ಕಿಲ್ಲ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ. ಅನಾಮಿಕ ಹೇಳಿದ ಕಾರಣಕ್ಕೆ ಎಷ್ಟು ಗುಂಡಿ ತೋಡಿ ಶೋಧಿಸಲು ಸಾಧ್ಯ. ಹೀಗಾಗಿ ಊಹಾಪೋಹಗಳಿಗೆ ಸರ್ಕಾರ ತೆರೆ ಎಳೆಯಬೇಕು. ಧಾರ್ಮಿಕ ನಂಬಿಕೆ ಮೇಲೆ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಕ್ರಮ ಆಗಬೇಕು. ಧರ್ಮಸ್ಥಳದ ಪಾವಿತ್ರ್ಯ ಕಾಪಾಡಲು ಎಚ್ಚರಿಕೆ ಕ್ರಮ ಕೈಗೊಳ್ಳಬೇಕು' ಎಂದೂ ಒತ್ತಾಯಿಸಿದರು.

ಆಗ ಪರಮೇಶ್ವರ, 'ತನಿಖೆ ಎಂಬ ಕಾರಣಕ್ಕೆ ನೂರಾರು ಗುಂಡಿ ತೋಡಿ ಪರಿಶೀಲಿಸಲು ಸಾಧ್ಯವಿಲ್ಲ. ತನಿಖೆಗೆ ಕಾಲಮಿತಿಯೂ ಇರಲಿದೆ. ತನಿಖೆ ಒಂದು ಹಂತಕ್ಕೆ ತಲುಪಿದ ಮೇಲೆ ಎಸ್‌ಐಟಿ ವರದಿ ನೀಡಲಿದೆ. ಆ ನಂತರವಷ್ಟೇ ಮಾಹಿತಿ ನೀಡಲಾಗುವುದು' ಎಂದರು. ಇದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪಿಸಿದರು.

ಮತ್ತೆ ಸುನಿಲ್ ಕುಮಾರ್, 'ಮತ್ತೊಬ್ಬರು ತಲೆಬುರುಡೆ ತಂದು ಬೇರೆ ಕಡೆ ಗುಂಡಿ ತೋಡಿ ಎಂದರೆ ಏನು ಮಾಡುತ್ತೀರಿ? ವಾರದ ಬಳಿಕ ಆತ (ಅನಾಮಿಕ ವ್ಯಕ್ತಿ) ಹುಚ್ಚ ಎಂದು ಹೇಳಿ ತನಿಖೆ ಮುಗಿಯಿತು ಎಂದುಬಿಟ್ಟರೆ. ಅಲ್ಲಿಯವರೆಗೆ ಆದ ತೇಜೋವಧೆ ಕತೆ ಏನು? ಹೀಗಾಗಿ ಮಧ್ಯಂತರ ವರದಿ ಪಡೆದು ಮಾಹಿತಿ ನೀಡಬೇಕು' ಎಂದು ಪುನರುಚ್ಚರಿಸಿದರು.

'ಎಸ್‌ಐಟಿ ವರದಿ ಸಲ್ಲಿಸುವವರೆಗೆ ಚರ್ಚೆ ಸಾಧ್ಯವಿಲ್ಲ' ಎಂದು ಪರಮೇಶ್ವರ ಹೇಳಿದರು.

ಸುರೇಶ್–ದಿನೇಶ್ ಮಾತು ಪ್ರತಿಮಾತು

ಜಿಲ್ಲಾ ಪೊಲೀಸರೇ ಚೆನ್ನಾಗಿ ತನಿಖೆ ನಡೆಸಲು ಸಮರ್ಥರಿದ್ದರು. ಎಡಪಂಥೀಯ ವ್ಯಕ್ತಿಗಳು, ಸಂಸ್ಥೆಗಳ ಒತ್ತಾಯದ ಮೇರೆಗೆ ಎಸ್‌ಐಟಿ ರಚಿಸಲಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲೆ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿರುವುದು ಎಷ್ಟು ಸರಿ?
ಎಸ್.ಸುರೇಶ್ ಕುಮಾರ್, ಬಿಜೆಪಿ

ಅನೇಕ ಸಂಘಟನೆಗಳು, ವ್ಯಕ್ತಿಗಳ ಜತೆಗೆ ಎಡಪಂಥೀಯರು ಮನವಿ ಮಾಡಿದ್ದರು ಎಂದು ಹೇಳಿದ್ದೇನೆ. ಅದರಲ್ಲಿ ತಪ್ಪೇನು? ನಾವು ನಿಷ್ಪಕ್ಷಪಾತವಾಗಿದ್ದು, ಯಾರ ಪರವೂ ಇಲ್ಲ. ಪ್ರಕರಣವನ್ನು ಮುಚ್ಚಿ ಹಾಕುವ ಪ್ರಶ್ನೆಯೇ ಇಲ್ಲ. ನಾವು ಸತ್ಯದ ಪರ
ದಿನೇಶ್ ಗುಂಡೂರಾವ್, ದ.ಕ. ಉಸ್ತುವಾರಿ ಸಚಿವ

> **ಧರ್ಮಸ್ಥಳ ವಿಷಯದಲ್ಲಿ ಮುಂಚೂಣಿಯಲ್ಲಿರುವ ಎಡಪಂಥೀಯರೇ ಪಶ್ಚಿಮಘಟ್ಟದಲ್ಲಿ ನಕ್ಸಲೀಯರನ್ನು ತಂದು ಹಾಕಿದ್ದು. ನಂತರ ನಾವು ಅನುಭವಿಸಿದ್ದೇವೆ**
> **ಆರಗ ಜ್ಞಾನೇಂದ್ರ,** ಬಿಜೆಪಿ

ವಿಧಾನಸಭೆಯಲ್ಲಿ ಪ್ರಶ್ನೋತ್ತರ

ಬಳ್ಳಾರಿ ಜಿಲ್ಲೆಯಲ್ಲಿ ಆಂಧ್ರಪ್ರದೇಶದಿಂದ ತಂದ ಕ್ಲೋರಲ್ ಹೈಡ್ರೇಟ್ ಎಂಬ ಅಪಾಯಕಾರಿ ರಾಸಾಯನಿಕ ಮಿಶ್ರಿತ ಸೇಂದಿಯನ್ನು ಮಾರಾಟ ಮಾಡುತ್ತಿರು ವವರ ವಿರುದ್ಧ ಗೂಂಡಾ ಕಾಯ್ದೆ ಬಳಕೆ ಮಾಡಲಾಗುವುದು. ಕಳೆದ 3 ವರ್ಷಗಳಲ್ಲಿ ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿ ಸೇಂದಿ ಕಳ್ಳಸಾಗಣೆಗೆ ಸಂಬಂಧಿಸಿದಂತೆ 140 ಪ್ರಕರಣಗಳನ್ನು ದಾಖಲಿಸಿ, 160 ಆರೋಪಿಗಳನ್ನು ಬಂಧಿಸಲಾಗಿದೆ. 1,691 ಲೀಟರ್ ಸೇಂದಿಯನ್ನು ವಶಪಡಿಸಿಕೊಳ್ಳಲಾಗಿದೆ.
ಆರ್.ಬಿ. ತಿಮ್ಮಾಪುರ, ಅಬಕಾರಿ ಸಚಿವ (ಪ್ರಶ್ನೆ: ಕಾಂಗ್ರೆಸ್‌ನ ಅನ್ನಪೂರ್ಣ)

ಮಾಹಿತಿ ಹಕ್ಕು ಕಾಯ್ದೆ ದುರುಪಯೋಗ ತಡೆಯಲು ನಿಯಮಗಳನ್ನು ರೂಪಿಸಲು ರಾಜ್ಯ ಸರ್ಕಾರಕ್ಕೆ ಅವಕಾಶಗಳಿವೆ. ಮಾಹಿತಿ ಹಕ್ಕು ದುರುಪಯೋಗಕ್ಕೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿ ಈವರೆಗೆ 26 ಮಂದಿಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆ. ಲೋಕಾಯುಕ್ತ ದಾಳಿಯ ವೇಳೆ ಸಿಕ್ಕಿ ಬಿದ್ದಿರುವ ಮಾಹಿತಿ ಆಯುಕ್ತ ರವೀಂದ್ರ ಗುರುನಾಥ್ ಡಾಕಪ್ಪನವರ್ ಅವರನ್ನು ಹುದ್ದೆಯಿಂದ ವಜಾಗೊಳಿಸಲಾಗಿದೆ. ಮಾಹಿತಿ ನೀಡುವ ದರಗಳನ್ನು ಪರಿಷ್ಕರಿಸುವ ಬಗ್ಗೆ ಪರಿಶೀಲಿಸಲಾಗುವುದು.
ಎಚ್.ಕೆ. ಪಾಟೀಲ, ಕಾನೂನು ಸಚಿವ (ಮುಖ್ಯಮಂತ್ರಿ ಪರವಾಗಿ) (ಪ್ರಶ್ನೆ: ಕಾಂಗ್ರೆಸ್‌ನ ಕೌಜಲಗಿ ಮಹಾಂತೇಶ)

ವಿಧಾನ ಪರಿಷತ್‌ನಲ್ಲಿ...

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1,200 ಚದರ ಅಡಿ ವಿಸ್ತೀರ್ಣದವರೆಗಿನ ನಿವೇಶನದಲ್ಲಿ ನೆಲ ಮಹಡಿ ಮತ್ತು ಎರಡು ಅಂತಸ್ತು ಇರುವ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವುದರಿಂದ ವಿನಾಯಿತಿ ನೀಡುವ ಪ್ರಸ್ತಾವ ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ.
ರಹೀಂ ಖಾನ್, ಪೌರಾಡಳಿತ ಸಚಿವ (ಪ್ರಶ್ನೆ: ಕಾಂಗ್ರೆಸ್‌ನ ಉಮಾಶ್ರೀ)

ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ 2,025 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ. ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಶೀಘ್ರವೇ ಕ್ರಮ ತೆಗೆದುಕೊಳ್ಳುತ್ತೇವೆ.
ಎಸ್.ಎಸ್.ಮಲ್ಲಿಕಾರ್ಜುನ, ತೋಟಗಾರಿಕಾ ಸಚಿವ (ಪ್ರಶ್ನೆ: ಬಿಜೆಪಿಯ ಹಣಮಂತ ನಿರಾಣಿ)

ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರ ಗೌರವಧನ ಹೆಚ್ಚಿಸುವ ಪ್ರಸ್ತಾವಕ್ಕೆ ಆರ್ಥಿಕ ಇಲಾಖೆ ಅನುಮತಿ ನೀಡಿಲ್ಲ. ಈಗ ಮತ್ತೆ ಪ್ರಸ್ತಾವ ಸಲ್ಲಿಸಿ, ಅನುಮತಿ ಪಡೆದು ಗೌರವಧನವನ್ನು ಶೀಘ್ರವೇ ಹೆಚ್ಚಿಸುತ್ತೇವೆ.
ರಹೀಂ ಖಾನ್, ಪೌರಾಡಳಿತ ಸಚಿವ (ಪ್ರಶ್ನೆ: ಕಾಂಗ್ರೆಸ್‌ನ ಸುನೀಲ್‌ಗೌಡ ಪಾಟೀಲ್)

1961 ಕರ್ನಾಟಕ ಭೂ ಸುಧಾರಣಾ ಕಾಯ್ದೆಯ 109ನೇ ಕಲಂ ಅಡಿ ಸ್ವಾಧೀನಕ್ಕೆ ಪಡೆಯಲಾದ ಭೂಮಿಗಳಿಗೆ ಹೆಚ್ಚಿನ ಪರಿಹಾರ ನೀಡಲು ಸಾಧ್ಯವಿಲ್ಲ. ರೈತರು ಮತ್ತು ಕಂಪನಿಗಳ ನಡುವೆ ದೀರ್ಘ ಮಾತುಕತೆಯ ನಂತರ ಒಪ್ಪಂದ ಮಾಡಿಕೊಡಲು ಈ ಕಾನೂನು ಅವಕಾಶ ಮಾಡಿಕೊಟ್ಟಿತ್ತು. ಅದರಂತೆ ಈಗಾಗಲೇ ಪರಿಹಾರ ನೀಡಿದ್ದು, ಮತ್ತೆ ಹೆಚ್ಚುವರಿ ಪರಿಹಾರಕ್ಕೆ ಬೇಡಿಕೆ ಇರಿಸಿದರೆ ಅದನ್ನು ಮಾನ್ಯ ಮಾಡಲು ಸಾಧ್ಯವಿಲ್ಲ.
ಎಂ.ಬಿ.ಪಾಟೀಲ, ಬೃಹತ್ ಕೈಗಾರಿಕಾ ಸಚಿವ (ಪ್ರಶ್ನೆ: ಬಿಜೆಪಿಯ ತಳವಾರ್ ಸಾಬಣ್ಣ)

ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ ಮತ್ತು ಕರ್ನಾಟಕ ಪುರಸಭೆಗಳ ಕಾಯ್ದೆಗಳ ಅನ್ವಯ ವ್ಯಾಪಾರಿಗಳು ಟ್ರೇಡ್ ಲೈಸನ್ಸ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ಸಾಲಿನಲ್ಲಿ ಲೈಸನ್ಸ್ ಶುಲ್ಕದಿಂದ ₹50 ಕೋಟಿಯಿಂದ ₹60 ಕೋಟಿ ಸಂಗ್ರಹಿಸುವ ನಿರೀಕ್ಷೆ ಇದೆ. ಈ ಪದ್ಧತಿಯನ್ನು ರದ್ದುಪಡಿಸುವ ಮತ್ತು ರಾಜ್ಯದಾದ್ಯಂತ ಏಕೀಕೃತ ಶುಲ್ಕ ಜಾರಿಗೆ ತರುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ.
ಬೈರತಿ ಸುರೇಶ್, ನಗರಾಭಿವೃದ್ಧಿ ಸಚಿವ (ಪ್ರಶ್ನೆ: ಬಿಜೆಪಿಯ ಡಿ.ಎಸ್.ಅರುಣ್)

ರಾಜ್ಯ ಶಿಕ್ಷಣ ನೀತಿ ಆಯೋಗದ ಮಧ್ಯಂತರ ವರದಿ ಶಿಫಾರಸುಗಳನ್ನು 2024–25ನೇ ಸಾಲಿನಿಂದಲೇ ಜಾರಿಗೊಳಿಸಲಾಗಿದೆ. ಯುಪಿಎಸ್‌ಸಿ, ಎಸ್‌ಎಸ್‌ಸಿ ನಡೆಸುವ ಪರೀಕ್ಷೆಗಳಿಗೆ ರಾಜ್ಯದ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ, ಉದ್ಯೋಗ ಆಧಾರಿತ ಕೌಶಲ ಕಲಿಸುವ ಪಠ್ಯಕ್ರಮ, ಕೋರ್ಸ್‌ಗಳನ್ನು ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಅಳವಡಿಸಲಾಗುತ್ತಿದೆ
ಡಾ.ಎಂ.ಸಿ. ಸುಧಾಕರ್, ಉನ್ನತ ಶಿಕ್ಷಣ ಸಚಿವ (ಪ್ರಶ್ನೆ: ಡಾ.ಧನಂಜಯ ಸರ್ಜಿ, ಬಿಜೆಪಿ ಸದಸ್ಯ)

'ಬಾಂಬೆ ಬಾಯ್ಸ್ ಪ್ರಕಟಿಸದಂತೆ ದುಂಬಾಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಸಚಿವ ಕೆ.ಎನ್. ರಾಜಣ್ಣ ವಜಾ ಕುರಿತು ವಿಧಾನಪರಿಷತ್‌ನಲ್ಲಿ ಚರ್ಚೆ ನಡೆಯುವಾಗ ಬಿಜೆಪಿಯ ಎಚ್. ವಿಶ್ವನಾಥ್, 'ಯಾವ ಪಕ್ಷವೇ ಇರಲಿ. ವರಿಷ್ಠರನ್ನು ಟೀಕೆ ಮಾಡಿದರೆ ಅವರ ಕಥೆ ಮುಗಿದಂತೆ. ಕಾಂಗ್ರೆಸ್ ನೇತೃತ್ವದ ಸರ್ಕಾರವೂ ಹೌದಪ್ಪಗಳ ಸರ್ಕಾರ ಆಗಿದೆ. ಅಂದು ಸಮ್ಮಿಶ್ರ ಸರ್ಕಾರಕ್ಕೆ ಬಿಜೆಪಿ ಅಪರೇಷನ್ ಕಮಲ ಮಾಡಿತ್ತು. ನೀವೇ 'ಬಾಂಬೆ ಬಾಯ್ಸ್' ಎಂದು ಕರೆದಿದ್ರಿ' ಎಂದರು.

ಆಗ ಮಧ್ಯ ಪ್ರವೇಶಿಸಿದ ಕಾಂಗ್ರೆಸ್‌ನ ಪುಟ್ಟಣ್ಣ, 'ಬಾಂಬೆ ಬಾಯ್ಸ್ ಪುಸ್ತಕ ಯಾವಾಗ ಪ್ರಕಟಿಸುವಿರಿ' ಎಂದರು. 'ಈಗಾಗಲೇ ಬರೆದಿಟ್ಟಿರುವೆ. ಮೂರೂ ಪಕ್ಷಗಳ ನಾಯಕರು ಬಿಡುಗಡೆ ಮಾಡಬೇಡಿ ಎಂದು ದುಂಬಾಲು ಬಿದ್ದಿದ್ದಾರೆ' ಎಂದು ವಿಶ್ವನಾಥ್ ಪ್ರತಿಕ್ರಿಯಿಸಿದರು.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, 'ಒಳ್ಳೆಯ ಪ್ರಕಾಶಕರನ್ನು ಹುಡುಕಿ ಕೊಡುತ್ತೇನೆ. ಕೃತಿ ಬಿಡುಗಡೆ ಮಾಡಿ, ಸಾಕಷ್ಟು ಕೃತಿ ಮಾರಾಟವಾಗುತ್ತವೆ' ಎಂದು ನಗೆ ಚಟಾಕಿ ಹಾರಿಸಿದರು.

'ವಿಷ್ಣು–ಈಶ್ವರ ಎರಡೂ ನನ್ನತ್ರನೇ ಇರೋದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಷ್ಣು–ಈಶ್ವರ ಎರಡೂ ನನ್ನತ್ರನೇ ಇರೋದು'.

ಹೀಗೆಂದವರು ಮುಖ್ಯಮಂತ್ರಿ ಸಿದ್ದರಾಮಯ್ಯ. ಭೋಜನ ವಿರಾಮದ ನಂತರ ವಿಧಾನಸಭೆ ಕಲಾಪ ಆರಂಭವಾದಾಗ ಯಾವುದೇ ಸಚಿವರು ಹಾಜರಿರದ ಬಗ್ಗೆ ಬಿಜೆಪಿ ಶಾಸಕರು ಆಕ್ಷೇಪ ವ್ಯಕ್ತಪಡಿಸಿದರು. ಇದು ತಿಳಿ ಹಾಸ್ಯ ಮತ್ತು ಸ್ವಾರಸ್ಯಕರ ಚರ್ಚೆಗೆ ಕಾರಣವಾಯಿತು.

ಬಿಜೆಪಿ ಶಾಸಕರ ಆಕ್ಷೇಪ ಆರಂಭವಾಗುತ್ತಿದ್ದಂತೆ ಗೃಹ ಸಚಿವ ಜಿ.ಪರಮೇಶ್ವರ ಸದನದೊಳಗೆ ಬಂದರು. ಆಗ ಸಭಾಧ್ಯಕ್ಷರ ಪೀಠದಲ್ಲಿದ್ದ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, 'ಪರಮೇಶ್ವರ ಬಂದ್ರು ಚಾಲೂ ಮಾಡ್ರಿ' ಎಂದು ಹೇಳಿದರು.

ಆದರೂ ಬಿಜೆಪಿ ಶಾಸಕರ ಗೊಣಗಾಟ ನಿಲ್ಲಲಿಲ್ಲ. ಆಗ ಪರಮೇಶ್ವರ ಅವರು, 'ವಿರೋಧ ಪಕ್ಷದ ನಾಯಕರು ಬೆಳಿಗ್ಗೆಯಿಂದಲೂ ಚೆನ್ನಾಗಿ ಮಾತನಾಡುತ್ತಿದ್ದಾರೆ. ಮುಂದುವರಿಸಲಿ' ಎಂದರು.

ಅವರಿಗೆ ಜತೆಯಾದ ಕಂದಾಯ ಸಚಿವ ಕೃಷ್ಣ ಬೈರೇಗೌಡ, 'ಇಲ್ಲಿ ಪರಮ ಈಶ್ವರನೇ ಇರುವಾಗ ಇನ್ನು ಬೇರೆ ಯಾರು ಬೇಕು ಹೇಳಿ' ಎಂದರು.

'ಕೃಷ್ಣನೂ ಇದ್ದಾರಲ್ಲ' ಎಂದು ಬಿಜೆಪಿಯ ಎಸ್.ಸುರೇಶ್‌ಕುಮಾರ್ ಸೇರಿಸಿದರು. 'ಹೆಸರಿಗಷ್ಟೇ ಕೃಷ್ಣ' ಎಂದರು ಕೃಷ್ಣಬೈರೇಗೌಡ.

'ಈಶ್ವರ, ಕೃಷ್ಣ, ರಾಮ ಮೂರೂ ಜನ ಇದ್ದಾರೆ. ಇನ್ನು ನಿಲ್ಲಂಗಿಲ್ಲ' ಎಂದು ಅಶೋಕ ಹೇಳಿದಾಗ, 'ಮತ್ಯಾಕೆ ಶುರು ಮಾಡಿ' ಎಂದು ಕೃಷ್ಣಬೈರೇಗೌಡ ಉತ್ತೇಜಿಸಿದರು.

ಆಗ ಸಿದ್ದರಾಮಯ್ಯ ಅವರು, 'ವಿಷ್ಣು–ಈಶ್ವರ ಎರಡೂ ನನ್ನತ್ರನೇ ಇರೋದು' ಎಂದರು.

'ರಾಮ ಅಂದ್ರೆ ಗೊತ್ತು ಸಿದ್ದ ಅಂದ್ರೆ ಯಾರು' ಎಂದು ಅಶೋಕ ನಗುತ್ತಲೇ ಪ್ರಶ್ನಿಸಿದರು. 'ಸಿದ್ದ ಅಂದ್ರೆ ಈಶ್ವರ, ರಾಮ ಅಂದ್ರೆ ವಿಷ್ಣು' ಎಂದು ಸಿದ್ದರಾಮಯ್ಯ ಬಿಡಿಸಿ ಹೇಳಿದರು.

'ಪರಮೇಶ್ವರ ಅಂದ್ರೆ' ಎಂದು ಅರವಿಂದ ಬೆಲ್ಲದ ಪ್ರಶ್ನಿಸಿದಾಗ, 'ಪರಮೇಶ್ವರ ಅಂದ್ರೆ ಸವರ್ಣದೀರ್ಘ ಸಂಧಿ' ಎಂದು ಸಿ.ಎಂ ವಿವರಿಸಿದರು.

'ಇದನ್ನು ಅರ್ಥ ಮಾಡಿಕೊಳ್ಳೋರು ಇಲ್ಲಿ ಎಷ್ಟು ಜನ ಇದ್ದಾರೆ' ಎಂದು ಕೃಷ್ಣ ಬೈರೇಗೌಡ ಪ್ರಶ್ನಿಸಿದರು.

'ನಮಗೆ ಸಂಧಿ–ಸಮಾಸ ಸಹವಾಸವೇ ಬೇಡ' ಎಂದು ಅಶೋಕ ಹೇಳಿದಾಗ ಎಲ್ಲರೂ ಗೊಳ್ಳೆಂದು ನಕ್ಕರು.

ಆಗ ವಿಷಯವನ್ನು ಬೇರೆಡೆ ಸೆಳೆದ ಬಿಜೆಪಿಯ ಸತೀಶ್ ರೆಡ್ಡಿ, 'ರಾಜಣ್ಣ ರಾಜೀನಾಮೆಯಿಂದ ಮುಖ್ಯಮಂತ್ರಿ ಬೇಸರಗೊಂಡಿದ್ದಾರೆ' ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ನನಗೆ ಯಾವಾಗಲೂ ಬೇಸರ ಆಗೋದಿಲ್ಲ. ನಾನು ಚೆನ್ನಾಗಿದ್ದೇನೆ' ಎಂದರು.

ಕಲಾಪ ವೀಕ್ಷಣೆ

ಪ್ರಜಾವಾಣಿ ಚಿತ್ರ: ರಂಜು ಪಿ.

ವಿಧಾನ ಪರಿಷತ್ ಕಲಾಪವನ್ನು ವಿದ್ಯಾರ್ಥಿಗಳು ಮಂಗಳವಾರ ವೀಕ್ಷಿಸಿದರು

ಇಬ್ರಾಹಿಂ ಹೇಳಿಕೆ: ತನಿಖೆಗೆ ಆಯೋಗಕ್ಕೆ ಪತ್ರ

ನವದೆಹಲಿ: ಕರ್ನಾಟಕ ವಿಧಾನಸಭೆಯ 2018ರ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ಬಾದಾಮಿ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮ ಗೆಲುವನ್ನು ಖಚಿತಪಡಿಸಿಕೊಳ್ಳಲು 3,000 ಮತಗಳನ್ನು ಖರೀದಿಸಿದ್ದರು ಎಂದು ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ನೀಡಿರುವ ಹೇಳಿಕೆ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಬಿಜೆಪಿಯ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಅವರು ಭಾರತೀಯ ಚುನಾವಣಾ ಆಯೋಗಕ್ಕೆ ಮಂಗಳವಾರ ಒತ್ತಾಯಿಸಿದ್ದಾರೆ.

'ಆಗ ಸಿದ್ದರಾಮಯ್ಯ ಅವರಿಗೆ ಆಪ್ತರಾಗಿದ್ದ ಇಬ್ರಾಹಿಂ ಅವರು ಕಾಂಗ್ರೆಸ್ ನಾಯಕ ಬಿ.ಬಿ. ಚಿಮ್ಮನಕಟ್ಟಿ ಜತೆಗೆ ಸೇರಿ ಮತಗಳನ್ನು ಖರೀದಿಸಲು ಸಹಾಯ ಮಾಡಿದ್ದರು. ಬಾದಾಮಿಯಲ್ಲಿ ಸಿದ್ದರಾಮಯ್ಯ ಅವರ ಗೆಲುವಿನ ಅಂತರ ಕೇವಲ 1696 ಮತಗಳಷ್ಟಿತ್ತು. ಈ ಚುನಾವಣಾ ಭ್ರಷ್ಟಾಚಾರದ ಬಗ್ಗೆ ಸಮಗ್ರ ತನಿಖೆ ನಡೆಸಿದರೆ ಸತ್ಯಾಂಶ ಬಯಲಾಗಲಿದೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

15 ಮಸೂದೆ ಮಂಡನೆ

ಬೆಂಗಳೂರು: ಬಾಲ್ಯ ವಿವಾಹಕ್ಕೆ ಪ್ರಯತ್ನಿಸುವುದು, ಸಿದ್ಧತೆ ಮಾಡುವುದು ಮತ್ತು ನಿಶ್ಚಿತಾರ್ಥ ಮಾಡುವುದನ್ನು ನಿಷೇಧಿಸುವ ಮತ್ತು ದಂಡ ವಿಧಿಸುವ ಉದ್ದೇಶದ ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಮಸೂದೆ 2025 ಸೇರಿ ಒಟ್ಟು 15 ಮಸೂದೆಗಳನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು. ಬಾಲ್ಯ ವಿವಾಹ ನಿಷೇಧ ಮಸೂದೆಯನ್ನು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಮಂಡಿಸಿದರು.

ಬಿಜೆಪಿಯ ವೇದವ್ಯಾಸ ಕಾಮತ್ ಪ್ರಶ್ನೆಗೆ ಗೃಹ ಸಚಿವ ಜಿ.ಪರಮೇಶ್ವರ ಉತ್ತರ

'ಕಾರ್ಯಪಡೆ ಕಾಯಂ ಆಗಿರಬೇಕಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಕೋಮು ದ್ವೇಷದ ಚಟುವಟಿಕೆಗಳನ್ನು ಹತ್ತಿಕ್ಕಲು ಹೊಸದಾಗಿ ವಿಶೇಷ ಕಾರ್ಯಪಡೆ (ಎಸ್‌ಎಎಫ್) ರಚಿಸಲಾಗಿದ್ದು, ಇದು ಕಾಯಂ ಆಗಿ ಇರಬೇಕೆಂದೇನೂ ಇಲ್ಲ. ಶಾಂತಿ ನೆಲಸುವುದಷ್ಟೇ ಮುಖ್ಯ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ವಿಧಾನಸಭೆಯಲ್ಲಿ ಬಿಜೆಪಿಯ ವೇದವ್ಯಾಸ ಕಾಮತ್ ಅವರ ಪ್ರಶ್ನೆಗೆ ಉತ್ತರಿಸಿದ ಪರಮೇಶ್ವರ, 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಸ್ಥಿತಿ ಹದಗೆಟ್ಟಿದ್ದು, ಅಲ್ಲಿನವರು ತಮ್ಮ ಮಕ್ಕಳನ್ನು ವ್ಯಾಸಂಗಕ್ಕಾಗಿ ಇತರೆಡೆ ಕಳುಹಿಸುತ್ತಿದ್ದಾರೆ. ಉದ್ಯಮಿಗಳು ಹೂಡಿಕೆಗೆ ಹಿಂದೇಟು ಹಾಕುತ್ತಿದ್ದಾರೆ ಎಂಬ ಮಾಹಿತಿ ಪಕ್ಷದ ಚುನಾವಣಾ ಪ್ರಣಾಳಿಕೆ ಸಮಿತಿಯ ಮಾಹಿತಿ ಸಂಗ್ರಹದ ವೇಳೆ ಲಭ್ಯವಾಗಿತ್ತು. ಕೋಮುಸೌಹಾರ್ದವೂ ಹಾಳಾಗಿದೆ ಎಂಬ ಆತಂಕವೂ ಆ ಭಾಗದ ಜನಪ್ರತಿನಿಧಿಗಳಲ್ಲಿದೆ' ಎಂದರು.

ಕೊಲೆ, ಗಲಭೆ ಪ್ರಕರಣ

'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2023ರಲ್ಲಿ 11 ಕೊಲೆ ಪ್ರಕರಣಗಳು ದಾಖಲಾಗಿತ್ತು. ಆ ಪೈಕಿ, 10 ಪ್ರಕರಣಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಒಂದು ಪ್ರಕರಣ ತನಿಖೆಯ ಹಂತದಲ್ಲಿದೆ. 2024ರಲ್ಲಿ 13 ಪ್ರಕರಣಗಳು ದಾಖಲಾಗಿದ್ದು 12ಕ್ಕೆ ದೋಷಾರೋಪಪಟ್ಟಿ ಸಲ್ಲಿಸಲಾಗಿದೆ. 2025ರಲ್ಲಿ ಜುಲೈವರೆಗೆ ಆರು ಪ್ರಕರಣಗಳು ದಾಖಲಾಗಿದ್ದು, 2 ಪ್ರಕರಣಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

2023ರಲ್ಲಿ 50 ಗಲಭೆ ಪ್ರಕರಣಗಳಲ್ಲಿ 24 ಪ್ರಕರಣಗಳಿಗೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. 2024ರಲ್ಲಿ 31ರಲ್ಲಿ 24 ಪ್ರಕರಣಗಳಿಗೆ ಹಾಗೂ 2025ರ ಜುಲೈವರೆಗೂ 16 ಗಲಭೆ ಪ್ರಕರಣಗಳಲ್ಲಿ 2 ಪ್ರಕರಣದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಉಡುಪಿ ಜಿಲ್ಲೆಯಲ್ಲಿ 2023ರಲ್ಲಿ 12, 2024ರಲ್ಲಿ 6, 2025ರ ಜುಲೈವರೆಗೂ 3 ಕೊಲೆ ಪ್ರಕರಣಗಳು ವರದಿಯಾಗಿವೆ' ಎಂದು ಪರಮೇಶ್ವರ ತಿಳಿಸಿದರು.

'ನಾನು ಇತ್ತೀಚೆಗೆ ಶಾಂತಿ ಸಭೆ ನಡೆಸಿದ್ದು, ಯಶಸ್ವಿಯಾಗಿದೆ. ಶಾಂತಿಯಿಂದ ಇರಬೇಕು ಎಂಬ ಭಾವನೆ ಎಲ್ಲರಲ್ಲೂ ಬರುತ್ತಿದೆ. ಮನಸ್ಸುಗಳನ್ನು ಒಂದುಗೂಡಿಸುವ ಪ್ರಯತ್ನ ನಡೆದಿದೆ' ಎಂದೂ ಹೇಳಿದರು.

'ವಿಶೇಷ ಕಾರ್ಯಪಡೆಯು ಅನಗತ್ಯವಾಗಿ ಯಾರಿಗೂ ತೊಂದರೆ ನೀಡಿಲ್ಲ. ಮಧ್ಯರಾತ್ರಿ ಮನೆಗೆ ಹೋಗಿ ಹಿರಿಯ ನಾಗರಿಕರನ್ನು ವಿಚಾರಣೆ ನಡೆಸುವ ಕೆಲಸವನ್ನೂ ಮಾಡಿಲ್ಲ. ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಯ ಸ್ಥಿತಿಗತಿ ಬಗ್ಗೆ ನಾನೇ ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದೇನೆ. ಜನಪ್ರತಿನಿಧಿಗಳ ಸಹಕಾರವೂ ಮುಖ್ಯ' ಎಂದರು.

'ದಕ್ಷಿಣ ಕನ್ನಡ ಜಿಲ್ಲೆಯು ಕೇರಳಕ್ಕೆ ಹೊಂದಿಕೊಂಡಿದ್ದು, ಡ್ರಗ್ಸ್, ಗಾಂಜಾ ಹಾವಳಿ ವ್ಯಾಪಕವಾಗಿದ್ದು, ನಿಗ್ರಹಿಸಬೇಕಿದೆ. ವಿಶೇಷ ಕಾರ್ಯಪಡೆ ರಚನೆ ಉತ್ತಮವಾಗಿದೆ. ಗೋವು ಕಳವು, ಗೋಹತ್ಯೆಯಾದರೂ ಈ ರೀತಿ ಘಟನೆಗಳು ಸಂಭವಿಸುತ್ತವೆ. ಹೀಗಾಗಿ ಗೋಹತ್ಯೆ ಹಾಗೂ ಲವ್ ಜಿಹಾದ್‌ನಂಥ ಪ್ರಕರಣಗಳನ್ನು ಕಾರ್ಯಪಡೆ ವ್ಯಾಪ್ತಿಗೆ ತರಬೇಕು' ಎಂದು ವೇದವ್ಯಾಸ ಕಾಮತ್ ಆಗ್ರಹಿಸಿದರು.

ಆಗ ಪರಮೇಶ್ವರ, 'ಸಂಭಾವ್ಯ ಕೋಮು ಹಿಂಸಾಚಾರದ ಬಗ್ಗೆ ಕಣ್ಗಾವಲು ಎಂದು ಉಲ್ಲೇಖಿಸಲಾಗಿದ್ದು, ಆ ಅಂಶಗಳೆಲ್ಲಾ ಇದರಲ್ಲಿ ಸೇರ್ಪಡೆಯಾಗುತ್ತವೆ. ಜಾನುವಾರು ಕಳ್ಳತನ, ಸಾಗಣೆ, ಮಾದಕ ವಸ್ತು ಸಾಗಣೆಯಂಥ ಪ್ರಕರಣಗಳ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ' ಎಂದು ಪ್ರಶ್ನಿಸಿದರು.

ಸಭಾಧ್ಯಕ್ಷ ಯು.ಟಿ. ಖಾದರ್, 'ಕರಾವಳಿ ಭಾಗದಲ್ಲಿ ದ್ವೇಷದಿಂದ ಹಿಂಸಾಚಾರ ನಡೆಯುತ್ತಿಲ್ಲ. ಭಯದ ವಾತಾವರಣವಿದೆ. ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ಆಯೋಜಿಸಿ ಸಂಬಂಧಪಟ್ಟ ಜಿಲ್ಲೆಗಳ ಜನಪ್ರತಿನಿಧಿಗಳನ್ನು ಆಹ್ವಾನಿಸಿದರೆ ಚರ್ಚಿಸಿ, ಸೂಕ್ತ ಪರಿಹಾರ ಕಂಡುಕೊಳ್ಳಬಹುದು' ಎಂದರು.

'ಬೀದಿನಾಯಿಗಳಿಂದ ಮುಕ್ತಿ ನೀಡಿ'

ಒಂದನೇ ಪುಟದಿಂದ...

ಭೋಜೇಗೌಡ, 'ಲಸಿಕೆ ಹಾಕಿದರೆ ರೇಬಿಸ್ ತಡೆಗಟ್ಟಬಹುದು ಅಷ್ಟೆ. ನಾಯಿಗಳು ಕಚ್ಚುವುದನ್ನು ತಡೆಯಲು ಆಗುವುದಿಲ್ಲ. ನಾನು ಮಾತನಾಡುತ್ತಿರುವುದು, ಕಚ್ಚುವ ನಾಯಿಗಳ ಬಗ್ಗೆ' ಎಂದು ಸ್ಪಷ್ಟಪಡಿಸಿದರು.

ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, 'ನಾಯಿಗಳನ್ನು ಹೊರಹಾಕಿ ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ' ಎಂದರು. ಅದಕ್ಕೆ ಆಡಳಿತ ಪಕ್ಷದ ಕಡೆಯಿಂದ ಸಚಿವ ಬೈರತಿ ಸುರೇಶ್, 'ಅದು ದೆಹಲಿಗೆ ಮಾತ್ರ ಅನ್ವಯ' ಎಂದರು. ರವಿಕುಮಾರ್, 'ನೀವು ಬೆಂಗಳೂರಿಗೂ ಅನ್ವಯಿಸಿ ಜಾರಿಗೆ ತನ್ನಿ' ಎಂದು ಒತ್ತಾಯಿಸಿದರು. ಮತ್ತು ಕುರ್ಚಿಯಲ್ಲಿ ಕೂತು, 'ಇವರು ನಾಯಿಗಳನ್ನು ಹೊರಹಾಕುವುದಿಲ್ಲ. ಬೌಬೌಗಳಿಗೆ ಬಿರಿಯಾನಿ ಹಾಕುತ್ತಾರೆ ಅಷ್ಟೆ' ಎಂದು ಗೊಣಗಿದರು.

ಈ ಮಧ್ಯೆ ಮತ್ತೆ ಎದ್ದು ನಿಂತ ಭೋಜೇಗೌಡ, 'ನಾಯಿಗಳ ಸ್ಥಿತಿ ಈಗ ಸಂಪೂರ್ಣ ಬದಲಾಗಿದೆ. ಹಿಂದಿನ ಆದೇಶವನ್ನು ಬದಲಿಸಿ ಎಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿ. ನಾಯಿಗಳಿಂದ ಶಾಲಾ ಮಕ್ಕಳಿಗೆ, ಜನ ಸಾಮಾನ್ಯರಿಗೆ ಮುಕ್ತಿ ನೀಡಿ. ನಾನು ನಗರಸಭೆ ಅಧ್ಯಕ್ಷನಾಗಿದ್ದಾಗ, 2,400 ನಾಯಿಗಳಿಗೆ ಮಾಂಸಾಹಾರದಲ್ಲಿ ಔಷಧ ಹಾಕಿ ಸಾಯಿಸಿದ್ದೆವು. ಆಮೇಲೆ ತೆಂಗಿನ ಮರದ ಬುಡದಲ್ಲಿ ಹುಗಿದಿದ್ದೆವು' ಎಂದರು.

ರಹೀಂ ಖಾನ್, 'ಪ್ರಾಣಿ ದಯಾಸಂಘದವರು ಬರುತ್ತಾರೆ ಇರಿ' ಎಂದು ತಕರಾರು ಮುಂದಿಟ್ಟರು. ಇದರಿಂದ ಕೆರಳಿದ ಭೋಜೇಗೌಡ, 'ಎಲ್ಲ ನಾಯಿಗಳನ್ನು ಹಿಡಿದು, ಪ್ರಾಣಿ ದಯಾ ಸಂಘದವರ ಮನೆಗಳಿಗೆ ಬಿಡಿ' ಎಂದು ಕೂತರು.

ಪ್ರೋತ್ಸಾಹಧನ ಹೆಚ್ಚಿಸಿ: ಆಶಾ ಕಾರ್ಯಕರ್ತೆಯರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಮಾದರಿಯಲ್ಲಿ ರಾಜ್ಯದಲ್ಲೂ ಪ್ರೋತ್ಸಾಹಧನ ನೀಡುವುದೂ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಆಶಾ ಕಾರ್ಯಕರ್ತೆಯರು, ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಮುಖ್ಯಮಂತ್ರಿ ಘೋಷಿಸಿದ್ದ ರಾಜ್ಯದ ಗೌರವಧನ ಮತ್ತು ಕೇಂದ್ರದ ಭಾಗಶಃ ಪ್ರೋತ್ಸಾಹಧನ ಸೇರಿಸಿ ತಿಂಗಳಿಗೆ ಕನಿಷ್ಠ ₹10 ಸಾವಿರ ನೀಡುವ ಸಂಬಂಧ ಏಪ್ರಿಲ್‌ನಿಂದಲೇ ಅನ್ವಯ ಆಗುವಂತೆ ಆದೇಶ ಹೊರಡಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಮಾರ್ಚ್‌ನಲ್ಲಿ ಮಂಡನೆಯಾದ ರಾಜ್ಯ ಬಜೆಟ್‌ನಲ್ಲಿ ಅಂಗನವಾಡಿ ಹಾಗೂ ಬಿಸಿಯೂಟ ಕಾರ್ಯಕರ್ತೆಯರಿಗೆ ₹1 ಸಾವಿರ ಪ್ರೋತ್ಸಾಹಧನ ಹೆಚ್ಚಿಸಲಾಗಿತ್ತು. ಅದೇ ಮಾದರಿಯಲ್ಲಿ ಆಶಾ ಕಾರ್ಯಕರ್ತೆಯರಿಗೂ ಪ್ರೋತ್ಸಾಹಧನ ನೀಡಬೇಕು' ಎಂದು ಕೋರಿದರು.

ಆಶಾ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆಯುವುದನ್ನು ನಿಲ್ಲಿಸಬೇಕು. ಆಶಾ ಕಾರ್ಯಕರ್ತೆಯರ ಕಾರ್ಯನಿರ್ವಹಣೆಯನ್ನು ಅವೈಜ್ಞಾನಿಕವಾಗಿ ಮೌಲ್ಯಮಾಪನ ಮಾಡುವುದನ್ನು ಕೈಬಿಡಬೇಕು. ಆಶಾ ಸುಗಮಕಾರರನ್ನು ಸೂಕ್ತ ವೇತನ ನೀಡಿ ಕೆಲಸದಲ್ಲಿ ಮುಂದುವರಿಸಬೇಕು ಎಂದು ಆಗ್ರಹಿಸಿದರು.

ಪಶ್ಚಿಮ ಬಂಗಾಳದ ಮಾದರಿಯಲ್ಲಿ ನಿವೃತ್ತ ಆಶಾಗಳಿಗೆ ಇಡುಗಂಟು ನೀಡಬೇಕು. ನಗರದಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತೆಯರಿಗೆ ₹2 ಸಾವಿರ ಗೌರವಧನ ನೀಡಬೇಕು. ಕಳೆದ ಜೂನ್‌ನಲ್ಲಿ ಕೇಂದ್ರ ಸರ್ಕಾರವು ಪ್ರೋತ್ಸಾಹಧನ ಜಾರಿಗೆ ತಂದಿದೆ. ಅದನ್ನು ರಾಜ್ಯದಲ್ಲೂ ಜಾರಿ ಮಾಡಬೇಕು ಎಂದು ಪ್ರತಿಭಟನಕಾರರು ಕೋರಿದರು. ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೆ.ಸೋಮಶೇಖರ್ ಯಾದಗಿರಿ, ಕಾರ್ಯದರ್ಶಿ ಡಿ.ನಾಗಲಕ್ಷ್ಮಿ, ಉಪಾಧ್ಯಕ್ಷರಾದ ಟಿ.ಸಿ.ರಮಾ ಸೇರಿ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ರಾಜ್ಯದ ವಿವಿಧೆಡೆ ಭಾರಿ ವರ್ಷಧಾರೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರದಿಂದ ಮುಂದಿನ ಒಂದು ವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳ ಹಲವೆಡೆ ಬುಧವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಸಂಕ್ಷಿಪ್ತ ಸುದ್ದಿ

'ರಾಜ್ಯಪಾಲರ ಸಹಿ ನಕಲು ಮಾಡಿ ವಂಚನೆ'

ಬೆಳಗಾವಿ: ಸರ್ಕಾರಿ ನೌಕರಿ ಕೊಡಿಸುವ ಆಮಿಷವೊಡ್ಡಿ ಹಲವರಿಗೆ ವಂಚಿಸಿದ್ದ ಆರೋಪಿ, ರಾಜ್ಯಪಾಲರು, ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮತ್ತು ಅವರ ಆಪ್ತ ಸಹಾಯಕರ ಸಹಿ ನಕಲು ಮಾಡಿದ್ದು, ಸಚಿವರ ಲೆಟರ್‌ಹೆಡ್ ಬಳಸಿದ್ದು ಎಂಬುದು ತನಿಖೆಯಿಂದ ದೃಢಪಟ್ಟಿದೆ.

ಮಂಗಳವಾರ ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೀಮಾಶಂಕರ ಗುಳೇದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ನೌಕರಿ ಕೊಡಿಸುವುದಾಗಿ ಆರೋಪಿ ಮಂಜುನಾಥ ಮಲ್ಲಸರ್ಜ 14 ಜನರಿಂದ ₹34 ಲಕ್ಷಕ್ಕೂ ಹೆಚ್ಚು ಹಣ ಪಡೆದಿದ್ದ ಬಗ್ಗೆ ದೂರು ದಾಖಲಾಗಿತ್ತು ಎಂದು ತಿಳಿಸಿದರು.

'ತನಿಖೆ ನಡೆಸುವಂತೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪತ್ರ ಬರೆದಿದ್ದರು. ಆರೋಪಿಗೆ ಈಗಾಗಲೇ ಜಾಮೀನು ಸಿಕ್ಕಿದ್ದು, ಬಿಡುಗಡೆಯಾಗಿದ್ದಾನೆ. ಸಚಿವೆ ಆಪ್ತ ಸಹಾಯಕ ಸಂಗನಗೌಡ ಭಾಗಿಯಾಗಿದ್ದಾರೆ ಎಂಬ ಆರೋಪ ಕುರಿತು ತನಿಖೆ ನಡೆದಿದೆ. ಸದ್ಯಕ್ಕೆ ಆಧಾರ ಸಿಕ್ಕಿಲ್ಲ. ಸಂಭಾಷಣೆಯ ಧ್ವನಿಮುದ್ರಿಕೆ ಕುರಿತು ದೂರುದಾರರಿಂದ ಕೇಳಲಾಗಿದೆ' ಎಂದು ತಿಳಿಸಿದರು.

147 ಪ್ರಾಥಮಿಕ ಶಾಲೆಗಳು ಮೇಲ್ದರ್ಜೆಗೆ

ಬೆಂಗಳೂರು: ರಾಜ್ಯದಲ್ಲಿನ ನಾಲ್ಕು ಕಂದಾಯ ವಿಭಾಗಗಳಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಒಟ್ಟು 147 ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಅನುಮೋದನೆ ನೀಡಿದೆ.

ಶಾಲೆಯಲ್ಲಿ ಒಂದರಿಂದ ಎಂಟನೇ ತರಗತಿವರೆಗೆ ಓದುತ್ತಿರುವ ಮಕ್ಕಳ ಸಂಖ್ಯೆ, ಮೂಲಸೌಕರ್ಯಗಳ ಲಭ್ಯತೆ ಸೇರಿದಂತೆ ಅಗತ್ಯ ಮಾನದಂಡಗಳನ್ನು ಪೂರೈಸಿದ ಶಾಲೆಗಳನ್ನು ಪಟ್ಟಿ ಮಾಡಲಾಗಿದ್ದು, ಪಟ್ಟಿ ಮಾಡಿದ ಶಾಲೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. 2025–26ನೇ ಸಾಲಿನಿಂದಲೇ ಇದು ಜಾರಿಗೆ ಬರಲಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹೊರಡಿಸಿರುವ ಆದೇಶದಲ್ಲಿ ತಿಳಿಸಿದೆ.

ಬೆಳಗಾವಿ ವಿಭಾಗದಲ್ಲಿ 88, ಬೆಂಗಳೂರು ವಿಭಾಗದಲ್ಲಿ 49, ಕಲಬುರಗಿ ವಿಭಾಗದಲ್ಲಿ ಆರು ಹಾಗೂ ಮೈಸೂರು ವಿಭಾಗದಲ್ಲಿ ನಾಲ್ಕು ಶಾಲೆಗಳು ಈ ಪಟ್ಟಿಯಲ್ಲಿ ಸೇರಿವೆ.

ಮರುಪರೀಕ್ಷೆ ಫಲಿತಾಂಶ ಪ್ರಕಟ: ಪ್ರಸಕ್ತ ಸಾಲಿನ ಮರು ಪರೀಕ್ಷೆಯಲ್ಲಿ ಅರ್ಹತೆ ಪಡೆದ ಡಿಪ್ಲೊಮಾ ಅಭ್ಯರ್ಥಿಗಳಿಗೆ ರ‍್ಯಾಂಕ್ ನೀಡಿ, ಡಿಸಿಇಟಿ ಅಂತಿಮ ಹಂತದ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರಕಟವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಲ್ಲಿ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, (ರಿ)., ಚಿತ್ರದುರ್ಗ.

ರಾಷ್ಟ್ರೀಯ ಆರೋಗ್ಯ ಅಭಿಯಾನ (NHM) ತಾಯಿ ಮತ್ತು ಮಕ್ಕಳ ಆಸ್ಪತ್ರೆ (ಎಂ.ಸಿ.ಹೆಚ್) 3ನೇ ಮಹಡಿ, ಚಿತ್ರದುರ್ಗ.

No.DPMU/NHM/ನೇಮಕಾತಿ /CTA/ 123 /2025-26 ದಿನಾಂಕ: 11.08.2025

ಪ್ರಕಟಣೆ

2025–26ನೇ ಸಾಲಿನ ಸಾಮಾನ್ಯ ವರ್ಗಾವಣೆಯಿಂದ ಖಾಲಿಯಾದ ಶುಶ್ರೂಷಕಿಯರ ಹುದ್ದೆಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಲು ಉಲ್ಲೇಖಿತ ಪತ್ರದಲ್ಲಿ ಆದೇಶವಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಿದೆ.

ಶುಶ್ರೂಷಕಿಯರು (Staff Nurse)ಹುದ್ದೆಗಳ ಸಂಖ್ಯೆ: 10, (ವಯೋಮಿತಿ:–45 ವರ್ಷದೊಳಗೆ)

ವಿದ್ಯಾರ್ಹತೆ: 1. ನರ್ಸಿಂಗ್ ವಿದ್ಯಾರ್ಹತೆಯನ್ನು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು. ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ನೊಂದಣಿಯಾಗಿರಬೇಕು. 2. ಎರಡು ವರ್ಷಗಳ ಅನುಭವ.

" ಶುಶ್ರೂಷಕಿಯರ ಹುದ್ದೆಯ ವರ್ಗೀಕರಣ" ಮಾಸಿಕ ಸಂಚಿತ ವೇತನ: 14,187/– (ರೋಸ್ಟರ್: 62 ರಿಂದ 71 ರವರೆಗೆ)

ಮೀಸಲಾತಿ	ಸಾಮಾನ್ಯ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಕ.ಮಾ	ಯೋಜನಾ ನಿರಾಶ್ರಿತ ಅಭ್ಯರ್ಥಿ	ಮಾ.ಸೈ	ಅಂಗವಿಕಲ ಅಭ್ಯರ್ಥಿ	ಒಟ್ಟು ಹುದ್ದೆಗಳು
ಸಾಮಾನ್ಯ	1	1	1	–	–	1	–	4
ಪ.ಜಾ.	–	–	1	–	–	–	–	1
ಪ.ಪಂ.	–	1	1	–	–	–	–	2
ಪ.ವರ್ಗ–1	–	–	–	–	–	–	–	–
ಪ.ವರ್ಗ–2ಎ	–	–	1	–	–	1	–	2
ಪ.ವರ್ಗ–2ಬಿ	–	–	–	–	–	–	–	–
ಪ.ವರ್ಗ–3ಎ	–	–	–	–	–	–	–	–
ಪ.ವರ್ಗ–3ಬಿ	–	1	–	–	–	–	–	1
ಒಟ್ಟು	1	3	4	–	–	2	0	10

ಸದರಿ ನೇಮಕಾತಿಯನ್ನು ಮೆರಿಟ್ ಮತ್ತು ರೋಸ್ಟರ್ ಆಧಾರದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ನಿಗದಿತ ಬಯೋಡಾಟಾ, ವಿದ್ಯಾರ್ಹತೆಯ ದೃಡೀಕೃತ ದಾಖಲಾತಿಗಳನ್ನು ದಿನಾಂಕ 11.08.2025 ರಿಂದ ದಿನಾಂಕ: 21.08.2025 ರ ಸಂಜೆ: 5.30 ರೊಳಗೆ ಜಿಲ್ಲಾ ಯೋಜನಾ ನಿರ್ವಹಣಾ ಘಟಕ, (ಎನ್.ಹೆಚ್.ಎಂ) ತಾಯಿ ಮತ್ತು ಮಕ್ಕಳ ಆಸ್ಪತ್ರೆ (ಎಂ.ಸಿ.ಹೆಚ್) 3ನೇ ಮಹಡಿ ಚಿತ್ರದುರ್ಗಇಲ್ಲಿ ಅರ್ಜಿ ಸಲ್ಲಿಸಲು ಸೂಚಿಸಿದೆ.

ಇನ್ನೂ ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ನಂ: 9449843104, ಇಲ್ಲಿ ಸಂಪರ್ಕಿಸುವುದು.

DIPR/CTA/KSMCA/282/2025-26 ಸಹಿ/– ಉಪಾಧ್ಯಕ್ಷರು, ಜಿಲ್ಲಾ ಆರೋಗ್ಯ ಮತ್ತು ಕು.ಕ. ಸೊಸೈಟಿ (ರಿ), ಚಿತ್ರದುರ್ಗ.

ಕರ್ನಾಟಕ ಸರ್ಕಾರ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಆಯುಕ್ತರ ಕಾರ್ಯಾಲಯ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18, ದೂರವಾಣಿ:26709689/ 26706775, Email: endowmentcommissioner@gmail.com.

ಸಂಖ್ಯೆ: HRICE-ADM0ADM8/180/2024/E-1426188 ದಿನಾಂಕ :12.08.2025

ಪ್ರಕಟಣೆ

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಕಲಂ 25 ಅನ್ವಯ ರಾಜ್ಯದಲ್ಲಿನ 'ಎ' ಪ್ರವರ್ಗದ ಈ ಕೆಳಕಂಡ 6 ಅಧಿಸೂಚಿತ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿಯ ಅವಧಿಯು ದೇವಾಲಯದ ಹೆಸರಿನ ಮುಂದೆ ನಮೂದಿಸಿರುವ ದಿನಾಂಕಗಳಂದು ಮುಕ್ತಾಯವಾಗಲಿರುವುದರಿಂದ ಸದರಿ ದೇವಾಲಯಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಕಾಯ್ದೆ 2011ರ ಕಲಂ 25ರನ್ವಯ ಹೊಸದಾಗಿ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ದಿನಾಂಕ: 13.11.2024 ಮತ್ತು 27.03.2025ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 7 ಮತ್ತು 8ನೇ ಸಭೆಯ ವಿಷಯ ಸೂಚಿ ಸಂಖ್ಯೆ:(5) ಮತ್ತು (3)ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಕ್ರ. ಸಂ.	ದೇವಾಲಯದ ಹೆಸರು ಮತ್ತು ವಿಳಾಸ	ಮೂರು ವರ್ಷಗಳ ವ್ಯವಸ್ಥಾಪನಾ ಸಮಿತಿಯ ಅವಧಿಯು ಮುಕ್ತಾಯಗೊಳ್ಳುವ ದಿನಾಂಕ
1.	ಶ್ರೀ ಸೀಮಿನಾಗನಾಥ ಮಂದಿರ ದೇವಾಲಯ, ಹಳ್ಳಿಖೇಡ ಗ್ರಾಮ, ಹುಮ್ನಾಬಾದ್ ತಾಲ್ಲೂಕು	16.03.2025
2.	ಶ್ರೀ ಅಮೃತೇಶ್ವರಿ ದೇವಾಲಯ, ತಿರುವೈಲು ಗ್ರಾಮ, ವಾಮಂಜೂರು ಅಂಚೆ, ಮಂಗಳೂರು ತಾಲ್ಲೂಕು	16.03.2025
3.	ಶ್ರೀ ಕಾಲಭೈರವೇಶ್ವರ ದೇವಾಲಯ, ವದ್ದಿಗೆರೆ ಗ್ರಾಮ, ಹಿರಿಯೂರು ತಾಲ್ಲೂಕು	23.03.2025
4.	ಶ್ರೀ ಅಪ್ರಮೇಯಸ್ವಾಮಿ ದೇವಾಲಯ, ಮಳೂರು, ಚನ್ನಪಟ್ಟಣ ತಾಲ್ಲೂಕು	28.03.2025
5.	ಶ್ರೀ ಮಹಾಗಣಪತಿ ದೇವಾಲಯ, ಕಾಟಿಪಳ್ಳ ಗ್ರಾಮ, ಮಂಗಳೂರು ತಾಲ್ಲೂಕು	11.08.2025
6.	ಶ್ರೀ ಮೈಲಾರ ಮಲ್ಲಣ್ಣ ದೇವಾಲಯ, ಖಾನಾಪುರ ಗ್ರಾಮ, ಭಾಲ್ಕಿ ತಾಲ್ಲೂಕು	11.08.2025

ಹಾಗೂ ರಾಜ್ಯದಲ್ಲಿನ 'ಎ' ಪ್ರವರ್ಗದ ಈ ಕೆಳಕಂಡ 2 ಅಧಿಸೂಚಿತ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಕುರಿತು ಆಸಕ್ತ ಭಕ್ತಾಧಿಗಳು/ಸಾರ್ವಜನಿಕರಿಂದ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಲು ತಿಳಿಸಿ ದಿನಾಂಕ: 06.11.2023 ಮತ್ತು 14.03.2025 ರಂದು ಪ್ರಕಟಣೆ ಹೊರಡಿಸಲಾಗಿದ್ದು, ಆದರೆ ಕೆಲವು ದೇವಾಲಯಗಳಿಗೆ ವ್ಯವಸ್ಥಾಪನಾ ಸಮಿತಿ ರಚಿಸುವಂತೆ ಕೋರಿ ಹೊಸದಾಗಿ ಹಲವಾರು ಮನವಿಗಳು ಸ್ವೀಕೃತವಾಗುತ್ತಿರುವುದರಿಂದ ಈ ಅಧಿಸೂಚಿತ ಸಂಸ್ಥೆ/ದೇವಾಲಯಗಳಿಗೆ ವ್ಯವಸ್ಥಾಪನಾ ಸಮಿತಿಗಳನ್ನು ರಚಿಸಲು ಅರ್ಜಿಗಳನ್ನು ಆಹ್ವಾನಿಸಿ ಮರು ಪ್ರಕಟಣೆಯನ್ನು ಹೊರಡಿಸಲು ರಾಜ್ಯ ಧಾರ್ಮಿಕ ಪರಿಷತ್ತಿನ ಅಧ್ಯಕ್ಷರಿಂದ ಅನುಮೋದನೆಗೊಂಡಿರುತ್ತದೆ.

ಕ್ರ.ಸಂ.	ದೇವಾಲಯದ ಹೆಸರು ಮತ್ತು ವಿಳಾಸ
1.	ಶ್ರೀ ಹಾಸನಾಂಭ ದೇವಾಲಯ, ಹಾಸನ ನಗರ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ
2.	ಶ್ರೀ ಹಳೇಕೋಟೆ ಮಾರಿಯಮ್ಮ ದೇವಾಲಯ, ಬೋಳಾರ ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ

ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯ ನಿರ್ಣಯದಂತೆ ಹಾಗೂ ರಾಜ್ಯ ಧಾರ್ಮಿಕ ಪರಿಷತ್ತಿನ ಅಧ್ಯಕ್ಷರಿಂದ ಅನುಮೋದನೆಗೊಂಡಿರುವಂತೆ ಈ ಮೇಲ್ಕಂಡ ಒಟ್ಟು 8 "ಎ" ಪ್ರವರ್ಗದ ದೇವಾಲಯಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 25 ರನ್ವಯ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಆಸಕ್ತ ಭಕ್ತಾಧಿಗಳಿಂದ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ಹೊರಡಿಸಲಾಗಿದೆ.

ಸದರಿ ದೇವಾಲಯಗಳ ವ್ಯವಸ್ಥಾಪನಾ ಸಮಿತಿಗೆ ಕನಿಷ್ಠ 25 ವರ್ಷಕ್ಕಿಂತ ಮೇಲ್ಪಟ್ಟ ಆಸ್ತಿಕ ಭಕ್ತಾಧಿಗಳು ಸದಸ್ಯತ್ವ ಕೋರಿ ಅರ್ಜಿಯನ್ನು ನಿಗಧಿತ ನಮೂನೆ–1(ಬಿ)(22ನೇ ನಿಯಮ) ನಮೂನೆಯಲ್ಲಿ ಭರ್ತಿ ಮಾಡಿ, ಅರ್ಜಿಯನ್ನು ದಿನಾಂಕ:02.09.2025 ರೊಳಗಾಗಿ **"ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ,ಬೆಂಗಳೂರು–560018"** ಇಲ್ಲಿಗೆ ನೇರವಾಗಿ ಸಲ್ಲಿಸತಕ್ಕದ್ದು, ಅಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು, ನಿಗಧಿತ ಅವಧಿಯ ನಂತರದಲ್ಲಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ನಿಗಧಿತ ಅರ್ಜಿ ನಮೂನೆಯ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮತ್ತು www.itms.kar.gov.in ನಲ್ಲಿ ಲಭ್ಯವಿರುತ್ತದೆ.

ಸಹಿ/–
(ಡಾ|| ಎಂ.ವಿ.ವೆಂಕಟೇಶ್, ಭಾ.ಆ.ಸೇ)
ಸದಸ್ಯ ಕಾರ್ಯದರ್ಶಿ, ರಾಜ್ಯ ಧಾರ್ಮಿಕ ಪರಿಷತ್ತು ಹಾಗೂ ಆಯುಕ್ತರು,
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು

ವಾಸಸಂಇ/ವಾ.ಪ್ರ/2288/2025–26

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.3, ಅರಸೀಕೆರೆ, ಹಾಸನ ಜಿಲ್ಲೆ.

ಸಂ:ಕಾಇಂ/ವಿಜನಿನಿ/ಎಯೋವಿ.3/ಅ/ಟೆಂ.ಪ್ರ–05/2025–26/617 ದಿನಾಂಕ:08.08.2025

ಟೆಂಡರ್ ಪ್ರಕಟಣೆ ಸಂಖ್ಯೆ:05/2025–26/617 ದಿ:08.08.2025 (ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ ಇವರು ಕೆಳಕಂಡ ಕಾಮಗಾರಿಗಳಿಗೆ ಕಾಮಗಾರಿಗೆ ಶೇಕಡಾವಾರು ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿರುತ್ತದೆ. ವಿವರಗಳು ಕೆಳಗಿನಂತಿವೆ. ಕ್ರ.ಸಂ.ಕಾಮಗಾರಿ ವಿವರ: 1)Improvements Of Road from Adaguru gram Panchayat Adaguru Kere to Dasagodanahalli Village in Madihalli Hobali in Beluru taluk (Reserved for Cat 2A Contractor) ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)59.04 ಗುತ್ತಿಗೆದಾರರ ದರ್ಜೆ ಕೆ.ಪಿ.ಡಬ್ಲ್ಯೂ..ಡಿ 3ನೇ ದರ್ಜೆ ಹಾಗೂ ಅದಕ್ಕಿಂತ ಮೇಲ್ಪಟ್ಟ ಕ್ಯಾಟಗರಿ–02ಎ ಸಿವಿಲ್ ಗುತ್ತಿಗೆದಾರರು 2)Improvements Of Road in Adaguru gram Panchayat, Devarahalli Village limits in Madhihalli Hobali,Beluru taluk. (Reserved for Cat 2A Contractor) ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)42.33 ಗುತ್ತಿಗೆದಾರರ ದರ್ಜೆ ಕೆ.ಪಿ.ಡಬ್ಲ್ಯೂ..ಡಿ 3ನೇ ದರ್ಜೆ ಹಾಗೂ ಅದಕ್ಕಿಂತ ಮೇಲ್ಪಟ್ಟ ಕ್ಯಾಟಗರಿ–02ಎ ಸಿವಿಲ್ ಗುತ್ತಿಗೆದಾರರು 3)Improvements Of Road in Madaghatta gram Panchayat, Mallarahosahalli Village limits in Bikkod Hobali, Beluru taluk. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)42.33 ಗುತ್ತಿಗೆದಾರರ ದರ್ಜೆ ಕೆ.ಪಿ.ಡಬ್ಲ್ಯೂ..ಡಿ 3ನೇ ದರ್ಜೆ ಹಾಗೂ ಅದಕ್ಕಿಂತ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು 4)Improvements Of Road in Hagare gram Panchayat, Betadalur Village through Sangaiahna Koppalu Village to Adavi Bantenahalli Village in Madihalli Hobali, Beluru taluk ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)67.71 ಗುತ್ತಿಗೆದಾರರ ದರ್ಜೆ ಕೆ.ಪಿ.ಡಬ್ಲ್ಯೂ..ಡಿ 3ನೇ ದರ್ಜೆ ಹಾಗೂ ಅದಕ್ಕಿಂತ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು 5)Improvements Of Road in Kogilemane gram Panchayat, Malagere Village to cheluvegowdana Koppalu village in Kasaba Hobali, Beluru taluk. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)59.20 ಗುತ್ತಿಗೆದಾರರ ದರ್ಜೆ ಕೆ.ಪಿ.ಡಬ್ಲ್ಯೂ..ಡಿ 3ನೇ ದರ್ಜೆ ಹಾಗೂ ಅದಕ್ಕಿಂತ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು 6)Improvements Of Road in Dabbe gram Panchayat,Keethur Village in Arehalli Hobali,Beluru taluk. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)67.59 ಗುತ್ತಿಗೆದಾರರ ದರ್ಜೆ ಕೆ.ಪಿ.ಡಬ್ಲ್ಯೂ..ಡಿ 3ನೇ ದರ್ಜೆ ಹಾಗೂ ಅದಕ್ಕಿಂತ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು 7)Improvements Of Road in Hagare gram Panchayat, Hasana-Beluru Main road to Keshavapura Village in Madihalli Hobali, Beluru taluk. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)84.53 ಗುತ್ತಿಗೆದಾರರ ದರ್ಜೆ ಕೆ.ಪಿ.ಡಬ್ಲ್ಯೂ..ಡಿ 3ನೇ ದರ್ಜೆ ಹಾಗೂ ಅದಕ್ಕಿಂತ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು 8)Improvements Of Road in Madaghata gram Panchayat, Andur Village limits in Bikkodu Hobali, Beluru taluk. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)59.17 ಗುತ್ತಿಗೆದಾರರ ದರ್ಜೆ ಕೆ.ಪಿ.ಡಬ್ಲ್ಯೂ..ಡಿ 3ನೇ ದರ್ಜೆ ಹಾಗೂ ಅದಕ್ಕಿಂತ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ.ಎಮ್.ಡಿ/ಷರತ್ತುಗಳು/ಬಿಡ್ಡುದಾರರ ಅರ್ಹತೆ/ಪೂರ್ವಭಾವಿ ಸಭೆಯ ವಿವರ/ಟೆಂಡರ್ ನಿಭಂಧನೆಗಳು/ಪೂರ್ವ ಅರ್ಹತಾ ಮಾನದಂಡ ಹಾಗೂ ಇತರೆ ವಿವರಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ದಿನಾಂಕ:13.08.2025 ರಿಂದ ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ಧವಾಗಿರುವುದಿಲ್ಲ. ಹೆಚ್ಚಿನ ವಿವರಗಳಿಗೆ ಇ–ಸಂಗ್ರಹಣಾ ಕೋಶ, ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, http://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ನೀಡಿರುವ ಕಛೇರಿಯ ವಿಳಾಸದಲ್ಲಿ ಕಛೇರಿಯ ಕೆಲಸದ ಸಮಯದಲ್ಲಿ ಪಡೆಯ ಬಹುದಾಗಿದೆ. ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ, ದೂರವಾಣಿ ಸಂಖ್ಯೆ:08174–233111 e-mail: eeypd3ask@gmail.com

ಸಹಿ/–ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3 ಅರಸೀಕೆರೆ

ವಾಸಾಸಂಇ/ಹಿಸನಿ/ಹಾಸನ/443/ಕೆಎಸ್‌ಎಂಸಿಎ/2025–26

ಭಾರತೀಯ ರಿಸರ್ವ್ ಬ್ಯಾಂಕ್
ಬೆಂಗಳೂರು ಪ್ರಾದೇಶಿಕ ಕಚೇರಿ

ಸಾರ್ವಜನಿಕ ಸೂಚನೆ

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949ರ ಕಲಂ 35 ಎ ಜೊತೆ ಓದಲಾದ ಕಲಂ 56ರ ಅಡಿಯಲ್ಲಿ ನಿರ್ದೇಶನಗಳು – ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ಬೆಂಗಳೂರು, (ಕರ್ನಾಟಕ) – ಅವಧಿ ವಿಸ್ತರಣೆ

ಭಾರತೀಯ ರಿಸರ್ವ್ ಬ್ಯಾಂಕು, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949ರ ಕಲಂ 35 ಎ ಜೊತೆ ಓದಲಾದ ಕಲಂ 56ರ ಅಡಿಯಲ್ಲಿ ತನ್ನ ದಿನಾಂಕ ಜನವರಿ 02, 2020ರ ನಿರ್ದೇಶನ ಸಂಖ್ಯೆ DOS.CO.UCB.BSD.III D-2/12.23.283/2019-20 ಮೂಲಕ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ಬೆಂಗಳೂರು, ಕರ್ನಾಟಕ–ಈ ಬ್ಯಾಂಕಿಗೆ ನಿರ್ದೇಶನಗಳನ್ನು, ಜುಲೈ 10, 2020ರ ವ್ಯವಹಾರದ ಅವಧಿ ಮುಗಿಯುವವರೆಗೆ, ಆರು ತಿಂಗಳ ಅವಧಿಗೆ ಜಾರಿಯಲ್ಲಿ ಇರುವಂತೆ, ನೀಡಿತ್ತು ಮತ್ತು ಕಾಲಕಾಲಕ್ಕೆ ಮಾಡಲಾದ ಮಾರ್ಪಾಡುಗಳೊಂದಿಗೆ ಕೊನೆಯ ಬಾರಿಗೆ ಮೇ 6, 2025 ರಂದು ನೀಡಿದ ನಿರ್ದೇಶನ ಸಂಖ್ಯೆ DOR.MON/D-08/12.23.283/2025-26ರ ಅನ್ವಯ ಅಗಸ್ಟ್ 10, 2025ರ ವ್ಯವಹಾರದ ಅವಧಿ ಮುಗಿಯುವವರೆಗೆ ವಿಸ್ತರಿಸಿತ್ತು. ಸಾರ್ವಜನಿಕ ಹಿತದೃಷ್ಟಿಯಿಂದ ಈ ನಿರ್ದೇಶನಗಳನ್ನು ಅಗಸ್ಟ್ 10, 2025ರ ವ್ಯವಹಾರದ ಅವಧಿ ಮುಗಿದ ನಂತರವೂ ವಿಸ್ತರಿಸುವುದು ಅಗತ್ಯ ಎಂದು ಭಾರತೀಯ ರಿಸರ್ವ್ ಬ್ಯಾಂಕಿಗೆ ಮನವರಿಕೆ ಆಗಿದೆ.

2. ಅದರಂತೆ, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949ರ ಕಲಂ 35 ಎ ಉಪ ಕಲಂ (1) ರ ಜೊತೆ ಓದಲಾದ ಕಲಂ 56 ರ ಅಡಿಯಲ್ಲಿ ತನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ನಿರ್ದೇಶನವನ್ನು ಅಗಸ್ಟ್ 10, 2025ರ ವ್ಯವಹಾರದ ಅವಧಿ ಮುಗಿದ ಸಮಯದಿಂದ ನವೆಂಬರ್ 10, 2025 ರ ವ್ಯವಹಾರದ ಅವಧಿ ಮುಗಿಯುವವರೆಗೆ, ಮೂರು ತಿಂಗಳ ಅವಧಿಗೆ, ಪರಿಶೀಲನೆಗೆ ಒಳಪಟ್ಟು, ವಿಸ್ತರಿಸಿದೆ.

3. ಮೇಲೆ ಹೇಳಿದ ನಿರ್ದೇಶನಗಳಲ್ಲಿ ವಿಧಿಸಲಾದ ಉಳಿದ ಎಲ್ಲ ನಿಯಮ ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಬೆಂಗಳೂರು
ಅಗಸ್ಟ್ 13, 2025

ಸಹಿ/–
ಪ್ರಾದೇಶಿಕ ನಿರ್ದೇಶಕರು

ಆಯುಷ್ ಇಲಾಖೆ

ಧನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು–560 009.
ಇ–ಮೇಲ್: directorayush@gmail.com
ದೂರವಾಣಿ ಸಂಖ್ಯೆ: 080–22876553, ಫ್ಯಾಕ್ಸ್: 080–22340139

ಸಂಖ್ಯೆ: AYUSH/65/DEV2/2025 ದಿನಾಂಕ: 02.08.2025

ಸಾರ್ವಜನಿಕ ಪ್ರಕಟಣೆ

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಬಿ.ಎ.ಎಂ.ಎಸ್ (B.A.M.S) ಪದವಿ ಕೋರ್ಸ್‌ನ ವ್ಯಾಸಂಗ ಮಾಡಲು ಪಾರಂಪರಿಕ ವೈದ್ಯರ ಮಕ್ಕಳಿಗೆ ವಿಶೇಷ ಪ್ರಕರಣದಡಿ ಪ್ರವೇಶಾತಿ ಪರಿಗಣಿಸಿ 2017–18ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಸರ್ಕಾರಿ ಕೋಟಾ ಸೀಟುಗಳಲ್ಲಿ ಎರಡು (02) ಸೀಟುಗಳನ್ನು ಮೀಸಲಿರಿಸಿದೆ.

ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಳ್ಳಾರಿ ಹಾಗೂ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ, ಮೈಸೂರು ಇಲ್ಲಿ ತಲಾ ಒಂದು ಸೀಟನ್ನು ಕಾಯ್ದಿರಿಸಲಾಗಿದೆ.

B.A.M.S ಪದವಿ ಕೋರ್ಸ್‌ನ ಪ್ರವೇಶಾತಿಗೆ National Commission for Indian System of Medicine, ನವದೆಹಲಿ ಇವರು NEET ಪರೀಕ್ಷೆಯ ಅರ್ಹತೆಯನ್ನು ಹೊಂದುವುದು ಕಡ್ಡಾಯಗೊಳಿಸಲಾಗಿರುತ್ತದೆ, ಆದ್ದರಿಂದ ಅರ್ಹ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ನಿಯಮಾನುಸಾರ NEET RANK ಜೇಷ್ಠತೆಯ ಆಧಾರದ ಮೇಲೆ ಅವಕಾಶ ಕಲ್ಪಿಸಲಾಗುವುದು.

ಪಾರಂಪರಿಕ ವೈದ್ಯರ ಮಕ್ಕಳು 2025–26ನೇ ಶೈಕ್ಷಣಿಕ ಸಾಲಿನಲ್ಲಿ NEET ಪರೀಕ್ಷೆಯಲ್ಲಿ ಭಾಗವಹಿಸಿ ಅರ್ಹತೆ ಪಡೆದ ವಿದ್ಯಾರ್ಥಿಗಳು ಮಾತ್ರ ಸದರಿ ಸೀಟುಗಳ ಪ್ರವೇಶಾತಿಗೆ ಅರ್ಜಿಗಳನ್ನು **ದಿನಾಂಕ: 05–09–2025ರ ಸಂಜೆ 5:30 ರೊಳಗಾಗಿ** ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು ಇಲ್ಲಿಗೆ ಸಲ್ಲಿಸಲು ಸೂಚಿಸಿದೆ.

ಹೆಚ್ಚಿನ ವಿವರಗಳಿಗಾಗಿ ಆಯಾ ಜಿಲ್ಲೆಗಳ ಜಿಲ್ಲಾ ಆಯುಷ್ ಅಧಿಕಾರಿಗಳನ್ನು ಸಂಪರ್ಕಿಸುವುದು.

ಸಹಿ/–
ಆಯುಕ್ತರು
ಆಯುಷ್ ಇಲಾಖೆ

ವಾಸಾಸಂಇ/ವಾ.ಪ್ರ/2284/ಎಂಎಎ/2025–26

ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ (ನೋಂ)
6ನೇ ಮಹಡಿ, #1–4, ಐಟಿ ಪಾರ್ಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು–560010.

No: 84801 KMDS/TECH/STIM/20/2023-ACCT Date: 12.08.2025

ಅಲ್ಪಾವಧಿ ಮರು–ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಎಂಡಿಎಸ್‌ಗೆ ಅಗತ್ಯವಿರುವ ಕೆಳಗಿನ ಸೇವೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಬಿಬಿಪಿಎಸ್, ಚಲನ್ ಆಧಾರಿತ ಪಾವತಿ, ಪಾವತಿ ಗೇಟ್‌ವೇ, ಬ್ಯಾಂಕರ್ಸ್ ಸಾಫ್ಟ್‌ವೇರ್‌ನೊಂದಿಗೆ ಸಂಯೋಜಿತವಾದ ಪರಿಹಾರ ಮತ್ತು ಇ– ಸ್ವೀಕೃತಿ ಸಾಫ್ಟ್‌ವೇರ್ (ಕ್ಲೈಂಟ್) ನಂತಹ ವಿವಿಧ ಪಾವತಿ ವಿಧಾನಗಳನ್ನು ಒದಗಿಸಲು ಬ್ಯಾಂಕ್‌ನ ಆಯ್ಕೆ ಮತ್ತು ಇ–ಖಾತಾ ನಾಗರಿಕ ಸಹಾಯ ಕೇಂದ್ರಕ್ಕಾಗಿ ಕಾಲ್ ಸೆಂಟರ್ ಸೇವೆಗಳನ್ನು ಒದಗಿಸಲು ವೆಬ್‌ಸೈಟ್ https://kppp.karnataka.gov.in ಗೆ ಭೇಟಿ ನೀಡಿ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದು.

ಮರು ಟೆಂಡರ್ ವಿವರ

ಮರು ಟೆಂಡರ್ ಸಂಖ್ಯೆ : DMA/2024-25/SE4439/Call-2

ಟೆಂಡರ್ ಹೆಸರು : ಬಿಬಿಪಿಎಸ್, ಚಲನ್ ಆಧಾರಿತ ಪಾವತಿ, ಪಾವತಿ ಗೇಟ್‌ವೇ, ಬ್ಯಾಂಕರ್ಸ್ ಸಾಫ್ಟ್‌ವೇರ್‌ನೊಂದಿಗೆ ಸಂಯೋಜಿತವಾದ ಪರಿಹಾರ ಮತ್ತು ಇ–ಸ್ವೀಕೃತಿ ಸಾಫ್ಟ್‌ವೇರ್ (ಕ್ಲೈಂಟ್) ನಂತಹ ವಿವಿಧ ಪಾವತಿ ವಿಧಾನಗಳನ್ನು ಒದಗಿಸಲು ಬ್ಯಾಂಕ್‌ನ ಆಯ್ಕೆಗಾಗಿ.

ಮರು ಟೆಂಡರ್ ಸಂಖ್ಯೆ : DMA/2025-26/SE5717/Call-2

ಟೆಂಡರ್ ಹೆಸರು : ಇ–ಖಾತಾ ನಾಗರಿಕ ಸಹಾಯ ಕೇಂದ್ರಕ್ಕಾಗಿ ಕಾಲ್ ಸೆಂಟರ್ ಸೇವೆಗಳನ್ನು ಒದಗಿಸುವುದು.

(1) ಟೆಂಡರ್ ಪ್ರಕಟಿಸುವ ದಿನಾಂಕ : 13.08.2025. (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22.08.2025 ಸಂಜೆ 5.30 ಗಂಟೆಗೆ. (3) ಬಿಡ್ ತೆರೆಯುವ ದಿನಾಂಕ : 25.08.2025 ಬೆಳಿಗ್ಗೆ 11.00 ಗಂಟೆಗೆ.

ಮೇಲಿನ ನಿರ್ಧಿಷ್ಟ ವಿಶೇಷತೆ ವಿವರಗಳಿಗೆ ವೆಬ್‌ಸೈಟ್ : www.mrc.gov.in ನ್ನು ವೀಕ್ಷಿಸಿ.

ಸಹಿ/–
ಜಂಟಿ ನಿರ್ದೇಶಕರು (ಸು), ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ, ಬೆಂಗಳೂರು.

DIPR/CP/2290/Zen/2025-26

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080–22255210

ಸಂ:ಕಾನಿಅ/ಕಟ್ಟಡ–1/ಸಕಾನಿಅ–4/ಸಕಾನಿಅ–5/2025–26/31 ದಿನಾಂಕ:11.08.2025

ಅಲ್ಪಾವಧಿ ಟೆಂಡರ್‌ಗೆ ಆಹ್ವಾನ (IFT)

ಕಾರ್ಯನಿರ್ವಾಹಕ ಅಭಿಯಂತರರು, ನಂ.1, ಕಟ್ಟಡಗಳ ವಿಭಾಗ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಬಿಡ್‌ದಾರರಿಂದ ಟೆಂಡರ್ ಆಹ್ವಾನಿಸಿರುವರು. **(https://kppp.karnataka.gov.in)** (Standard Tender Document KW1 & KW2). ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ಮತ್ತು ಸಲ್ಲಿಸಲು ಕೊನೆಯ **ದಿನಾಂಕ: 18.08.2025, 16.00 ಗಂಟೆಯೊಳಗೆ.** ಕೆಪಿಪಿ ಪೋರ್ಟಲ್‌ನ ಮಾರ್ಗಸೂಚಿಗಳ ಅನ್ವಯ ಟೆಂಡರ್‌ಗಳನ್ನು ತೆರೆಯಲಾಗುವುದು. ಇತರೆ ವಿವರಗಳನ್ನು ಟೆಂಡರ್ ದಸ್ತಾವೇಜುಗಳಲ್ಲಿ ನೋಡುವುದು.

ಕಾಮಗಾರಿಗಳ ವಿವರಗಳು ಇಂತಿವೆ:

(1) ಬೆಂಗಳೂರಿನ ಕುಮಾರ ಕೃಪಾ ರಸ್ತೆಯಲ್ಲಿರುವ ಹೊಸ ಕುಮಾರ ಕೃಪಾ ಅತಿಥಿ ಗೃಹ ಕಟ್ಟಡದ 3ನೇ ಮಹಡಿಯಲ್ಲಿ ಉತ್ತರ ಭಾಗ ಮತ್ತು ದಕ್ಷಿಣ ಭಾಗಗಳಲ್ಲಿ ಹಾನಿಗೊಳಗಾದ ಫಾಲ್ಸ್ ಸೀಲಿಂಗ್ ಬದಲಾವಣೆ, ಲಿಫ್ಟ್ ಪ್ರದೇಶದ ಬಳಿ ದುರಸ್ತಿ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳು. ಅಂದಾಜು ಮೊತ್ತ: **ರೂ. 14.68 ಲಕ್ಷಗಳು**. ಇಎಂಡಿ: **ರೂ. 18,400/–**. ಪ್ರವರ್ಗ: **ಎಸ್‌ಸಿ.** ಕರೆ: **2ನೇ ಕರೆ.** Work_Indent No.21043/Call-2

(2) ಬೆಂಗಳೂರಿನ ರಾಜಭವನ ಆವರಣದಲ್ಲಿರುವ ಶ್ರೀ ಸ್ವಾಮಿ ವಿವೇಕಾನಂದ ಭವನ ಕಟ್ಟಡದ ಎದುರುಗಡೆ ಸಿಆರ್‌ಪಿಎಫ್ ಪೊಲೀಸರಿಗಾಗಿ ಶೌಚಾಲಯ ನಿರ್ಮಾಣ ಮತ್ತು ಟೆನಿಸ್ ಕೋರ್ಟ್ ಪ್ರದೇಶದ ಎದುರುಗಡೆ ತೆರೆದ ಅಡುಗೆ ಮನೆ ನಿರ್ಮಾಣ ಮತ್ತು ಅಗ್ನಿಶಾಮಕ ಕಛೇರಿ ಕಟ್ಟಡಕ್ಕೆ ಬಣ್ಣ ಬಳಿಯುವುದು, ಗೋಡೆಗಳಿಂದ ಸೋರಿಕೆಯನ್ನು ತಡೆಗಟ್ಟುವುದು ಮತ್ತು ಸರ್ವರ್ ಹಾಗೂ ಮೀಡಿಯಾ ಕೊಠಡಿಗಳಿಗೆ ವಿಭಜಕಗಳನ್ನು ಒದಗಿಸುವುದು ಮತ್ತು ಇತರೆ ಸಂಬಂಧಿತ ಕಾಮಗಾರಿಗಳು. ಅಂದಾಜು ಮೊತ್ತ: **ರೂ.54.18 ಲಕ್ಷಗಳು.** ಇಎಂಡಿ: **ರೂ. 1,08,400/– (ರೂ. 01 ಲಕ್ಷ ಇಎಂಡಿ ಮೂಲಕ ಹಾಗೂ ರೂ. 8400 ಬಿಜಿ ಮೂಲಕ)** ಪ್ರವರ್ಗ: **ಇತರೆ.** ಕರೆ:**2ನೇ ಕರೆ.** PWD/2024-25/BD/Work Indent no.18053/Call -2.

(3) ಬೆಂಗಳೂರಿನ ನಂದಿನಿ ಲೇಔಟ್‌ನಲ್ಲಿರುವ ಎಂಐಜಿ ಬ್ಲಾಕ್‌ನಲ್ಲಿ ಹೊಸದಾಗಿ ಹಂಚಿಕೆಯಾದ ಕ್ವಾರ್ಟರ್ಸ್‌ಗಳಿಗೆ ಸ್ಯಾನಿಟರಿ ಲೈನ್ ಮತ್ತು ಮ್ಯಾನ್‌ಹೋಲ್ ಚೇಂಬರ್ ಒದಗಿಸುವುದು, ದುರಸ್ತಿ ಮತ್ತು ಸುಧಾರಣೆ ಕಾಮಗಾರಿಗಳು, ನೀರಿನ ಸೋರಿಕೆಯನ್ನು ತಡೆಯುವುದು, ಸ್ಯಾನಿಟರಿ ಫಿಟ್ಟಿಂಗ್‌ಗಳು, ಶೌಚಾಲಯ ದುರಸ್ತಿ ಕೆಲಸ, ಪೈಂಟಿಂಗ್ ಮತ್ತು ಇತರೆ ತುರ್ತು ದುರಸ್ತಿ ಕೆಲಸಗಳನ್ನು ಮಾಡುವುದು. ಅಂದಾಜು ಮೊತ್ತ: **ರೂ. 17.35 ಲಕ್ಷಗಳು.** ಇಎಂಡಿ: **ರೂ. 43,400/–** ಪ್ರವರ್ಗ: **ಇತರೆ.** ಕರೆ: **3ನೇ ಕರೆ.** Tender Reference No: PWD/2024-25/BD/ WORK_INDENT20507

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು

ವಾಸಾಸಂಇ/ಉನಿ–ಸಿ.ಪಿ/2274/ಕೆಎಸ್‌ಎಂಸಿಎ/2025–26

ಜಲ ಸಂಪನ್ಮೂಲ ಇಲಾಖೆ
ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರ.
#1/1, 1ನೇ ಮಹಡಿ ಕೆ.ಎಸ್.ಎಫ್.ಸಿ.ಭವನ, ತಿಮ್ಮಯ್ಯ ರಸ್ತೆ, ಬೆಂಗಳೂರು–560001
Phone: +91-80-22262042/43, e-mail: registrar@aciwrm.org, aciwrm2012@gmail.com,Website: https://aciwrm.karnataka.gov.in

No. ACIWRM/REG/NAT-CON-EOI/2025-26/182 Date:12.08.2025

ಆಸಕ್ತಿ ವ್ಯಕ್ತಪಡಿಸುವ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರ, ಜಲಸಂಪನ್ಮೂಲ ಇಲಾಖೆಯ ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರ(ACIWRM)ದ ಪರವಾಗಿ ನಿಬಂಧಕರು/ಪ್ರಧಾನ ಇಂಜಿನಿಯರ್ ರವರು, ಈ ಕೆಳಕಂಡ ರಾಷ್ಟ್ರೀಯ ಸಮಾಲೋಚಕರು (National Consultant) ಹುದ್ದೆಗಳಿಗೆ ಆಸಕ್ತಿ ವ್ಯಕ್ತಪಡಿಸುವ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. **1. Director/Head/Team Leader (IWRM Specialist). 2. Water Resources Specialist. 3. River Basin Management Specialist.** ವಿವರಗಳನ್ನು ಕೆಪಿಪಿ ಪೋರ್ಟಲ್ ಜಾಲತಾಣ **https://kppp.karnataka.gov.in** ನಲ್ಲಿ **ದಿನಾಂಕ: 12.08.2025** ರ **ಸಂಜೆ 4:00** ಗಂಟೆಯಿಂದ ಪಡೆಯಬಹುದಾಗಿದೆ. ಆಸಕ್ತಯುಳ್ಳ ರಾಷ್ಟ್ರೀಯ ಸಮಾಲೋಚಕರು ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೋಂದಾಯಿಸಿ, ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು. ಪ್ರಸ್ತಾವನೆಗಳನ್ನು **ದಿನಾಂಕ: 02.09.2025 ಸಂಜೆ 5:00 ಗಂಟೆ** ಒಳಗಾಗಿ ಸಲ್ಲಿಸಬಹುದಾಗಿದೆ. ಯಾವುದೇ ಸ್ಪಷ್ಟೀಕರಣ ಅವಶ್ಯವಿದ್ದಲ್ಲಿ ಈ ಕಛೇರಿಗೆ, ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ನಿಬಂಧಕರು/ಪ್ರಧಾನ ಇಂಜಿನಿಯರ್, ಎಸಿ.ಐ.ಡಬ್ಲ್ಯೂ.ಆರ್‌ಎಂ, ಬೆಂಗಳೂರು.

DIPR/CP/RO2289/AAPL/2025-26

ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಮೊದಲನೇ ಮಹಡಿ, ಮಹಾತ್ಮಗಾಂಧಿ ಕ್ರೀಡಾಂಗಣ, ಕುವೆಂಪುನಗರ, ತುಮಕೂರು–572103
E-mail ID dcpo.tumkur@gmail.com ದೂರವಾಣಿ ಸಂಖ್ಯೆ: 0816–2956699

ಸಂ:ಜಿಮರಘ:ತು:ಹೊ.ಗು.ಸಿಬ್ಬಂದಿ:2025–26 ದಿನಾಂಕ: 06–08–2025

ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ–1098, ಬಾಲಕಿಯರ ಬಾಲಮಂದಿರ, ಬಾಲಕರ ಬಾಲಮಂದಿರ, ಬಾಲನ್ಯಾಯ ಮಂಡಳಿ, ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಲು ವಿವಿಧ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ಸೇವೆ ಪಡೆಯಲು ಇ–ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್‌ನ ಅಂದಾಜು ಮೌಲ್ಯ ವಾರ್ಷಿಕ **ರೂ. 90.00ಲಕ್ಷ,** ಇ.ಎಂ.ಡಿ ಬಾಬ್ತು **ರೂ. 1.80ಲಕ್ಷ,** ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭಿಕ **ದಿನಾಂಕ: 06–08–2025** ಆಸಕ್ತರು **ದಿನಾಂಕ: 20–08–2025 ಸಂಜೆ 5–00ಗಂಟೆ**ಯೊಳಗಾಗಿ ಅವಶ್ಯಕ ದಾಖಲಾತಿಗಳನ್ನು **https://kppp.karnataka.gov.in** ಮೂಲಕ ಅಪ್‌ಲೋಡ್ ಮಾಡಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೊದಲನೇ ಮಹಡಿ, ಮಹಾತ್ಮಗಾಂಧಿ ಕ್ರೀಡಾಂಗಣ, ಕುವೆಂಪುನಗರ, ತುಮಕೂರು ದೂರವಾಣಿ ಸಂಖ್ಯೆ: 0816–2956699ಗೆ ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/RO-98/25-26/Oysters

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕುಂದಾಪುರ ವಿಭಾಗ, ಕುಂದಾಪುರ
ದೂರವಾಣಿ: (ಕಛೇರಿ) 08254–230349 ಫ್ಯಾಕ್ಸ್: 232720
ಈ–ಮೇಲ್: kpurforest@yahoo.com, dcfknd@aranya.gov.in

ಸಂ.ಸ.ಅ.ಸಂ./ವಿವ–67/ಇ–ಟೆಂಡರು/2025–26 ದಿನಾಂಕ: 04–08–2025

ಸಂಕ್ಷಿಪ್ತ ಇ–ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕುಂದಾಪುರ ಉಪವಿಭಾಗದಲ್ಲಿ 2025–26ನೇ ಸಾಲಿನಲ್ಲಿ K-SHORE ಯೋಜನೆಯಡಿ ಮಾನ್ಸೂನ್ ನೈಸರ್ಗಿಕ ಪುನರುತ್ಪತ್ತಿ ನೆಡುತೋಪು ನಿರ್ಮಾಣ, ನದಿ ತೀರದ ನೆಡುತೋಪು ನಿರ್ಮಾಣ, ರಸ್ತೆ ಬದಿ ನೆಡುತೋಪು ನಿರ್ಮಾಣ, ಮುಂಗಡ ಕಾಮಗಾರಿ, ನರ್ಸರಿ ಬೆಳೆಸುವುದು ಹಾಗೂ ಅದಕ್ಕೆ ಸಂಬಂಧಿಸಿದ ಪೂರಕ ಕೆಲಸಗಳನ್ನು ಕೈಗೊಳ್ಳಲು ನೋಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಇ–ಟೆಂಡರನ್ನು ದಿನಾಂಕ: 20–08–2025 ರಂದು ಸಂಜೆ 4.00 ರವರೆಗೆ ಆಹ್ವಾನಿಸಲಾಗಿದೆ. ಒಂದು ವೇಳೆ ಸದ್ರಿ ದಿನಾಂಕದಂದು ಯಾವುದೇ ಟೆಂಡರ್ ಬಾರದೇ ಇದ್ದಲ್ಲಿ, ಇದೇ ಕಾಮಗಾರಿಗಳಿಗೆ ಮತ್ತು ಈ ಟೆಂಡರ್ ಅಧಿಸೂಚನೆಯಲ್ಲಿ ಇರುವ ಎಲ್ಲಾ ಷರತ್ತುಗಳನ್ನು ಒಳಗೊಂಡಂತೆ ಮರು ಟೆಂಡರನ್ನು ದಿನಾಂಕ: 09–09–2025 ರಂದು ಸಂಜೆ 4.00 ವರೆಗೆ ನಡೆಸಲಾಗುವುದು.

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕುಂದಾಪುರ ವಿಭಾಗ, ಕುಂದಾಪುರ, ದೂರವಾಣಿ ಸಂ: 08254: 230349, ಫ್ಯಾಕ್ಸ್:232720

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕುಂದಾಪುರ ವಿಭಾಗ, ಕುಂದಾಪುರ.

ವಾಸಾಇ/ಸನಿಉ/ಕೆಎಸ್‌ಎಂಸಿಎ/314/25–26 ದಿ: 12.08.2025

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಚಾಮರಾಜಪೇಟೆ ವಿಭಾಗ, ಬೃ.ಬೆಂ.ಮ.ಪಾಲಿಕೆ
ಅಂಗನವಾಡಿ ಕೇಂದ್ರ, 2ನೇ ಮುಖ್ಯ, ಟಿ.ಆರ್.ಮಿಲ್ ರಸ್ತೆ, ಬೆಂಗಳೂರು – 18

ಸಂಖ್ಯೆ:ಕಾಪಾಅ/ಚಾಪೇ/ಟೆಂಡರ್/ಇ–ಪ್ರೊಕ್/08/2025–26 ದಿನಾಂಕ:11.08.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ದ್ವಿಲಕೋಟೆ ಪದ್ಧತಿ (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ 4)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬೆಂಗಳೂರು ಇವರು, ಕೆಪಿಡಬ್ಲ್ಯೂಡಿ/ಬೃ.ಬೆಂ.ಮ.ಪಾಲಿಕೆ ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಡಬ್ಲ್ಯುಡಿ/ಸಿ.ಪಿ.ಡಬ್ಲ್ಯುಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ 1ನೇ ದರ್ಜೆಯಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ವಾರ್ಡ್ ಸಂಖ್ಯೆ–153 ಪಾದರಾಯನಪುರದ ವಾರ್ಡ್ ವ್ಯಾಪ್ತಿಯ ಅರಾಫತ್‌ನಗರ, ಸಂಗಮ್ ವೃತ್ತ ಹಾಗೂ ಸುತ್ತಮುತ್ತ ಕಾಂಕ್ರೀಟ್ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹200.00 ಲಕ್ಷಗಳು ಇಎಂಡಿ ಮೊತ್ತ: ₹3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**
2	ವಾರ್ಡ್ ಸಂಖ್ಯೆ–154 ರಾಯನಪುರಂನ ವಾರ್ಡ್ ವ್ಯಾಪ್ತಿಯ ವಿಎಸ್ ಗಾರ್ಡನ್, ಜೆಜೆಆರ್ ನಗರ, ಹರಿಕುಂಟೆ ಹಾಗೂ ರಂಗನಾಥ ಕಾಲೋನಿ ಸುತ್ತಮುತ್ತ ಕಾಂಕ್ರೀಟ್ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹200.00 ಲಕ್ಷಗಳು ಇಎಂಡಿ ಮೊತ್ತ: ₹3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**
3	ವಾರ್ಡ್ ಸಂಖ್ಯೆ–155 ದೇವರಾಜಅರಸು ನಗರದ ವಾರ್ಡ್ ವ್ಯಾಪ್ತಿಯ, ಹೊಸಹಳ್ಳಿ ಮುಖ್ಯ ರಸ್ತೆ ಹಾಗೂ ವಿನಾಯಕನಗರ ಸುತ್ತಮುತ್ತ ಕಾಂಕ್ರೀಟ್ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹200.00 ಲಕ್ಷಗಳು ಇಎಂಡಿ ಮೊತ್ತ: ₹3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**
4	ವಾರ್ಡ್ ಸಂಖ್ಯೆ–156 ಛಲವಾದಿಪಾಳ್ಯದ ಫ್ಲವರ್ ಗಾರ್ಡನ್, ಸಿದ್ಧಾರ್ಥನಗರ, ಜೈಭೀಮ್‌ನಗರ ಹಾಗೂ ಅಂಜನಪ್ಪ ಗಾರ್ಡನ್ ಸುತ್ತಮುತ್ತ ಕಾಂಕ್ರೀಟ್ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹200.00 ಲಕ್ಷಗಳು ಇಎಂಡಿ ಮೊತ್ತ: ₹3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**
5	ವಾರ್ಡ್ ಸಂಖ್ಯೆ–157 ಕೃಷ್ಣ ರಾಜೇಂದ್ರ ಮಾರ್ಕೆಟ್ ವಾರ್ಡ್ ವ್ಯಾಪ್ತಿಯ ಸುತ್ತಮುತ್ತ ಕಾಂಕ್ರೀಟ್ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳು, ಮಳೆನೀರು ಕೊಯ್ಲು ಗುಂಡಿಗಳನ್ನು ಒದಗಿಸುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹200.00 ಲಕ್ಷಗಳು ಇಎಂಡಿ ಮೊತ್ತ: ₹3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**
6	ವಾರ್ಡ್ ಸಂಖ್ಯೆ–158 ಚಾಮರಾಜಪೇಟೆಯ ವಾರ್ಡ್ ವ್ಯಾಪ್ತಿಯ ಎಂ.ಡಿ. ಬ್ಲಾಕ್, ಶಂಕರ್ ಬಡಾವಣೆ ಹಾಗೂ ದಾಸಪ್ಪ ಗಾರ್ಡನ್ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹200.00 ಲಕ್ಷಗಳು ಇಎಂಡಿ ಮೊತ್ತ: ₹3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**
7	ವಾರ್ಡ್ ಸಂಖ್ಯೆ–159 ಆಜಾದ್‌ನಗರದ ವಾರ್ಡ್ ವ್ಯಾಪ್ತಿಯ, ಕಸ್ತೂರಬಾನಗರ, ರುದ್ರಪ್ಪ ಗಾರ್ಡನ್ ಹಾಗೂ ವಿಠ್ಠಲ್‌ನಗರ ರಸ್ತೆಗಳಲ್ಲಿ ಹದಗೆಟ್ಟ ರೀಚಸ್‌ಗಳಿಗೆ ಸಮಗ್ರ ಅಭಿವೃದ್ಧಿ ಹಾಗೂ ಚರಂಡಿಗಳು, ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮಾಡುವುದು ಮತ್ತು ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. **ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿಯನ್ನು ಹೊರತುಪಡಿಸಿ) ₹200.00 ಲಕ್ಷಗಳು ಇಎಂಡಿ ಮೊತ್ತ: ₹3.00 ಲಕ್ಷಗಳು (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **14.08.2025**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **25.08.2025**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **26.08.2025**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (4) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **18.08.2025**ರ ಬೆಳಿಗ್ಗೆ **11:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, (ಪಶ್ಚಿಮ) ಬಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು ಇಲ್ಲಿ ನಡೆಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸತ್ಯ ದೊಡ್ಡದು; ಆದರೆ ಸತ್ಯಮಯವಾದ ಜೀವನ ಇನ್ನೂ ದೊಡ್ಡದು.

–ಗುರುನಾನಕ್

ಸಂಪಾದಕೀಯ

ಸಂಪುಟದಿಂದ ಕೆ.ಎನ್. ರಾಜಣ್ಣ ವಜಾ ಸ್ವಯಂ ಆಹ್ವಾನಿಸಿಕೊಂಡ ತಲೆದಂಡ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತವಲಯದ ಮುಂಚೂಣಿ ಸೇನಾನಿಯಂತೆ ಗುರುತಿಸಿಕೊಂಡಿದ್ದ ಕೆ.ಎನ್. ರಾಜಣ್ಣ ಅವರು, 'ಮತ ಕಳವು' ಆರೋಪಕ್ಕೆ ಸಂಬಂಧಿಸಿದಂತೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರ ಮಾತಿಗೆ ವ್ಯತಿರಿಕ್ತ ಹೇಳಿಕೆ ನೀಡಿದ್ದ ಕಾರಣಕ್ಕಾಗಿ ಸಚಿವ ಸ್ಥಾನ ಕಳೆದುಕೊಂಡಿದ್ದಾರೆ. ಕೇಂದ್ರ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಂಡು ಬಿಜೆಪಿ ಅಧಿಕಾರ ಹಿಡಿಯುತ್ತಿದೆ ಎಂಬ ಗಂಭೀರವಾದ ಆರೋಪ ಮಾಡಿರುವ ರಾಹುಲ್ ಗಾಂಧಿಯವರು, ಅದಕ್ಕೆ ಪೂರಕವಾಗಿ ಕರ್ನಾಟಕದ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ 2024ರ ಲೋಕಸಭಾ ಚುನಾವಣೆಗೆ ಬಳಸಿದ್ದ ಮತದಾರರ ಪಟ್ಟಿಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ಬಹಿರಂಗಪಡಿಸಿದ್ದರು. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಎನ್‌ಡಿಎ ಮೈತ್ರಿಕೂಟದ ನೇತೃತ್ವ ವಹಿಸಿರುವ ಬಿಜೆಪಿಯು ಕೇಂದ್ರ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಂಡು ವಿರೋಧ ಪಕ್ಷಗಳನ್ನು ಚುನಾವಣೆಗಳಲ್ಲಿ ಸೋಲಿಸುತ್ತಿದೆ ಎಂಬ ಆರೋಪವನ್ನು ಮುಂದಿಟ್ಟುಕೊಂಡು ದೇಶವ್ಯಾಪಿ ಪ್ರಬಲವಾದ ಹೋರಾಟವೊಂದನ್ನು ರೂಪಿಸಲು ರಾಹುಲ್ ಗಾಂಧಿ ಮುಂದಾಗಿದ್ದಾರೆ. ಈ ಪ್ರಯತ್ನಕ್ಕೆ ಕಾಂಗ್ರೆಸ್‌ನೊಂದಿಗೆ ವಿರೋಧ ಪಕ್ಷಗಳನ್ನು ಒಳಗೊಂಡಿರುವ 'ಇಂಡಿಯಾ' ಮೈತ್ರಿಕೂಟವೂ ದನಿಗೂಡಿಸಿದೆ. ಈ ಸಂದರ್ಭದಲ್ಲಿ ತಮ್ಮ ನಾಯಕನ ಮಾತಿಗೆ ವಿರುದ್ಧವಾದ ಹೇಳಿಕೆ ನೀಡುವ ಮೂಲಕ ರಾಜಣ್ಣ ಆಪತ್ತು ತಂದುಕೊಂಡಿದ್ದಾರೆ. ರಾಹುಲ್ ಆರೋಪದಿಂದ ಇಕ್ಕಟ್ಟಿಗೆ ಸಿಲುಕಿದ್ದ ಬಿಜೆಪಿಗೆ ರಾಜಣ್ಣ ಹೇಳಿಕೆ ವರದಾನವಾಗಿತ್ತು. ಅದನ್ನೇ ಮುಂದಿಟ್ಟುಕೊಂಡು ಕಾಂಗ್ರೆಸ್ ನಾಯಕರನ್ನು ಮುಜುಗರಕ್ಕೆ ಈಡುಮಾಡಲು ಬಿಜೆಪಿ ತಂತ್ರಗಾರಿಕೆ ರೂಪಿಸತೊಡಗಿತ್ತು. ಇದು ಕಾಂಗ್ರೆಸ್ ನಾಯಕತ್ವವು ರಾಜಣ್ಣ ಅವರನ್ನು ಕಠಿಣವಾಗಿ ಶಿಕ್ಷಿಸಲು ಎಡೆ ಮಾಡಿಕೊಟ್ಟಿತು. ಸಾಮಾನ್ಯ ಸಂದರ್ಭಗಳಲ್ಲಿ ಪಕ್ಷದ ನಾಯಕತ್ವವು ರಾಜೀನಾಮೆ ಪಡೆಯುವ ಮಾರ್ಗವನ್ನು ಆಯ್ದುಕೊಳ್ಳುತ್ತದೆ. ಆದರೆ, ಅದಕ್ಕೆ ಅವಕಾಶವನ್ನೇ ನೀಡದೆ ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡಲಾಗಿದೆ.

ಸ್ವಯಂಕೃತ ತಪ್ಪುಗಳಿಂದಾಗಿ ಕೆ.ಎನ್. ರಾಜಣ್ಣ ಸಚಿವ ಸ್ಥಾನ ಕಳೆದುಕೊಂಡಿದ್ದಾರೆ. ಮಾತಿನ ಮೂಲಕ ಸದ್ದು ಮಾಡುವ ರಾಜಕಾರಣಿಗಳಿಗೆ 'ರಾಜಣ್ಣ ಪ್ರಕರಣ' ಪಾಠದಂತಿದೆ.

26 ತಿಂಗಳಿನಿಂದ ಸಚಿವರಾಗಿದ್ದ ರಾಜಣ್ಣ ಅವರು, ಪದೇ ಪದೇ ಲಕ್ಷ್ಮಣರೇಖೆಯನ್ನು ಮೀರಿ ಮಾತನಾಡಿ, ವಿವಾದಗಳನ್ನು ಸೃಷ್ಟಿಸುತ್ತಲೇ ಇದ್ದರು. ಅಧಿಕಾರ ಹಂಚಿಕೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ, ಹೆಚ್ಚುವರಿ ಉಪ ಮುಖ್ಯಮಂತ್ರಿಗಳ ಹುದ್ದೆ ಸೃಷ್ಟಿ, ಹೀಗೆ ಹಲವು ವಿಷಯಗಳಲ್ಲಿ ವಿವಾದಾತ್ಮಕ ಹೇಳಿಕೆ ನೀಡಿದ್ದರು. ಸೆಪ್ಟೆಂಬರ್ ತಿಂಗಳಲ್ಲಿ ರಾಜ್ಯ ರಾಜಕಾರಣದಲ್ಲಿ ಕ್ರಾಂತಿ ಆಗಲಿದೆ ಎಂಬ ಹೇಳಿಕೆ ನೀಡಿ ಕಾಂಗ್ರೆಸ್ ಪಕ್ಷದೊಳಗೆ ತಲ್ಲಣ ಸೃಷ್ಟಿಸಿದ್ದರು. ರಾಜ್ಯ ಕಾಂಗ್ರೆಸ್ ಉಸ್ತುವಾರಿಯಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು– ಸಚಿವರು, ಶಾಸಕರ ಜೊತೆ ನಡೆಸಿದ್ದ ಸಭೆಗೆ ಗೈರಾಗಿದ್ದಲ್ಲದೇ, ಸುರ್ಜೇವಾಲಾ ವಿರುದ್ಧ ಬಹಿರಂಗವಾಗಿಯೇ ಹರಿಹಾಯ್ದಿದ್ದರು. ಇದು ಕಾಂಗ್ರೆಸ್ ನಾಯಕತ್ವವನ್ನು ರಾಷ್ಟ್ರ ಮಟ್ಟದಲ್ಲಿ ಮುಜುಗರಕ್ಕೆ ಸಿಲುಕಿಸಿತ್ತು. ಸಚಿವ ಸ್ಥಾನವು ಸಾಮೂಹಿಕ ಜವಾಬ್ದಾರಿಯನ್ನು ಒಳಗೊಂಡಿರುತ್ತದೆ. ಸಚಿವರೊಬ್ಬರು ಆಡುವ ಮಾತು ಸರ್ಕಾರ ಮತ್ತು ಆಡಳಿತ ಪಕ್ಷವನ್ನು ಪ್ರತಿನಿಧಿಸುತ್ತದೆ. ಸಚಿವರ ಮಾತಿಗೆ ಸರ್ಕಾರ ಮತ್ತು ಆಡಳಿತ ಪಕ್ಷ ಉತ್ತರದಾಯಿ ಆಗಬೇಕಾಗುತ್ತದೆ. ಸಾಮೂಹಿಕ ಹೊಣೆಗಾರಿಕೆಯನ್ನು ಮರೆತವರಂತೆ ರಾಜಣ್ಣ ಹೇಳಿಕೆಗಳನ್ನು ನೀಡುತ್ತಿದ್ದರು. ಸರ್ಕಾರ ಮತ್ತು ಪಕ್ಷದಲ್ಲಿನ ಚೌಕಟ್ಟು, ನಿಯಮಗಳು ತನಗೆ ಅನ್ವಯವಾಗುವುದಿಲ್ಲ ಎಂಬಂತೆ ಧಾರ್ಷ್ಟ್ಯದಿಂದ ನಡೆದುಕೊಳ್ಳುತ್ತಿದ್ದರು. ಇಲಾಖೆಗೆ ಸಂಬಂಧಿಸಿದ ವಿಷಯಗಳಿಗಿಂತಲೂ ಹೆಚ್ಚಾಗಿ ವಿವಾದಾತ್ಮಕ ರಾಜಕೀಯ ಹೇಳಿಕೆಗಳಿಂದಲೇ ಸದಾ ಸದ್ದು ಮಾಡುತ್ತಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತವಲಯದಲ್ಲಿ ರಾಜಣ್ಣ ಇದ್ದಾರೆ ಎಂಬ ಕಾರಣಕ್ಕಾಗಿಯೇ ಕಾಂಗ್ರೆಸ್ ಹೈಕಮಾಂಡ್ ಅವರ ವಿರುದ್ಧ ಕ್ರಮ ಜರುಗಿಸುವ ಪ್ರಯತ್ನ ಮಾಡಿರಲಿಲ್ಲ. ಆದರೆ, ಈಗ ರಾಹುಲ್ ಗಾಂಧಿಯವರ ನಡೆಯ ವಿರುದ್ಧವೇ ರಾಜಣ್ಣ ಹೇಳಿಕೆ ನೀಡಿದ್ದರಿಂದ ಪಕ್ಷದ ಹೈಕಮಾಂಡ್ ಸಚಿವ ಸ್ಥಾನ ಕಿತ್ತುಕೊಳ್ಳುವ ಅತಿ ಕಠಿಣ ಕ್ರಮದ ಅಸ್ತ್ರ ಝಳಪಿಸಿದೆ. ಕಾಂಗ್ರೆಸ್ ಹೈಕಮಾಂಡ್ ಈ ಹಿಂದೆಯೇ ಶಿಸ್ತುಕ್ರಮದ ಹೆಜ್ಜೆ ಇಟ್ಟಿದ್ದರೆ, ವಿಧಾನಮಂಡಲ ಅಧಿವೇಶನದ ಆರಂಭದ ದಿನವೇ ಸಚಿವರೊಬ್ಬರನ್ನು ಸಂಪುಟದಿಂದ ವಜಾಗೊಳಿಸಬೇಕಾದ ಇಕ್ಕಟ್ಟಿಗೆ ಸಿಲುಕುತ್ತಿರಲಿಲ್ಲ.

ರಾಜಣ್ಣ ಅವರನ್ನು ಸಚಿವ ಸ್ಥಾನದಿಂದ ಕಿತ್ತುಹಾಕಿದ ಬೆನ್ನಲ್ಲೇ ಕಾಂಗ್ರೆಸ್ ಪಕ್ಷದಲ್ಲಿನ ಆಂತರಿಕ ಪ್ರಜಾಪ್ರಭುತ್ವದ ಕುರಿತ ಚರ್ಚೆಯೂ ಜೋರಾಗಿದೆ. ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಿರುವ ತೀರ್ಮಾನ ರಾಹುಲ್ ಗಾಂಧಿಯವರು ಪ್ರತಿಪಾದಿಸುವ ಆಂತರಿಕ ಪ್ರಜಾಪ್ರಭುತ್ವದ ನಿಲುವಿಗೆ ವಿರುದ್ಧವಾದುದು ಎಂಬ ಆಕ್ಷೇಪವೂ ವ್ಯಕ್ತವಾಗಿದೆ. ಸಂಪುಟದಿಂದ ವಜಾಗೊಳಿಸುವ ಮುನ್ನ ತಮ್ಮ ವಿರುದ್ಧದ ಆರೋಪದ ಕುರಿತು ಸಮಜಾಯಿಷಿ ನೀಡುವ ಒಂದು ಅವಕಾಶವನ್ನಾದರೂ ಅವರಿಗೆ ನೀಡಬೇಕಿತ್ತು. ಈ ಹಂತದಲ್ಲಿ ರಾಜಣ್ಣ ಅವರನ್ನು ಶಿಕ್ಷಿಸುವ ನಿರ್ಧಾರದ ಹಿಂದೆ ಪಕ್ಷದೊಳಗಿನ ಅವರ ವಿರೋಧಿಗಳ ಪ್ರಯತ್ನವೂ ಫಲಿಸಿರಬಹುದು. ಆದರೆ, ವಾಚಾಳಿತನ, ಪಕ್ಷದ ನಾಯಕತ್ವವನ್ನೇ ಧಿಕ್ಕರಿಸಿ ಹೇಳಿಕೆ ನೀಡುವಂತಹ ಸ್ವಯಂಕೃತ ತಪ್ಪುಗಳಿಗೆ ರಾಜಣ್ಣ ಬೆಲೆ ತೆತ್ತಿದ್ದಾರೆ. ಇದು ಮಾತಿನ ಮೂಲಕವೇ ಸದ್ದು ಮಾಡಬೇಕೆನ್ನುವ ಚಾಳಿ ಹೊಂದಿರುವ ರಾಜಕಾರಣಿಗಳಿಗೆ ಪಾಠವಾಗಬಲ್ಲ ನಿದರ್ಶನದಂತಿದೆ.

'ವಿದ್ಯೆ' ವ್ಯಂಗ್ಯವಾದ ವರ್ತಮಾನ

ವಿಶ್ಲೇಷಣೆ

ಸಬಿತಾ ಬನ್ನಾಡಿ

ಅಮಾನವೀಯ ಕೃತ್ಯವೆಸಗಿ ಶಿಕ್ಷೆಗೆ ಗುರಿಯಾಗಿರುವ ಪ್ರಜ್ವಲ್ ರೇವಣ್ಣ, ಈ ಹೊತ್ತಿನ ಶಿಕ್ಷಣ ಕ್ರಮದ ವೈಫಲ್ಯದ ಸಂಕೇತವೂ ಹೌದು. ವಿದ್ಯಾರ್ಥಿಗಳ ಮನೋವಿಕಾಸಕ್ಕೆ ಹಾಗೂ ಸಮಾಜದ ಆರೋಗ್ಯಕ್ಕೆ ಕಾರಣವಾಗಬೇಕಿದ್ದ 'ವಿದ್ಯೆ', ವ್ಯಕ್ತಿಯನ್ನು ಟೊಳ್ಳಾಗಿಸುತ್ತಿದೆ. ವಿದ್ಯೆಯನ್ನು 'ವ್ಯಂಗ್ಯ'ವಾಗಿಸುವ ಮೂಲಕ ದುರಿತ ಕಾಲವನ್ನು ಸೃಷ್ಟಿಸುವ ಕೆಲಸದಲ್ಲಿ ಸಮಾಜ ತೊಡಗಿಕೊಂಡಿರುವುದು ದುರದೃಷ್ಟಕರ ಸಂಗತಿ.

'ಕಲ್ಲುಬಂಡೆಯಂತೆ ನಿಂತ ಸಂತ್ರಸ್ತೆ' –ವಿಶೇಷ ತನಿಖಾ ತಂಡದ (ಎಸ್‌ಐಟಿ) ಈ ಮಾತಿಗೆ ನಮ್ಮ ಕಾಲದಲ್ಲಿ ವಿಶೇಷ ಮಹತ್ವವಿದೆ. ಬಡ ಹೆಣ್ಣುಮಗಳೊಬ್ಬಳು ಪ್ರಕರಣ ಗೆದ್ದಿರುವುದು ಮತ್ತು ಅತಿ ಬಲಿಷ್ಠನೊಬ್ಬನಿಗೆ ಕಠಿಣ ಶಿಕ್ಷೆ ಆಗಿರುವುದು ಈ ಕಾಲದ ಅತಿದೊಡ್ಡ ಭರವಸೆಯೂ ಹೌದು.

ವ್ಯಂಗ್ಯವೊಂದನ್ನು ಗಮನಿಸಬೇಕಾಗಿದೆ. ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ ಎನ್ನುವುದು ಸ್ಪಷ್ಟವಾಗಿ, ಕೊನೆಯ ಪ್ರಯತ್ನವಾಗಿ ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡಿ ಎಂದು ನ್ಯಾಯಾಲಯವನ್ನು ಕೇಳಿಕೊಳ್ಳುವಾಗ ಪ್ರಜ್ವಲ್ ರೇವಣ್ಣ ಕೊಟ್ಟ ಕಾರಣ: ತಾನು 'ವಿದ್ಯಾವಂತ'ನಾಗಿರುವುದು ಮತ್ತು ಹಾಸನವನ್ನು 'ಆಳಿರುವುದು'! ಪ್ರಜ್ವಲ್ ಮಾತುಗಳನ್ನು ಕೇಳಿದ ಯಾರಿಗಾದರೂ, ವಿದ್ಯೆ ಎಂದರೆ ಏನು? ಅದು ನೆನಪಾಗಬೇಕಾದ ಸಂದರ್ಭ ಯಾವುದು? ಎನ್ನುವ ಪ್ರಶ್ನೆಗಳು ಕಾಡದೇ ಇರಲಾರವು.

ಮನೆಕೆಲಸ ಮಾಡಿಕೊಂಡು ಬದುಕು ಕಟ್ಟಿಕೊಂಡಾಕೆಗೆ ಬದುಕುವ ಛಲ, ಹೋರಾಡುವ ಛಲ, ಕೋಟ್ಯಂತರ ರೂಪಾಯಿಗಳ ಆಮಿಷವನ್ನು ನಿರಾಕರಿಸುವ ದೃಢತೆ ಎಲ್ಲಿಂದ ಬಂತು? ಆಕೆ ಹೆಚ್ಚು 'ವಿದ್ಯಾವಂತೆ' ಇರಲಿಕ್ಕಿಲ್ಲ. ಆಕೆಯಿಂದ ಬದುಕಿನ ಪಾಠ ಕಲಿತಿದ್ದಿದ್ದರೆ ಕೋರ್ಟಿನಲ್ಲಿ ಶಿಕ್ಷೆ ಕಡಿಮೆ ಮಾಡಿ ಎಂದು ಗೋಗರೆಯುವ ಪ್ರಮೇಯ ಪ್ರಜ್ವಲ್‌ಗೆ ಬರುತ್ತಿರಲಿಲ್ಲ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರನ್ನು ಯಾರೂ ಆಳುವುದಕ್ಕೆ ಆಯ್ಕೆ ಮಾಡಿರುವುದಿಲ್ಲ, ಸೇವೆ ಮಾಡುವುದಕ್ಕೆ ಆಯ್ಕೆ ಮಾಡುತ್ತಾರೆ; ಇಲ್ಲೀಗ ಯಾರೂ ರಾಜ ಮಹಾರಾಜರಲ್ಲ ಎನ್ನುವುದು ವಿದ್ಯಾವಂತನಿಗೆ ತಿಳಿಯಲಿಲ್ಲವಲ್ಲ! ದೋಷ ವಿದ್ಯೆಯದೇ? ವ್ಯಕ್ತಿಯದೇ? ಅಥವಾ ಇದ್ಯಾವುದನ್ನೂ ವ್ಯಕ್ತಿಗೆ ನೆನಪು ಮಾಡಿಕೊಡದ ಸಮಾಜದ್ದೇ? ವಿದ್ಯೆ ಎಂದರೆ ಅಹಂಕಾರವೇ? ವಿದ್ಯಾವಂತರಲ್ಲದವರಿಗೆ ಶಿಕ್ಷೆ ಕೊಟ್ಟುಬಿಡಬಹುದೇ? ಬರಿಯ ಪದವಿ ಪಡೆದಾಕ್ಷಣ ಅವರು 'ಶ್ರೇಷ್ಠ'ರೆನಿಸಿಕೊಳ್ಳುತ್ತಾರೆಯೇ? ನಿಜವಾಗಿಯೂ ವಿದ್ಯಾವಂತ ಎನ್ನಿಸಿಕೊಂಡವರು ಇಂತಹ ಅಪರಾಧಗಳನ್ನೇ ಮಾಡಬಾರದಲ್ಲವೇ? ಶಿಕ್ಷಣ ದುರಹಂಕಾರವನ್ನು ದಯಪಾಲಿಸುವುದಾದರೆ ಅಂತಹ ಶಿಕ್ಷಣ ಯಾಕಾಗಿ ಬೇಕು?

ಶಿವರಾಮ ಕಾರಂತರ 'ಕನ್ನಡಿಯಲ್ಲಿ ಕಂಡಾತ' ಕಾದಂಬರಿಯಲ್ಲಿ ಪರಮೇಶ್ವರ ಎಂಬ 'ವಿದ್ಯಾವಂತ' ಇದ್ದಾನೆ. ಐವತ್ತರ ದಶಕದ ಆಚೀಚೆಯ ಕಾಲದಲ್ಲೇ ಹೆಡ್‌ಮೇಷ್ಟ್ರಾದ ಆತನಿಗೆ ನನ್ನಿಂದಲೇ ಬೇರೆಯವರು ಬದುಕಿದ್ದಾರೆ ಎಂಬ ಅಹಂ. ತನಗೆ ಯಾರ ಋಣವೂ ಇಲ್ಲ ಎಂದುಕೊಂಡವನು. ವಿದ್ಯಾರ್ಥಿಗಳು, ಸಹೋದ್ಯೋಗಿಗಳು, ಹೆಂಡತಿ ಮಕ್ಕಳು, ತಂದೆ–ತಾಯಿ, ಒಡಹುಟ್ಟಿದವರು ಯಾರೇ ಇರಲಿ, ಬರೀ ದಂಡಿಸುವ, ದೂಷಿಸುವ, ಪೀಡಿಸುವ ಆತನಿಗೆ ಅವನ ತಪ್ಪು ಎಂದೂ ಕಾಣಿಸುವುದಿಲ್ಲ. ಹೆಂಡತಿ ಮಕ್ಕಳಿಗೆ ಬುದ್ಧಿ ಕಲಿಸುತ್ತೇನೆ ಎಂದು ಊರು ಬಿಡುತ್ತಾನೆ. ಆದರೆ, ಅವನ ಎಣಿಕೆಯಂತೆ ಯಾರೂ ಅವನಿಗಾಗಿ ಕಾಯುವುದಿಲ್ಲ. ಅದರಿಂದ ಮುಖಭಂಗವಾಗಿ ಹಿಂತಿರುಗದೆ, ದೇಶವೆಲ್ಲ ಅಲೆದು, ಒಮ್ಮೆ ಕಾಡಿನ ದಾರಿಯಲ್ಲಿ ಪ್ರಜ್ಞೆತಪ್ಪಿ ಬೀಳುತ್ತಾನೆ. ಜೀವಂತ ಶವ ಆಗಿದ್ದ ಆತನನ್ನು ಮಂಜಪ್ಪ ಎನ್ನುವವರು ತಮ್ಮ ಮನೆಯಲ್ಲಿ ತಿಂಗಳುಗಟ್ಟಲೆ ನೋಡಿಕೊಂಡು ಬದುಕಿಸಿಕೊಳ್ಳುತ್ತಾರೆ. ಆ ಮನೆ ಅವನಿಗೆ ಅವನನ್ನೇ ಕಾಣಿಸತೊಡಗುತ್ತದೆ.

ಮಂಜಪ್ಪ ಎಲ್ಲರನ್ನೂ ಅಕ್ಕರೆಯಿಂದ ನೋಡುವ ವ್ಯಕ್ತಿತ್ವದವರು. ತಮ್ಮ ನಡೆಯಿಂದ ಇಡೀ ಮನೆಗೆ ಮಾದರಿ ಹಾಕಿಕೊಟ್ಟ ಹಿರಿಯರು. ಮನೆ ಮಂದಿಯೆಲ್ಲರೂ ಕಲೆತು ಬದುಕುವುದನ್ನು ನೋಡುತ್ತಾ, ತಾನು ಹೇಗೆ ಕ್ಷುದ್ರನಾಗಿದ್ದೆ ಎಂಬುದು ಪರಮೇಶ್ವರನಿಗೆ ಅರಿವಾಗುತ್ತದೆ. ಶಾಲೆಯ ಶಿಕ್ಷಣ ಸಿಗದ ಮಂಜಪ್ಪ ತಮ್ಮ ಮಕ್ಕಳಿಗೆ ಮನೆಯಲ್ಲೇ ಮೇಷ್ಟ್ರನ್ನು ಇಟ್ಟು ಓದಿಸಬಲ್ಲ ಅನುಕೂಲಸ್ಥರಾಗಿದ್ದರೂ, ಊರಿಗೊಂದು ಶಾಲೆ ಕಟ್ಟುವ ಕನಸು ಕಂಡವರು. ಅದಕ್ಕಾಗಿ ಶ್ರಮ ಹಾಕಿದವರು. ಆ ಊರ ಶಾಲೆಯಲ್ಲಿ ಮತ್ತೆ ಮೇಷ್ಟ್ರಾದ ಪರಮೇಶ್ವರ ಮೊದಲ ಬಾರಿಗೆ ಬೆತ್ತರಹಿತ ಪಾಠವನ್ನೂ, ವಿದ್ಯಾರ್ಥಿ ಕೇಂದ್ರಿತ ಶಿಕ್ಷಣವನ್ನೂ ಅನುಷ್ಠಾನಕ್ಕೆ ತಂದು, ತಾನೂ ಕಲಿಯುತ್ತಾ, ಸಾಮುದಾಯಿಕ ಕಲಿಕೆಯಲ್ಲಿರುವ ಖುಷಿಯು ಮನುಷ್ಯರನ್ನು ಬೆಸೆಯುವ ಸಂಜೀವಿನಿ ಎಂಬುದನ್ನು ಕಂಡುಕೊಳ್ಳುತ್ತಾನೆ. ಇದನ್ನು ಇಂದಿನ ನಾವು ಕಂಡುಕೊಳ್ಳುತ್ತಿದ್ದೇವೆಯೇ?

ಶಿಕ್ಷಣವನ್ನು ಎಲ್ಲರಿಗೂ ಸಮಾನವಾಗಿ ಕೊಡದೆ ಅನುಕೂಲವಂತರ ಪರವಾಗಿ ವಿಭಜಿಸಿದ್ದರ ಪರಿಣಾಮ ಎಷ್ಟು ಅಪಾಯಕಾರಿ ಎಂಬುದು ಸಮಾಜಕ್ಕಾಗಲೀ, ಸರ್ಕಾರಗಳಿಗಾಗಲೀ ಅರಿವಿಗೆ ಬಂದಂತಿಲ್ಲ. ಸ್ವಾತಂತ್ರ್ಯಾನಂತರದ ಕೆಲವು ವರ್ಷಗಳು ದೇಶದಲ್ಲಿ ವಿರಳ ಸಂಖ್ಯೆಯಲ್ಲಿ ಖಾಸಗಿ ಶಾಲೆಗಳಿದ್ದವಾದರೂ, ಹೆಚ್ಚಿನವು ಸರ್ಕಾರಿ ಶಾಲೆಗಳೇ ಆಗಿದ್ದವು. ಅವುಗಳಲ್ಲಿ ಸ್ಥಳೀಯ ಮತ್ತು ಆಸುಪಾಸಿನ ಊರುಗಳ ಎಲ್ಲ ಜಾತಿ, ಧರ್ಮಗಳ ಮಕ್ಕಳು ಓದುತ್ತಿದ್ದರು. ಲೋಕದಲ್ಲಿರುವ ಬಡತನ, ವೈವಿಧ್ಯಮಯ ಜೀವನಕ್ರಮಗಳು, ಸಹಕಾರದಿಂದ ಬದುಕಬೇಕಾದ ಅನಿವಾರ್ಯತೆ, ಇನ್ನೊಬ್ಬರ ಕಷ್ಟ–ಸುಖಗಳು ಎಲ್ಲವೂ ಶಾಲೆಯಲ್ಲಿ ಮಕ್ಕಳ ಅನುಭವಕ್ಕೆ ಬರುತ್ತಿದ್ದವು. ಅಲ್ಲಿ ಕೊರತೆಗಳೇ ಇರಲಿಲ್ಲ ಎಂದಲ್ಲ. ಆದರೆ, ಸಮಾಜ ಎಂದರೆ ಏನು ಎಂಬುದು ಮಕ್ಕಳಿಗೆ ತಿಳಿಯುತ್ತಿತ್ತು. ಇವತ್ತು ಶಾಲೆಗಳೇ ಶ್ರೇಣೀಕರಣವನ್ನು ಕಲಿಸುವ ಮೊದಲ ಮೆಟ್ಟಿಲುಗಳಾಗಿವೆ. ಮಧ್ಯಮ ವರ್ಗದ ಮಕ್ಕಳಿಗೆ ಕೂಡ ಬಡ ಮಕ್ಕಳ ಸ್ಥಿತಿ ಏನೆಂಬುದು ಗೊತ್ತಿಲ್ಲ. ಹೆಚ್ಚಿನ ಮಕ್ಕಳಿಗೆ ಇನ್ನೊಂದು ಧರ್ಮದ ಮಕ್ಕಳ ಜೊತೆಗೆ ಒಡನಾಡುವ ಸನ್ನಿವೇಶವೇ ಎದುರಾಗುವುದಿಲ್ಲ. ಅವರ ಮನಸ್ಸುಗಳೊಳಗೆ ಸಂಶಯದ ಬೀಜ ಹುಟ್ಟಿಸಿದರೆ ಅದು ಮುಂದೆ ಬೃಹತ್ತಾಗಿ ಬೆಳೆಯುವುದರ ಬಗೆಗೆ ಸಂಶಯವೇ ಇಲ್ಲ. ಒಂದು ರೀತಿಯಲ್ಲಿ ಇವರೆಲ್ಲಾ ಈ ಸಂಶಯದ ಫಲವಾದ ಹೆದರುಪುಕ್ಕಲರು ಆಗುತ್ತಿದ್ದಾರೆ.

'ಶಿಕ್ಷಣ ಎಂಬುದು ಮಾನವ ಹಕ್ಕು' ಎಂದು ಹೇಳಿದ್ದ ಜ್ಯೋತಿಬಾ ಫುಲೆ, ಅದನ್ನು ತಾವು ಮಂಡಿಸುವ ಶಿಕ್ಷಣದ ತತ್ವವಾಗಿಸಿಕೊಂಡಿದ್ದರು. ಶಿಕ್ಷಣದ ಕೊರತೆಯು ಚುರುಕುಮತಿಯ ಲೋಪಕ್ಕೆ ಕಾರಣವಾಗುತ್ತದೆ. ಅದರಿಂದ ನ್ಯಾಯ ವಂಚನೆಯಾಗುತ್ತದೆ. ಪ್ರಗತಿ ಕುಂಠಿತವಾಗುತ್ತದೆ. ತಳಜಾತಿಗಳು ಬಡತನದಲ್ಲೇ ಉಳಿಯುತ್ತವೆ. ಅವರ ಬಡತನ ಅವರ ದಮನಕ್ಕೆ ಕಾರಣವಾಗುತ್ತದೆ ಎನ್ನುವ ಫುಲೆಯವರು, ಜಾತಿ, ಜನಾಂಗ, ಧರ್ಮ, ಲಿಂಗ ಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿ ಶಿಕ್ಷಣದ ಸೌಲಭ್ಯ ಸಿಗಬೇಕು ಎಂಬ ಚಿಂತನೆ ಪ್ರತಿಪಾದಿಸಿದವರು. ಶಿಕ್ಷಣವು ಸಮಾಜವನ್ನು ಜೊತೆಗೂಡಿಸುವ ಶಕ್ತಿಯಾಗಿ ಕೆಲಸ ಮಾಡಬೇಕು. ಕೃಷಿ ಮತ್ತು ಆರೋಗ್ಯದ ಪ್ರಾಥಮಿಕ ಜ್ಞಾನವನ್ನು ಪಠ್ಯಕ್ರಮದೊಳಗೆ ಅಳವಡಿಸಬೇಕು ಎಂಬುದು ಅವರ ಸಲಹೆಯಾಗಿತ್ತು. 1882ರಲ್ಲಿ 'ಹಂಟರ್ ಕಮಿಷನ್'ಗೆ ಅವರು ಬರೆದ ಪತ್ರದಲ್ಲಿರುವ ಈ ಅಂಶಗಳು ಇಂದಿಗೂ ಬಹಳ ಮುಖ್ಯವಾದುವು ಮಾತ್ರವಲ್ಲ, ಇಂದಿಗೂ ಸಂಪೂರ್ಣವಾಗಿ ಜಾರಿಗೆ ಬರದೇ ಇರುವ ಸಂಗತಿಗಳೂ ಆಗಿವೆ.

ಇವತ್ತು ಸಮಾನ ಶಿಕ್ಷಣ ಎನ್ನುವುದು 'ಎಲ್ಲರಿಗೂ ಇಂಗ್ಲಿಷ್ ಮಾಧ್ಯಮ' ಎಂಬ ಸೀಮಿತ ಯೋಚನೆಗೆ ಬಂದು ತಲುಪಿದೆ. ಇದು ನವಶ್ರೇಣೀಕರಣದ ಮೆಟ್ಟಿಲ ಮೇಲೆ ನಮಗೂ ದೊರೆತಿರುವ ಪ್ರವೇಶ ಅಷ್ಟೇ ಎಂಬ ಅರಿವು ನಮ್ಮೊಳಗಿನ್ನೂ ಇಳಿದಿಲ್ಲ. ವಾಸ್ತವ ಜಗತ್ತಿಗೆ ಗೋಡೆ ಕಟ್ಟಿಕೊಂಡ ಒಂದೇ ವರ್ಗದ, ಕೆಲವೇ ಜಾತಿಗಳ ಮಕ್ಕಳು, ನೆಲದ ನಡೆ–ನುಡಿಯಿಂದ ವಂಚಿತರಾಗಿ, ತಾವೇ ಶ್ರೇಷ್ಠರು ಎಂದು ಬೀಗುವುದನ್ನೇ ದೊಡ್ಡಸ್ತಿಕೆ ಎಂದು ಬಿತ್ತುವ ಶಿಕ್ಷಣ ಕ್ರಮಕ್ಕೆ ನಾವು ವೇಗವಾಗಿ ಜಾರುತ್ತಿದ್ದೇವೆ. ಇದು ಅಂತರಂಗ ಬಹಿರಂಗಗಳ ನಡುವೆ ಸಂಘರ್ಷವನ್ನು ಹುಟ್ಟು ಹಾಕುತ್ತಿದೆ. ಇದೆಲ್ಲದರ ಪರಿಣಾಮವಾಗಿ ಖಿನ್ನತೆಗೆ ಒಳಗಾಗುತ್ತಾ, ಬದುಕನ್ನೇ ಅಂತ್ಯಗೊಳಿಸಿಕೊಳ್ಳುವ ಮಕ್ಕಳ ಸುದ್ದಿಗಳು ನಮ್ಮನ್ನು ಆತಂಕಗೊಳಿಸುತ್ತಿವೆ. ಆದರೆ, ನಾವ್ಯಾರೂ ವರ್ತಮಾನದ ದುರಂತಗಳಿಗೆ ನಿಜ ಕಾರಣವನ್ನು ಸಾಮಾಜಿಕ ವ್ಯವಸ್ಥೆಯೊಳಗೆ ಹುಡುಕಲು ತಯಾರಿಲ್ಲ. ನಮ್ಮೊಳಗೆ ಎಂತಹ ಮೂಲಭೂತವ್ಯಾಧಿ ತುಂಬಿಕೊಂಡಿದೆಯೆಂದರೆ, ಸರ್ಕಾರಿ ಶಾಲೆಯಲ್ಲಿ ಎಲ್ಲ ರೀತಿಯ ಮಕ್ಕಳ ಜೊತೆ ನಮ್ಮ ಮಕ್ಕಳು ಕಲಿತರೆ, ಅವರು 'ಏನೆಲ್ಲಾ' ಕಲಿಯುವರೋ ಎಂಬ ಪೂರ್ವಗ್ರಹವಿದೆ.

ಒಂದು ಕೌತುಕವನ್ನು ಗಮನಿಸಬೇಕು. ಬಡತನ ಹಾಸಿ ಉಂಡು, ಮಳೆ ಚಳಿಯಲ್ಲಿ ಬೇಯುವ ಮಕ್ಕಳು ಬದುಕುವ ದಾರಿಯನ್ನು ಧ್ಯಾನಿಸುತ್ತಾರೆಯೇ ಹೊರತು ಸಾವಿನೆಡೆಗೆ ಧಾವಿಸುವುದಿಲ್ಲ. ಲೋಕವನ್ನು ನರಕವೆಂದು ಭಾವಿಸಿ ಬದುಕಿಗೆ ವಿಮುಖ ಆಗುತ್ತಿರುವವರಲ್ಲಿ ಅನುಕೂಲಸ್ಥರ ಮಕ್ಕಳೇ ಹೆಚ್ಚು. ಮಕ್ಕಳನ್ನು ಸದಾ ಒಂದು ಕಣ್ಣಿಟ್ಟು ಕಾಯುವುದೇ 'ಪೇರೆಂಟಿಂಗ್' ಎಂಬಂತೆ ಬಿಂಬಿಸಲಾಗುತ್ತಿದೆ. 'ಬೀದಿ ಮಕ್ಕಳು ಬೆಳೆದೋ' ಎಂಬ ಜಾನಪದ ಸಾಲಿಗಿಂತ ನೀತಿ ಬೇಕಾಗಿಲ್ಲ. ಆದರೆ, ಕೂತರೆ ನಿಂತರೆ ಇನ್ನೊಬ್ಬರೊಂದಿಗೆ ಹೋಲಿಸುವುದು, ಚಿಕ್ಕ ಮಕ್ಕಳ ಎದುರು ಪಕ್ಷ ರಾಜಕೀಯವನ್ನು ಮಾತಾಡುವುದು, ದ್ವೇಷ ಅಸೂಯೆಯನ್ನು ಎಗ್ಗಿಲ್ಲದೆ ಪ್ರದರ್ಶಿಸುವುದು ಹಿರಿಯರ ಚಾಳಿಯಾಗಿದೆ. ಮಕ್ಕಳೂ ಅದನ್ನೇ ಕಲಿಯುತ್ತಿದ್ದಾರೆ. ಅದರಿಂದ ಹತಾಶೆಗೆ ಒಳಗಾಗುತ್ತಿದ್ದಾರೆ. ಮಕ್ಕಳು ಆಟೋಟಗಳಲ್ಲಿ ಮುಳುಗಿ ತಮ್ಮದೇ ಪ್ರತಿ ಜಗತ್ತು ಸೃಷ್ಟಿಸಿಕೊಂಡರೆ ಅವರೊಳಗೆ ಖಾಲಿತನ ಕಾಡುವುದಿಲ್ಲ.

ಒಂದೋ ಮೇಲರಿಮೆ, ಇಲ್ಲವೇ ಕೀಳರಿಮೆಯನ್ನು ಸೃಷ್ಟಿಸುತ್ತಿರುವ ಶ್ರೇಣೀಕೃತ ಶಿಕ್ಷಣದ ಒಂದು ರೋಗ ಚಿಹ್ನೆಯಾಗಿ ಪ್ರಜ್ವಲ್ ರೇವಣ್ಣನ ಮಾತು ಎಚ್ಚರಿಕೆಯ ಗಂಟೆಯಂತೆ ಧ್ವನಿಸುತ್ತಿದೆ. ಜಾತಿ, ಧರ್ಮ, ವರ್ಗ, ಲಿಂಗ ಶ್ರೇಷ್ಠತೆಯ ಅಹಂಗಳು ಕೊಚ್ಚಿ ಹೋಗಿ, ನಿಷ್ಕಲ್ಮಶ ಸ್ನೇಹಭಾವದ ಉದ್ದೀಪನವು ಮನುಷ್ಯನ ಒಳಗನ್ನು ಮತ್ತು ಹೊರಗನ್ನು ಪೊರೆಯುವ ಮಂತ್ರವಾಗಬೇಕು. ಅದರ ಮೊದಲ ಮೆಟ್ಟಿಲಾಗಿ, ಪ್ರಾಥಮಿಕ ಶಿಕ್ಷಣವನ್ನಾದರೂ ರಾಷ್ಟ್ರೀಕರಣಗೊಳಿಸುವುದು ತುರ್ತಾಗಿ ಆಗಬೇಕಿರುವ ಕೆಲಸ.



ವಾಚಕರ ವಾಣಿ

ಶಾಸಕ ಯತ್ನಾಳ ಸತ್ಯವಂತರಲ್ಲವೇ?

'ಇದ್ದದ್ದು ಇದ್ದಂಗೆ ಹೇಳಿದ್ದಕ್ಕೆ ಸಚಿವ ಕೆ.ಎನ್. ರಾಜಣ್ಣ ಅವರ ತಲೆದಂಡವಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ. ಹಾಗಾದರೆ, ಬಿಜೆಪಿ ನಾಯಕರಾಗಿದ್ದ ಬಸನಗೌಡ ಪಾಟೀಲ ಯತ್ನಾಳ ಅವರ ತಲೆದಂಡ ಆಗಿದ್ದು ಏತಕ್ಕೆ? ಇದ್ದದ್ದನ್ನು ಇದ್ದಂಗೆ ಹೇಳಿದ್ದಕ್ಕೆ ಅಲ್ಲವೇ? ರಾಜಣ್ಣ ಸತ್ಯವಂತರಾದರೆ ಯತ್ನಾಳ ಅವರು ಸತ್ಯವಂತರಲ್ಲವೇ?

ಸತ್ಯವಂತರಿಗಿದು ಕಾಲವಲ್ಲ ಎಂಬ ಮಾತು ರಾಜಣ್ಣರಂತೆ ಯತ್ನಾಳರಿಗೂ ಅನ್ವಯ ಆಗಬೇಕಲ್ಲವೇ?

ಪಿ.ಜೆ. ರಾಘವೇಂದ್ರ, ಮೈಸೂರು

ಅತಾರ್ಕಿಕ ವಾದ ಬೆಂಬಲಿಸಬೇಡಿ

'ಭೈರವಿ ರಾಗಕ್ಕೆ ಎದ್ದು ನಿಂತಿದ್ದ ಹುಲ್ಲು' (ಪ್ರ.ವಾ., ಆಗಸ್ಟ್ 10) ಸುದ್ದಿ ಓದಿ ಅಚ್ಚರಿಯಾಯಿತು. ಈ ಪವಿತ್ರ ನೆಲದಲ್ಲಿ ಎಲ್ಲವೂ ಇತ್ತು. ವಿಮಾನ, ಪ್ಲಾಸ್ಟಿಕ್ ಸರ್ಜರಿ ಹೀಗೆ ಎಲ್ಲಾ ವೈಜ್ಞಾನಿಕ ಸಂಶೋಧನೆಗಳೂ ಮೊದಲು ಭಾರತದಲ್ಲೇ ಆಗಿದ್ದು, ಈ ರೀತಿಯ ಹೇಳಿಕೆಗಳು ಸಾಮಾಜಿಕ ಜಾಲತಾಣಗಳಲ್ಲಿ ವಿಪುಲವಾಗಿ ಹರಿದಾಡುತ್ತಿವೆ. ರಾಜಕಾರಣಿಗಳು ಮಾತ್ರವಲ್ಲದೆ ವಿಜ್ಞಾನಿಗಳೂ ಇಂತಹ ಅತಾರ್ಕಿಕ ವಾದವನ್ನು ಬೆಂಬಲಿಸಿರುವುದು ಇದೆ.

ಇದು ಸತ್ಯೋತ್ತರ ಕಾಲ. ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವುದು ಪ್ರತಿ ಪ್ರಜೆಯ ಕರ್ತವ್ಯವೆಂದು ಸಂವಿಧಾನವೇ ಹೇಳುತ್ತದೆ. ಇಂತಿರುವಾಗ ಯಾವುದೇ ರಾಗಕ್ಕೆ ಸ್ಪಂದಿಸಲು ಶ್ರವಣ ವ್ಯವಸ್ಥೆ ಇರಬೇಕು ಎನ್ನುವುದನ್ನು ಮರೆತು ಅವೈಜ್ಞಾನಿಕ ಹೇಳಿಕೆ ನೀಡುವುದು ಸರಿಯಲ್ಲ.

ಚಂದ್ರಪ್ರಭ ಕಠಾರಿ, ಬೆಂಗಳೂರು

ಯುದ್ಧದಾಹಿ ಮನೋಭಾವ ಬದಲಾಗಲಿ

ಪ್ರಥಮ ತೀರ್ಥಂಕರ ಆದಿನಾಥರ ಪುತ್ರರಾಗಿದ್ದ ಭರತ ಮತ್ತು ಬಾಹುಬಲಿ ನಡುವೆ ಯುದ್ಧ ಪ್ರಸಂಗ ತಲೆದೋರಿದಾಗ ಇಬ್ಬರಲ್ಲೂ ಚಿಂತನೆಯೊಂದು ಮೂಡಿತು. ತಮ್ಮ ಚಕ್ರವರ್ತಿತ್ವ ಸ್ಥಾಪನೆಗಾಗಿ ಸಾವಿರಾರು ಅಮಾಯಕ ಸೈನಿಕರು ಬಲಿ ಆಗಬೇಕೆ? ಅವರ ಕುಟುಂಬಗಳು ಅನಾಥವಾಗಬೇಕೆ? ಅನಗತ್ಯ ಹಿಂಸೆ ಏಕೆ? ಎಂದು ಯೋಚಿಸಿದರು. ಸಂಪೂರ್ಣ ಸೈನ್ಯವನ್ನು ಬದಿಗಿರಿಸಿ, ಶಸ್ತ್ರಾಸ್ತ್ರಗಳಿಗೆ ವಿರಾಮ ನೀಡಿ ಯುದ್ಧಕ್ಕೆ ತಡೆ ನೀಡಿ ತಾವಿಬ್ಬರೇ ಪರಸ್ಪರ ಕಾದಾಡಿ (ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧ) ಸೋಲು, ಗೆಲುವು ಕಂಡರು. ಈ ಹಿಂಸಾರಹಿತ ಯುದ್ಧವು ನಂತರ ಅವರ ಪಶ್ಚಾತ್ತಾಪಕ್ಕೂ ಕಾರಣವಾಯಿತು. ಇಬ್ಬರೂ ಆ ಕಾಲದಲ್ಲಿಯೇ ಯುದ್ಧ ತಡೆದ ಕೀರ್ತಿಗೆ ಪಾತ್ರರಾದರು. ಯುದ್ಧದಾಹಿ ಆಗಿರುವ ಇಂದಿನ ಜಗತ್ತನ್ನು ಕಂಡಾಗ ಭರತ ಮತ್ತು ಬಾಹುಬಲಿಯ ಯುದ್ಧದ ಸಂಕಥನ ಈ ಹೊತ್ತಿಗೆ ಹೆಚ್ಚು ಪ್ರಸ್ತುತ ಅನ್ನಿಸುತ್ತದೆ.

ಶಾಂತಿನಾಥ ಕೆ. ಹೋತಪೇಟಿ, ಹುಬ್ಬಳ್ಳಿ

ಅಲೆಮಾರಿಗಳ ಬಗ್ಗೆ ಅನಾದರ ಏಕೆ?

'ಒಳಮೀಸಲು ವರದಿಯ ಒಳನೋಟ' ಲೇಖನದಲ್ಲಿ (ಲೇ: ಸಿ.ಎಸ್. ದ್ವಾರಕಾನಾಥ್, ಪ್ರ.ವಾ., ಆಗಸ್ಟ್ 11) ಈವರೆಗೂ ಪ್ರಾತಿನಿಧ್ಯವನ್ನೇ ಪಡೆಯದ ಅಲೆಮಾರಿ ಜಾತಿಗಳಿಗೆ ಶೇ 1ರಷ್ಟು ಮೀಸಲಾತಿ ಹೆಚ್ಚಿಸಬಹುದಿತ್ತು ಎಂಬ ಬಗ್ಗೆ ಪ್ರಸ್ತಾಪಿಸಲಾಗಿದೆ.

ಪರಿಶಿಷ್ಟ ಜಾತಿಗಳಲ್ಲಿನ ಒಳಮೀಸಲಾತಿ ಸಂಬಂಧಿಸಿದ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ವರದಿಯು ರಾಜ್ಯ ಸರ್ಕಾರದ ಕೈ ಸೇರಿದೆ. ಆದರೆ, ಸಾಮಾಜಿಕ ನ್ಯಾಯದ ಮೆರುಗಿನ ಗರಿ ಮತ್ತು ಗುರಿ ಏನು ಎಂಬುದರ ಒಳಮರ್ಮ ಗೊತ್ತಾಗುತ್ತಿಲ್ಲ. ಕೇವಲ ಎಡ, ಬಲ ಮತ್ತು ಸ್ಪೃಶ್ಯ ಜಾತಿಗಳಿಗೆ ನ್ಯಾಯ ಕೊಡಿಸಲು ಸಿದ್ಧವಾದ ಈ ವರದಿಯಲ್ಲಿ ಭಿಕ್ಷೆ ಬೇಡುವ ಅಲೆಮಾರಿಗಳಿಗೆ ನ್ಯಾಯ ಸಿಕ್ಕಿಲ್ಲ.

ಸಣ್ಣವೀರಣ್ಣ ದೊಡ್ಡಮನಿ, ಗುಳೇದಗುಡ್ಡ

ಸಂಶೋಧನೆಗೆ ಮಾರ್ಗದರ್ಶಕರೇ ಇಲ್ಲ!

ಮೈಸೂರು ವಿಶ್ವವಿದ್ಯಾಲಯದಲ್ಲಿ ಕಾಯಂ ಪ್ರಾಧ್ಯಾಪಕರ ನೇಮಕಾತಿ ವಿಳಂಬದಿಂದ ವಿದ್ಯಾರ್ಥಿ ಸಮುದಾಯ ತೊಂದರೆಗೆ ಸಿಲುಕಿದೆ. ಸಂಶೋಧನೆಗೆ ಅರ್ಹತೆ ಪಡೆದಿರುವ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಂಶೋಧನೆ ನಡೆಸಲು ಅವಕಾಶ ಮಾಡಿಕೊಡಿ ಎಂದು ಆರು ತಿಂಗಳುಗಳಿಂದ ಕುಲಪತಿ ಅವರಿಗೆ ಮನವಿ ಮಾಡಿದರೂ ಉಪಯೋಗವಾಗಿಲ್ಲ.

ಯುಜಿಸಿ ನಿಯಮಾನುಸಾರ ಒಬ್ಬ ಪ್ರಾಧ್ಯಾಪಕರಿಗೆ 8 ವಿದ್ಯಾರ್ಥಿಗಳನ್ನಷ್ಟೇ ಸಂಶೋಧನೆಗೆ ನಿಯೋಜಿಸಲು ಅವಕಾಶವಿದೆ. ಹೆಚ್ಚುವರಿಯಾಗಿ ವಿದ್ಯಾರ್ಥಿಗಳನ್ನು ನೀಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಸಂಶೋಧನೆಗೆ ಯುಜಿಸಿ ಮತ್ತು ರಾಜ್ಯ ಸರ್ಕಾರ ಶಿಷ್ಯವೇತನ ನೀಡುತ್ತಿದೆ. ಹೀಗಿದ್ದರೂ ಹೆಚ್ಚುವರಿ ಮಾರ್ಗದರ್ಶಕರನ್ನು ನೀಡಲು ಸಮಸ್ಯೆ ಏನು? ಸಂಶೋಧನಾ ವಿದ್ಯಾರ್ಥಿಗಳ ಸಂಕಟವನ್ನು ಉನ್ನತ ಶಿಕ್ಷಣ ಸಚಿವರು ಬಗೆಹರಿಸಲು ಮುಂದಾಗಬೇಕಿದೆ.

ವರಹಳ್ಳಿ ಆನಂದ, ಮೈಸೂರು

ಆಧಾರ್ ಸೇರ್ಪಡೆ ಕಡ್ಡಾಯವಾಗಲಿ

ಮತ ಕಳವು ಬಗ್ಗೆ ದೇಶದಾದ್ಯಂತ ಸುದ್ದಿಯಾಗುತ್ತಿದೆ. ಮತದಾರರ ಅಂತಿಮ ಪಟ್ಟಿ ಪರಿಷ್ಕರಣೆ ವೇಳೆ ಎಲ್ಲಾ ಪಕ್ಷಗಳಿಗೂ ಮಾಹಿತಿ ನೀಡಲಾಗುತ್ತಿದೆ. ಮತದಾರರ ಹೆಸರು ಬಿಟ್ಟು ಹೋಗಿದ್ದರೆ ಅಂಥವರ ಹೆಸರನ್ನು ಮರು ಸೇರ್ಪಡೆ ಮಾಡಲು ರಾಜಕೀಯ ಮುಖಂಡರು, ಅಧಿಕಾರಿಗಳ ಗಮನಕ್ಕೆ ತರುತ್ತಾರೆ. ಹೀಗಿದ್ದರೂ, ಕೆಲವರ ಹೆಸರು ಎರಡು ಕಡೆ ಅಥವಾ ಅದಕ್ಕಿಂತ ಹೆಚ್ಚು ಇರುತ್ತದೆ. ಮತದಾರರ ಪಟ್ಟಿಗೆ ಆಧಾರ್ ಸಂಖ್ಯೆ ಜೋಡಣೆ ಮಾಡಿದರೆ ಇಂತಹ ದ್ವಂದ್ವಗಳಿಗೆ ಕಡಿವಾಣ ಬೀಳಲಿದೆ.

ಎಚ್.ಕೆ. ಕೊಟ್ರಪ್ಪ, ಹರಿಹರ

ಚುರುಮುರಿ

'ಟ್ರಂಪ್'ರೇಚರ್

● ಮಣ್ಣೆ ರಾಜು

ಮಳೆಯಲ್ಲಿ ನೆಂದು ಬಂದ ಶಂಕ್ರಿಗೆ ಸುಮಿ ಕಾಫಿ ಕೊಟ್ಟು, 'ಮೈ ಬಿಸಿ ಮಾಡಿಕೊಳ್ಳಿ. ಬಿಸಿಯಾಗದಿದ್ದರೆ ನ್ಯೂಸ್ ಪೇಪರ್ ಓದಿ, ಮೈ ಜೊತೆಗೆ ತಲೆಯೂ ಬಿಸಿಯಾಗುತ್ತದೆ' ಎಂದು ಪೇಪರ್ ಕೊಟ್ಟಳು.

'ಕಾವೇರಿಸುವ ನ್ಯೂಸ್‌ಗಿಂಥಾ ಬಿ.ಪಿ ಏರಿಸುವ ಸುದ್ದಿಗಳೇ ಜಾಸ್ತಿ ಇರುತ್ತವೆ' ಅಂದ ಶಂಕ್ರಿ.

'ರಾಜಕಾರಣಿಗಳು ಒಬ್ಬರನ್ನೊಬ್ಬರು ಟೀಕಿಸಿಕೊಂಡು 'ಅವಮಾನ ವೈಪರೀತ್ಯ'ವಾಗಿ ರಾಜಕೀಯ ವಾತಾವರಣ ಕಾವೇರಿದೆ'.

'ಮತ ಕಳವಾಗಿವೆ ಎಂದು ರಾಹುಲ್ ಗಾಂಧಿ ಮತಗಳನ್ನು ಹುಡುಕಿಕೊಂಡು ಬೆಂಗಳೂರಿಗೆ ಬಂದಿದ್ದರು. ಮತಗಳು ಎಲ್ಲಿ ಕಳೆದುಹೋದವಂತೆ?'

'ಎಲ್ಲೂ ಹೋಗಿಲ್ಲವಂತೆ, ಇವರ ಮತಗಳು ಬಿಜೆಪಿಯವರಿಗೆ 'ಮತಾಂತರ' ಆಗಿವೆಯಂತೆ'.

'ಮತಯಂತ್ರದ ದೋಷವಿರಬೇಕು'.

'ಅಲ್ಲವಂತೆ, 'ಮತಮಂತ್ರ'ದ ದೋಷ ಎಂದು ರಾಹುಲ್ ಗಾಂಧಿ ಸಿಟ್ಟಿಗೆದ್ದು ಚುನಾವಣೆ ಆಯೋಗಕ್ಕೂ ಬಿಜೆಪಿಗೂ ತಲೆ ಬಿಸಿ ಮಾಡಿದ್ದಾರಂತೆ'.

'ನಮ್ಮಲ್ಲೇ ಇಷ್ಟೊಂದು ಟೆಂಪರೇಚರ್ ಇರುವಾಗ, ಅಮೆರಿಕದ ಟ್ರಂಪ್ ಪದೇ ಪದೇ ಸಹಿಸಲಾಗದ 'ಟ್ರಂಪ್'ರೇಚರ್ ಹೇಳಿಕೆ ಕೊಡ್ತಿದ್ದಾರೆ'.

'ಮಧ್ಯಸ್ಥಿಕೆ ವಹಿಸಿ ಭಾರತ–ಪಾಕಿಸ್ತಾನ ನಡುವಿನ ಸಂಘರ್ಷ ನಿಲ್ಲಿಸಿದೆ ಎಂಬ ಟ್ರಂಪ್ ಹೇಳಿಕೆ ನಮ್ಮ ಆಡಳಿತ, ವಿರೋಧ ಪಕ್ಷದವರ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ'.

'ರಾಜಕೀಯ ಪಕ್ಷಗಳ ಸಂಘರ್ಷ ನಿಲ್ಲಿಸಲು ಮಧ್ಯಸ್ಥಿಕೆ ವಹಿಸಿದರೆ ಟ್ರಂಪ್‌ಗೆ ನೊಬೆಲ್ ಸಿಗಬಹುದು'.

'ದೇಶಗಳ ನಡುವಿನ ಸಂಘರ್ಷಕ್ಕೆ ಮಾತ್ರ ಅವರು ತಲೆ ತೂರಿಸುತ್ತಾರಂತೆ'.

'ನಮ್ಮ ದೇಶದ ಆರ್ಥಿಕತೆ ಸತ್ತು ಹೋಗಿದೆ ಎಂದು ನಮ್ಮ ವ್ಯವಹಾರಕ್ಕೆ ಮೂಗು ತೂರಿಸಿದ್ದಾರೆ. ನಮ್ಮ ಪದಾರ್ಥಗಳ ಆಮದಿಗೆ 50 ಪರ್ಸೆಂಟ್ ಸುಂಕ ವಿಧಿಸಿದ್ದಾರೆ'.

'ಟ್ರಂಪ್‌ಗೆ ಕೋಪ ಬಂದಾಗಲೆಲ್ಲಾ ಸುಂಕದೇಟು ಕೊಡ್ತಾರೆ'.

'50 ಪರ್ಸೆಂಟ್ ಸುಂಕ ಜಾಸ್ತಿಯಾಯ್ತು, ಡಿಸ್ಕೌಂಟ್ ಕೊಡಿ ಅಂತ ಕೇಳಿಕೊಳ್ಳಬೇಕು'.

'ಕೇಳಬಾರದು, ಸುಂಕದವರ ಮುಂದೆ ಸುಖ–ದುಃಖ ಹೇಳಿಕೊಳ್ಳಬಾರದು' ಅಂದಳು ಸುಮಿ.

'ಉದ್ಯಾನ ನಗರಿ' ನೆನಪಿದೆಯೆ?

ಇನ್ನೊಂದು ವಿಮಾನ ನಿಲ್ದಾಣ ಕಟ್ಟೀವಿ, ಇನ್ನೊಂದು ಸ್ಟೇಡಿಯಂ ಕಟ್ಟೀವಿ ಅನ್ನೋದೆಲ್ಲ ಬಿಡಿ. ಲಾಲ್‌ಬಾಗ್, ಕಬ್ಬನ್ ಪಾರ್ಕ್‌ನಂತೆ ಇನ್ನೊಂದೆರಡು ಪಾರ್ಕ್‌ಗಳನ್ನು ಮಾಡ್ತೀವಿ ಅನ್ನಿ. ಬೆಂಗಳೂರು ಈಗಾಗಲೇ ಕಾಂಕ್ರೀಟ್ ಕಾಡಾಗಿದೆ. 'ಗಾರ್ಡನ್ ಸಿಟಿ' ಅಂತ ತಾನೆ ನಮ್ಮ ಊರಿಗೆ ಇದ್ದ ಹೆಸರು!

ಎಂ.ಎಸ್. ಶ್ರೀಹರ್ಷ, 'ಎಕ್ಸ್'ನಿಂದ

ಕಿಡಿನುಡಿ

ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಬಗ್ಗೆ ಮಾತನಾಡುವ ಕಾಂಗ್ರೆಸ್‌ನಲ್ಲಿ ಆಂತರಿಕ ಪ್ರಜಾಪ್ರಭುತ್ವವೇ ಇಲ್ಲ. ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಸಚಿವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಆದರೆ, ಸತ್ಯ ನುಡಿದ ಕೆ.ಎನ್. ರಾಜಣ್ಣ ಅವರನ್ನು ಬಲಿಪಶು ಮಾಡಲಾಗಿದೆ.

ನಿಖಿಲ್ ಕುಮಾರಸ್ವಾಮಿ, ಅಧ್ಯಕ್ಷ, ಜೆಡಿಎಸ್ ರಾಜ್ಯ ಯುವ ಘಟಕ

25 ವರ್ಷಗಳ ಹಿಂದೆ

ಭಾನುವಾರ, 13-8-2000

● **ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನ ಖಚಿತ**

ತುಮಕೂರು, ಆಗಸ್ಟ್ 12– ಹಿರಿಯ ಮುತ್ಸದ್ದಿ ಎಸ್. ನಿಜಲಿಂಗಪ್ಪ ಅವರ ಕನಸಾಗಿದ್ದ ಭದ್ರಾ ಮೇಲ್ದಂಡೆ ಯೋಜನೆಯನ್ನು ಸ್ವಲ್ಪ ಮಾರ್ಪಾಡಿನೊಂದಿಗೆ ಅನುಷ್ಠಾನಗೊಳಿಸುವುದು ಖಚಿತವಾಗಿದೆ.

ಭದ್ರಾ ನದಿಯ 27 ಟಿಎಂಸಿ ಹೆಚ್ಚುವರಿ ನೀರನ್ನು ಉಪಯೋಗಿಸಿಕೊಂಡು ಬರಪೀಡಿತ ಪ್ರದೇಶಗಳ 15 ತಾಲ್ಲೂಕುಗಳಿಗೆ ಕುಡಿಯುವ ನೀರು ಪೂರೈಸುವ ಮತ್ತು ಈ ಭಾಗದಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಯೋಜನೆಯನ್ನು ಸರ್ಕಾರ ಪರಿಶೀಲಿಸುತ್ತಿದ್ದು, ಸಚಿವ ಸಂಪುಟ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ಪಡೆಯುವುದು ಖಚಿತ ಎಂದು ತಿಳಿದುಬಂದಿದೆ.

75 ವರ್ಷಗಳ ಹಿಂದೆ

ಭಾನುವಾರ, 13-8-1950

● **ಪ್ರಧಾನಿಯಾಗಿರುವವರೆಗೂ ಅಧ್ಯಕ್ಷ ಚುನಾವಣೆಗೆ ನಿಲ್ಲಲಾರೆ**

ದೆಹಲಿ, ಆಗಸ್ಟ್ 12– ತಾವು ಮಹಾ ಪ್ರಧಾನಿಯಾಗಿರುವವರೆಗೂ ಭಾರತ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಗೆ ನಿಲ್ಲುವುದು ಸೂಕ್ತವಲ್ಲವೆಂಬುದಾಗಿ ಪಂಡಿತ್ ನೆಹರೂ ಅವರು ಇಂದು ನುಡಿದರು.

ಮುಂದುವರಿದು, ಕಾಂಗ್ರೆಸ್ ಇತಿಹಾಸದಲ್ಲಿ ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ವ್ಯಕ್ತಿ ಪ್ರಾಧಾನ್ಯಕ್ಕಿಂತಲೂ ಮೂಲ ತತ್ವಗಳು ಅತಿಮುಖ್ಯ ಎಂಬುದಾಗಿ ನೆಹರೂ ತಿಳಿಸಿದ್ದಾರೆ.

ಸಂಗತ

ಎಂದಿಗೂ ಪ್ರಸ್ತುತ ಮರೀಗೌಡರ ಮಾದರಿ

ಆಗಸ್ಟ್ 15ರ ಆಸುಪಾಸಿನಲ್ಲಿ ಲಾಲ್‌ಬಾಗ್‌ನಲ್ಲಿ ಫಲ–ಪುಷ್ಪ ಜಾತ್ರೆ. ಇದು, 'ಕರ್ನಾಟಕದ ತೋಟಗಾರಿಕಾ ಪಿತಾಮಹ'ನ ಸ್ಮರಿಸುವ ಸಂದರ್ಭವೂ ಹೌದು.

● ಗಾಣಧಾಳು ಶ್ರೀಕಂಠ

'ಮಹಾತ್ಮ ಗಾಂಧೀಜಿ ಅವರ ಜನ್ಮ ಶತಮಾನೋತ್ಸವದ (1969) ನೆನಪಿಗಾಗಿ ರಾಜ್ಯದಲ್ಲಿ ನೂರು ಹಣ್ಣಿನ ತೋಟಗಳನ್ನು ನಿರ್ಮಾಣ ಮಾಡಬೇಕೆನ್ನುವ ಸಂಕಲ್ಪ ಡಾ. ಎಂ.ಎಚ್. ಮರೀಗೌಡ ಅವರದಾಗಿತ್ತು. ಆ ಸಂಕಲ್ಪದ ಭಾಗವಾಗಿ, 1969ರಲ್ಲಿ ಕೋಲಾರ ಸಮೀಪದ ಟಮಕದಲ್ಲಿ ಹಲಸಿನ ತಳಿ ಸಂರಕ್ಷಣಾ ಕ್ಷೇತ್ರ ರೂಪುಗೊಂಡಿತು. ಮರೀಗೌಡರ ದೂರದೃಷ್ಟಿಯಿಂದ ಇಂತಹ ಹಲವು ತೋಟಗಳು ಕರ್ನಾಟಕದಲ್ಲಿ ನಿರ್ಮಾಣವಾದವು...'

ಕರ್ನಾಟಕ ಕಂಡ ಅಪ್ರತಿಮ ಕೃಷಿ ದಾರ್ಶನಿಕ ಎಂ.ಎಚ್. ಮರೀಗೌಡರ ಕುರಿತಾಗಿ, ತೋಟಗಾರಿಕಾ ವಿಜ್ಞಾನಿ ಡಾ. ಎಸ್.ವಿ. ಹಿತ್ತಲಮನಿ ಅವರು ಹೇಳಿರುವ ಮಾತಿದು. ಈ ಮಾತಿನ ನೈಜತೆ ಅರಿಯಬೇಕೆಂದರೆ, ಟಮಕಕ್ಕೆ ಹೋಗಬೇಕು. ಅಲ್ಲಿನ, ಹಲಸಿನ ತಳಿ ಸಂರಕ್ಷಣಾ ಕ್ಷೇತ್ರವು ಮರೀಗೌಡರ ಒಂದು ಸುಂದರ ಕನಸು ಸಾಕಾರಗೊಂಡಂತೆ ಕಾಣಿಸುತ್ತದೆ. ಆ ಕೇಂದ್ರದಲ್ಲಿರುವ ಹಲಸು ವೈವಿಧ್ಯ ನೋಡುಗರಲ್ಲಿ ಅಚ್ಚರಿ ಹುಟ್ಟಿಸುವಂತಿದೆ.

'ಅಂಜನಾದ್ರಿ' ಕಾವ್ಯನಾಮದಲ್ಲಿ ಸಾಕಷ್ಟು ಬರವಣಿಗೆ ಮಾಡಿರುವ ಡಿ.ಎಸ್. ಹನುಮಂತರಾವ್ ಅವರು, ಮರೀಗೌಡರ ಬಗ್ಗೆ ಸಾಕಷ್ಟು ನೆನಪುಗಳನ್ನು ಹಂಚಿಕೊಂಡಿದ್ದಾರೆ. ತೋಟಗಾರಿಕೆ ಅಧಿಕಾರಿಯೂ ಆಗಿದ್ದ ಅವರ ನೆನಪುಗಳು, 'ಕರ್ನಾಟಕದ ತೋಟಗಾರಿಕೆ ಪಿತಾಮಹ' ಎಂದು ಮರೀಗೌಡರನ್ನು ಏಕೆ ಕರೆಯಲಾಯಿತು ಎನ್ನುವುದಕ್ಕೆ ಸಾಕ್ಷ್ಯ ಒದಗಿಸುವಂತಿವೆ.

ಪ್ರಸ್ತುತ, ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ವಾಣಿಜ್ಯ ವಹಿವಾಟಿನ ರೂಪದಲ್ಲಿ ಸಂಘಟಿತವಾಗಿ ಮಾವು ಬೆಳೆಯುತ್ತಿರುವುದಕ್ಕೆ ಮರೀಗೌಡರ ಶ್ರಮ ಹಾಗೂ ದೂರದೃಷ್ಟಿಯೇ ಕಾರಣ. 1950–70ರ ಅವಧಿಯಲ್ಲಿ ಮರೀಗೌಡರು ಮುಂದಾಲೋಚನೆಯಿಂದ ಅನುಷ್ಠಾನಗೊಳಿಸಿದ ಯೋಜನೆಗಳಿಂದಾಗಿಯೇ ಕೋಲಾರದೊಂದಿಗೆ ಮಾವಿನ ಘಮ ಸೇರಿಕೊಂಡಿದೆ ಎನ್ನುತ್ತಾರೆ ಹಿತ್ತಲಮನಿಯವರು.

ರಾಜ್ಯದಲ್ಲಿ ಹಲಸು, ಗೋಡಂಬಿ, ನೇರಳೆ ಹಾಗೂ ಮಾವಿನ ತಳಿಗಳ ಸಂರಕ್ಷಣಾ ತೋಟಗಳನ್ನು (ಪ್ರೊಜಿನಿ ಆರ್ಚರ್ಡ್) ಮಾಡಬೇಕು. ಅಲ್ಲಿ ನಾಡಿನ ವಿವಿಧ ಭಾಗಗಳಲ್ಲಿನ ತಳಿಗಳನ್ನು ತಂದು ಬೆಳೆಸಬೇಕು. ಅದರಲ್ಲಿ ಉತ್ತಮ ಇಳುವರಿ ನೀಡುವ ಹಾಗೂ ಸವಿರುಚಿ ಹೊಂದಿರುವ ತಳಿಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಿ ರೈತರಿಗೆ ವಿತರಿಸಬೇಕು ಎನ್ನುವುದು ಮರೀಗೌಡರ ದೂರದೃಷ್ಟಿಯ ಚಿಂತನೆಯಾಗಿತ್ತು. ಅದಕ್ಕೆ ತಕ್ಕಂತೆ ತೋಟಗಾರಿಕೆ ಇಲಾಖೆ– ಕೋಲಾರ, ಮೈಸೂರು ಸೇರಿದಂತೆ ಒಂದಷ್ಟು ಜಿಲ್ಲೆಗಳಲ್ಲಿ ಈ ಹಣ್ಣುಗಳ ತಳಿ ಸಂರಕ್ಷಣಾ ತೋಟಗಳನ್ನು ನಿರ್ಮಿಸಿದೆ.

ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳು ಮಳೆಯ ಅವಕೃಪೆಗೆ ಪಾತ್ರವಾಗಿರುವ ಪ್ರದೇಶಗಳು. 'ಬರಪೀಡಿತ' ಎನ್ನುವುದು ಈ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಕಾಯಂ ವಿಶೇಷಣದಂತಿದೆ. ಈ ಪ್ರದೇಶದಲ್ಲಿ ಆಹಾರ ಧಾನ್ಯಗಳ ಬೆಳೆಯನ್ನಷ್ಟೇ ನಂಬಿ ಬದುಕುವುದು ಕೃಷಿಕರಿಗೆ ಕಷ್ಟ ಎಂದು ಅರಿತಿದ್ದ ಮರೀಗೌಡರು, ಕಡಿಮೆ ನೀರು ಕೇಳುವ ಬೆಳೆಗಳನ್ನು ಬೆಳೆಸುವ ಯೋಚನೆ ಮಾಡಿದರು. ಒಂದು ವರ್ಷ ಮಳೆ ಕಡಿಮೆಯಾದರೂ ಸಹಿಸಿಕೊಳ್ಳುವಂತಹ 'ಹವಾಮಾನ ಸಹಿಷ್ಣು ಬೆಳೆ'ಗಳನ್ನು ಈ ಭಾಗಕ್ಕೆ ಪರಿಚಯಿಸಬೇಕೆಂದು ತೀರ್ಮಾನಿಸಿದರು. ಬಹುವಾರ್ಷಿಕ ಬರ ನಿರೋಧಕ ಬೆಳೆಗಳನ್ನೇ ಬೆಳೆಸಬೇಕೆನ್ನುವುದು ಅವರ ಕನಸಾಗಿತ್ತು.

ಬರಪೀಡಿತ ಪ್ರದೇಶಗಳಲ್ಲಿರುವ ರೈತರ ಸಂಕಷ್ಟವನ್ನು ನಿವಾರಿಸುವ ಹಾಗೂ ಆರ್ಥಿಕವಾಗಿ ಅವರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ– ಬರ ನಿರೋಧಕ ತೋಟಗಾರಿಕೆ ಬೆಳೆಗಳಾಗಿರುವ ಮಾವು, ನೇರಳೆ, ಹಲಸು, ಗೋಡಂಬಿ, ಹಲಸು ಗಿಡಗಳನ್ನು ರೈತರಿಗೆ ವಿತರಿಸಿ ಬೆಳೆಸಲು ಉತ್ತೇಜಿಸಿದರು. ಹೀಗೆ, ಒಂದು ಪ್ರದೇಶದ ರೈತರ ಆರ್ಥಿಕತೆಗೆ ದಾರಿಯೊಂದನ್ನು ತೋರಿಸಿದ ಸಾಧನೆ ಮರೀಗೌಡರದು.

ಬೆಂಗಳೂರಿನ ಶ್ವಾಸಕೋಶಗಳಂತೆ ಇರುವ ಲಾಲ್‌ಬಾಗ್ ಹಾಗೂ ಕಬ್ಬನ್ ಉದ್ಯಾನಗಳ ಅಭಿವೃದ್ಧಿಯಲ್ಲಿ, ವಿಶೇಷವಾಗಿ ಲಾಲ್‌ಬಾಗ್ ವಿಸ್ತರಣೆಯಲ್ಲಿ ಮರೀಗೌಡರ ಪಾತ್ರವಿದೆ ಎಂದು ಹೇಳಲಾಗುತ್ತದೆ. ಆದರೆ, ಮಹಾನಗರದಲ್ಲಿನ ಮಹಾ ಉದ್ಯಾನಗಳ ಅಭಿವೃದ್ಧಿಯಷ್ಟೇ ಅವರ ಸಾಧನೆಯಲ್ಲ; ಬರಪೀಡಿತ ಪ್ರದೇಶಗಳಲ್ಲಿ ಬರ ಸಹಿಷ್ಣು ಬೆಳೆಗಳನ್ನು ಬೆಳೆಸಲು ಅವರು ಕೈಗೊಂಡ ಕ್ರಮಗಳಿಗೆ ವಿಶೇಷ ಮಹತ್ವವಿದೆ. ನಿರ್ದೇಶಕರಾಗಿ ತೋಟಗಾರಿಕೆ ಇಲಾಖೆಗೆ ಹೊಸ ಹೊಳಪು ತಂದುಕೊಟ್ಟ ಹಿರಿಮೆ ಅವರದು. ಪ್ರಸ್ತುತ, ಕೋಲಾರದ ಪರಿಸರದಲ್ಲಿ ತೋಟಗಾರಿಕೆ ಯಶಸ್ವಿಯಾಗಿ ನಡೆಯುತ್ತಿರುವುದಕ್ಕೆ, ಮಾವಿನ ಕೃಷಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವುದಕ್ಕೆ ಮರೀಗೌಡರು ನೀಡಿರುವ ಕೊಡುಗೆ ಮಹತ್ವದ್ದು ಎಂದು ತೋಟಗಾರಿಕಾ ಇಲಾಖೆಯ ಹಿರಿಯ ಅಧಿಕಾರಿಗಳು ನೆನಪಿಸಿಕೊಳ್ಳುತ್ತಾರೆ.

ಆಗಸ್ಟ್ ಹದಿನೈದರ ಸ್ವಾತಂತ್ರ್ಯ ದಿನಾಚರಣೆ ಹಾಗೂ ಜನವರಿ ಇಪ್ಪತ್ತಾರರ ಗಣರಾಜ್ಯೋತ್ಸವ ಸಂದರ್ಭದಲ್ಲಿ ಲಾಲ್‌ಬಾಗ್‌ನಲ್ಲಿ ಪುಷ್ಪ ಪ್ರದರ್ಶನದ ಹೆಸರಿನಲ್ಲಿ ಹೂವಿನ ಜಾತ್ರೆಯೇ ನಡೆಯುತ್ತದೆ. ಈ ಆಗಸ್ಟ್ ತಿಂಗಳು, ಮರೀಗೌಡರನ್ನು ನೆನಪಿಸಿಕೊಳ್ಳುವ ಸಂದರ್ಭವೂ (ಆಗಸ್ಟ್ 8 ಅವರ ಜನ್ಮದಿನ) ಹೌದು. ಅಳತೆ ಮೀರಿ ಬೆಳೆದಿರುವ ಬೆಂಗಳೂರಿಗೆ ಇನ್ನೊಂದು ಲಾಲ್‌ಬಾಗ್, ಕಬ್ಬನ್ ಪಾರ್ಕ್ ಬೇಕಲ್ಲವೆ? ಹೊಸ ಹಸಿರು ಆವರಣಗಳು ರಾಜಧಾನಿಯಲ್ಲಿ ಯಾಕೆ ಸೃಷ್ಟಿಯಾಗುತ್ತಿಲ್ಲ ಹಾಗೂ ಇರುವ ತಾಣಗಳು ಏಕೆ ವಿಸ್ತರಣೆಯಾಗುತ್ತಿಲ್ಲ ಎನ್ನುವ ಪ್ರಶ್ನೆಗಳು, ಮರೀಗೌಡರಂಥ ದಕ್ಷ ಹಾಗೂ ನಿಸ್ಪೃಹ ಸಸ್ಯ ವಿಜ್ಞಾನಿಗಳು, ಅಧಿಕಾರಿಗಳು ಈಗೆಲ್ಲಿ ಎನ್ನುವ ಪ್ರಶ್ನೆಗೂ ಅವಕಾಶ ಕಲ್ಪಿಸುತ್ತವೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದ ಪೌರತ್ವ ಕಾಯ್ದೆ ಹೇಳುವುದೇನು?

ಆಧಾರ್, ಪಾನ್ ಅಥವಾ ಮತದಾರರ ಗುರುತಿನ ಚೀಟಿಗಳನ್ನು ಹೊಂದಿದ್ದರೆ ದೇಶದ ಪೌರತ್ವ ಪಡೆದಂತೆ ಅಲ್ಲ ಎಂದು ಬಾಂಬೆ ಹೈಕೋರ್ಟ್ ಹೇಳಿದೆ. ಇದು ದೇಶದ ಪೌರತ್ವವನ್ನು ನಿರೂಪಿಸುವ ವಿಧಾನ ಮತ್ತು ದಾಖಲೆಗಳ ಬಗ್ಗೆ ನ್ಯಾಯಾಲಯದ ಮಹತ್ವದ ಹೇಳಿಕೆಯಾಗಿದೆ. ಭಾರತದ ಪೌರರು ಅನ್ನಿಸಿಕೊಳ್ಳಲು ಯಾವ ಅರ್ಹತೆ ಹೊಂದಿರಬೇಕು ಮತ್ತು ಯಾವ ಮಾನದಂಡಗಳನ್ನು ಪೂರೈಸಬೇಕು ಎನ್ನುವುದನ್ನು ಪೌರತ್ವ ಕಾಯ್ದೆ–1955ರಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಕಾಲದಿಂದ ಕಾಲಕ್ಕೆ ಅದಕ್ಕೆ ಹಲವು ತಿದ್ದುಪಡಿಗಳನ್ನು ತರಲಾಗಿದ್ದು, ಕೆಲವು ತಿದ್ದುಪಡಿಗಳು ಕೋರ್ಟ್ ಮೆಟ್ಟಿಲನ್ನೂ ಏರಿವೆ. ಕೆಲವು ತಿದ್ದುಪಡಿಗಳಿಗೆ ವಿರೋಧವೂ ವ್ಯಕ್ತವಾಗಿದೆ. ಆದರೆ, ಪೌರತ್ವ ಕಾಯ್ದೆ–1955ರ ಮೂಲ ಅಂಶಗಳು ಹಾಗೆಯೇ ಉಳಿದಿವೆ

ಪ್ರಜಾವಾಣಿ ವಾರ್ತೆ



ಭಾರತದ ಪೌರತ್ವಕ್ಕೆ ಯಾರು ಅರ್ಹರು ಎನ್ನುವುದನ್ನು 'ಪೌರತ್ವ ಕಾಯ್ದೆ- 1955' ವಿವರಿಸುತ್ತದೆ. ಕಾಯ್ದೆಯ 3, 4, 5, 6 ಮತ್ತು 7ನೇ ಸೆಕ್ಷನ್‌ಗಳು ಪೌರತ್ವ ಪ್ರಾಪ್ತವಾಗುವ ಬಗೆಯನ್ನು ಒಳಗೊಂಡಿವೆ.

ಸೆಕ್ಷನ್ 3- ಜನನದ ಆಧಾರದಲ್ಲಿ ಪೌರತ್ವ: ಕಾಯ್ದೆಯ ಸೆಕ್ಷನ್ 3ರಲ್ಲಿ ಹುಟ್ಟಿನ ಆಧಾರದಲ್ಲಿ ಪೌರತ್ವ ನೀಡುವ ಬಗ್ಗೆ ಉಲ್ಲೇಖಿಸಲಾಗಿದೆ. ಎ) ವ್ಯಕ್ತಿಯು 1950ರ ಜ. 26 ಅಥವಾ 1987ರ ಜುಲೈ 1ಕ್ಕೂ ಮೊದಲು ಜನಿಸಿರಬೇಕು. ಬಿ) 1987ರ ಜುಲೈ 1ರಂದು ಅಥವಾ ನಂತರ, ಅಂದರೆ 2003ರ ಪೌರತ್ವ (ತಿದ್ದುಪಡಿ) ಕಾಯ್ದೆ ಜಾರಿಗೂ ಮುನ್ನ ಜನಿಸಿರಬೇಕು. ಮತ್ತು ಅವರು ಹುಟ್ಟಿದಾಗ ಅವರ ತಂದೆ–ತಾಯಿ ಪೈಕಿ ಯಾರಾದರೂ ಭಾರತದ ಪೌರರಾಗಿರಬೇಕು. ಸಿ) 2003ರ ಪೌರತ್ವ (ತಿದ್ದುಪಡಿ) ಕಾಯ್ದೆ ಜಾರಿಯಾದ ನಂತರ ಜನಿಸಿದವರಾಗಿದ್ದು, ಅವರ ತಂದೆ–ತಾಯಿ ಇಬ್ಬರೂ ಭಾರತದ ಪೌರರಾಗಿರಬೇಕು; ಇಲ್ಲವೇ ಇಬ್ಬರ ಪೈಕಿ ಒಬ್ಬರು ಪೌರರಾಗಿದ್ದು, ಇನ್ನೊಬ್ಬರು ಅಕ್ರಮ ವಲಸಿಗರಾಗಿಲ್ಲದಿದ್ದರೆ, ಆ ವ್ಯಕ್ತಿಗೆ ಹುಟ್ಟಿನ ಮೂಲಕ ಪೌರತ್ವ ಸಿಗುತ್ತದೆ.

ಸೆಕ್ಷನ್ 4- ವಂಶಪಾರಂಪರ್ಯದ ಆಧಾರಲ್ಲಿ ಪೌರತ್ವ: ಇದರಲ್ಲಿ ವಂಶಪಾರಂಪರ್ಯವಾಗಿ ಹೇಗೆ ಪೌರತ್ವ ದಕ್ಕುತ್ತದೆ ಎನ್ನುವುದನ್ನು ವಿವರಿಸಲಾಗಿದೆ. 4(ಎ) ಪ್ರಕಾರ, 1950ರ ಜನವರಿ 26ರಂದು ಅಥವಾ ನಂತರದಲ್ಲಿ (1992ರ ಡಿ.10ಕ್ಕೂ ಮುಂಚೆ) ಜನಿಸಿರಬೇಕು. ವ್ಯಕ್ತಿಯು ಜನಿಸಿದಾಗ ಅವರ ತಂದೆಯು ಭಾರತದ ಪೌರರಾಗಿರಬೇಕು. 4(ಬಿ) ಪ್ರಕಾರ, 1992ರ ಡಿ.10ರ ನಂತರ ಜನಿಸಿದವರಾಗಿದ್ದು, ಆ ಸಂದರ್ಭದಲ್ಲಿ ಅವರ ತಂದೆ–ತಾಯಿ ಯಾರಾದರೂ ಭಾರತದ ಪೌರರಾಗಿದ್ದರೆ, ಅವರಿಗೆ ವಂಶಪಾರಂಪರ್ಯವಾಗಿ ಭಾರತದ ಪೌರತ್ವ ಸಿಗುತ್ತದೆ.

ಸೆಕ್ಷನ್ 5-ನೋಂದಣಿ ಮೂಲಕ ಪೌರತ್ವ: ಈ ಸೆಕ್ಷನ್‌ನಲ್ಲಿ ನೋಂದಣಿ ಮೂಲಕ ಪೌರತ್ವ ಪಡೆಯುವ ಬಗೆಗಳನ್ನು ವಿವರಿಸಲಾಗಿದೆ. ಹುಟ್ಟಿನ ಮೂಲದಿಂದ ಆಗಲಿ ಅಥವಾ ವಂಶಪಾರಂಪರ್ಯವಾಗಿ ಆಗಲಿ ವ್ಯಕ್ತಿಗೆ ಪೌರತ್ವ ಸಿಗದೇ ಇದ್ದರೆ, ಅವರು ಅಕ್ರಮ ವಲಸಿಗರಲ್ಲದಿದ್ದರೆ, ನೋಂದಣಿಯ ಮೂಲಕ ಭಾರತದ ಪೌರರಾಗಲು ಸಾಧ್ಯವಿದೆ. ಅದಕ್ಕೆ ಹಲವು ನಿಯಮ ನಿಬಂಧನೆಗಳಿದ್ದು, ಅವುಗಳನ್ನು ಈ ಸೆಕ್ಷನ್‌ನ ವಿವಿಧ ಉಪಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ

ಸೆಕ್ಷನ್ 6- ದೇಶೀಕರಣದ ಮೂಲಕ ಪೌರತ್ವ : ದೇಶೀಕರಣದ (ನ್ಯಾಚುರಲೈಸೇಷನ್) ಮೂಲಕ ಭಾರತದ ಪೌರರಾಗಲು ಈ ಸೆಕ್ಷನ್ ಅವಕಾಶ ನೀಡುತ್ತದೆ. ಸೆಕ್ಷನ್ 6ರ ಉಪಸೆಕ್ಷನ್ 1ರ ಪ್ರಕಾರ, ಯಾವುದೇ ವಯಸ್ಕ ವ್ಯಕ್ತಿ ಅಕ್ರಮ ವಲಸಿಗನಲ್ಲದಿದ್ದರೆ ನಿಗದಿತ ರೀತಿಯಲ್ಲಿ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಬಹುದು. ನಿಯಮಗಳ ಅನುಸಾರ ಅರ್ಜಿದಾರನು ದೇಶೀಕರಣಕ್ಕೆ ಅರ್ಹ ಎಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅವರಿಗೆ ಪೌರತ್ವ (ದೇಶೀಕರಣ ಪ್ರಮಾಣಪತ್ರ) ನೀಡಲಾಗುತ್ತದೆ. ಅರ್ಜಿದಾರನು ತತ್ವಶಾಸ್ತ್ರ, ಕಲೆ, ವಿಜ್ಞಾನ, ವಿಶ್ವಶಾಂತಿ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದರೆ, ಅವರಿಗೆ ಕೇಂದ್ರ ಸರ್ಕಾರವು ನಿಯಮಗಳಲ್ಲಿ ವಿನಾಯಿತಿಯನ್ನೂ ನೀಡಬಹುದು.

ಸೆಕ್ಷನ್ 7- ದೇಶದ ವ್ಯಾಪ್ತಿಗೆ ಒಳಪಟ್ಟ ಪ್ರದೇಶದವರಿಗೆ ಪೌರತ್ವ: ಒಂದು ಪ್ರದೇಶವನ್ನು ದೇಶದ ಭಾಗವನ್ನಾಗಿಸಿಕೊಳ್ಳುವ ಮೂಲಕ, ಆ ಪ್ರದೇಶದಲ್ಲಿರುವವರಿಗೆ ಪೌರತ್ವ ನೀಡುವುದನ್ನು ಈ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಯಾವುದೇ ಒಂದು ಪ್ರದೇಶವು ದೇಶದ ವ್ಯಾಪ್ತಿಗೆ ಒಳಪಡುತ್ತದೆ ಎಂದು ಕೇಂದ್ರ ಸರ್ಕಾರವು ಗೆಜೆಟ್ ಅಧಿಸೂಚನೆ ಹೊರಡಿಸಿದರೆ, ಆ ಪ್ರದೇಶಕ್ಕೆ ಸಂಬಂಧಿಸಿದ ವ್ಯಕ್ತಿಗಳು ಆದೇಶವು ಜಾರಿಯಾದ ದಿನದಿಂದ ಭಾರತದ ಪೌರರಾಗುತ್ತಾರೆ.

ಕಾಯ್ದೆಯ ಸೆಕ್ಷನ್ 5ರ ಅಡಿಯಲ್ಲಿ ಯಾರೆಲ್ಲ ಅರ್ಜಿ ಸಲ್ಲಿಸಬಹುದು?

	ಪೌರತ್ವಕ್ಕಾಗಿ ಯಾರು ಅರ್ಜಿ ಸಲ್ಲಿಸಬಹುದು?	ಬೇಕಾಗುವ ದಾಖಲೆಗಳು
ಸೆಕ್ಷನ್ 5 (1)(ಎ)	ಹೊರದೇಶಗಳ ಪ್ರಜೆಗಳು ಅಥವಾ ಅವರ ಪೋಷಕರಲ್ಲಿ ಒಬ್ಬರು ಅವಿಭಜಿತ ಭಾರತದಲ್ಲಿ ಜನಿಸಿದ್ದರೆ ಮತ್ತು ಕನಿಷ್ಠ ಏಳು ವರ್ಷಗಳಿಂದ ಭಾರತದ ನಿವಾಸಿಯಾಗಿದ್ದವರು ಅರ್ಜಿ ಹಾಕಬಹುದು	ಅಧಿಕೃತ ವಿದೇಶಿ ಪಾಸ್‌ಪೋರ್ಟ್ ಪ್ರತಿ, ವಾಸಕ್ಕಾಗಿ ನೀಡಿರುವ ಪರವಾನಗಿ ಪತ್ರದ ಪ್ರತಿ, ಅರ್ಜಿದಾರರ ಜನನ ದಾಖಲೆಗಳು ಅಥವಾ ಅವರ ಪೋಷಕರಲ್ಲಿ ಒಬ್ಬರು ಅವಿಭಜಿತ ಭಾರತದವರು ಎಂಬುದಕ್ಕೆ ಪಾಸ್‌ಪೋರ್ಟ್‌ನ ಪ್ರತಿ ಅಥವಾ ಜನನ ಪ್ರಮಾಣಪತ್ರ
ಸೆಕ್ಷನ್5 (1)(ಸಿ)	ಭಾರತದ ಪ್ರಜೆಯನ್ನು ಮದುವೆಯಾಗಿರುವ ಮತ್ತು ಏಳು ವರ್ಷಗಳಿಂದ ಭಾರತದಲ್ಲಿ ನೆಲಸಿರುವ ವಿದೇಶಿ ವಯಸ್ಕ ಪ್ರಜೆ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಬಹುದು	ಅಧಿಕೃತ ವಿದೇಶಿ ಪಾಸ್‌ಪೋರ್ಟ್, ವಾಸದ ಉದ್ದೇಶಕ್ಕಾಗಿ ಹೊಂದಿರುವ ಪರವಾನಗಿ ಪತ್ರದ ಪ್ರತಿ, ಅರ್ಜಿದಾರರ ಪತಿ ಅಥವಾ ಪತ್ನಿ ಭಾರತದ ಪ್ರಜೆ ಎಂದು ದೃಢೀಕರಿಸುವ ದಾಖಲೆ– ಭಾರತದ ಪಾಸ್‌ಪೋರ್ಟ್ ಅಥವಾ ಜನನ ಪ್ರಮಾಣಪತ್ರ, ಭಾರತದಲ್ಲಿ ಮದುವೆಗೆ ಸಂಬಂಧಿಸಿದ ನೋಂದಣಾಧಿಕಾರಿ ನೀಡಿರುವ ವಿವಾಹ ನೋಂದಣಿ ಪ್ರಮಾಣಪತ್ರ ಪ್ರತಿ
ಸೆಕ್ಷನ್ 5(1)(ಡಿ)	ಭಾರತದ ಪ್ರಜೆಗಳಾಗಿರುವ ಪೋಷಕರ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಅರ್ಜಿ ಸಲ್ಲಿಸಬಹುದು	ಅಧಿಕೃತ ವಿದೇಶಿ ಪಾಸ್‌ಪೋರ್ಟ್‌ನ ಪ್ರತಿ, ವಾಸ ಪರವಾನಗಿ ಪತ್ರದ ಪ್ರತಿ, ಇಬ್ಬರೂ ಪೋಷಕರು ಭಾರತದ ಪ್ರಜೆಗಳು ಎಂಬುದರ ದಾಖಲೆ– ಭಾರತದ ಪಾಸ್‌ಪೋರ್ಟ್ ಅಥವಾ ಜನನ ಪ್ರಮಾಣಪತ್ರ
ಸೆಕ್ಷನ್ 5(1)(ಇ	ಸೆಕ್ಷನ್ 5ರ ಉಪ ಸೆಕ್ಷನ್ 1ರ (ಎ) ಕಲಂ ಅಥವಾ ಸೆಕ್ಷನ್ 6ರ ಉಪಸೆಕ್ಷನ್ (1)ರ ಅಡಿಯಲ್ಲಿ ಭಾರತದ ಪ್ರಜೆಗಳು ಎಂದು ನೋಂದಣಿ ಮಾಡಿಸಿಕೊಂಡಿರುವ ಪೋಷಕರ ಮಗ/ ಮಗಳಾಗಿರುವ ವಿದೇಶಿ ವಯಸ್ಕ ಪ್ರಜೆ ಅರ್ಜಿ ಹಾಕಬಹುದು	ವಿದೇಶದ ಅಧಿಕೃತ ಪಾಸ್‌ಪೋರ್ಟ್ ಪ್ರತಿ, ವಾಸ ಪರವಾನಗಿ ಪತ್ರದ ಪ್ರತಿ, 1955ರ ಪೌರತ್ವ ಕಾಯ್ದೆಯ ಸರಕ್ಷನ್ 5ರ ಉಪಸೆಕ್ಷನ್ (1)ರ (ಎ) ಕಲಂ ಅಥವಾ ಸೆಕ್ಷನ್ 6ರ ಉಪಸೆಕ್ಷನ್ 1ರ ಅಡಿಯಲ್ಲಿ ಪೋಷಕರಿಗೆ ಪೌರತ್ವ ನೀಡಿರುವ ಪ್ರಮಾಣಪತ್ರದ ಪ್ರತಿ
ಸೆಕ್ಷನ್ 5 (1) (ಎಫ್	ಯಾವುದೇ ವಿದೇಶಿ ವಯಸ್ಕ ಪ್ರಜೆ ಅಥವಾ ಅವರ ಪೋಷಕರಲ್ಲಿ ಯಾರೇ ಒಬ್ಬರು ಸ್ವತಂತ್ರ ಭಾರತದ ಪ್ರಜೆಯಾಗಿದ್ದರೆ ಮತ್ತು ಅವರು 12 ತಿಂಗಳು/ಒಂದು ವರ್ಷ ಭಾರತದಲ್ಲಿ ವಾಸಿಸಿದ್ದರೆ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಬಹುದು	ಅಧಿಕೃತ ವಿದೇಶಿ ಪಾಸ್‌ಪೋರ್ಟ್‌ನ ಪ್ರತಿ, ಅಧಿಕೃತ ವಾಸದ ಪರವಾನಗಿ ಪತ್ರ, ಅರ್ಜಿದಾರ ಅಥವಾ ಅವರ ಪೋಷಕರಲ್ಲಿ ಇಬ್ಬರು ಸ್ವತಂತ್ರ ಭಾರತದ ಪ್ರಜೆ ಎಂಬುದಕ್ಕೆ ಅಗತ್ಯವಿರುವ ದಾಖಲೆ–ಪಾಸ್‌ಪೋರ್ಟ್ ಅಥವಾ ಜನನ ಪ್ರಮಾಣಪತ್ರ
5(1)(ಜಿ)	ಕನಿಷ್ಠ ಐದು ವರ್ಷ ಅಥವಾ ಅದಕ್ಕಿಂತ ಹೆಚ್ಚು ಸಮಯದಿಂದ ಸಾಗರೋತ್ತರ ಭಾರತೀಯ ಪೌರ ಎಂಬ ಕಾರ್ಡ್ ಹೊಂದಿರುವ ವಿದೇಶಿ ವಯಸ್ಕ ಪ್ರಜೆ ಭಾರತದ ಪೌರತ್ವಕ್ಕೆ ಮನವಿ ಮಾಡಬಹುದು	ಅಧಿಕೃತ ವಿದೇಶಿ ಪಾಸ್‌ಪೋರ್ಟ್ ಪ್ರತಿ, 1955ರ ಪೌರತ್ವ ಕಾಯ್ದೆಯ ಸೆಕ್ಷನ್ 7ಎ ಅಡಿಯಲ್ಲಿ ಸಾಗರೋತ್ತರ ಭಾರತೀಯ ಪ್ರಜೆ ಎಂದು ನೋಂದಣಿ ಮಾಡಿಸಿಕೊಂಡಿರುವ ದಾಖಲೆಯ ಪ್ರತಿ

ಸಂವಿಧಾನದಲ್ಲಿ...

ಭಾರತದ ಸಂವಿಧಾನದ ಎರಡನೇ ಭಾಗವು ಪೌರತ್ವದ ಕುರಿತಾಗಿದ್ದು, 5ರಿಂದ 11ರವರೆಗಿನ ವಿಧಿಗಳು ಈ ಬಗ್ಗೆ ವಿವರಿಸುತ್ತವೆ. ದೇಶದ ಸಂವಿಧಾನವು ಒಂದೇ ಪೌರತ್ವವನ್ನು ಪ್ರತಿಪಾದಿಸುತ್ತದೆ.

ಅದರ ಪ್ರಕಾರ, ಯಾವುದೇ ವ್ಯಕ್ತಿ ಸಂವಿಧಾನ ಜಾರಿಯಾದ (1950ರ ಜನವರಿ 26) ಸಂದರ್ಭದಲ್ಲಿ ಮತ್ತು ನಂತರದಲ್ಲಿ ಭಾರತದಲ್ಲಿ ಜನಿಸಿರಬೇಕು. ಇಲ್ಲವೇ ಅವರ ತಂದೆ ತಾಯಿಯಲ್ಲಿ ಒಬ್ಬರು ಭಾರತದಲ್ಲಿ ಜನಿಸಿರಬೇಕು ಅಥವಾ ಕನಿಷ್ಠ ಐದು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಸಮಯದಿಂದ ಭಾರತದ ನಿವಾಸಿಯಾಗಿದ್ದರೆ, ಅಂಥವರು ದೇಶದ ಪೌರರಾಗುತ್ತಾರೆ.

ಆರು ಬಾರಿ ತಿದ್ದುಪಡಿ

ಪೌರತ್ವ ಕಾಯ್ದೆ–1955ಕ್ಕೆ ಈವರೆಗೆ ಆರು ಬಾರಿ ತಿದ್ದುಪಡಿ ಮಾಡಲಾಗಿದೆ. 1986, 1992, 2003, 2005, 2015, ಮತ್ತು 2019ರಲ್ಲಿ ಕಾಯ್ದೆಯಲ್ಲಿನ ಕೆಲವು ಸೆಕ್ಷನ್, ಉಪಸೆಕ್ಷನ್‌ಗಳಿಗೆ ತಿದ್ದುಪಡಿ ತರಲಾಗಿದೆ.

2019ರಲ್ಲಿ ಮಾಡಲಾದ ತಿದ್ದುಪಡಿ ಪ್ರಮುಖವಾದುದು. ಈ ತಿದ್ದುಪಡಿಗೆ ವಿರೋಧ ಪಕ್ಷಗಳು ಹಾಗೂ ವಿವಿಧ ವಲಯಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನಗಳಿಂದ 2014ರ ಡಿಸೆಂಬರ್ 31ರ ಮೊದಲು ಭಾರತಕ್ಕೆ ವಲಸೆ ಬಂದ ಹಿಂದೂ, ಸಿಖ್, ಬೌದ್ಧ, ಜೈನ, ಪಾರ್ಸಿ ಮತ್ತು ಕ್ರೈಸ್ತ ಸಮುದಾಯದವರಿಗೆ ಇಲ್ಲಿನ ಪೌರತ್ವ ಹೊಂದಲು ಈ ತಿದ್ದುಪಡಿ ಅನುಕೂಲ ಕಲ್ಪಿಸಿತ್ತು. ಈ ಮೂರು ದೇಶಗಳ ಆರು ಧರ್ಮಗಳಿಗೆ ಸೇರಿದ ಜನರು ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಲು ಭಾರತದಲ್ಲಿ ನೆಲಸಿರುವ ಅವಧಿಯ ಮಿತಿಯನ್ನು ಈ ತಿದ್ದುಪಡಿಯಲ್ಲಿ 11 ವರ್ಷಗಳಿಂದ ಐದು ವರ್ಷಗಳಿಗೆ ಇಳಿಸಲಾಗಿತ್ತು.

ಪಾಸ್‌ಪೋರ್ಟ್, ಜನನ ಪ್ರಮಾಣಪತ್ರ ದಾಖಲೆ

ಬಾಂಬೆ ಹೈಕೋರ್ಟ್ ತನ್ನ ಆದೇಶದಲ್ಲಿ ಪಾನ್ ಕಾರ್ಡ್ ಅಥವಾ ಆಧಾರ್ ಕಾರ್ಡ್ ಅಥವಾ ಮತದಾರರ ಗುರುತಿನ ಚೀಟಿಯು ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಬೇಕಾದ ದಾಖಲೆಗಳಷ್ಟೆ ಎಂದು ಹೇಳಿದೆ. ಇದಕ್ಕೆ ಪೂರಕವೆಂಬಂತೆ, 1955ರ ಪೌರತ್ವ ಕಾಯ್ದೆ, 2009ರಲ್ಲಿ ಸರ್ಕಾರ ರೂಪಿಸಿರುವ ಪೌರತ್ವದ ನಿಯಮಾವಳಿಗಳಲ್ಲಿ ಎಲ್ಲೂ ಈ ದಾಖಲೆಗಳ ಪ್ರಸ್ತಾಪ ಬರುವುದಿಲ್ಲ. ಭಾರತದ ಪಾಸ್‌ಪೋರ್ಟ್ ಅಥವಾ ಜನನ ಪ್ರಮಾಣಪತ್ರಗಳನ್ನಷ್ಟೇ ದಾಖಲೆಗಳನ್ನಾಗಿ ಪರಿಗಣಿಸಲಾಗಿದೆ.

ಸೆಕ್ಷನ್ 6ಎ, 6(1) ಏನು ಹೇಳುತ್ತವೆ?

ಕೇಂದ್ರ ಸರ್ಕಾರ ಮತ್ತು ಅಸ್ಸಾಂ ವಿದ್ಯಾರ್ಥಿ ಒಕ್ಕೂಟದ ನಡುವಿನ 'ಅಸ್ಸಾಂ ಒಪ್ಪಂದ'ದಂತೆ 1985ರಲ್ಲಿ ಪೌರತ್ವ ಕಾಯ್ದೆಗೆ ತಿದ್ದುಪಡಿ ತಂದು, ಕಾಯ್ದೆಯ ಸೆಕ್ಷನ್ 6ಕ್ಕೆ ಉಪ ಸೆಕ್ಷನ್ 'ಎ' ಅನ್ನು ಸೇರಿಸಲಾಯಿತು. 1966ರ ಜ.1ರಿಂದ 1971ರ ಮಾರ್ಚ್ 25ರ ನಡುವೆ ಅಸ್ಸಾಂಗೆ ವಲಸೆ ಬಂದವರಿಗೆ ಭಾರತದ ಪೌರತ್ವ ನೀಡಲು ಈ ಸಬ್‌ಸೆಕ್ಷನ್ ಅವಕಾಶ ಕಲ್ಪಿಸುತ್ತದೆ. 2024ರಲ್ಲಿ ಸುಪ್ರೀಂ ಕೋರ್ಟ್ ಸೆಕ್ಷನ್ '6ಎ'ನ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿದಿತ್ತು.

ದೇಶೀಕರಣ ಮೂಲಕ ಪೌರತ್ವ ನೀಡುವ ಕಾಯ್ದೆಯ ಸೆಕ್ಷನ್ 6ರ ಉಪ ಸೆಕ್ಷನ್ 1ರ ಪ್ರಕಾರ, ದೇಶದಲ್ಲಿ ಕನಿಷ್ಠ 12 ವರ್ಷಗಳಿಂದ ನೆಲಸಿರುವ ವಯಸ್ಕ ವಿದೇಶಿ ಪ್ರಜೆ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಬಹುದು. ಇದಕ್ಕಾಗಿ ಅವರು ಅಧಿಕೃತ ವಿದೇಶಿ ಪಾಸ್‌ಪೋರ್ಟ್ ಪ್ರತಿ, ವಾಸಕ್ಕಾಗಿ ನೀಡಲಾದ ಪರವಾನಗಿ ಪತ್ರದ ಪ್ರತಿ, ಪೌರತ್ವ ಕಾಯ್ದೆಯ ಅಡಿಯಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ₹1,500 ಠೇವಣಿ ಇಟ್ಟಿರುವ ಬ್ಯಾಂಕ್ ಚಲನ್ ಪ್ರತಿ, ಅರ್ಜಿದಾರರ ಸ್ವಯಂ ದೃಢೀಕರಣ ಪ್ರಮಾಣಪತ್ರ ಮತ್ತು ಅರ್ಜಿದಾರರ ಉತ್ತಮ ನಡವಳಿಕೆಗೆ ಸಂಬಂಧಿಸಿದಂತೆ ಇಬ್ಬರು ಭಾರತೀಯರು ನೀಡಿರುವ ದೃಢೀಕರಣಗಳು, ಭಾರತದಲ್ಲಿ ಚಾಲ್ತಿಯಲ್ಲಿರುವ ಯಾವುದೇ ಭಾಷೆಯ ಬಗ್ಗೆ ಅರ್ಜಿದಾರರಿಗೆ ತಿಳಿವಳಿಕೆ ಇದೆ ಎಂದು ದೃಢೀಕರಿಸಿರುವ ಎರಡು ಭಾಷಾ ಪ್ರಮಾಣಪತ್ರಗಳು, ಪೌರತ್ವಕ್ಕಾಗಿ ಮನವಿ ಮಾಡುವ ಕುರಿತು ಅರ್ಜಿದಾರರ ಉದ್ದೇಶಕ್ಕೆ ಸಂಬಂಧಿಸಿದಂತೆ ಎರಡು ದಿನಪತ್ರಿಕೆಗಳಲ್ಲಿ ಭಿನ್ನ ದಿನಾಂಕಗಳಲ್ಲಿ ಪ್ರಕಟವಾಗಿರುವ ಪ್ರಕಟಣೆಗಳನ್ನು ದಾಖಲೆಯಾಗಿ ಸಲ್ಲಿಸಬೇಕಾಗುತ್ತದೆ.

ಪ್ರಜಾವಾಣಿ DH DECCAN HERALD
ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ
ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ರವಿ ಕೃಷ್ಣಮೂರ್ತಿ,** 95, ಎರಡನೇ ಮುಖ್ಯರಸ್ತೆ, ನಾಲ್ಕನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು	50,000
2	**ನಾರಾಯಣ ಜಿ.,** ಬೆಂಗಳೂರು	50,000
3	**ಬಿ.ಎಸ್.ನೂಲ,** 225 ಎ, ಮಾತೃ ಛಾಯಾ, ಮೊದಲನೇ ಮಹಡಿ, 54ನೇ ಅಡ್ಡರಸ್ತೆ, ಮೂರನೇ ಹಂತ, ರಾಜಾಜಿನಗರ, ಬೆಂಗಳೂರು	40,000
4	**ಕಾತ್ಯಾಯಿನಿ ಎಂ.ಎಸ್.,** ಬೆಂಗಳೂರು	20,000
5	**ಗುರುಪಾದು ಕೆ.ಎಂ.,** 40, ಮೊದಲನೇ ಮಹಡಿ, ಮೂರನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ, ಶ್ರೇಯಸ್ ಕಾಲೊನಿ, ಏಳನೇ ಹಂತ, ಬೆಂಗಳೂರು	10,000
6	**ನರಸಿಂಹಸ್ವಾಮಿ ಎ.ಆರ್.,** 372/374, ಧನುಷ್ ಪ್ಯಾರಡೈಸ್, ಐದನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ, ವಿಜಯ ಬ್ಯಾಂಕ್ ಲೇಔಟ್, ಬಿಳೇಕಹಳ್ಳಿ, ಬೆಂಗಳೂರು	10,000
7	**ಮಧುಸೂದನ್ ಕೆ.ಪಿ,** #1869/28, ಮಧುರ, ಏಳನೇ ಮುಖ್ಯರಸ್ತೆ, ಮೊದಲ ಅಡ್ಡರಸ್ತೆ, ಸ್ವಾಮಿ ವಿವೇಕಾನಂದ ಲೇಔಟ್, ಬೆಂಗಳೂರು	10,000
8	**ನಾರಾಯಣ್ ಶೆಟ್ಟಿ,** ಮೇಟಗಳ್ಳಿ, ಮೈಸೂರು	10,000
9	**ವಸಂತ್,** ಬೆಂಗಳೂರು	7,500
10	**ವಿಜಯ್‌ಕುಮಾರ್ ಡಿ.ವಿ.,** ಬೆಂಗಳೂರು	6,200
11	**ಭಿಕ್ಕು ಗೋಪಾಲಶೆಟ್ಟಿ,** ಬೆಂಗಳೂರು	5,100
12	**ಶಾಂತಾ ಡಿ.ಗೌಡ,** 1626, ಪದ್ಮಶ್ರೀ, ಮೊದಲನೇ ಮಹಡಿ, ಆರನೇ ಅಡ್ಡರಸ್ತೆ, 21ನೇ ಮುಖ್ಯರಸ್ತೆ, ಮೊದಲ ವಲಯ, ಎಚ್‌ಎಸ್‌ಆರ್ ಲೇಔಟ್, ಬೆಂಗಳೂರು	5,100
13	**ನಾಗರಾಜ್,** #1026, ನಾಲ್ಕನೇ ಅಡ್ಡರಸ್ತೆ, ಮೊದಲ ಮುಖ್ಯರಸ್ತೆ, ಶ್ರೀರಾಂಪುರ ಎರಡನೇ ಹಂತ, ಬೆಂಗಳೂರು	5,001
14	**ನಾಗರತ್ನಾ,** ಬೆಂಗಳೂರು	5,001
15	**ಸುರೇಶ್ ಅಂಗಡಿ,** ಹೂವಿನ ಹಡಗಲಿ, ಬಳ್ಳಾರಿ	5,000

ಈಗಾಗಲೇ ಹಣ ನೀಡಿರುವ ದಾನಿಗಳು ತಮ್ಮ ಹೆಸರು, ವಿಳಾಸ, ಮೊತ್ತದ ವಿವರವನ್ನು dept.fnc@printersmysore.co.in ಇ–ಮೇಲ್‌ಗೆ ಕಳುಹಿಸಲು ವಿನಂತಿ

ವಿಮಾನ ಮಾರ್ಗ ಬದಲು: ಐವರು ಸಂಸದರಿಂದ ಸ್ಪೀಕರ್‌ಗೆ ದೂರು

ನವದೆಹಲಿ(ಪಿಟಿಐ): ತಾವು ಪ್ರಯಾಣಿಸುತ್ತಿದ್ದ ತಿರುವನಂತಪುರ–ದೆಹಲಿ ವಿಮಾನದ ಮಾರ್ಗ ಬದಲಾಯಿಸಿ, ಚೆನ್ನೈಗೆ ಕರೆದೊಯ್ಯಲಾಯಿತು. ಈ ಮೂಲಕ ಏರ್ ಇಂಡಿಯಾದಿಂದ ತಮ್ಮ ಹಕ್ಕುಚ್ಯುತಿಯಾಗಿದೆ ಎಂದು ಕಾಂಗ್ರೆಸ್‌ನ ಕೆ.ಸಿ.ವೇಣುಗೋಪಾಲ್ ಸೇರಿ ಐವರು ಸಂಸದರು ಮಂಗಳವಾರ ದೂರಿದ್ದಾರೆ.

ಈ ಕುರಿತು ಅವರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ನೋಟಿಸ್ ಸಲ್ಲಿಸಿದ್ದಾರೆ. ವೇಣುಗೋಪಾಲ್ ಅವರಲ್ಲದೇ, ಕಾಂಗ್ರೆಸ್‌ನ ಕೆ.ಸುರೇಶ್, ಅಡೂರ್ ಪ್ರಕಾಶ್, ರಾಬರ್ಟ್ ಬ್ರೂಸ್ ಹಾಗೂ ಸಿಪಿಎಂನ ಕೆ.ರಾಧಾಕೃಷ್ಣನ್ ಅವರು ಆಗಸ್ಟ್ 10ರಂದು ಏರ್ ಇಂಡಿಯಾ ವಿಮಾನದಲ್ಲಿ (ಎಐ 2455) ಪ್ರಯಾಣಿಸುತ್ತಿದ್ದ ವೇಳೆ ಈ ಘಟನೆ ನಡೆದಿದೆ.

ವಿಮಾನದ ಮಾರ್ಗ ಬದಲಿಸಿದ್ದರ ಕುರಿತು ಈ ಸಂಸದರು, ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಅವರಿಗೂ ಪತ್ರ ಬರೆದಿದ್ದು, ಘಟನೆ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ.

'ಆ. 10ರಂದು ರಾತ್ರಿ 7.15ಕ್ಕೆ ತಿರುವನಂತಪುರದಿಂದ ವಿಮಾನ ಹೊರಡಬೇಕಿತ್ತು. ಆದರೆ, 8.30ಕ್ಕೆ ಹೊರಟಿತು. ಪ್ರಯಾಣದ ವೇಳೆ ವಿಮಾನವು ಪ್ರಕ್ಷುಬ್ಧತೆಗೆ ಒಳಗಾಯಿತು' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ಊಟ ಸೇರಿ ವಿವಿಧ ಸೌಲಭ್ಯಗಳು ಕೂಡ ವಿಮಾನದಲ್ಲಿ ಇರಲಿಲ್ಲ. ಹಾರಾಟದ ಮಧ್ಯೆ, ತಾಂತ್ರಿಕ ಸಮಸ್ಯೆ ಕಂಡುಬಂದಿರುವ ಕಾರಣ ವಿಮಾನದ ಮಾರ್ಗ ಬದಲಿಸಿ, ಚೆನ್ನೈಗೆ ಒಯ್ಯಲಾಗುವುದು ಎಂಬುದಾಗಿ ಪೈಲಟ್ ಘೋಷಿಸಿದ್ದರು' ಎಂದೂ ವಿವರಿಸಿದ್ದಾರೆ.

ಯಾವುದು ಕಾಯಂ?

ನುಡಿ ಬೆಳಗು

ಅರ್ಜುನ ಎಷ್ಟು ಸಾಹಸಿ ಆಗಿದ್ದರೋ ಅಷ್ಟೇ ಭಾವುಕ ಮನುಷ್ಯ. ಹೊರಗೆ ವ್ಯವಹಾರಿಯಾಗಿದ್ದರೂ ಒಳಗೆ ಹೆಂಗರುಳು; ಕರಗಿ ಹೋಗುವ ಮನುಷ್ಯ. ಈ ಸ್ವಯಂವರ, ಅರಗಿನ ಮನೆ, ನೆಲಕ್ಕಾಗಿ ಬಡಿದಾಟ, ದುರ್ಯೋಧನ– ಶಕುನಿಯಂತಹ ಕುತಂತ್ರಿಗಳ ಲೋಲುಪತೆಯಿಂದ ಹೈರಾಣಾಗಿದ್ದ ಯೋಧ. ಹಾಗಾಗಿಯೇ ಎದುರು ಶತ್ರುಸೇನೆ ನಿಂತಿದ್ದರೂ ಒಡಹುಟ್ಟಿದವರ ಮೇಲೆ ಹೇಗೆ ಶಸ್ತ್ರಾಸ್ತ್ರ ಚಲಾಯಿಸಲಿ ಅಂತ ನಿಂತುಬಿಡುತ್ತಾನೆ. ಮಮ್ಮಲ ಮರುಗುತ್ತಾನೆ. ಕಣ್ಣ ಎದುರೇ ತನ್ನ ದಾಯಾದಿಗಳ ದಾರುಣ ಸಾವು, ಕೊಲೆಯನ್ನು ಇವ ಸಹಿಸಲಾರ. ಈ ಮನಃಸ್ಥಿತಿಯವನಿಗಾಗೇ ಕೇಶವ ಗೀತೆಯನ್ನು ಬೋಧಿಸಿದ್ದು; ಕರ್ತವ್ಯದ ವಾಸ್ತವ ಸತ್ಯವನ್ನು ಉಪದೇಶಿಸಿದ್ದು. ಅರ್ಜುನನ ಈ ಭಾವುಕತನ ಮತ್ತು ದ್ವಂದ್ವದ ಮನಸ್ಸಿಗೆ ತಕ್ಕ ಸಾಂತ್ವನವನ್ನು ಹೇಳುತ್ತಿದ್ದ ಏಕೈಕ ಗೆಳೆಯ ಕೃಷ್ಣ. ಸದಾ ಯಾವುದೋ ಚಿಂತೆಯಲ್ಲಿ ಅನ್ಯಮನಸ್ಕನಾಗಿ ಉಳಿವ ಈ ಜೀವವನ್ನು ನಿರಂತರ ಕಾಪಾಡುವ ಪಣ ತೊಟ್ಟಂತಿದ್ದ ಕೇಶವ.

ಒಮ್ಮೆ ಆಕಾಶವೇ ಕಳಚಿ ಬಿದ್ದ ಹಾಗೆ ಕೂತ ಅರ್ಜುನನ ಬಳಿ ಕೃಷ್ಣ ಬಂದು ನಿಂತಾಗ ಅರ್ಜುನ ಕೇಳಿದ್ದು ಇದು: 'ಮಾಧವ, ಈ ಗೋಡೆಯ ಮೇಲೆ ಏನಾದರೂ ಒಂದು ವಾಕ್ಯ ಬರೆ. ಕಷ್ಟದಲ್ಲಿ ಇದ್ದಾಗ ಓದಿದರೂ ಮತ್ತು ಸುಖ ಇದ್ದಾಗ ಓದಿದರೂ ಒಂದೇ ಬಗೆಯ ಸಮಾಧಾನ ಕೊಡಬೇಕು, ಅಂತಹ ವಾಕ್ಯ ಬರೆ'. ಮಾಧವ ಕೂಡಲೇ ನಗುನಗುತ್ತಾ ಗೋಡೆಯ ಮೇಲೆ ಬರೆದುದು ಈ ವಾಕ್ಯ: 'ಈ ಸಮಯ ಕೂಡ ಮುಗಿದು ಹೋಗುತ್ತದೆ.'

ಎಂತಹ ಅಗಾಧ ವ್ಯಾಪ್ತಿಯ ಸಂದೇಶ ನೋಡಿ. ಬದುಕಿನ ಯಾವುದೂ ಶಾಶ್ವತವಲ್ಲ. ಭಾವ, ಸಂಪತ್ತು, ಬಾಂಧವ್ಯ, ಸುಖ–ದುಃಖ, ನಗು ಎಲ್ಲವೂ... ಇದ್ದಾಗ ಇದ್ದುದು ಶಾಶ್ವತವಲ್ಲ ಎಂಬ ಎಚ್ಚರ ಮತ್ತು ಬಡತನ, ಅನಾರೋಗ್ಯ, ಕಷ್ಟಕಾರ್ಪಣ್ಯ ಏನೇ ಇದ್ದರೂ ಅದೂ ಶಾಶ್ವತವಲ್ಲ ಎಂಬ ನಂಬಿಕೆಯನ್ನು ಈ ಹದಿಮೂರು ಅಕ್ಷರಗಳು ಕಟ್ಟಿಕೊಡುತ್ತವೆ. ಇರದೆಂಬ ಕೊರಗು ಮತ್ತು ಇದೆ ಎಂಬ ಗರ್ವ ಎರಡನ್ನೂ ಗುಡಿಸಿ ಹಾಕುವ ವಾಕ್ಯವಿದು.

ಇಂಗ್ಲಿಷಿನಲ್ಲಿ This too shall pass ಎನ್ನಲಾಗುತ್ತದೆ. ಸಮಚಿತ್ತ ಎಂದು ಇದನ್ನೇ ಹೇಳಲಾಗಿದೆ ಅಲ್ಲವೆ? ಸುಧಾಮನ ಬಡತನ ಕ್ಷಣ ಮಾತ್ರದಲ್ಲಿ ಕರಗಿಹೋಯಿತು. ದುರ್ಯೋಧನನ ಅಧಿಕಾರಲಾಲಸೆ, ಹುಂಬತನವನ್ನು ಕಾಲ ಹೊಸಕಿಹಾಕಿತು. ಯಾವುದೂ ಶಾಶ್ವತವಲ್ಲ ಎಂಬ ಸಮಚಿತ್ತ ಭಾವವು ಬಾಳನ್ನು ಒಂದಿಷ್ಟು ಸಹನೀಯಗೊಳಿಸಬಲ್ಲದು. ಅರ್ಜುನನಿಗಾಗಿ ಮಾಧವನು ಗೋಡೆಯ ಮೇಲೆ ಬರೆದ ಬರಹವನ್ನು ನಾವೂ ಆಗಾಗ ಓದಿದಾಗ ಬದುಕಿನ ಕ್ರಮವನ್ನೇ ಬದಲಾಯಿಸಬಲ್ಲದು. ❖

ಗುಂಡಣ್ಣ

ಪದಬಂಧ 6133

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಲೋಹಾಂಶವುಳ್ಳ ಖನಿಜ ದ್ರವ್ಯ (3)
4.ಯುನಾನಿ ವೈದ್ಯನಿವನು (3)
5.ಜೊತೆಯಲ್ಲಿ ಪಾಠ ಕಲಿಯುತ್ತಿರುವವನು (4)
6.ರಾಯರು ನಡೆಸಿರುವ ಸಂಧಾನ (4)
8.ತಿಲಕದ ಬಳಿಯಿರುವ ಎಳ್ಳು (2)
10.ನೇಸರನ ಇನ್ನೊಂದು ಹೆಸರು (2)
13.ದಪ್ಪ ನೂಲಿನ ಹಾಸು (4)
14.ನಿಜವಾಗಿಯೂ ಈಕೆ ಶ್ರೀಕೃಷ್ಣನ ಪತ್ನಿ! (4)
15.ಬೇಡುವವ ಇಲ್ಲಿದ್ದಾನೆ (3)
16.ತುಂಬ ಹದಗೆಟ್ಟ ಸ್ಥಿತಿ (3)

ಮೇಲಿಂದ ಕೆಳಕ್ಕೆ
1.ನಾ ಮುಂದು ತಾ ಮುಂದು ಎಂದು ನುಗ್ಗುವುದು (6)
2.ಪುರಾಣ ಪ್ರಕಾರ ಸ್ವರ್ಗವಿರುವ ನಗರ (5)
3.ಪಾಯ ತೋಡುತ್ತಲೇ ಹೂಡಿರುವ ಯುಕ್ತಿ (3)
5.ಸೈನ್ಯದ ಮುಖ್ಯಾಧಿಕಾರಿ (4)
7.ಇದು ಚರಿತ್ರೆಗೆ ಸಂಬಂಧಿಸಿದುದು (6)
9.ಭೋಜನ ಸಮಾರಂಭಕ್ಕೆ ಬೇಕಾದ ಸಾಧನ ಸಾಮಗ್ರಿ (4)
11.ಲೋಹದ ಹಕ್ಕಿಯಲ್ಲಿನ ಪಯಣ (5)
12.ವ್ಯಾಕರಣ ಪ್ರಕ್ರಿಯೆಗೆ ಸಹಾಯಕವಾಗುವ ಅಕ್ಷರ (3)



6132ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಖುಬುತೆ 3.ಉಗುರು
5.ಗಡಿಯಾರ 7.ವಿನಿಮಯ
9.ಕೆಸರು 12.ಮುದುಕ
14.ಪರಂಧಾಮ 18.ತಟವಟ
19.ಗಿಲಿಕಿ 20.ಕನ್ನಡಿ

ಮೇಲಿಂದ ಕೆಳಕ್ಕೆ:
1.ಖುತ್ಬಿಕ್ಕು 2.ತೆಗಳಿಕೆ
4.ಗುಲಾಮ 6.ರವಿ
8.ಯವನ 10.ರುಸುಮು
11.ಸಂತಾಪ 13.ಕರ್ನಾಟಕ
15.ರಂಗೋಲಿ 16.ಮತ
17.ದಮ್ಮಡಿ

ಸುಡೊಕು 6517

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4	5			6	8	1		3
9		6					7	
	8		7			2		6
6		1		5		7		9
			8	9	6			
8				7		5		2
3		9		1			2	
			6		7	9		4
7		8		2			1	

6516 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

13 ಆಗಸ್ಟ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಚತುರ್ಥಿ ಗಂ. 6-37 ನಂತರ ಪಂಚಮಿ ಗಂ.28-24 **ನಕ್ಷತ್ರ:** ಉತ್ತರಾಭಾದ್ರ ಗಂ. 10-33 **ಯೋಗ:** ಧೃತಿ ಗಂ. 16-06 ಕರಣ: ಬಾಲವ ಗಂ. 6-37 ಕರ್ಕಾಟಕ ಮಾಸದ 28 ನೇ ದಿನ. **ಮಳೆ ನಕ್ಷತ್ರ :** ಆಶ್ಲೇಷ 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 01-30 **ಸೂರ್ಯೋದಯ :** 06-21 **ಸೂರ್ಯಾಸ್ತ :** 06-50, **ಮುಸ್ಲಿಂ ದಿನಾಂಕ :** 18 ಸಫರ್, **ಅದೃಷ್ಟ ಸಂಖ್ಯೆ :** 3, 6

ಮೇಷ: ಸಾಮರ್ಥ್ಯಕ್ಕಿಂತ ಕೆಲಸವು ಕಳಪೆ ಮಟ್ಟದಲ್ಲಿರುವುದು ಬೇಸರ ಎನಿಸಬಹುದು. ತಾಯಿಯೊಂದಿಗೆ ಸಮಾಧಾನಕರ ಸಮಯ ಕಳೆಯುವಿರಿ. ಸಿಹಿ ಖಾದ್ಯಗಳನ್ನು ಸವಿಯುವ ಯೋಗವಿದೆ.

ವೃಷಭ: ಸಹೋದ್ಯೋಗಿಗಳ, ಅಕ್ಕಪಕ್ಕದವರ ಅಭಿವೃದ್ಧಿಯನ್ನು ಕಂಡು ಅಸೂಯೆ ಪಡುವ ಮನಸ್ಥಿತಿ ಇದ್ದರೆ ಸರಿಮಾಡಿಕೊಳ್ಳಿ. ಗುಣಮಟ್ಟದ ಹಾಲು ಮಾರಾಟಗಾರರಿಗೆ ಬೇಡಿಕೆ ದೊರೆಯುತ್ತದೆ.

ಮಿಥುನ: ಸರ್ಕಾರಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರು ಕಾರ್ಯನಿಮಿತ್ತ ದೂರದ ಊರಿಗೆ ಪ್ರಯಾಣ ಬೆಳೆಸಬೇಕಾಗುವುದು. ಅನಗತ್ಯ ಅಲೆದಾಟಗಳನ್ನು ತಪ್ಪಿಸುವ ಪ್ರಯತ್ನ ಮಾಡಿ.

ಕರ್ಕಾಟಕ: ಉಡುಗೆ ತೊಡುಗೆ, ರೀತಿ-ನೀತಿಗಳೆ ಇನ್ನೊಬ್ಬರಿಗೆ ಮಾರ್ಗದರ್ಶನ ನೀಡುವಂತೆ ಇರಲಿ. ಹೊಸ ವಾಹನ ಖರೀದಿ ಮಾಡಲಿದ್ದೀರಿ. ಮನಸ್ಸಿನ ಇಚ್ಛೆಯಂತೆ ನಡೆದು ಗೃಹದಲ್ಲಿ ನೆಮ್ಮದಿಯ ವಾತಾವರಣ ಇರುವುದು.

ಸಿಂಹ: ಸಾರ್ವಜನಿಕ ಕೆಲಸದಲ್ಲಿ ಮುಂದಾಳತ್ವವು ಆರ್ಥಿಕವಾಗಿ ನಾನಾ ರೀತಿಯಲ್ಲಿ ಧನ ಸಂಗ್ರಹವಾಗುವಂತೆ ಮಾಡುವುದು. ಸಂಸ್ಥೆಯ ಉದ್ಯೋಗಿಗಳಿಗೆ ವಿದೇಶದಲ್ಲಿ ಉತ್ತಮ ಅವಕಾಶಗಳು ಸಿಗಲಿವೆ.

ಕನ್ಯಾ: ಸರ್ಕಾರಿ ಕೆಲಸ ಕಾರ್ಯಗಳು ಅನುಕೂಲವಾಗಿ ತೋರಿ ಬಂದಾವು. ಮಗಳ ವಿವಾಹದ ವಿಷಯದಲ್ಲಿ ಶೀಘ್ರ ಸಂತೋಷದ ಸುದ್ದಿಯನ್ನು ಕೇಳಲಿರುವಿರಿ. ಬಡತನದ ಅನುಭವ ಲೆಕ್ಕಾಚಾರಿಯನ್ನಾಗಿ ಮಾಡುವುದು.

ತುಲಾ: ಮನಸ್ಸಿನ ತೊಳಲಾಟಗಳನ್ನು ಆತ್ಮೀಯರೊಂದಿಗೆ ಹಂಚಿಕೊಳ್ಳುವ ಮೂಲಕ ಪರಿಹರಿಸಿಕೊಳ್ಳಬಹುದು. ಹೊಸ ಜವಾಬ್ದಾರಿಗಳು ಹೆಗಲೇರಲಿವೆ. ಸ್ವಂತ ಕಾರ್ಖಾನೆಯನ್ನು ಹೊಂದಿದವರಿಗೆ ಜನಬಲದ ಕೊರತೆ ಕಾಣಲಿದೆ.

ವೃಶ್ಚಿಕ: ಕಿರಿಯರು ಹೇಳಿದ ಸಲಹೆಗಳನ್ನು ಅನನುಭವಿಗಳ ಮಾತು ಎಂದು ಕಡೆಗಣಿಸದೆ ಅದನ್ನು ಪರಾಮರ್ಶಿಸಿ. ಮೂರನೇ ವ್ಯಕ್ತಿಗಳ ಮಾತನ್ನು ಕೇಳಿಕೊಂಡು ವ್ಯವಹಾರಸ್ಥ ವ್ಯಕ್ತಿಗಳ ಸ್ನೇಹವನ್ನು ಹಾಳು ಮಾಡಿಕೊಳ್ಳದಿರಿ.

ಧನು: ಹೊಸ ವ್ಯಾಪಾರವನ್ನು ಆರಂಭ ಮಾಡಲು ಸೂಕ್ತ ಕಾಲ. ಆತ್ಮವಿಶ್ವಾಸಕ್ಕೆ ದೈವಬಲ ಒದಗುತ್ತದೆ. ಸಹೋದರರ ಮಧ್ಯದಲ್ಲಿದ್ದ ಭಿನ್ನಾಭಿಪ್ರಾಯ ಮನಸ್ಸು ಬಿಚ್ಚಿ ಮಾತನಾಡುವುದರ ಮೂಲಕ ದೂರವಾಗುತ್ತದೆ.

ಮಕರ: ಲೀಲಾಜಾಲವಾಗಿ ಮಾಡುತ್ತಿದ್ದ ಕೆಲಸಗಳು ಇವತ್ತಿನ ಕಾರ್ಯ ಒತ್ತಡದಿಂದ ಕೈಕಟ್ಟುವಂತಾಗುತ್ತವೆ. ಹೂವು ಬೆಳೆಗಾರರು ಕ್ರಿಮಿ-ಕೀಟಗಳ ಕಾಟಕ್ಕೆ ಒಳಪಡುವಂಥ ಸಾಧ್ಯತೆಗಳು ಹೆಚ್ಚಾಗಿವೆ.

ಕುಂಭ: ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಇತರರ ವಿಷಯಗಳಲ್ಲಿ ಮೂಗು ತೂರಿಸದೆ ಅಧ್ಯಯನದ ಕಡೆಗೆ ಗಮನ ಕೊಡಿ. ಪದ್ಧತಿಯ ವಿರುದ್ಧವಿರುವ ಆಚರಣೆಗಳನ್ನು ಸರಿಮಾಡಿಕೊಳ್ಳುವ ಬಗ್ಗೆ ಪ್ರಯತ್ನವಿರಲಿ.

ಮೀನ: ಅವಿವೇಕದ ಕೆಲಸಗಳನ್ನು ಮಾಡಿಕೊಂಡು ಕುಟುಂಬದವರೆದುರು ತಲೆ ತಗ್ಗಿಸುವಂತೆ ಮಾಡಿಕೊಳ್ಳಬೇಡಿ. ಕೆಲಸದ ಒತ್ತಡದಿಂದ ಶಿರೋವೇದನೆ ಕಾಡಬಹುದು. ಕುಟುಂಬದಲ್ಲಿ ನೆಮ್ಮದಿ ಇರುವುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,585
ಇಂದಿನ ಅಂತ್ಯ:	24,487
ದಿನದ ಕನಿಷ್ಠ:	24,465
	97

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

	100 ಕ್ಕೆ	₹530
	12 ಕ್ಕೆ	₹70
ಮೈಸೂರು:	100 ಕ್ಕೆ	₹538

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹289-635
ದ್ವಿತಳಿ (ಬಿ.ವಿ)	₹370-743

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹200.00
ಆರ್‌ಎಸ್‌ಎಸ್-5	₹194.00
ಗುಡ್ ಲಾಟ್	₹178.00

ಬಂಡವಾಳ ಮಾರುಕಟ್ಟೆಯಲ್ಲಿ ವಿದೇಶಿ ಹೂಡಿಕೆ ಹೆಚ್ಚು ಮಾಡಲು ಸೆಬಿ ಕ್ರಮ

ವಿದೇಶಿ ಹೂಡಿಕೆ: ನಿಯಮ ಸರಳ

ಬೆಂಗಳೂರು (ರಾಯಿಟರ್ಸ್): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ವಿದೇಶಿ ಹೂಡಿಕೆದಾರರಿಗೆ ಸಂಬಂಧಿಸಿದ ನಿಯಮಗಳನ್ನು ಇನ್ನಷ್ಟು ಸರಳಗೊಳಿಸಲು ಮುಂದಾಗಿದೆ. ದೇಶದ ಬಂಡವಾಳ ಮಾರುಕಟ್ಟೆಗಳಿಗೆ ದೀರ್ಘಾವಧಿಯ ವಿದೇಶಿ ಬಂಡವಾಳದ ಹರಿವು ಇನ್ನಷ್ಟು ಹೆಚ್ಚಬೇಕು ಎಂಬ ಉದ್ದೇಶವನ್ನು ಸೆಬಿ ಹೊಂದಿದೆ.

ಮಂಗಳವಾರ ಪ್ರಕಟಿಸಲಾಗಿರುವ ಸೆಬಿಯ ವಾರ್ಷಿಕ ವರದಿಯಲ್ಲಿ ಈ ವಿವರಗಳು ಇವೆ. ಸರ್ಕಾರಿ ಸ್ವಾಮ್ಯದ ವಿದೇಶಿ ಹೂಡಿಕೆ ಸಂಸ್ಥೆಗಳು, ವಿದೇಶಿ ಸರ್ಕಾರಿ ನಿಧಿಗಳು, ಸಣ್ಣ ಹೂಡಿಕೆದಾರರಿಂದ ಹಣ ಸಂಗ್ರಹಿಸಿ ಅದನ್ನು ಬಂಡವಾಳ ಮಾರುಕಟ್ಟೆಯಲ್ಲಿ ತೊಡಗಿಸುವ ವಿದೇಶಿ ಸಂಸ್ಥೆಗಳಿಗೆ ಏಕಗವಾಕ್ಷಿ ವ್ಯವಸ್ಥೆಯನ್ನು ರೂಪಿಸುವ ಪ್ರಸ್ತಾವವನ್ನು ಸೆಬಿ ಕಳೆದ ವಾರ ಸಿದ್ಧಪಡಿಸಿದೆ.

ಸೆಬಿ ಭವನ –ಪಿಟಿಐ ಚಿತ್ರ

ಇದು ವಿದೇಶಿ ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಭಾರತದ ಮಾರುಕಟ್ಟೆಯಲ್ಲಿ ಹಣ ತೊಡಗಿಸುವುದಕ್ಕೆ ಉತ್ತೇಜನ ನೀಡಬಹುದು ಎಂದು ಸೆಬಿ ನಿರೀಕ್ಷಿಸಿದೆ. ಚಾಲ್ತಿಯಲ್ಲಿ ಇರುವ ನಿಯಮಗಳನ್ನು ಸರಳಗೊಳಿಸಲು ಕೂಡ ಈ ವರ್ಷದಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಸೆಬಿ ವರದಿಯು ಹೇಳಿದೆ.

ನಿಯಮಗಳ ಪಾಲನೆಯ ಹೊರೆಯನ್ನು ಕಡಿಮೆ ಮಾಡಲು, ಅನಗತ್ಯ ನಿಯಮಗಳನ್ನು ಗುರುತಿಸುವ ಕೆಲಸಕ್ಕೆ ಗಮನ ನೀಡಲಾಗುತ್ತದೆ ಎಂದು ಸೆಬಿ ಹೇಳಿದೆ.

ಸೈಬರ್ ಭದ್ರತಾ ಮೂಲಸೌಕರ್ಯವನ್ನು ಮೇಲ್ದರ್ಜೆಗೆ ಏರಿಸಿ, ವಹಿವಾಟುಗಳಲ್ಲಿ ಯಾವುದೇ ಅಪಾಯಗಳು ಎದುರಾಗುವುದನ್ನು ನಿವಾರಿಸುವ ಕೆಲಸ ಮಾಡಲಾಗುತ್ತದೆ ಎಂದು ಕೂಡ ಸೆಬಿ ತನ್ನ ವರದಿಯಲ್ಲಿ ಹೇಳಿದೆ. ನಿರ್ದಿಷ್ಟ ಬಗೆಯ ವಹಿವಾಟುಗಳಲ್ಲಿ ಅಕ್ರಮಗಳನ್ನು ತಡೆಯಲು ಸೆಬಿ ತನ್ನ ವಿಚಕ್ಷಣಾ ವ್ಯವಸ್ಥೆಯನ್ನು ಉತ್ತಮಪಡಿಸುತ್ತಿದೆ ಎಂದು ಅದರ ಅಧ್ಯಕ್ಷ ತುಹಿನ್ ಕಾಂತ ಪಾಂಡೆ ಅವರು ಕಳೆದ ತಿಂಗಳು ಹೇಳಿದ್ದಾರೆ.

ಅಕ್ರಮ ಎಸಗಿದ ಆರೋಪದ ಅಡಿಯಲ್ಲಿ ಅಮೆರಿಕದ ಜೇನ್ ಸ್ಟ್ರೀಟ್ ಸಂಸ್ಥೆಗೆ ನಿರ್ಬಂಧ ಹೇರಿದ ನಂತರದಲ್ಲಿ ಅವರು ಈ ಮಾತು ಹೇಳಿದ್ದರು.

ಮುಖ್ಯಾಂಶಗಳು

- ಸೆಬಿ ವಾರ್ಷಿಕ ವರದಿಯಲ್ಲಿ ವಿವರ
- ನೂತನ ಕ್ರಮದಿಂದ ವಿದೇಶಿ ಹೂಡಿಕೆ ಹೆಚ್ಚುವ ನಿರೀಕ್ಷೆ
- ನಿಯಮ ಪಾಲನೆಯ ಹೊರೆ ತಗ್ಗಿಸಲೂ ಸೆಬಿ ಆಲೋಚನೆ

ಆದಾಯ ತೆರಿಗೆ ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): ಹೊಸ ಆದಾಯ ತೆರಿಗೆ ಮಸೂದೆಗೆ ರಾಜ್ಯಸಭೆಯು ಮಂಗಳವಾರ ಅಂಗೀಕಾರ ನೀಡುವುದರೊಂದಿಗೆ ಈ ಮಸೂದೆಗೆ ಸಂಸತ್ತಿನ ಅಂಗೀಕಾರ ದೊರೆತಂತೆ ಆಗಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆದಾಯ ತೆರಿಗೆ ಮಸೂದೆ ಮತ್ತು ತೆರಿಗೆ ಕಾನೂನು (ತಿದ್ದುಪಡಿ) ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿದರು. ಮಸೂದೆಗಳಿಗೆ ರಾಜ್ಯಸಭೆಯು ಧ್ವನಿಮತದ ಮೂಲಕ ಒಪ್ಪಿಗೆ ನೀಡಿತು.

1961ರ ಆದಾಯ ತೆರಿಗೆ ಕಾಯ್ದೆಯ ಕೆಲವು ಅಂಶಗಳು ಹಳತಾಗಿದ್ದ ಕಾರಣಕ್ಕೆ ಹೊಸ ಮಸೂದೆಯನ್ನು ಸಿದ್ಧಪಡಿಸಬೇಕಾಯಿತು ಎಂದು ನಿರ್ಮಲಾ ಅವರು ಸದನಕ್ಕೆ ತಿಳಿಸಿದರು.

ಇಂತಹ ಮಹತ್ವದ ಮಸೂದೆಗಳ ಬಗ್ಗೆ ಚರ್ಚಿಸಲು ವಿರೋಧ ಪಕ್ಷಗಳು ಬಯಸುತ್ತಿಲ್ಲ ಎಂದು ನಿರ್ಮಲಾ ಆಕ್ರೋಶ ವ್ಯಕ್ತಪಡಿಸಿದರು.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸತೀಶ್ ಮೋಹನ್, ಮೈಸೂರು

ಪ್ರಶ್ನೆ: ನಾನು ನಿವೃತ್ತನಾಗಿದ್ದು, ತೆರಿಗೆ ಪಾವತಿಸಬೇಕಾಗುವ ಪಿಂಚಣಿ ಆದಾಯ ಹೊಂದಿದ್ದೇನೆ. ನಾನು ನನ್ನ ಮನೆ ಮಾರಾಟ ಮಾಡಿ ಬಂದ ಹಣದಿಂದ ಒಂದು ಅಪಾರ್ಟ್‌ಮೆಂಟ್‌ನಲ್ಲಿ ಬಾಡಿಗೆ ಮನೆ ಪಡೆಯುವ ಅಂದಾಜು ಮಾಡಿದ್ದೇನೆ. ನಾನು ಉದ್ಯೋಗದಲ್ಲಿ ಇದ್ದಾಗ ಬಾಡಿಗೆ ಮನೆಗೆ ಸಂಬಂಧಿಸಿ ತೆರಿಗೆ ವಿನಾಯಿತಿ ಇತ್ತು. ಈಗಲೂ ಅದೇ ಬಗೆಯಲ್ಲಿ, ಬಾಡಿಗೆ ಮನೆಯಲ್ಲಿ ವಾಸ್ತವ್ಯ ಮಾಡಿದರೆ, ಮನೆ ಬಾಡಿಗೆ ಪಾವತಿಗೆ ಯಾವುದಾದರೂ ತೆರಿಗೆ ವಿನಾಯಿತಿ ಇದೆಯೇ?

ಉತ್ತರ: ನೀವು ಪ್ರಶ್ನೆಯಲ್ಲಿ ಪ್ರಸ್ತಾಪಿಸಿದ ವಿಚಾರ ವಿವಿಧ ಸನ್ನಿವೇಶ ಹಾಗೂ ನೀವು ಆಯ್ಕೆ ಮಾಡಿದ ತೆರಿಗೆ ಪದ್ಧತಿಯ ಆಧಾರದ ಮೇಲೆ ನಿರ್ಧಾರವಾಗುತ್ತದೆ. ಆದಾಯ ತೆರಿಗೆ ಕಾಯ್ದೆಯ ಪ್ರಕಾರ, ವಾಸಕ್ಕಾಗಿ ಪಾವತಿಸುವ ಬಾಡಿಗೆಗೆ ಸಾಮಾನ್ಯವಾಗಿ ಸೆಕ್ಷನ್ 10(13ಎ) ಅಥವಾ ಸೆಕ್ಷನ್ 80ಜಿಜಿ ಅಡಿಯಲ್ಲಿ ವಿನಾಯಿತಿ ಲಭ್ಯವಿರುತ್ತದೆ. ಆದರೆ ಇದಕ್ಕೆ ಕೆಲವು ಷರತ್ತುಗಳಿವೆ. ಸೆಕ್ಷನ್ 10(13ಎ) ಅಡಿಯಲ್ಲಿ ಬಾಡಿಗೆ ನೀಡುವುದರ ಆಧಾರದಲ್ಲಿ ತೆರಿಗೆ ವಿನಾಯಿತಿ ಪಡೆಯಲು ವೇತನದಲ್ಲಿ ಗೃಹ ಬಾಡಿಗೆ ಭತ್ಯೆಯನ್ನು ಪಡೆದಿರಬೇಕು ಹಾಗೂ ಬಾಡಿಗೆ ಮನೆಯಲ್ಲಿ ವಾಸವಿದ್ದು ಬಾಡಿಗೆ ಪಾವತಿಸುತ್ತಿರಬೇಕು. ಅದರ ಪ್ರಕಾರ ನಿಗದಿಯಾಗುವ ಮೊತ್ತವನ್ನು ವಿನಾಯಿತಿಯಾಗಿ ತೆರಿಗೆ ಲೆಕ್ಕ ಹಾಕುವಾಗ ನೀಡಲಾಗುತ್ತದೆ. ಆದರೆ ನಿವೃತ್ತಿಯ ನಂತರ ಪಿಂಚಣಿ ಮಾತ್ರ ಸ್ವೀಕರಿಸುವವರು ಇಂತಹ ಗೃಹ ಬಾಡಿಗೆ ಭತ್ಯೆ ಪಡೆಯುವುದಿಲ್ಲವಾದ್ದರಿಂದ ಈ ಸೆಕ್ಷನ್ ಅಡಿ ವಿನಾಯಿತಿ ಪಡೆಯಲು ಸಾಧ್ಯವಾಗುವುದಿಲ್ಲ.

ಗೃಹ ಬಾಡಿಗೆ ಭತ್ಯೆ ಪಡೆಯುತ್ತಿಲ್ಲದ ವೈಯಕ್ತಿಕ ತೆರಿಗೆದಾರರು, ಬಾಡಿಗೆ ಪಾವತಿಸುತ್ತಿದ್ದರೆ, ಸೆಕ್ಷನ್ 80ಜಿಜಿ ಅಡಿ ವಿನಾಯಿತಿ ಪಡೆಯಲು ಕೆಲವು ಸಂದರ್ಭಗಳಲ್ಲಿ ಅರ್ಹರಾಗಬಹುದು. ಇದರ ಅಡಿ, ತೆರಿಗೆದಾರರು ತಾವು ವಾಸಿಸುವ ಸ್ಥಳದಲ್ಲಿ ಸ್ವಂತ ನಿವಾಸ ಹೊಂದಿರಬಾರದು ಹಾಗೂ ತಮ್ಮ ಹೆಸರಿನಲ್ಲಿ ಅಥವಾ ಸಂಬಂಧಿಕರ ಹೆಸರಲ್ಲಿ (ಪತಿ-ಪತ್ನಿ ಅಥವಾ ಮಕ್ಕಳು) ಇರುವ ಆಸ್ತಿಯಲ್ಲಿ ವಾಸ್ತವ್ಯದಲ್ಲಿ ಇರಬಾರದು. ಬಾಡಿಗೆ ಪಾವತಿ ಮಾಡಿದ ಒಪ್ಪಂದ ಹೊಂದಿರಬೇಕು ಮತ್ತು ಫಾರಂ 10 ಬಿಎ ಭರ್ತಿ ಮಾಡಬೇಕು. ವಿನಾಯಿತಿಯ ಲೆಕ್ಕದಲ್ಲಿ ಒಟ್ಟು ಆದಾಯದ ಶೇ 25ರಷ್ಟು ಅಥವಾ ತಿಂಗಳಿಗೆ ₹5,000 (ವಾರ್ಷಿಕ ₹60,000) ಅಥವಾ ಒಟ್ಟು ಆದಾಯದ ಶೇ 10ಕ್ಕಿಂತ ಅಧಿಕ ಪಾವತಿಸಿದ ಬಾಡಿಗೆ – ಇದರಲ್ಲಿ ಕನಿಷ್ಠ ಮೊತ್ತವನ್ನು ವಿನಾಯಿತಿಗೆ ಪರಿಗಣಿಸಲಾಗುತ್ತದೆ.

ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ತೆರಿಗೆ ವಿವರ ಸಲ್ಲಿಸುವಾಗ ಹಳೆಯ ಅಥವಾ ಹೊಸ ತೆರಿಗೆ ವಿಧಾನವನ್ನು ಆಯ್ಕೆ ಮಾಡಬಹುದು. ಹಳೆಯ ತೆರಿಗೆ ವಿಧಾನದಲ್ಲಿ ಸೆಕ್ಷನ್ 80ಜಿಜಿ ಸೇರಿದಂತೆ ವಿವಿಧ ಕಡಿತಗಳು ಲಭ್ಯವಿರುತ್ತವೆ. ಇದರಿಂದ ಹೆಚ್ಚಿನ ವಿನಾಯಿತಿ ಪಡೆಯಲು ಸಾಧ್ಯ. ಹೊಸ ತೆರಿಗೆ ವಿಧಾನದಲ್ಲಿ ತೆರಿಗೆ ದರ ಕಡಿಮೆ. ಆದರೆ ವಿನಾಯಿತಿಗಳಿಗೆ ಹೆಚ್ಚಿನ ಅವಕಾಶವಿಲ್ಲ. ಬಹುತೇಕ ಸಂದರ್ಭಗಳಲ್ಲಿ ಯಾವುದೇ ವಿನಾಯಿತಿ ಪಡೆಯದೆ ಇದ್ದಾಗಲೂ ಒಟ್ಟಾರೆ ತೆರಿಗೆ ಕಡಿಮೆಯಾಗಿರುವ ಸಾಧ್ಯತೆ ಹೊಸ ತೆರಿಗೆ ಪದ್ಧತಿಯಲ್ಲೇ ಇರುತ್ತದೆ. ಆದರೂ ನಿಮಗೆ ಈ ಯಾವುದೇ ವಿನಾಯಿತಿಗಳು ನಿಜವಾಗಿ ಪ್ರಯೋಜನ ಆಗುತ್ತವೆಯೇ ಎನ್ನುವುದನ್ನು ಸರಿಯಾಗಿ ತುಲನೆ ಮಾಡಿಯೇ ನೋಡುವುದು ಒಳಿತು. ಇದಕ್ಕೆ ನಿಮ್ಮ ಪೂರ್ಣ ಆದಾಯ ವಿವರದೊಂದಿಗೆ ಸಮೀಪದ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಅಶ್ವತ್ಥ ಕುಮಾರ, ಬನಶಂಕರಿ, ಬೆಂಗಳೂರು

ಪ್ರಶ್ನೆ: ನನ್ನ ಮಗ ಕಳೆದ ಐದು ವರ್ಷಗಳಿಂದ ವಿದೇಶದಲ್ಲಿದ್ದಾನೆ. ನನ್ನೊಂದಿಗೆ ಇದ್ದಾಗ ಅಂಚೆ ಇಲಾಖೆಯಲ್ಲಿ ಸುಕನ್ಯಾ ಸಮೃದ್ಧಿ ಯೋಜನೆಯನ್ನು ನನ್ನ ಮೊಮ್ಮಕ್ಕಳಿಗೆ ಮಾಡಿಸಿದ್ದೆ. ಈಗ ಅವರೂ ಅನಿವಾಸಿ ಭಾರತೀಯರಾಗಿದ್ದಾರೆ. ಈಗ ಅಂಚೆ ಇಲಾಖೆಯವರು ಅದನ್ನು ಮುಂದುವರಿಸಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಈ ಬಗ್ಗೆ ಮಾಹಿತಿ ಬೇಕಾಗಿತ್ತು.

ಉತ್ತರ: ನಿಮ್ಮ ಮೊಮ್ಮಕ್ಕಳ ಭವಿಷ್ಯದ ಆರ್ಥಿಕ ಉಪಯೋಗಕ್ಕೆಂದು ನೀವು ಸಲಹೆ ನೀಡಿ ಸುಕನ್ಯಾ ಸಮೃದ್ಧಿ ಯೋಜನೆಯ ಅಡಿ ಹಣ ತೊಡಗಿಸಿರುವುದು ಉಪಯುಕ್ತ ಕ್ರಮ. ಪ್ರಸ್ತುತ ಈ ಹೂಡಿಕೆಗಳು 'ಸರ್ಕಾರಿ ಉಳಿತಾಯ ಪ್ರೋತ್ಸಾಹನಾ ನಿಯಮಾವಳಿ 1873' ಅಡಿ ನಿಯಂತ್ರಿಸಲ್ಪಡುತ್ತಿವೆ. ಖಾತೆ ತೆರೆಯುವಾಗ ಬಳಸುವ 'ನಮೂನೆ - 1'ರಲ್ಲಿ ಹೂಡಿಕೆದಾರರು ತಮ್ಮ ಬದಲಾದ ವಾಸಸ್ಥಿತಿಯನ್ನು (ರೆಸಿಡೆನ್ಷಿಯಲ್ ಸ್ಟೇಟಸ್) ಖಾತೆ ಇರುವ ಸಂಬಂಧಿತ ಕಚೇರಿಗೆ ತಿಳಿಸಬೇಕು.

ಪ್ರಸ್ತುತ ನಿಯಮಗಳ ಪ್ರಕಾರ, ಹೊಸ ಖಾತೆಯನ್ನು ಭಾರತೀಯ ನಿವಾಸಿಗಳು ಮಾತ್ರ ತೆರೆಯಬಹುದಾಗಿದ್ದು, ಅನಿವಾಸಿ ಭಾರತೀಯರಾಗಿದ್ದರೆ ಹೊಸ ಖಾತೆಯನ್ನು ತೆರೆಯಲು ಸಾಧ್ಯವಿಲ್ಲ. ಆದರೆ, ಖಾತೆ ತೆರೆದ ನಂತರ ಯಾವುದೇ ನಿವಾಸಿ ಭಾರತೀಯ, ಅನಿವಾಸಿ ಭಾರತೀಯನಾಗಿ ಬದಲಾದ ಸನ್ನಿವೇಶದಲ್ಲಿ, ಈಗಾಗಲೇ ತೆರೆದಿರುವ ಖಾತೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶ ಇದೆ. ಈ ಠೇವಣಿ ಬಡ್ಡಿ ಗಳಿಸುವುದಕ್ಕೂ ಅರ್ಹವಾಗಿರುತ್ತದೆ. ಖಾತೆಯನ್ನು ಮುಚ್ಚಬೇಕಾದ ಸಂದರ್ಭ ಎದುರಾಗುವುದು ಭಾರತೀಯ ಪೌರರಾಗಿ ಇರುವ ಹಕ್ಕು ಕಳೆದುಕೊಂಡಾಗ ಮಾತ್ರ. ನಿಮ್ಮ ಮಗ, ಮೊಮ್ಮಕ್ಕಳು ಪೌರತ್ವದ ಹಕ್ಕು ಕಳೆದುಕೊಂಡಿಲ್ಲ; ಬದಲಾಗಿ ಅನಿವಾಸಿ ಭಾರತೀಯರಾಗಿದ್ದಾರೆ.

ನೀವು ಪ್ರಶ್ನೆಯಲ್ಲಿ ತಿಳಿಸಿರುವಂತೆ, ಮೊಮ್ಮಕ್ಕಳ ಹೆಸರಲ್ಲಿ ಸುಕನ್ಯಾ ಸಮೃದ್ಧಿ ಯೋಜನೆಯ ಖಾತೆಯನ್ನು ಈಗಾಗಲೇ ತೆರೆದಿರುವ ಕಾರಣ ಅದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಯಾವುದೇ ತೊಂದರೆ ಇಲ್ಲ. ಹೀಗಾಗಿ ಖಾತೆಯನ್ನು ಮುಂದಿನ ಅವಧಿ ಮುಗಿಯುವ ತನಕ (15 ವರ್ಷ) ಮುಂದುವರಿಸಿ. ಈ ಬಗ್ಗೆ ತಿಳಿಸಿರುವ ಮೇಲಿನ ನಿಯಮಗಳನ್ನು ರಾಷ್ಟ್ರೀಯ ಉಳಿತಾಯ ಸಂಸ್ಥೆಯ ವೆಬ್‌ಸೈಟ್ https://www.nsiindia.gov.in ಇದರಲ್ಲೂ ನೋಡಬಹುದು.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಕರ್ಣಾಟಕ ಬ್ಯಾಂಕ್: ₹292 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ರಾಘವೇಂದ್ರ ಭಟ್

ಮಂಗಳೂರು: ಜೂನ್ ತ್ರೈಮಾಸಿಕದಲ್ಲಿ ಕರ್ಣಾಟಕ ಬ್ಯಾಂಕ್ ₹292.40 ಕೋಟಿ ನಿವ್ವಳ ಲಾಭ ದಾಖಲಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹400.33 ಕೋಟಿ ನಿವ್ವಳ ಲಾಭ ದಾಖಲಿಸಿತ್ತು.

ಮಂಗಳೂರಿನಲ್ಲಿರುವ ಬ್ಯಾಂಕ್‌ನ ಕೇಂದ್ರ ಕಚೇರಿಯಲ್ಲಿ ಮಂಗಳವಾರ ನಡೆದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಮೊದಲ ತ್ರೈಮಾಸಿಕದ ಲೆಕ್ಕಪತ್ರ ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ ಬ್ಯಾಂಕ್‌ನ ಒಟ್ಟು ವಹಿವಾಟು ಶೇ 1.12ರಷ್ಟು ಏರಿಕೆಯಾಗಿ ₹1,77,509.19 ಕೋಟಿಗೆ ತಲುಪಿದೆ (ಕಳೆದ ವರ್ಷ 1,75,534.89 ಕೋಟಿ). ಠೇವಣಿಯಲ್ಲೂ ಶೇ 3.16ರಷ್ಟು ಏರಿಕೆಯಾಗಿ ₹1,03,242.17ಗೆ ತಲುಪಿದೆ (ಕಳೆದ ವರ್ಷ 1,00,079.88 ಕೋಟಿ). ಕಳೆದ ವರ್ಷದ ಮೊದಲ ತ್ರೈಮಾಸಿಕದಲ್ಲಿ ಬ್ಯಾಂಕ್ ₹75,455.01 ಕೋಟಿ ಮುಂಗಡ ನೀಡಿದ್ದರೆ, ಈ ಬಾರಿ ಅದರ ಪ್ರಮಾಣ ₹74,267.02 ಕೋಟಿಗೆ ತಗ್ಗಿದೆ.

ಬ್ಯಾಂಕ್‌ನ ನಿವ್ವಳ ಅನುತ್ಪಾದಕ ಆಸ್ತಿ ಪ್ರಮಾಣ ಇಳಿಕೆಯಾಗುತ್ತಿದ್ದು, ಶೇ 1.44 ಕ್ಕೆ ತಲುಪಿದೆ. ಕಳೆದ ವರ್ಷ ಇದು ಶೇ 1.66ರಷ್ಟಿತ್ತು ಎಂದು ಬ್ಯಾಂಕ್ ಪ್ರಕಟಣೆ ತಿಳಿಸಿದೆ.

'ಮೂಲಸೌಕರ್ಯ ಅಭಿವೃದ್ಧಿಗೆ ಕಳೆದ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ಮಾಡಿರುವ ಹೂಡಿಕೆಯ ಪರಿಣಾಮಗಳು ಮುಂದಿನ ತ್ರೈಮಾಸಿಕಗಳಲ್ಲಿ ಕಾಣಿಸಲಿವೆ. ಚಿಲ್ಲರೆ, ಕೃಷಿ, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಕ್ಷೇತ್ರ ಹಾಗೂ ಕಡಿಮೆ ವೆಚ್ಚದ ಠೇವಣಿಗಳ ಮೇಲೆ ನಮ್ಮ ಹೆಚ್ಚಿನ ಗಮನ ಇರುತ್ತದೆ. ನಮ್ಮ ಬೆಳವಣಿಗೆಯ ಹಾದಿ ನಿರಂತರವಾಗಿರುತ್ತದೆ ಮತ್ತು ಎಲ್ಲಾ ಪಾಲುದಾರರಿಗೆ ನಾವು ಬದ್ಧರಾಗಿದ್ದೇವೆ' ಎಂದು ಬ್ಯಾಂಕ್‌ನ ಎಂ.ಡಿ ಮತ್ತು ಸಿಇಒ ರಾಘವೇಂದ್ರ ಎಸ್. ಭಟ್ ಹೇಳಿದರು.

ಮುಕೇಶ್ ಅಂಬಾನಿ, ನೀತಾ ಅಂಬಾನಿ, ಆಕಾಶ್ ಅಂಬಾನಿ –ಪಿಟಿಐ ಸಂಗ್ರಹ ಚಿತ್ರ

ಅಂಬಾನಿ ಕುಟುಂಬದ ಆಸ್ತಿ ಮೌಲ್ಯ ₹28 ಲಕ್ಷ ಕೋಟಿ

ಮುಂಬೈ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಕುಟುಂಬದ ಒಡೆತನದಲ್ಲಿ ಇರುವ ಸಂಪತ್ತಿನ ಮೌಲ್ಯವು ₹28 ಲಕ್ಷ ಕೋಟಿಯಷ್ಟಿದೆ ಎಂದು ಹುರೂನ್ ಸಂಸ್ಥೆಯು ಬಾರ್ಕ್ಲೇಸ್ ಜೊತೆಗೂಡಿ ಸಿದ್ಧಪಡಿಸಿದ ವರದಿಯೊಂದು ಹೇಳಿದೆ.

ಅಂಬಾನಿ ಕುಟುಂಬದ ಸಂಪತ್ತಿನ ಮೌಲ್ಯವು ಗೌತಮ್ ಅದಾನಿ ಕುಟುಂಬದ ಆಸ್ತಿಯ ಮೌಲ್ಯಕ್ಕೆ (₹14.01 ಲಕ್ಷ ಕೋಟಿ) ಹೋಲಿಸಿದರೆ ಎರಡು ಪಟ್ಟು ಹೆಚ್ಚು.

ಭಾರತದ 300 ಅತ್ಯಂತ ಶ್ರೀಮಂತ ಕುಟುಂಬಗಳ ಸಂಪತ್ತಿನ ಮೌಲ್ಯವು ₹140 ಲಕ್ಷ ಕೋಟಿಗಿಂತ ಹೆಚ್ಚು ಎಂದು ವರದಿಯು ಹೇಳಿದೆ. ಇದು ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಶೇ 40ರಷ್ಟು. ಅಂಬಾನಿ ಕುಟುಂಬದ ಸಂಪತ್ತಿನ ಮೌಲ್ಯವೇ ದೇಶದ ಜಿಡಿಪಿಯ ಶೇ 12ರಷ್ಟು ಆಗುತ್ತದೆ.

ದೇಶದ 300 ಅತ್ಯಂತ ಶ್ರೀಮಂತ ಕುಟುಂಬಗಳು ಕಳೆದ ವರ್ಷದಲ್ಲಿ ಪ್ರತಿದಿನ ₹7,100 ಕೋಟಿಯಷ್ಟು ಸಂಪತ್ತು ಸೃಷ್ಟಿಸಿವೆ.

8 ವರ್ಷಗಳ ಕನಿಷ್ಠ ಮಟ್ಟಕ್ಕೆ ಹಣದುಬ್ಬರ

ಒಂದನೇ ಪುಟದಿಂದ...

ಚಿಲ್ಲರೆ ಹಣದುಬ್ಬರ ದರಕ್ಕೆ ಸಂಬಂಧಿಸಿದ ದತ್ತಾಂಶಗಳ ಬಗ್ಗೆ ಪ್ರತಿಕ್ರಿಯೆ ನೀಡಿರುವ ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಅವರು, 'ಪ್ರಸಕ್ತ ಹಣಕಾಸು ವರ್ಷದ ನಾಲ್ಕನೆಯ ತ್ರೈಮಾಸಿಕದಲ್ಲಿ ಹಾಗೂ ಮುಂದಿನ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಹಣದುಬ್ಬರ ಪ್ರಮಾಣವು ಶೇ 4ಕ್ಕಿಂತ ಹೆಚ್ಚಿರಲಿದೆ ಎಂಬ ನಿರೀಕ್ಷೆಯು, ಆರ್‌ಬಿಐನ ಮುಂಬರುವ ಸಭೆಗಳಲ್ಲಿ ರೆಪೊ ದರ ಇಳಿಸುವ ಸಾಧ್ಯತೆಯನ್ನು ಕಡಿಮೆ ಮಾಡಿದೆ' ಎಂದು ಹೇಳಿದ್ದಾರೆ.

'ಈಗಿನ ಪ್ರಮಾಣದ ಹಣದುಬ್ಬರವು ಅರ್ಥ ವ್ಯವಸ್ಥೆಯಲ್ಲಿ ಬೇಡಿಕೆಯ ಕುರಿತಾಗಿ ಕಳವಳದ ಗಂಟೆಯನ್ನು ಸಹಜವಾಗಿಯೇ ಬಾರಿಸುತ್ತಿತ್ತು. ಆದರೆ ಆಹಾರ ಮತ್ತು ಇಂಧನದಂತಹ ಉತ್ಪನ್ನಗಳನ್ನು ಹೊರತುಪಡಿಸಿ ಇತರ ವರ್ಗಗಳಲ್ಲಿನ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಶೇ 4.1ರಷ್ಟು ಇದೆ. ಅಂದರೆ ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯು ಸ್ಥಿರವಾಗಿ ಇದೆ ಎಂದು ಅರ್ಥ' ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಸಂಸ್ಥೆಯ ಸಹನಿರ್ದೇಶಕ ಪಾರಸ್ ಜಸರಾಯ್ ಹೇಳಿದ್ದಾರೆ.

'ಜಲ ಒಪ್ಪಂದ ಅಮಾನತು: ಸಿಂಧೂ ನಾಗರಿಕತೆ ಮೇಲಿನ ದಾಳಿ'

ಇಸ್ಲಾಮಾಬಾದ್ (ಪಿಟಿಐ): 'ಸಿಂಧೂ ಜಲ ಒಪ್ಪಂದವನ್ನು ಅಮಾನತಿನಲ್ಲಿ ಇಡುವ ಭಾರತ ಸರ್ಕಾರದ ನಿರ್ಧಾರವು ಸಿಂಧೂ ನಾಗರಿಕತೆ ಮತ್ತು ಸಂಸ್ಕೃತಿ ಮೇಲಿನ ದಾಳಿಯಾಗಿದೆ' ಎಂದು ಪಾಕಿಸ್ತಾನದ ಮಾಜಿ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಜರ್ದಾರಿ ಆರೋಪಿಸಿದರು.

ಸಿಂಧಿ ಸಂತ ಶಾ ಅಬ್ದುಲ್ ಲತೀಫ್ ಭಿತಾಯಿ ಅವರ ಮಂದಿರದಲ್ಲಿ ನಡೆದ ಮೂರು ದಿನಗಳ ಉತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ಯುದ್ಧ ಎದುರಾದರೆ ಸಂತ ಶಾ ಅಬ್ದುಲ್ ಲತೀಫ್ ಭಿತಾಯಿ ನೆಲದ ಜನರು ಮೋದಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸುತ್ತಾರೆ. ನಾವು ತಲೆ ತಗ್ಗಿಸಲ್ಲ. ಸಿಂಧೂ ಜಲಾನಯನ ಪ್ರದೇಶಕ್ಕೆ ಧಕ್ಕೆಯಾದರೆ ಎಲ್ಲ ಪ್ರಾಂತ್ಯಗಳ ಜನರು ನಿಮ್ಮ ವಿರುದ್ಧ ತಿರುಗಿಬೀಳುತ್ತಾರೆ' ಎಂದರು.

ಭಾರತದ ಯೋಜನೆಗೆ ನಿರಾಕರಣೆ: ಪಾಕಿಸ್ತಾನ

ಇಸ್ಲಾಮಾಬಾದ್ (ರಾಯಿಟರ್ಸ್): 'ಸಿಂಧೂ ಜಲಾನಯನ ಪ್ರದೇಶದಲ್ಲಿ ಭಾರತದ ಉದ್ದೇಶಿತ ಜಲವಿದ್ಯುತ್ ಯೋಜನೆಗಳಿಗೆ ಅನುಮತಿ ನೀಡಲಾಗದು ಎಂದು ಅಂತರರಾಷ್ಟ್ರೀಯ ನ್ಯಾಯಾಲಯವೊಂದು ಆದೇಶ ನೀಡಿದೆ. ಅಲ್ಲದೇ, ಭಾರತವು ಸಿಂಧೂ ಜಲ ಒಪ್ಪಂದಕ್ಕೆ ಬದ್ಧವಾಗಿರಬೇಕು ಎಂದು ನ್ಯಾಯಾಲಯ ಸೂಚಿಸಿದೆ' ಎಂದು ಪಾಕಿಸ್ತಾನ ಮಂಗಳವಾರ ತಿಳಿಸಿದೆ.

ಪಾಕಿಸ್ತಾನದ ಅಟಾರ್ನಿ ಜನರಲ್ ಮನ್ಸೂರ್ ಉಸ್ಮಾನ್ ಈ ಬಗ್ಗೆ ಮಾಹಿತಿ ನೀಡಿದ್ದು,' ಸಿಂಧೂ ಜಲಾನಯನ ಪ್ರದೇಶದಲ್ಲಿ ಭಾರತವು ಜಲವಿದ್ಯುತ್ ಸ್ಥಾವರಗಳನ್ನು ನಿರ್ಮಿಸಲು ರೂಪಿಸಿದ್ದ ಉದ್ದೇಶಿತ ಯೋಜನೆಯನ್ನು ಪ್ರಶ್ನಿಸಿ 2023ರಲ್ಲಿ ನೆದರ್‌ಲೆಂಡ್ಸ್‌ನ ಹೇಗ್ ಮೂಲದ ಶಾಶ್ವತ ಮಧ್ಯಸ್ಥಿಕೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿತ್ತು. ಇದೀಗ ನ್ಯಾಯಾಲಯವು ನದಿಗಳ ಮೇಲಿನ ಪಾಕಿಸ್ತಾನದ ಹಕ್ಕನ್ನು ಪುರಸ್ಕರಿಸುವುದರ ಜತೆಗೆ ಸಿಂಧೂ ಜಲ ಒಪ್ಪಂದಕ್ಕೆ ಬದ್ಧವಾಗಿರುವಂತೆ ಭಾರತಕ್ಕೆ ನಿರ್ದೇಶಿಸಿದೆ' ಎಂದಿದ್ದಾರೆ.

ಈ ಕುರಿತು ಭಾರತದ ವಿದೇಶಾಂಗ ಸಚಿವಾಲಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಅಡಿಕೆ ಧಾರಣೆ

ಬೆಳ್ತಂಗಡಿ					
ಹೊಸತು	28500-25000	ಚಾಲಿ	35809-42299	ಅಪಿ	62800-70599
ಹಳತು	52500-44000	ಕೋಕ	28359-20319	ಬಿಳಿಗೋಟು	16899-34800
ಕೋಕ	12,000-28000	ಕೆಂಪುಗೋಟು	20119-21619	ಚಾಲಿ	34900-43209
ಇತರೆ	35,500-24500	ರಾಶಿ	44099-50599	ಕೋಕ	10509-19299
ಶಿವಮೊಗ್ಗ		ತಟ್ಟಿಬೆಟ್ಟೆ	28699-46899	ಕೆಂಪುಗೋಟು	16099-27099
ಬೆಟ್ಟೆ	54799-62809	ಶಿರಸಿ		ರಾಶಿ	40399-59208
ಗೊರಬಲು	25580-37001	ಬೆಟ್ಟೆ	27699-45061	ತಟ್ಟಿಬೆಟ್ಟೆ	28309-38699
ರಾಶಿ	48009-59699	ಬಿಳಿಗೋಟು	21099-36636	ಸಾಗರ	
ಸರಕು	51000-90240	ಚಾಲಿ	38190-43599	ಬಿಳಿಗೋಟು	24,299-28199
ಸಿದ್ದಾಪುರ		ಕೆಂಪುಗೋಟು	22299-25299	ಚಾಲಿ	32999-38199
ಬಿಳಿಗೋಟು	24699-32699	ರಾಶಿ	46269-49099	ಕೋಕ	20699-24699
		ಯಲ್ಲಾಪುರ		ಕೆಂಪುಗೋಟು	24199-32099
				ರಾಶಿ	43910-58529
				ಸಿಪ್ಪೆಗೋಟು	15111-19999

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1265 (1260)
ಸೂರ್ಯಕಾಂತಿ (ರಿಫೈನ್ಡ್)	₹1380 (1370)
ಪಾಮೋಲಿನ್	₹1125 (1220)

ಈರುಳ್ಳಿ ಧಾರಣೆ
(ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1400-1800
ಮಧ್ಯಮ	₹1000-1400
ಸಣ್ಣ	₹500-1000

ನ್ಯಾ. ವರ್ಮಾ ಪದಚ್ಯುತಿಗೆ ಪ್ರಕ್ರಿಯೆ ಶುರು

ಒಂದನೇ ಪುಟದಿಂದ...

ವರ್ಮಾ ಅವರನ್ನು ಪದಚ್ಯುತಗೊಳಿಸಬೇಕೆಂದು ಸಂಸದರು ಸಲ್ಲಿಸಿದ ನೋಟಿಸ್ ಆಧರಿಸಿ ಓಂ ಬಿರ್ಲಾ ಅವರು ಈ ತೀರ್ಮಾನಕ್ಕೆ ಬಂದಿದ್ದಾರೆ. ಸಮಿತಿಯು ಶೀಘ್ರದಲ್ಲಿ ವರದಿ ಸಲ್ಲಿಸಲಿದೆ. ನ್ಯಾಯಮೂರ್ತಿ ವರ್ಮಾ ಅವರನ್ನು ಪದಚ್ಯುತಗೊಳಿಸುವ ಪ್ರಸ್ತಾವವು ತನಿಖಾ ಸಮಿತಿಯ ವರದಿಯನ್ನು ಸ್ವೀಕರಿಸುವವರೆಗೆ ಬಾಕಿ ಇರಲಿದೆ ಎಂದು ಓಂ ಬಿರ್ಲಾ ಹೇಳಿದರು.

ನ್ಯಾಯಮೂರ್ತಿಗಳ ವಿಚಾರಣಾ ಕಾಯ್ದೆ ಸೆಕ್ಷನ್ 3ರ ಹಾಗೂ ಸಂವಿಧಾನದ 124, 217 ಮತ್ತು 218ನೇ ವಿಧಿಗಳ ಅಡಿಯಲ್ಲಿ ನ್ಯಾ. ವರ್ಮಾ ಅವರನ್ನು ಪದಚ್ಯುತಗೊಳಿಸುವಂತೆ ಆಗ್ರಹಿಸಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಬಿಜೆಪಿ ಸಂಸದ ರವಿಶಂಕರ ಪ್ರಸಾದ್ ಸೇರಿದಂತೆ 146 ಸಂಸದರಿಂದ ಪದಚ್ಯುತಿಯ ಪ್ರಸ್ತಾವ ಜುಲೈ 21ರಂದು ಸಲ್ಲಿಕೆಯಾಗಿತ್ತು ಎಂದು ಅವರು ತಿಳಿಸಿದರು.

ಬೆಂಕಿ ಅವಘಡದ ನಂತರ ವರ್ಮಾ ಅವರ 30 ತುಘಲಕ್ ಕ್ರೆಸೆಂಟ್ ಬಂಗಲೆಯಲ್ಲಿ ಲೆಕ್ಕವಿಲ್ಲದ ನಗದು ಪತ್ತೆಯಾಗಿದೆ ಎಂದು ಬಿರ್ಲಾ ಸದನಕ್ಕೆ ತಿಳಿಸಿದರು.

'ಪ್ರಸ್ತುತ ಪ್ರಕರಣದಲ್ಲಿರುವ ಸಂಗತಿಗಳು ಭ್ರಷ್ಟಾಚಾರದ ಕಡೆಗೆ ಬೆರಳು ತೋರಿಸುತ್ತವೆ ಮತ್ತು ಸಂವಿಧಾನದ 124, 217 ಮತ್ತು 218ನೇ ವಿಧಿಗಳ ಅಡಿಯಲ್ಲಿ ಕ್ರಮಕ್ಕೆ ಅರ್ಹವಾಗಿವೆ. ಸಂಸತ್ತು ಈ ವಿಷಯದ ಬಗ್ಗೆ ಏಕ ಧ್ವನಿಯಲ್ಲಿ ಮಾತನಾಡಬೇಕಾಗಿದೆ. ಈ ದೇಶದ ಪ್ರತಿಯೊಬ್ಬರೂ ಭ್ರಷ್ಟಾಚಾರದ ವಿರುದ್ಧದ ಶೂನ್ಯ ಸಹಿಷ್ಣುತೆಯ ಸ್ಪಷ್ಟ ಸಂದೇಶ ಕಳುಹಿಸಬೇಕಿದೆ' ಎಂದು ಅವರು ಹೇಳಿದರು.

ವರ್ಮಾ ಅವರ ನಿವಾಸದಲ್ಲಿ 2025ರ ಮಾರ್ಚ್ 14ರಂದು ರಾತ್ರಿ ಬೆಂಕಿ ಅವಘಡ ಸಂಭವಿಸಿತ್ತು. ಈ ವೇಳೆ ನಗದು ಪತ್ತೆಯಾದ ಆರೋಪಗಳು ಕೇಳಿಬಂದಿದ್ದು, ಈ ವಿಚಾರ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಮಾ.22ರಂದು ಆಗಿನ ಸಿಜೆಐ ಸಂಜೀವ್ ಖನ್ನಾ ಅವರು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಿದ್ದರು. ಸಮಿತಿಯು 55 ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ, ಘಟನಾ ಸ್ಥಳಕ್ಕೆ ಭೇಟಿ ನೀಡಿ 64 ಪುಟಗಳ ವರದಿ ಸಲ್ಲಿಸಿತ್ತು. ವರ್ಮಾ ವಿರುದ್ಧದ ಆರೋಪಗಳು ಸಾಬೀತಾಗಿದ್ದು, ಅವರನ್ನು ಸೇವೆಯಿಂದ ತೆಗೆದುಹಾಕುವಂತೆ ಸಮಿತಿ ಶಿಫಾರಸು ಮಾಡಿತ್ತು. ವರ್ಮಾ ಅವರನ್ನು ಪದಚ್ಯುತಗೊಳಿಸುವ ಪ್ರಕ್ರಿಯೆ ಆರಂಭಿಸುವಂತೆ ಸಂಜೀವ್ ಖನ್ನಾ ಶಿಫಾರಸು ಮಾಡಿದ್ದರು.

ವಿವಾದದ ಬೆನ್ನಲ್ಲೇ ನ್ಯಾಯಮೂರ್ತಿ ವರ್ಮಾ ಅವರನ್ನು ದೆಹಲಿ ಹೈಕೋರ್ಟ್‌ನಿಂದ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿತ್ತು.

ತನಿಖಾ ವರದಿ ಅನೂರ್ಜಿತಗೊಳಿಸುವಂತೆ ಕೋರಿ ನ್ಯಾಯಮೂರ್ತಿ ವರ್ಮಾ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಇತ್ತೀಚೆಗೆ ವಜಾಗೊಳಿಸಿತ್ತು.

ಅಯ್ಯಪ್ಪ ಸಮ್ಮೇಳನ: ಮಹಿಳೆ ಭಾಗವಹಿಸುವುದಕ್ಕೆ ವಿರೋಧ

ತಿರುವನಂತಪುರ: ಕೇರಳದಲ್ಲಿ-2019ರಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ಶಬರಿಮಲೆ ಅಯ್ಯಪ್ಪ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶ ಪ್ರಕರಣವು ಈಗ ಮತ್ತೊಮ್ಮೆ ಚರ್ಚೆಯಲ್ಲಿದೆ. ಅಂದು ದೇವಸ್ಥಾನ ಪ್ರವೇಶಿಸಿದ್ದ ಹೋರಾಟಗಾರ್ತಿಯೊಬ್ಬರಿಗೆ ಇದೇ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ 'ಜಾಗತಿಕ ಅಯ್ಯಪ್ಪ ಸಮ್ಮೇಳನ'ದಲ್ಲಿ ಭಾಗವಹಿಸಲು ಸಿಪಿಎಂ ನೇತೃತ್ವದ ಕೇರಳ ಸರ್ಕಾರ ಅವಕಾಶ ಕಲ್ಪಿಸುತ್ತಿದೆ ಎಂದು ಆರೋಪಿಸಿ, ಬಿಜೆಪಿ ಮತ್ತು ಸಂಘ ಪರಿವಾರ ಆಕ್ರೋಶ ವ್ಯಕ್ತಪಡಿಸಿವೆ.

'ತಿರುವಾಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) 75ನೇ ವಾರ್ಷಿಕೋತ್ಸವದ ಅಂಗವಾಗಿ ಪಂಪಾ ನದಿ ತೀರದಲ್ಲಿ ಜಾಗತಿಕ ಅಯ್ಯಪ್ಪ ಸಮ್ಮೇಳನವನ್ನು ಆಯೋಜಿಸಲು ಸಿದ್ಧತೆಗಳು ನಡೆದಿವೆ. ಶಬರಿಮಲೆ ದೇವಸ್ಥಾನವನ್ನು ಜಾಗತಿಕ ಯಾತ್ರಾ ಕೇಂದ್ರವನ್ನಾಗಿಸುವುದು ಇದರ ಉದ್ದೇಶ' ಎಂದು ದೇವಸ್ವಂ ಸಚಿವ ವಿ.ಎನ್. ವಾಸವನ್ ಹೇಳಿದ್ದಾರೆ.

ಸಚಿವರ ಹೇಳಿಕೆ ಬೆನ್ನಲ್ಲೇ, ಈ ಸಮ್ಮೇಳನದಲ್ಲಿ ಭಾಗವಹಿಸುವುದಾಗಿ 2019ರಲ್ಲಿ ದೇಗುಲ ಪ್ರವೇಶಿಸಿದ್ದ ಹೋರಾಟಗಾರ್ತಿ ಬಿಂದು ಅಮ್ಮಿಣಿ ಎಂಬುವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

'ಶಬರಿಮಲೆ ಅಯ್ಯಪ್ಪ ದೇವಸ್ಥಾನದ ಸಂಪ್ರದಾಯವನ್ನು ಉಲ್ಲಂಘಿಸಿದ ಹೋರಾಟಗಾರ್ತಿಯರಿಗೆ ಸಿಪಿಎಂ ನೇತೃತ್ವದ ಸರ್ಕಾರವು ಮತ್ತೆ ವೇದಿಕೆ ಒದಗಿಸುತ್ತಿದೆ' ಎಂದು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯ, ಮಿಜೋರಾಂನ ಮಾಜಿ ರಾಜ್ಯಪಾಲ ಕುಮ್ಮನಂ ರಾಜಶೇಖರನ್ ಆರೋಪಿಸಿದ್ದಾರೆ.

ಶಬರಿಮಲೆ ಯಾತ್ರೆಗೆ ಮಾನ್ಯತೆ: ಕೊಲಂಬೊ (ಪಿಟಿಐ): ಕೇರಳದ ಶಬರಿಮಲೆ ಯಾತ್ರೆಗೆ ಮಾನ್ಯತೆ ನೀಡಲು ಶ್ರೀಲಂಕಾ ಸರ್ಕಾರ ನಿರ್ಧರಿಸಿದೆ. ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಂಡಿರುವುದಾಗಿ ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರಮಾಣಪತ್ರಗಳಿಗೆ ಹುಡುಕಾಟ

ಒಂದನೇ ಪುಟದಿಂದ...

ಇತ್ತೀಚಿಗೆ ಬಿಹಾರದಲ್ಲಿ ನಡೆದ ಚುನಾವಣೆಗಳಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾವಣೆ ಮಾಡಿದ್ದಾರೆ ಎಂಬುದೂ ಗಮನಿಸಬೇಕಾದ ಅಂಶ. ಇದೆಲ್ಲ ನಿತೀಶ್ ಅವರಿಗೆ ವರದಾನವಾಗಿತ್ತು ಎಂದೂ ವಿಶ್ಲೇಷಿಸಲಾಗುತ್ತಿದೆ.

ಬೇಗುಸರಾಯ್‌ನ ಭರ್‍ರಾ ಗ್ರಾಮದ ದೇಗುಲದಲ್ಲಿ ಕುಳಿತಿದ್ದ ಮಹಿಳೆಯರ ಗುಂಪೊಂದು ಚರ್ಚೆಯಲ್ಲಿ ತೊಡಗಿತ್ತು. ಅವರಲ್ಲಿ ಒಬ್ಬರು 2003ರ ಮತದಾರರ ಪಟ್ಟಿಯ ಪ್ರತಿ ಹಿಡಿದು ಪರಿಶೀಲನೆಯಲ್ಲಿ ತೊಡಗಿದ್ದರು.

'ಈ ಪಟ್ಟಿಯಲ್ಲಿ ನನ್ನ ಪೋಷಕರ ಹೆಸರುಗಳನ್ನು ಹುಡುಕುತ್ತಿದ್ದೇನೆ' ಎಂದು ಹೇಳಿದ ಆ ಮಹಿಳೆ, 'ವಾಸಸ್ಥಳ ಪ್ರಮಾಣಪತ್ರ ಪಡೆಯುವ ಮಾರ್ಗಗಳ ಕುರಿತು ತಿಳಿದುಕೊಳ್ಳುತ್ತಿದ್ದೇನೆ. ಏಕೆಂದರೆ ನನ್ನ ಬಳಿ ಜನನ ಪ್ರಮಾಣಪತ್ರ, ಟಿ.ಸಿ ಅಥವಾ ಇತರ ಯಾವುದೇ ದಾಖಲೆಗಳು ಇಲ್ಲ' ಎಂದು ಪ್ರತಿಕ್ರಿಯಿಸಿದರು.

'ಈ ದಾಖಲೆಗಳನ್ನು ಸಲ್ಲಿಸಲು ಸಾಧ್ಯವಾಗದಿದ್ದರೆ ಮತದಾರರ ಪಟ್ಟಿಯಿಂದ ಶಾಶ್ವತವಾಗಿ ಹೆಸರನ್ನು ಕೈಬಿಡುವ ಅಪಾಯವಿದೆ. ಇದರಿಂದ ಚಿಂತೆ ಮತ್ತು ಆತಂಕ ಆಗುತ್ತಿದೆ' ಎಂದು ಮತ್ತೊಬ್ಬ ಮಹಿಳೆ ಅಳಲು ತೋಡಿಕೊಂಡರು. ಹೆಸರು ಹೇಳಲು ಬಯಸದ ಈ ಮಹಿಳೆಯರು ಮಹಾದಲಿತ ಸಮುದಾಯಕ್ಕೆ ಸೇರಿದವರು. ಈ ಸಮುದಾಯವನ್ನು ಪರಿಶಿಷ್ಟ ಜಾತಿಗಳಲ್ಲಿ ಕೆಳಮಟ್ಟದ ಸಮುದಾಯ ಎಂದು ಹೇಳಲಾಗುತ್ತದೆ.

> **ನಾನು ಕೂಲಿ ಕಾರ್ಮಿಕಳು. ಹೊಟ್ಟೆ ಪಾಡಿಗಾಗಿ ಕೂಲಿ ಕೆಲಸ ಮಾಡಲೋ ಅಥವಾ ಕಾಗದಪತ್ರಗಳಿಗಾಗಿ ಅಲೆದಾಡಲೋ, ನೀವೇ ಹೇಳಿ**
> **ನಿರ್ಮಲಾ ದೇವಿ,**
> ಬೆಲದೌರ್ ಕ್ಷೇತ್ರ, ಖಗಾರಿಯಾ ಜಿಲ್ಲೆಯ ನಿವಾಸಿ

ಅಪ್ಪ, ಅಮ್ಮ ಇಲ್ಲ, ಆಸ್ತಿಯೂ ಇಲ್ಲ: ಚುನಾವಣಾ ಆಯೋಗ ನಡೆಸುತ್ತಿರುವ ಈ ಪ್ರಕ್ರಿಯೆಗಳ ಕುರಿತು ಬಾಗಲ್ಪುರದ ನಿವಾಸಿ ನಿಕೇಶ್ ಕುಮಾರ್ ಯಾದವ್ (31) ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. 'ನನ್ನ ಪತ್ನಿ ಈಗ ಪ್ರಮಾಣಪತ್ರಗಳನ್ನು ಸಲ್ಲಿಸಬೇಕಂತೆ. ಆದರೆ ಅವರ ತಾಯಿ ಮತ್ತು ತಂದೆ ಇಬ್ಬರೂ ಮೃತಪಟ್ಟಿದ್ದಾರೆ. ಪತ್ನಿ ಅನಕ್ಷರಸ್ಥೆಯಾಗಿದ್ದು, ಯಾವುದೇ ಆಸ್ತಿಯನ್ನೂ ಹೊಂದಿಲ್ಲ. ಹೀಗಿರುವಾಗ ಪೌರತ್ವ ಸಾಬೀತುಪಡಿಸಲು ಇಷ್ಟೆಲ್ಲ ದಾಖಲೆಗಳನ್ನು ಎಲ್ಲಿಂದ ತರುವುದು' ಎಂದು ಅವರು ಪ್ರಶ್ನಿಸಿದರು.

15ರಂದು ಟ್ರಂಪ್–ಪುಟಿನ್ ಮಾತುಕತೆ: ಜಾಗತಿಕ ಮಹತ್ವ

ಲಂಡನ್ (ರಾಯಿಟರ್ಸ್): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ನಡುವೆ ಇದೇ 15ರಂದು ನಡೆಯಲಿರುವ ಮಾತುಕತೆಯು ಜಾಗತಿಕ ಮಹತ್ವ ಪಡೆದುಕೊಂಡಿದೆ. ಈ ಬೆಳವಣಿಗೆಯನ್ನು ಕಚ್ಚಾತೈಲ ಬೆಲೆ, ಹೆಚ್ಚುವರಿ ಸುಂಕ, ಮಾರುಕಟ್ಟೆಯ ಸೂಚ್ಯಂಕಗಳ ಏರಿಳಿತ ಸೇರಿದಂತೆ ನಾನಾ ಆಯಾಮಗಳಿಂದ ವಿಶ್ಲೇಷಿಸಲಾಗುತ್ತಿದೆ.

ರಷ್ಯಾ ಮತ್ತು ಅಮೆರಿಕ ಅಧ್ಯಕ್ಷರ ಬಹುನಿರೀಕ್ಷಿತ ಸಭೆ ಇದೇ 15ರಂದು (ಶುಕ್ರವಾರ) ಅಮೆರಿಕದ ಅಲಾಸ್ಕಾದಲ್ಲಿ ನಿಗದಿಯಾಗಿದ್ದು, ಉಕ್ರೇನ್, ಚೀನಾ, ಭಾರತ ಸೇರಿದಂತೆ ವಿವಿಧ ದೇಶಗಳು ಈ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿವೆ.

ರಷ್ಯಾ- ಉಕ್ರೇನ್ ಕದನವನ್ನು ಕೊನೆಗಾಣಿಸುವ ಅಥವಾ ಕದನ ವಿರಾಮ ಘೋಷಿಸುವ ನಿಟ್ಟಿನಲ್ಲಿ ಮಾತುಕತೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ. ಇದರ ಬೆನ್ನಲ್ಲೇ ಕಚ್ಚಾ ತೈಲ ಬೆಲೆ ಬ್ಯಾರೆಲ್‌ಗೆ ಎರಡು ಸೆಂಟ್‌ಗಳಷ್ಟು ಇಳಿಕೆ ಕಂಡಿದೆ ಎನ್ನಲಾಗುತ್ತಿದೆ.

ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತದ ಮೇಲೆ ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕವನ್ನು ಈಗಾಗಲೇ ಅಮೆರಿಕ ವಿಧಿಸಿದೆ. ಈ ಮೂಲಕ ಅದು ರಷ್ಯಾದ ಮೇಲೂ ಒತ್ತಡ ಹೇರುತ್ತಿದೆ. ಜತೆಗೆ ಚೀನಾ ಮೇಲೂ ಹೆಚ್ಚುವರಿ ಸುಂಕ ವಿಧಿಸುವ ಕುರಿತು ಚರ್ಚೆ ನಡೆಸುತ್ತಿದೆ.

ಟ್ರಂಪ್– ಪುಟಿನ್ ಮಾತುಕತೆ ವೇಳೆ ರಷ್ಯಾ- ಉಕ್ರೇನ್ ನಡುವೆ ಕದನ ವಿರಾಮಕ್ಕೆ ಸಂಬಂಧಿಸಿದಂತೆ ಯಾವುದೇ ಒಪ್ಪಂದ ಏರ್ಪಟ್ಟರೂ, ಭಾರತ ಮತ್ತು ಚೀನಾ ನಿರಾಳವಾಗಲಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

ಕದನ ವಿರಾಮ ಅಥವಾ ಶಾಂತಿ ಒಪ್ಪಂದ ಏರ್ಪಟ್ಟರೆ, ಹೆಚ್ಚುವರಿ ಸುಂಕದಿಂದ ಭಾರತಕ್ಕೆ ವಿನಾಯಿತಿ ದೊರೆಯಬಹುದು ಎಂದು 'ಕಾಮರ್ಸ್‌ಬ್ಯಾಂಕ್' ವಿಶ್ಲೇಷಿಸಿದೆ.

'ಮಾತುಕತೆ ಫಲಪ್ರದ ಆಗದಿದ್ದರೆ, ರಷ್ಯಾದಿಂದ ತೈಲ ಖರೀದಿಸುತ್ತಿರುವ ಚೀನಾ ಸೇರಿದಂತೆ ಇತರ ದೇಶಗಳ ಮೇಲೆ ಹೆಚ್ಚುವರಿ ನಿರ್ಬಂಧಗಳನ್ನು ಅಮೆರಿಕ ಹೇರಬಹುದು' ಎಂದೂ ಅದು ವಿವರಿಸಿದೆ.

ಚೀನಾಕ್ಕೆ ನ.10ರವರೆಗೆ ವಿನಾಯಿತಿ: ರಷ್ಯಾದಿಂದ ತೈಲ ಖರೀದಿಸುತ್ತಿರುವ ಚೀನಾದ ವಿರುದ್ಧ ಅಧಿಕ ಸುಂಕ ವಿಧಿಸುವ ಕ್ರಮವನ್ನು ತಡೆಹಿಡಿದಿರುವ ಅಮೆರಿಕ, ನವೆಂಬರ್ 10ರವರೆಗೆ ವಿರಾಮ ನೀಡಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಅನುಭವವುಳ್ಳ ಡ್ರೈವರ್ ಬೇಕಾಗಿದಾರೆ,ಉತ್ತಮ ವೇತನ ನೀಡಲಾಗುವುದು, ಜಯನಗರ ಸುತ್ತಮುತ್ತ ವಾಸವಾಗಿರುವವರಿಗೆ ಆದ್ಯತೆ ನೀಡಲಾಗುವುದು, ತಕ್ಷಣ ಸಂಪರ್ಕಿಸಿ. 7483417642/ 6361745261.

General

ಬೆಂಗಳೂರು ದಕ್ಷಿಣ ಮತ್ತು ರಾಮನಗರ ಜಿಲ್ಲೆಯ ತಾಲೂಕು ಕಚೇರಿ, ಜಿಲ್ಲಾಧಿಕಾರಿ ಕಚೇರಿ, ಎಸಿ ಕಚೇರಿಯಿಂದ ಭೂ ಕಂದಾಯ ದಾಖಲೆಗಳ ಖರೀದಿಗಾಗಿ ನಾವು ಭೂ ದಾಖಲೆ ಸಂಪರ್ಕ ಕಾರ್ಯ ನಿರ್ವಾಹಕರನ್ನು ನೇಮಿಸಿಕೊಳ್ಳು ತ್ತಿದ್ದೇವೆ. ಸ್ಥಳ: ಆರ್.ಆರ್. ನಗರ, ಬೆಂಗಳೂರು. ದೂ: 9535486707

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381.

ಕರ್ನಾಟಕದಾದ್ಯಂತ IT MNC ಕಂಪನಿಗೆ WFH & Office ಕೆಲಸಕ್ಕೆ ಬೇಕಾಗಿದ್ದಾರೆ. (25,000-42,000) 7th 10th Any Degree. Ph: 8792798168/ 8971776882.

LOOKING FOR CNC Operators for making kitchen countertops with experience preferably with knowledge of Auto-Cad in Bangalore. Call: 9900592060, material@alkarastones.com

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606385001, 9008835841.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Wanted

ಕರ್ನಾಟಕದಾದ್ಯಂತ ಕಂಪನಿಗಳಿಗೆ work from Home ಕೆಲಸಕ್ಕೆ ಯುವಕ & ಯುವತಿಯರು ಬೇಕಾಗಿದ್ದಾರೆ. (17,900-25,000) 7th, 10th, Any Degree. Ph:9019427194/9364595602

ಶೇಷಾದ್ರಿಪುರಂನಲ್ಲಿರುವ ಫಾರ್ಮಾ ಕಂಪನಿಯು ಗೋದಾಮು ಮೇಲ್ವಿಚಾರಕರು ಮತ್ತು ಸರಕುಗಳ ನಿರ್ವಹಣೆ, ಲೋಡಿಂಗ್ ಮತ್ತು ಅನ್‌ಲೋಡಿಂಗ್‌ಗೆ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿದೆ. ಸ್ಪರ್ಧಾತ್ಮಕ ಸಂಬಳವನ್ನು ನೀಡಲಾಗುತ್ತದೆ. 8660700898.

ಆರ್.ಆರ್.ನಗರದಲ್ಲಿರುವ ನಮ್ಮ ಕಚೇರಿಗೆ ಭೂ ದಾಖಲೆ ಕಾರ್ಯನಿರ್ವಾಹಕ ಹುದ್ದೆಗೆ ಮಹಿಳಾ ಅಭ್ಯರ್ಥಿ. ತಾಲೂಕು ಕಚೇರಿ, ಎಸಿ ಕಚೇರಿ, ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ಭೂ ದಾಖಲೆಗಳು ಮತ್ತು ಕಂದಾಯ ದಾಖಲೆಗಳ ಜ್ಞಾನ ಮತ್ತು ತಿಳುವಳಿಕೆ ಕಡ್ಡಾಯವಾಗಿದೆ. ನಾವು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಸಂಪರ್ಕಿಸಿ: +919535486707

ಪ್ರವಾಸ

Travel

ಭಾರತಪರಂಪರ ದರ್ಶನ: 31.8.25 11ದಿನ 4ಜ್ಯೋತಿರ್ಲಿಂಗ ಮಾತೃಗಯ,ಗುಜರಾತ್ ಮಧ್ಯಪ್ರದೇಶ. 7.9.25 7ದಿನ ಕಾಶಿ,ಅಯೋಧ್ಯ ನೈಮಿಷರಾಣ್ಯ ಗಯಾ. ಪ್ರಕಾಶ್ ಹೆಬ್ಬಾರ್ 9448792891.

ಹೆಸರಾಂತ ಏಷ್ಯನ್ ಟ್ರಾವೆಲ್ ಏಜೆನ್ಸಿಯಿಂದ ಪಿತೃಪಕ್ಷ ಪ್ರಯುಕ್ತ 10.09.2025 02.10.2025 ಕಾಶಿ,ಅಯೋಧ್ಯ,ಬುದ್ಧಗಯಾ 19.09.2025 08.10.2025 ಚಾರ್‌ಧಾಮ ಪ್ರವಾಸ. 03.10.2025 ನೇಪಾಳ ಮುಕ್ತಿನಾಥ,ಪೋಕ್ರಾ,ಲುಂಬಿನಿ 26.10.2025 23.11.2025 ಸೋಮನಾಥ ದ್ವಾರಕಾ ಮಹಂಕಾಲೇಶ್ವರ ಓಂಕಾರೇಶ್ವರ ದಕ್ಷಿಣಭಾರತ ಆಂಧ್ರ ಪ್ರವಾಸಗಳಿಗೆ ಸಂಪರ್ಕಿಸಿ. 26574131 8431888138 8317446683 9686708171

★8.09.2025 11ದಿನ★ ಗುಜರಾತ್,ಮಧ್ಯಪ್ರದೇಶ. 15.09.2025 8ದಿನ ಮಧ್ಯಪ್ರದೇಶ,ಮಹಾರಾಷ್ಟ್ರ ಜ್ಯೋತಿರ್ಲಿಂಗ,ಶಿರಡಿ ಪ್ರವಾಸ. 24.10.2025 11ದಿನ ರಾಯಲ್ ರಾಜಸ್ಥಾನ ಪ್ರವಾಸ. 04.10.2025 12ದಿನ ಅಯೋಧ್ಯೆ,ನೇಪಾಳ,ಮುಕ್ತಿನಾಥ ಬೈದ್ಯನಾಥ.ಆರ್.ಗಾಂಧಿ ಟೂರ್ಸ್(ರಿ) 8861545809/ 9945445809

ಚಾರ್‌ಧಾಮ ಪ್ರವಾಸ 11.9.2025. ನೇಪಾಳ,ಕಾಶಿ,ಮುಕ್ತಿನಾಥ 04.10.2025. ಆಂಧ್ರ ಪ್ರವಾಸ 27.10.2025. ಅಷ್ಟ ಜ್ಯೋತಿರ್ಲಿಂಗ ಪ್ರವಾಸ 13.11.2025. ಸಂಪರ್ಕಿಸಿ.ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70 9342287551 9482239855

EDUCATION
To Place your Classified Ads Contact: 9845114560

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@ 500/-* PER SQCM
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

'ನೋಟಕ್ಕಿಂತ ಪಾತ್ರವೇ ಮುಖ್ಯ'

'ಆಸ್ಟಿನ್‌ನ ಮಹಾನ್ ಮೌನ' ಚಿತ್ರದಲ್ಲಿ 'ಜಾಸ್ಮಿನ್' ಆಗಿ ಕಾಣಿಸಿಕೊಳ್ಳುತ್ತಿರುವ ನಟಿ ರಿಷಾ ಗೌಡ ಕೈಯ್ಯಲ್ಲಿ ಸದ್ಯ ಹಲವು ಚಿತ್ರಗಳಿವೆ. ರಂಗಭೂಮಿಯಲ್ಲಿ ನಟನೆ ಕಲಿತು ಚಿತ್ರರಂಗದಲ್ಲಿ ಗಟ್ಟಿಯಾಗಿ ನೆಲಯೂರುವ ಕನಸು ಕಾಣುತ್ತಿರುವ ಅವರು ತಮ್ಮ ಸಿನಿಪಯಣದ ಕುರಿತು ಮಾತನಾಡಿದ್ದಾರೆ.

'ತಂದೆ-ಮಗಳ ಸಂಬಂಧವನ್ನು ಹೇಳುವ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. 90ರ ದಶಕದಲ್ಲಿ ತಂದೆ-ಮಕ್ಕಳು ಹೇಗಿದ್ದರು ಎಂಬುದನ್ನು ಪ್ರತಿಬಿಂಬಿಸುವ ಪಾತ್ರ. ಅವತ್ತು ಕೌಟುಂಬಿಕ ವ್ಯವಸ್ಥೆ ಇವತ್ತಿನ ರೀತಿ ಇರಲಿಲ್ಲ. ಅಪ್ಪ ಹಾಕಿದ ಗೆರೆ ದಾಟುವುದು ಬಹಳ ಕಷ್ಟವಿತ್ತು. ಅಂಥದ್ದೊಂದು ಪಾತ್ರವಿದು. 'ಜಾಸ್ಮಿನ್' ನನ್ನ ಪಾತ್ರದ ಹೆಸರು. ಅಂದಿನ ಕುಟುಂಬದಲ್ಲಿ ಹೆಣ್ಣುಮಕ್ಕಳನ್ನು ಹೇಗೆ ಬೆಳೆಸುತ್ತಿದ್ದರು, ಕೌಟುಂಬಿಕ ಮೌಲ್ಯಗಳು ಹೇಗಿತ್ತು ಎಂಬಿತ್ಯಾದಿ ಅಂಶಗಳು ಬರುತ್ತವೆ. ತುಂಬಾ ಮುಗ್ಧೆ' ಎಂದು ಪಾತ್ರ ಪರಿಚಯದೊಂದಿಗೆ ಮಾತು ಪ್ರಾರಂಭಿಸಿದರು ರಿಷಾ.

ಕೊಡಗಿನವರಾದ ಇವರು ನಟನೆ ಕಲಿತಿದ್ದು ಮೈಸೂರಿನಲ್ಲಿ. ಮೈಮ್ ರಮೇಶ್ ಅವರ ಗರಡಿಯಲ್ಲಿ ಪಳಗಿದ ರಿಷಾ, ರಂಗಭೂಮಿಯಲ್ಲಿಯೂ ಸಕ್ರಿಯ. 'ಕ್ರೇಜಿ ಕೀರ್ತಿ' ಚಿತ್ರದ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟರು. ನಟನೆ, ನಾಯಕಿ ಎಂದರೆ ತೆರೆ ಮೇಲೆ ಚೆನ್ನಾಗಿ ಕಾಣಿಸಿಕೊಳ್ಳುವುದು ಮಾತ್ರವಲ್ಲ, ವಿಭಿನ್ನವಾದ, ಸವಾಲಿನ ಪಾತ್ರಗಳನ್ನು ನಿರ್ವಹಿಸುವುದು ಎನ್ನುವ ಇವರು, ಸದ್ಯ ತೆಲುಗು, ತಮಿಳು ಚಿತ್ರರಂಗಗಳಲ್ಲಿ ಸಕ್ರಿಯರಾಗಿದ್ದಾರೆ. ಧರ್ಮ ಕೀರ್ತಿರಾಜ್ ಜತೆ ನಟಿಸಿರುವ 'ಬೆಂಗಳೂರು ಇನ್' ಚಿತ್ರ ಕೂಡ ಬಿಡುಗಡೆಗೆ ಸಿದ್ಧವಿದೆ.

'2023ರಲ್ಲಿ ಪ್ರಾರಂಭವಾದ ಚಿತ್ರವಿದು. ಬಹುಭಾಗ ಮೈಸೂರಿನಲ್ಲಿ ಚಿತ್ರೀಕರಣಗೊಂಡಿದೆ. ಹೊನ್ನಾವರ, ಚಿಕ್ಕಮಗಳೂರು ಮೊದಲಾದೆಡೆ ಸ್ವಲ್ಪ ಭಾಗ ಚಿತ್ರೀಕರಿಸಿದ್ದೇವೆ. ಕೌಟುಂಬಿಕ ಕಥಾ ಹಂದರ ಹೊಂದಿರುವ ಸಿನಿಮಾ. ಭಾವನಾತ್ಮಕ ಪಯಣ. ಎರಡು ಭಿನ್ನ ಕುಟುಂಬಗಳ ಕಥೆಯೇ ಚಿತ್ರದ ಜೀವಾಳ' ಎನ್ನುತ್ತಾರೆ.

'ಪ್ರಮೋದ್ ಶೆಟ್ಟಿ ನಿರ್ಮಿಸಿ, ನಟಿಸುತ್ತಿರುವ 'ಪರಾಕ್ರಮಿ' ಚಿತ್ರದಲ್ಲಿ ನಟಿಸುತ್ತಿರುವೆ. ಸದ್ಯ 'ಕಾಂತಾರ-1' ಚಿತ್ರದಿಂದ ಚಿತ್ರೀಕರಣ ನಿಂತಿತ್ತು. ಈಗ ಮತ್ತೆ ಚಿತ್ರೀಕರಣ ಪ್ರಾರಂಭವಾಗಲಿದೆ. ಈ ಚಿತ್ರ ಕೂಡ ಈ ವರ್ಷ ಡಿಸೆಂಬರ್‌ಗೆ ತೆರೆಗೆ ಬರಬಹುದು. ಈ ವರ್ಷ ನನ್ನ ಮೂರು ಸಿನಿಮಾಗಳು ತೆರೆ ಕಾಣಲಿವೆ. 'ಮಿಸಸ್ ಕರ್ನಲ್' ಎಂಬ ತೆಲುಗು ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ತಮಿಳಿನ ಇನ್ನೂ ಹೆಸರಿಡದ ಚಿತ್ರದಲ್ಲಿ ನಟಿಸುತ್ತಿದ್ದು, ಇನ್ನೊಂದು ಹಂತದ ಚಿತ್ರೀಕರಣ ಬಾಕಿಯಿದೆ. ನಟನೆಗೆ ಬಂದು ನಾಲ್ಕು ವರ್ಷಗಳು ಕಳೆಯಿತು. ಈತನಕ ಒಟ್ಟು 12 ಚಿತ್ರಗಳಲ್ಲಿ ನಟಿಸಿದ್ದೇನೆ. ಬಹುತೇಕ ಚಿತ್ರಗಳು ಇನ್ನಷ್ಟೇ ಬಿಡುಗಡೆಗೊಳ್ಳಬೇಕಿವೆ. ಇತ್ತೀಚೆಗೆ ತೆರೆಕಂಡ 'ಜೂನಿಯರ್' ಚಿತ್ರದಲ್ಲಿಯೂ ಒಂದು ಸಣ್ಣ ಪಾತ್ರ ಮಾಡಿರುವೆ' ಎಂದು ತಮ್ಮ ಸಿನಿಪಯಣವನ್ನು ತೆರೆದಿಟ್ಟರು.

'ನಾನು ಮುಖ್ಯವಾಗಿ ಪಾತ್ರ ಏನೆಂದು ಕೇಳುತ್ತೇನೆ. ತೆರೆ ಮೇಲೆ ಗ್ಲಾಮರ್ ಆಗಿ ಕಾಣಿಸಿಕೊಳ್ಳುವುದರಿಂದ ಉದ್ಯಮದಲ್ಲಿ ಹೆಚ್ಚು ಕಾಲ ನೆಲೆ ನಿಲ್ಲಲು ಸಾಧ್ಯವಿಲ್ಲ. ಪಾತ್ರ ಬಯಸಿದರೆ ಡೀಗ್ಲಾಮರ್ ಆಗಿಯೂ ಕಾಣಿಸಿಕೊಳ್ಳಬೇಕು. ಉದಾಹರಣೆಗೆ 'ಸಪ್ತಸಾಗರದಾಚೆ ಎಲ್ಲೋ' ಚಿತ್ರದಲ್ಲಿ ಚೈತ್ರಾ ಜೆ.ಆಚಾರ್ ನಿಭಾಯಿಸಿದ ಪಾತ್ರ. ಆ ಪಾತ್ರಕ್ಕೆ ಅವರೇ ಸೂಕ್ತ ಎನ್ನಿಸುವಂತಿದೆ. ನನಗೆ ನೋಟಕ್ಕಿಂತ ಪಾತ್ರವೇ ಮುಖ್ಯ. ಪಾತ್ರದಲ್ಲಿ ಸವಾಲು ಎಷ್ಟಿದೆ ಎಂದು ನೋಡುತ್ತೇನೆ. ಜನರ ಮನಸಿನಲ್ಲಿ ಉಳಿಯುವ ಪಾತ್ರಗಳನ್ನು ಮಾಡಬೇಕು. ಇಲ್ಲವಾದಲ್ಲಿ ಇವತ್ತಿನ ಸ್ಪರ್ಧೆಯಲ್ಲಿ ಚಿತ್ರೋದ್ಯಮದಲ್ಲಿ ಉಳಿದುಕೊಳ್ಳುವುದು ಸುಲಭವಲ್ಲ' ಎಂಬುದು ಅವರ ಅಭಿಮತ. ❖

ಟೀಸರ್, ಹಾಡು ಬಿಡುಗಡೆ

ವಿನಯ್ ಕುಮಾರ್ ವೈದ್ಯನಾಥನ್ ನಟಿಸಿ, ನಿರ್ದೇಶಿಸಿರುವ 'ಆಸ್ಟಿನ್‌ನ ಮಹಾನ್ ಮೌನ' ಚಿತ್ರದ ಟೀಸರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ.

'ನಾನು ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಮುಗಿಸಿ ಚಿತ್ರರಂಗಕ್ಕೆ ಬಂದೆ. ಸಾಕಷ್ಟು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕನಾಗಿ ಹಲವು ವಿಭಾಗಗಳಲ್ಲಿ ಕೆಲಸ ಮಾಡಿದ ಅನುಭವವಿದೆ. 13 ವರ್ಷಗಳ ನಂತರ ನನ್ನ ಕನಸು ನನಸಾಗುತ್ತಿದೆ. ಈ ಚಿತ್ರದಲ್ಲಿ ನಾನೇ ನಟಿಸಿ, ನಿರ್ದೇಶನದ ಜತೆ ನಿರ್ಮಾಣ ಕೂಡ ಮಾಡಿದ್ದೇನೆ. ಭಾವನಾತ್ಮಕ, ಲವ್, ಥ್ರಿಲ್ಲಿಂಗ್ ಕಥೆಯನ್ನು ಹೊಂದಿದೆ. 'ಆಸ್ಟಿನ್' ಎನ್ನುವುದು ನಾಯಕನ ಪಾತ್ರದ ಹೆಸರು' ಎಂದರು ನಿರ್ದೇಶಕರು. ಮೈಸೂರಿನ ಪ್ರಕೃತಿ ಪ್ರಸಾದ್ ಮತ್ತೋರ್ವ ನಾಯಕಿ. ವಿಶ್ವಿ ಸಂಗೀತ ನಿರ್ದೇಶನವಿದ್ದು, ಆರು ಹಾಡುಗಳಿವೆ. ಒಂದು ಹಾಡು ಲ್ಯಾಟಿನ್ ಭಾಷೆಯಲ್ಲಿದೆ. ಬಲ ರಾಜವಾಡಿ, ರಘು ರಾಮನಕೊಪ್ಪ, ಜಗಪ್ಪ, ಸ್ವಾತಿ ಸೇರಿದಂತೆ ಹಲವಾರು ಕಲಾವಿದರು ಅಭಿನಯಿಸಿದ್ದಾರೆ. ರಾಜಕಾಂತ್ ಛಾಯಾಚಿತ್ರಗ್ರಹಣ , ಶ್ರೀನಿವಾಸ್ ಹಾಗೂ ಶಶಿಧರ್ ಸಂಕಲನವಿದೆ.

ಚಂದನ್ ಶೆಟ್ಟಿ ಹಾಡಿಗೆ ಹೆಜ್ಜೆ ಹಾಕಿದ ಕ್ರಿಸ್ ಗೇಲ್

ಕ್ರಿಸ್ ಗೇಲ್, ಚಂದನ್ ಶೆಟ್ಟಿ

ರ್‍ಯಾಪ್ ಸಾಂಗ್‌ಗಳಿಂದಲೇ ಜನಪ್ರಿಯರಾದ ಚಂದನ್ ಶೆಟ್ಟಿ ಸದ್ಯ ಗೀತೆಯೊಂದಕ್ಕಾಗಿ ಕ್ರಿಕೆಟಿಗ ಕ್ರಿಸ್ ಗೇಲ್ ಜತೆ ಕೈ ಜೋಡಿಸಿದ್ದಾರೆ. ಈ ಬಗ್ಗೆ ಕ್ರಿಸ್ ಗೇಲ್ ತಮ್ಮ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹಂಚಿಕೊಂಡಿದ್ದು, ಅದರಲ್ಲಿ ಚಂದನ್ ಶೆಟ್ಟಿಯನ್ನು 'ರಾಕ್ ಸ್ಟಾರ್' ಎಂದು ಬಣ್ಣಿಸಿದ್ದಾರೆ.

'ಯೂನಿವರ್ಸಲ್ ಬಾಸ್ ಗೇಲ್ ಜತೆಗೆ 'ಲೈಫ್ ಈಸ್ ಕೆಸಿನೋ' ಎಂಬ ಹಾಡನ್ನು ಚಿತ್ರೀಕರಿಸುತ್ತಿದ್ದೇನೆ. ಸದ್ಯ ವಿದೇಶದಲ್ಲಿ ಚಿತ್ರೀಕರಣ ನಡೆಯುತ್ತಿದ್ದು, ನಾನು ಅದರಲ್ಲಿ ಭಾಗಿಯಾಗಿರುವೆ. ಇದೊಂದು ರ್‍ಯಾಪ್ ಸಾಂಗ್. ಮೊದಲ ಸಲ ಕನ್ನಡ, ಇಂಗ್ಲಿಷ್‌ನಲ್ಲಿ ನಾವಿಬ್ಬರು ಹಾಡು ಹೇಳಿ, ಕುಣಿದಿದ್ದೇವೆ. ಇಂಗ್ಲಿಷ್ ಹಾಡನ್ನು ಗೇಲ್ ಹಾಡಿದ್ದಾರೆ. ಅವರು ಕನ್ನಡದ ಒಂದು ಸಾಲನ್ನೂ ಹಾಡಿದ್ದಾರೆ. ಗಣೇಶನ ಹಬ್ಬಕ್ಕೆ ವಿಡಿಯೊ ಸಾಂಗ್ ಬಿಡುಗಡೆ ಮಾಡುವ ಆಲೋಚನೆಯಿದೆ. ಸಾಮಾಜಿಕ ಜಾಲತಾಣ ಹಾಗೂ ನಮ್ಮಿಬ್ಬರ ಯೂಟ್ಯೂಬ್‌ಗಳಲ್ಲಿ ಬಿಡುಗಡೆಗೊಳ್ಳಲಿದೆ. ಈ ಹಾಡು ಮಾಡಿ ಎರಡು ವರ್ಷ ಆಗಿತ್ತು. ಗೇಲ್‌ಗಾಗಿ ಕಾಯುತ್ತಿದ್ದೆ' ಎಂದು ಚಂದನ್ ಶೆಟ್ಟಿ ತಿಳಿಸಿದರು.

ರ್‍ಯಾಪ್ ಸಾಂಗ್‌ಗಳಿಂದಲೇ ಚಿತ್ರರಂಗಕ್ಕೆ ಕಾಲಿಟ್ಟ ಚಂದನ್ ಶೆಟ್ಟಿ ನಟನೆಯ 'ಸೂತ್ರಧಾರಿ' ಚಿತ್ರ ಕೆಲ ತಿಂಗಳ ಹಿಂದೆ ತೆರೆ ಕಂಡಿತ್ತು. ಇದೀಗ ಮತ್ತೆ ಬೃಹತ್ ಯೋಜನೆಯೊಂದಿಗೆ ಅವರು ಮರಳಿದ್ದಾರೆ. ಇವರ 'ಟಾಪ್ ಟು ಬಾಟಮ್', '3 ಪೆಗ್', 'ಚಾಕೊಲೇಟ್ ಗರ್ಲ್' ಮುಂತಾದ ಹಾಡುಗಳು ಸಾಕಷ್ಟು ಜನಪ್ರಿಯತೆ ಗಳಿಸಿವೆ. ❖

ಮೂರು ಚಿತ್ರಗಳ ಪೋಸ್ಟರ್ ಬಿಡುಗಡೆ

ಹೊಸ ನಿರ್ಮಾಣ ಸಂಸ್ಥೆಗಳು ಒಟ್ಟಿಗೆ ಮೂರು-ನಾಲ್ಕು ಸಿನಿಮಾಗಳನ್ನು ಘೋಷಿಸುವ ಹೊಸ ಟ್ರೆಂಡ್ ಸದ್ಯ ಸ್ಯಾಂಡಲ್‌ವುಡ್‌ನಲ್ಲಿ ಶುರುವಾಗಿದೆ. ನಿರ್ಮಾಪಕ ಕಮಲ್‌ರಾಜ್ ಕೂಡ ತಮ್ಮ ನೂತನ ನಿರ್ಮಾಣ ಸಂಸ್ಥೆ ಮೂಲಕ ಒಂದೇ ಸಲ ಮೂರು ಚಿತ್ರಗಳನ್ನು ಘೋಷಿಸಿದ್ದಾರೆ. ವಿ.ನಾಗೇಂದ್ರಪ್ರಸಾದ್, ಉಮೇಶ್ ಬಣಕಾರ್, ನಿರ್ದೇಶಕರಾದ ಸಾಯಿಪ್ರಕಾಶ್, ರವಿ ಶ್ರೀವತ್ಸ, ನಟಿ ಪ್ರಿಯಾಂಕ ಉಪೇಂದ್ರ ಇತ್ತೀಚೆಗಷ್ಟೇ ಈ ಹೊಸ ಚಿತ್ರಗಳ ಪೋಸ್ಟರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ಮೊಹಬ್ಬತ್ ಜಿಂದಾಬಾದ್', 'ಟಾಸ್ಕ್' ಹಾಗೂ 'ನಾಳೆ ನಮ್ಮ ಭರವಸೆ' ಸೆಟ್ಟೇರಿರುವ ಹೊಸ ಚಿತ್ರಗಳು. 'ಈ ಮೊದಲು 'ದಿ ಸೂಟ್' ಚಿತ್ರದಲ್ಲಿ ನಟಿಸಿದ್ದೆ. ಹೀಗಾಗಿ ಈ ಮೂರು ಚಿತ್ರಗಳಿಗೆ ಬಂಡವಾಳ ಹೂಡುವುದರ ಜತೆಗೆ ನಟಿಸುತ್ತೇನೆ. ಈಗಾಗಲೇ ಮೂರು ಸಿನಿಮಾಗಳ ಶೂಟಿಂಗ್ ನಡೆಯುತ್ತಿದ್ದು, ಡಿಸೆಂಬರ್ ವೇಳೆಗೆ ಬಿಡುಗಡೆ ಮಾಡುವ ಯೋಜನೆಯಿದೆ. ಈ ಚಿತ್ರಗಳಲ್ಲಿ ನಾನು ಲವರ್‌ಬಾಯ್, ಡಿಟೆಕ್ಟಿವ್ ಮುಂತಾದ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದೇನೆ. 'ಟಾಸ್ಕ್' ಚಿತ್ರವನ್ನು ಐದು ಜನ ನಿರ್ದೇಶನ ಮಾಡಲಿದ್ದಾರೆ. ಆ ಪೈಕಿ ಹಿರಿಯ ನಿರ್ದೇಶಕ ಸಾಯಿಪ್ರಕಾಶ್ ಒಂದು ಕಥೆಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ' ಎಂದರು ಕಮಲ್.

'ಕಮಲ್‌ಗೆ ಸಿನಿಮಾ ಮೇಲೆ ಅತಿಯಾದ ಗೀಳಿದೆ. ಹಾಗಿದ್ದರೇನೇ ಏನಾದರೂ ಸಾಧಿಸಲು ಸಾಧ್ಯ. ಅವರ ಆಸಕ್ತಿ, ಉತ್ಸಾಹ ನೋಡಿದರೆ ತುಂಬಾ ಖುಷಿಯಾಗುತ್ತದೆ. ನಿರ್ಮಾಣ ಸಂಸ್ಥೆಯಿಂದ ಮತ್ತಷ್ಟು ಹೊಸ ಪ್ರತಿಭೆಗಳು ಹೊರಬರಲಿ' ಎಂದು ವಿ.ನಾಗೇಂದ್ರಪ್ರಸಾದ್ ತಿಳಿಸಿದರು. ❖

'ಶಿಕ್ಷೆ ಪೂರೈಸಿದವರನ್ನು ಬಿಡುಗಡೆ ಮಾಡಿ'

ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ 'ಸುಪ್ರೀಂ' ನಿರ್ದೇಶನ

ನವದೆಹಲಿ(ಪಿಟಿಐ): ಶಿಕ್ಷೆಯ ಅವಧಿ ಪೂರ್ಣಗೊಳಿಸಿರುವ ಕೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ಶಿಕ್ಷೆಯ ಅವಧಿ ಪೂರ್ಣಗೊಂಡಿರುವ ಕೈದಿಗಳು ಇನ್ನೂ ಜೈಲಿನಲ್ಲಿಯೇ ಇರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಇಂತಹ ಕೈದಿಗಳು ಇತರ ಪ್ರಕರಣಗಳಿಗೆ ಸಂಬಂಧಿಸಿ ಬೇಕಾಗಿರದಿದ್ದಲ್ಲಿ, ಅವರನ್ನು ಕೂಡಲೇ ಬಿಡುಗಡೆ ಮಾಡುವಂತೆ ಸೂಚಿಸಿದೆ.

2002ರ ನಿತೀಶ್ ಕಟಾರಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಸುಖದೇವ್ ಯಾದವ್ ಅಲಿಯಾಸ್ ಪೆಹಲ್ವಾನ್ ಎಂಬ ಕೈದಿಯ ಬಿಡುಗಡೆ ಮಾಡುವಂತೆ ಆದೇಶ ನೀಡಿದ ವೇಳೆ, ಸುಪ್ರೀಂ ಕೋರ್ಟ್ ಈ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಕೆ.ವಿ.ವಿಶ್ವನಾಥನ್ ಅವರು ಇದ್ದ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿ, 'ಯಾದವ್ ಈ ವರ್ಷ ಮಾರ್ಚ್‌ನಲ್ಲಿಯೇ ತನಗೆ ವಿಧಿಸಿದ್ದ 20 ವರ್ಷಗಳ ಜೈಲು ಶಿಕ್ಷೆ ಪೂರ್ಣಗೊಳಿಸಿದ್ದಾರೆ. ಆ ಬಳಿಕ ಅವರನ್ನು ಬಿಡುಗಡೆ ಮಾಡಬೇಕಿತ್ತು' ಎಂದು ಹೇಳಿದೆ.

'ಸುಪ್ರೀಂ' ನಿರ್ದೇಶನಗಳು

- ಯಾವ ವ್ಯಕ್ತಿಯೂ ಆತನ/ಆಕೆಯ ಜೀವನ ಅಥವಾ ವೈಯಕ್ತಿಕ ಸ್ವಾತಂತ್ರ್ಯದಿಂದ ವಂಚಿತರಾಗಬಾರದು
- ಸುಪ್ರೀಂ ಕೋರ್ಟ್ ರಿಜಿಸ್ಟ್ರಿ, ಈ ಆದೇಶದ ಪ್ರತಿಯನ್ನು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಗೃಹ ಕಾರ್ಯದರ್ಶಿಗಳಿಗೆ ರವಾನಿಸಬೇಕು
- ಶಿಕ್ಷೆಯ ಅವಧಿ ಪೂರ್ಣಗೊಂಡ ನಂತರವೂ ಸೆರೆವಾಸದಲ್ಲಿರುವವರನ್ನು ಗುರುತಿಸಬೇಕು
- ರಾಷ್ಟ್ರೀಯ ಕಾನೂನು ಸೇವೆ ಪ್ರಾಧಿಕಾರಗಳಿಗೂ ಆದೇಶದ ಪ್ರತಿ ಕಳುಹಿಸಬೇಕು. ಪ್ರಾಧಿಕಾರವು ಈ ಆದೇಶದಲ್ಲಿನ ಮಾಹಿತಿಯನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಕಾನೂನು ಸೇವಾ ಪ್ರಾಧಿಕಾರಗಳಿಗೆ ಹಾಗೂ ಜಿಲ್ಲೆಗಳಲ್ಲಿರುವ ಕಾನೂನು ಪ್ರಾಧಿಕಾರಗಳಿಗೆ ಕಳುಹಿಸಬೇಕು

ಸಮನ್ಸ್: ಆದೇಶ ಕಾಯ್ದಿರಿಸಿದ 'ಸುಪ್ರೀಂ'

ಹಣ ಅಕ್ರಮ ವರ್ಗಾವಣೆ ಪ್ರಕರಣವೊಂದಕ್ಕೆ ಸಂಬಂಧಿಸಿ ತನ್ನ ಕಕ್ಷಿದಾರನ ಪರ ವಕಾಲತ್ತು ವಹಿಸಿಕೊಂಡಿದ್ದಕ್ಕಾಗಿ ಇ.ಡಿ. ಇಬ್ಬರು ವಕೀಲರಿಗೆ ಸಮನ್ಸ್ ಜಾರಿ ಮಾಡಿತ್ತು. ಈ ಸಂಬಂಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಸುಪ್ರೀಂ ಕೋರ್ಟ್, ಈ ಕುರಿತ ವಿಚಾರಣೆಯನ್ನು ಪೂರ್ಣಗೊಳಿಸಿದ್ದು ಆದೇಶವನ್ನು ಮಂಗಳವಾರ ಕಾಯ್ದಿರಿಸಿತು.

'ನಾವು ಈ ದೇಶದ ಎಲ್ಲ ನಾಗರಿಕರ 'ರಕ್ಷಕ'ರಾಗಿದ್ದೇವೆ' ಎಂದಿತು.

'ಉಳಿಕೆ ಆಹಾರ ಕೋರ್ಟ್ ಆವರಣದಲ್ಲಿ ಎಸೆಯಬೇಡಿ'

'ನಾಯಿ ಕಡಿತ ತಡೆಯುವ ಮುನ್ನೆಚ್ಚರಿಕೆ ಕ್ರಮವಾಗಿ ನ್ಯಾಯಾಲಯದ ಆವರಣದಲ್ಲಿ ತಿಂದು ಉಳಿದ ಆಹಾರವನ್ನು ಚೆಲ್ಲಬಾರದು' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಸುತ್ತೋಲೆ ಹೊರಡಿಸಿದೆ.

ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ (ಎನ್‌ಆರ್‌ಸಿ) ಇರುವ ಎಲ್ಲ ಬೀದಿ ನಾಯಿಗಳನ್ನು ಆಶ್ರಯತಾಣಗಳಿಗೆ ಶಾಶ್ವತವಾಗಿ ಸ್ಥಳಾಂತರಿಸುವಂತೆ ನ್ಯಾಯಾಲಯವು ಸೋಮವಾರವಷ್ಟೇ ನಿರ್ದೇಶನ ನೀಡಿತ್ತು. ಈ ಕುರಿತು ಪ್ರಾಣಿಪ್ರಿಯರು, ಪ್ರಾಣಿ ಹಕ್ಕುಗಳ ಹೋರಾಟಗಾರರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

'ನ್ಯಾಯಾಲಯದ ಆವರಣದಲ್ಲಿ ಬೀದಿ ನಾಯಿಗಳ ಓಡಾಟ ಭಾರಿ ಸಂಖ್ಯೆಯಲ್ಲಿ ಹೆಚ್ಚಳಗೊಂಡಿದೆ. ಲಿಫ್ಟ್‌ಗಳಲ್ಲಿಯೂ ನಾಯಿಗಳು ತಿರುಗಾಡುತ್ತಿವೆ. ಕೋರ್ಟ್‌ನ ಆವರಣದಲ್ಲಿ ಎಲ್ಲೆಂದರಲ್ಲಿ ಯಾವುದೇ ಕಾರಣಕ್ಕೂ ತಿಂದು ಉಳಿದ ತಿಂಡಿಗಳನ್ನು ಎಸೆಯಬಾರದು. ಮುಚ್ಚಳ ಇರುವ ಕಸದ ಬುಟ್ಟಿಗಳಲ್ಲಿಯೇ ಕಸ ಹಾಕಬೇಕು. ಹೀಗೆ ಎಲ್ಲೆಂದರಲ್ಲಿ ಬಿಸಾಡಿದ ತಿಂಡಿಗಳನ್ನು ತಿನ್ನಲು ನಾಯಿಗಳು ಬರುತ್ತವೆ. ಇದನ್ನು ತಡೆಗಟ್ಟುವ ದೃಷ್ಟಿಯಿಂದ ಈ ನಿಯಮಗಳನ್ನು ಅನುಸರಿಸಬೇಕು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಒಂದೆಡೆ, ನಾಯಿ ಕಡಿತದಿಂದಲೂ ಬಚಾವಾಗಬಹುದು. ಇನ್ನೊಂದೆಡೆ, ಸ್ವಚ್ಛತೆಯನ್ನೂ ಕಾಪಾಡಿದಂತಾಗುತ್ತದೆ. ಎಲ್ಲರ ಸುರಕ್ಷತೆಗಾಗಿ ಈ ನಿಯಮಗಳನ್ನು ಪಾಲಿಸುವುದು ಅಗತ್ಯ ಮತ್ತು ಇದಕ್ಕೆ ಎಲ್ಲರ ಸಹಕಾರವೂ ಅಗತ್ಯ' ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

> **ಎಲ್ಲ ಬೀದಿ ನಾಯಿಗಳನ್ನು ಸ್ಥಳಾಂತರಿಸಬೇಕು ಎನ್ನುವುದು ಸುಪ್ರೀಂ ಕೋರ್ಟ್‌ನ ಕ್ರೌರ್ಯದ, ದೂರದೃಷ್ಟಿ ಇಲ್ಲದ ಮತ್ತು ಕರುಣೆ ಇಲ್ಲದ ನಿರ್ದೇಶನವಾಗಿದೆ**
>
> **ರಾಹುಲ್ ಗಾಂಧಿ,** ಲೋಕಸಭೆ ವಿರೋಧ ಪಕ್ಷದ ನಾಯಕ

> **ಸುಪ್ರೀಂ ಕೋರ್ಟ್‌ನ ನಿರ್ದೇಶನವು ಅವೈಜ್ಞಾನಿಕವಾದುದು. ಎಂಟು ವಾರದೊಳಗೆ ನಗರದ ಬೀದಿ ನಾಯಿಗಳಿಗೆ ಆಶ್ರಯ ಕಲ್ಪಿಸುವುದು ಸಾಧ್ಯವಿಲ್ಲ. ಪ್ರಾಣಿಗಳ ಕಲ್ಯಾಣವನ್ನು ಗಣನೆಗೆ ತೆಗೆದುಕೊಳ್ಳಬೇಕು**
>
> **ನಜೀಬ್ ಜಂಗ್,** ದೆಹಲಿಯ ಮಾಜಿ ಲೆಫ್ಟಿನೆಂಟ್ ಗವರ್ನರ್

'ಅಭಿ ಪಿಕ್ಚರ್ ಬಾಕಿ ಹೈ': ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಚುನಾವಣಾ ಆಯೋಗವು 'ಒಬ್ಬ ವ್ಯಕ್ತಿ, ಒಂದು ಮತ' ತತ್ವವನ್ನು ಜಾರಿಗೊಳಿಸುವ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ದೂರಿದ್ದಾರೆ.

ಸಂಸತ್ ಆವರಣದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮತದಾರರ ಪಟ್ಟಿಯಲ್ಲಿನ ಅಕ್ರಮಗಳನ್ನು ಬಯಲಿಗೆಳೆಯುವ ಕೆಲಸ ಮುಂದುವರಿಯಲಿದೆ. 'ಅಭಿ ಪಿಕ್ಚರ್ ಬಾಕಿ ಹೈ' ಎಂದಿದ್ದಾರೆ.

'ಕೇವಲ ಒಂದು ಕ್ಷೇತ್ರದಲ್ಲಿ 'ವೋಟ್ ಚೋರಿ' (ಮತ ಕಳವು) ನಡೆದಿಲ್ಲ. ಈ ಕೆಲಸವನ್ನು ರಾಷ್ಟ್ರ ಮಟ್ಟದಲ್ಲಿ ವ್ಯವಸ್ಥಿತ-ವಾಗಿ ಮಾಡಲಾಗುತ್ತಿದೆ. ಅಕ್ರಮ ನಡೆದಿರುವುದು ಚುನಾವಣಾ ಆಯೋಗಕ್ಕೆ ತಿಳಿದಿದೆ. ನಮಗೂ ತಿಳಿದಿದೆ' ಎಂದು ಹೇಳಿದರು.

ಆಧಾರ್– ಪೌರತ್ವ ದಾಖಲೆ ಅಲ್ಲ: ಒಪ್ಪಿಕೊಂಡ 'ಸುಪ್ರೀಂ'

ಒಂದನೇ ಪುಟದಿಂದ...

ಆಧಾರ್ ಕಾರ್ಡ್, ಎಪಿಕ್ ಮತ್ತು ಪಡಿತರ ಚೀಟಿಗಳನ್ನು ಹೊಂದಿದ್ದರೂ ಬಿಹಾರದಲ್ಲಿ ಅಧಿಕಾರಿಗಳು ಅವುಗಳನ್ನು ದಾಖಲೆಯಾಗಿ ಸ್ವೀಕರಿಸಲು ನಿರಾಕರಿಸಿದ್ದಾರೆ ಎಂದು ಅರ್ಜಿದಾರರಲ್ಲಿ ಒಬ್ಬರಾದ ಆರ್‌ಜೆಡಿ ನಾಯಕ ಮನೋಜ್ ಝಾ ಪರ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್ ವಿಚಾರಣೆ ವೇಳೆ ವಾದಿಸಿದರು.

'ಒಬ್ಬನ ಬಳಿ ಯಾವುದೇ ದಾಖಲೆಗಳಿಲ್ಲ. ಆದರೆ, ಬಿಹಾರದಲ್ಲಿ ನೆಲಸಿದ್ದಾನೆ ಎಂಬ ಕಾರಣ ಆತನನ್ನು ಆ ರಾಜ್ಯದ ಮತದಾರನೆಂದು ಪರಿಗಣಿಸಬೇಕು ಎಂಬುದು ನಿಮ್ಮ ವಾದವೇ? ನಿಮ್ಮ ವಾದವನ್ನು ಒಪ್ಪಬಹುದು. ಆದರೆ, ಅದಕ್ಕಾಗಿ ಅವರು ಕೆಲವು ದಾಖಲೆಗಳನ್ನು ಒದಗಿಸಬೇಕು' ಎಂದು ಪೀಠ ಸ್ಪಷ್ಟಪಡಿಸಿತು.

ಜನನ ಪ್ರಮಾಣಪತ್ರ ಮತ್ತು ಪೋಷಕರ ಇತರ ದಾಖಲೆಗಳನ್ನು ಹುಡುಕಲು ಜನರು ಹೆಣಗಾಡುತ್ತಿದ್ದಾರೆ ಎಂದು ಸಿಬಲ್ ಹೇಳಿದಾಗ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಸೂರ್ಯ ಕಾಂತ್, 'ಬಿಹಾರದಲ್ಲಿ ಯಾರ ಬಳಿಯೂ ದಾಖಲೆಗಳಿಲ್ಲ ಎಂಬುದು ಆಧಾರವಿಲ್ಲದ ಹೇಳಿಕೆಯಾಗಿದೆ. ನೀವು ಹೇಳಿದಂತೆ ಬಿಹಾರದಲ್ಲಿ ಜನರು ದಾಖಲೆಗಳನ್ನು ಹುಡುಕಲು ಪರದಾಡುತ್ತಿದ್ದಾರೆ ಎಂದಾದರೆ, ದೇಶದ ಇತರ ಭಾಗಗಳಲ್ಲಿ ಪರಿಸ್ಥಿತಿ ಏನಿರಬಹುದು' ಎಂದು ಪ್ರಶ್ನಿಸಿದರು.

ಆರ್‌ಜೆಡಿಯ ಮನೋಜ್ ಝಾ ಅಲ್ಲದೆ ಮಹುವಾ ಮೊಯಿತ್ರಾ (ಟಿಎಂಸಿ), ಕೆ.ಸಿ.ವೇಣುಗೋಪಾಲ್ (ಕಾಂಗ್ರೆಸ್), ಸುಪ್ರಿಯಾ ಸುಳೆ (ಎನ್‌ಸಿಪಿ ಶರದ್ ಪವಾರ್ ಬಣ) ಮತ್ತು ಡಿ.ರಾಜಾ (ಸಿಪಿಐ) ಸೇರಿದಂತೆ ಹಲವರು ಎಸ್‌ಐಆರ್ ವಿರುದ್ಧ ಅರ್ಜಿ ಸಲ್ಲಿಸಿದ್ದು, ವಿಚಾರಣೆ ಬುಧವಾರವೂ ಮುಂದುವರಿಯಲಿದೆ.

'ಸತ್ತಿದ್ದಾರೆ' ಎಂದವರ ಹಾಜರು

ಎಸ್‌ಐಆರ್ ವಿರುದ್ಧ ಅರ್ಜಿ ಸಲ್ಲಿಸಿರುವ ಸಾಮಾಜಿಕ ಕಾರ್ಯಕರ್ತ ಯೋಗೇಂದ್ರ ಯಾದವ್ ಅವರು ತಾವೇ ವಾದ ಮಂಡಿಸಿದರು. ಚುನಾವಣಾ ಆಯೋಗವು 'ಸತ್ತಿದ್ದಾರೆ' ಎಂದು ಹೇಳಿ ಮತದಾರರ ಪಟ್ಟಿಯಿಂದ ಕೈಬಿಟ್ಟಿದ್ದ ಮೂವರನ್ನು ಅವರು ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಆಯೋಗದ ಪರ ಹಾಜರಿದ್ದ ಹಿರಿಯ ವಕೀಲ ರಾಕೇಶ್ ದ್ವಿವೇದಿ ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ನ್ಯಾಯಾಲಯದಲ್ಲಿ 'ಇಂತಹ ನಾಟಕ' ನಡೆಸುವುದಕ್ಕೆ ಅವಕಾಶ ನೀಡಬಾರದು' ಎಂದು ಪ್ರತಿಭಟಿಸಿದರು. ಯಾದವ್ ಅವರಿಗೆ ಅಷ್ಟೊಂದು ಕಾಳಜಿಯಿದ್ದರೆ, ಅವರ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸಿ ದಾಖಲೆಗಳನ್ನು ನವೀಕರಿಸುವ ಕೆಲಸದಲ್ಲಿ ಆಯೋಗಕ್ಕೆ ನೆರವಾಗಬಹುದು ಎಂದರು.

ಕರಡು ಪಟ್ಟಿಯಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸಲು ಅವಕಾಶವಿದೆ ಎಂದು ಪೀಠ ಹೇಳಿತು.

ಬಂಗಾಳ: ವಿವರಣೆ ಕೇಳಿದ ಇ.ಸಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮತದಾರರ ಪಟ್ಟಿ ಪರಿಷ್ಕರಣೆ ವಿವಾದಕ್ಕೆ ಸಂಬಂಧಿಸಿದಂತೆ 'ಕಳಂಕಿತ' ಅಧಿಕಾರಿಗಳನ್ನು ವಜಾಗೊಳಿಸದಿರುವ ನಿರ್ಧಾರದ ಬಗ್ಗೆ ಚುನಾವಣಾ ಆಯೋಗವು (ಇ.ಸಿ) ರಾಜ್ಯ ಸರ್ಕಾರದ ವಿವರಣೆ ಕೋರಿದೆ.

ಆಗಸ್ಟ್ 13ರಂದು ಸಂಜೆ 5ರ ಒಳಗೆ ದೆಹಲಿಯಲ್ಲಿರುವ ಆಯೋಗದ ಕೇಂದ್ರ ಕಚೇರಿಗೆ ಬಂದು ಈ ಬಗ್ಗೆ ವಿವರಣೆ ನೀಡಬೇಕು ಎಂದು ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್ ಅವರಿಗೆ ಸೂಚಿಸಿದೆ.

ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ 'ಅಕ್ರಮ' ಎಸಗಿದ್ದಾರೆಂದು ಆರೋಪಿಸಲಾದ ಅಧಿಕಾರಿಗಳನ್ನು ಅಮಾನತುಗೊಳಿಸುವ ಉದ್ದೇಶವಿಲ್ಲ ಎಂದು ಪಂತ್ ಅವರು ಚುನಾವಣಾ ಆಯೋಗಕ್ಕೆ ಪತ್ರ ಬರೆದ ಒಂದು ದಿನದ ಬಳಿಕ ಈ ಬೆಳವಣಿಗೆ ನಡೆದಿದೆ.

ಆಯೋಗವು ಗುರುತಿಸಿರುವ ಅಧಿಕಾರಿಗಳನ್ನು ಅಮಾನತುಗೊಳಿಸುವುದು ಮತ್ತು ಅವರ ವಿರುದ್ಧ ಎಫ್‌ಐಆರ್ ದಾಖಲಿಸುವುದು 'ತುಂಬಾ ಕಠಿಣ' ಕ್ರಮ ಎನಿಸಲಿದೆ. ಇದು ಬಂಗಾಳದ ಅಧಿಕಾರಿಗಳ 'ಧೈರ್ಯಗುಂದಿಸಲಿದೆ' ಎಂದು ಮುಖ್ಯ ಕಾರ್ಯದರ್ಶಿಯವರು ತಮ್ಮ ಪತ್ರದಲ್ಲಿ ಕಾರಣ ನೀಡಿದ್ದರು.

ಚಿಟಿಕೆ ಸುದ್ದಿ

ರಾಷ್ಟ್ರಧ್ವಜ: ವಕ್ಫ್ ಮಂಡಳಿ ಸೂಚನೆ

ರಾಯಪುರ (ಪಿಟಿಐ): ಆಗಸ್ಟ್ 15ರ ಸ್ವಾತಂತ್ರ್ಯ ದಿನದಂದು ರಾಜ್ಯದ ಎಲ್ಲಾ ಮಸೀದಿಗಳು, ದರ್ಗಾಗಳು ಮತ್ತು ಮದರಸಾಗಳ ಮುಖ್ಯ ಪ್ರವೇಶದ್ವಾರದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಬೇಕು ಎಂದು ಛತ್ತೀಸಗಢ ರಾಜ್ಯ ವಕ್ಫ್ ಮಂಡಳಿ ನಿರ್ದೇಶನ ನೀಡಿದೆ.

ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಸಲೀಂ ರಾಜ್ ಅವರು, 'ಈ ಸಂಬಂಧ ಎಲ್ಲ ಮುತವಲ್ಲಿಗಳಿಗೆ (ವಕ್ಫ್ ಆಸ್ತಿ ನಿರ್ವಹಣೆ ಹೊಣೆ ಹೊತ್ತವರು) ಸೋಮವಾರ ಪತ್ರ ಬರೆಯಲಾಗಿದೆ. ತ್ರಿವರ್ಣ ಧ್ವಜವು ಗೌರವ ಮತ್ತು ಹೆಮ್ಮೆಯ ಸಂಕೇತ. ಅದು ಯಾವುದೇ ಒಂದು ಧರ್ಮಕ್ಕೆ ಸಂಬಂಧಿಸಿದ್ದಲ್ಲ' ಎಂದು ಹೇಳಿದರು.

ತ್ರಿವರ್ಣ ಧ್ವಜ ಮತ್ತು ದೇಶದ ಮೇಲೆ ಪ್ರೀತಿ ಇಲ್ಲದವರಿಗೆ ಭಾರತ ಮಾತೆಯ ಈ ಭೂಮಿಯ ಮೇಲೆ ಬದುಕುವ ಹಕ್ಕಿಲ್ಲ ಎಂದು ತಿಳಿಸಿದರು.

ಮುನೀರ್ ಹೇಳಿಕೆ ಓವೈಸಿ ಖಂಡನೆ

ಹೈದರಾಬಾದ್ (ಪಿಟಿಐ): ಪಾಕಿಸ್ತಾನ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಅವರ ಅಣ್ವಸ್ತ್ರ ಬೆದರಿಕೆಯನ್ನು ಖಂಡಿಸಿರುವ ಎಐಎಂಐಎಂ ಪಕ್ಷದ ಅಧ್ಯಕ್ಷ ಅಸಾದುದ್ದೀನ್ ಓವೈಸಿ, ಈ ಬಗ್ಗೆ ಮೋದಿ ಸರ್ಕಾರವು ತೀಕ್ಷ್ಣ ರಾಜಕೀಯ ಪ್ರತಿಕ್ರಿಯೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.



ಓವೈಸಿ

'ಮುನೀರ್ ಅವರು ಅಮೆರಿಕದ ನೆಲದಲ್ಲಿ ನಿಂತು ಭಾರತ ಮತ್ತು ಭಾರತೀಯರ ವಿರುದ್ಧ ಮಾತನಾಡಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಇದನ್ನು ಖಂಡಿಸಲು ಕೇವಲ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಕಟಣೆ ಮಾತ್ರ ಸಾಕಾಗುವುದಿಲ್ಲ. ಭಾರತವು ಮುನೀರ್ ಹೇಳಿಕೆ ವಿರುದ್ಧ ಶಕ್ತವಾದ ಪ್ರತಿಭಟನೆಯನ್ನು ದಾಖಲಿಸಬೇಕು ಮತ್ತು ಈ ಬಗ್ಗೆ ಅಮೆರಿಕದೊಂದಿಗೆ ಮಾತುಕತೆ ನಡೆಸಬೇಕು' ಎಂದು ಓವೈಸಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

₹31.8 ಕೋಟಿಯ ಮೆಫೆಡ್ರೋನ್ ವಶ

ಠಾಣೆ (ಪಿಟಿಐ): ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಹೆದ್ದಾರಿಯೊಂದರಲ್ಲಿ ಎರಡು ಕಾರುಗಳಲ್ಲಿ ಸಾಗಿಸುತ್ತಿದ್ದ ₹31.8 ಕೋಟಿ ಮೌಲ್ಯದ 15 ಕೆ.ಜಿ.ಗೂ ಹೆಚ್ಚು ಮೆಫೆಡ್ರೋನ್ (ಮಾದಕ ವಸ್ತು) ಅನ್ನು ವಶಪಡಿಸಿಕೊಂಡಿದ್ದು, ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ಹೇಳಿದ್ದಾರೆ.

ಮುಂಬ್ರಾ ನಿವಾಸಿ ತನ್ವೀರ್ ಅಹ್ಮದ್ ಕಮರ್ ಅಹ್ಮದ್ ಅನ್ಸಾರಿ (23), ವಿಠಲವಾಡಿ ನಿವಾಸಿ ಮಹೇಶ್ ಹಿಂದೂರಾವ್ ದೇಸಾಯಿ (35) ಬಂಧಿತರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ
email: eerdwsd.bngr1@gmail.com, Phone: 080-29787463

ಸಂ: ಕಾಇಂ/ಗ್ರಾ.ಕು.ನೀ. & ನೈರ್ಮಲ್ಯ ವಿಭಾಗ/ಬೆಂ.ಗ್ರಾ/ತಾ.ಶಾ/ಟೆಂಡರ್/2025-26/489
ದಿನಾಂಕ: 11.08.2025

ಕೆ.ಪಿ.ಪಿ ಪೋರ್ಟಲ್‌ನ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ: 13, 14 & 15/2025-26

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ ರವರು **ಟೆಂಡರ್ ಸಂ: 14/2025-26: 2021-2022 ನೇ ಸಾಲಿನ 2215 JJM ಲೆಕ್ಕಶೀರ್ಷಿಕೆಯಡಿ ಬೆಂಗಳೂರು ಗ್ರಾಮಂತರ ಜಿಲ್ಲೆಯ ಕಾಮಗಾರಿಗಳಿಗೆ ಮತ್ತು ಟೆಂಡರ್ ಸಂ: 15/2025-26: ಜಲ್ ಜೀವನ್ ಮಿಷನ್ ಯೋಜನೆಯಡಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕೊಳವೆ ಬಾವಿ ಕೊರೆಯುವ ಕಾಮಗಾರಿ ಮತ್ತು ಟೆಂಡರ್ ಸಂ: 13/2025-26: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಛೇರಿ ವ್ಯಾಪ್ತಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಒದಗಿಸಲು** ನಿಯಮಾನುಸಾರ ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ನೋಂದಣಿಯಾಗಿರುವ ಅರ್ಹ ಗುತ್ತಿಗೆದಾರರಿಂದ ಹಾಗೂ ಕೆ.ಪಿ.ಪಿ.ಪಿ ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ನಿಯಮಾನುಸಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-1, KW-2 & KW-4 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಇ-ಪೇಮೆಂಟ್ ಮುಖಾಂತರ.

(1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 11.08.2025 ರಂದು ಸಂಜೆ 4.00 ಗಂಟೆಯ ನಂತರ.** (2) ಪ್ರೀಬಿಡ್ ಮೀಟಿಂಗ್ ಸ್ಥಳ/ದಿನಾಂಕ: ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾ.ಕು.ನೀ.&ನೈವಿಭಾಗ, ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ, **ದಿನಾಂಕ: 18.08.2025 ರಂದು ಬೆಳಿಗ್ಗೆ 11.00 ಗಂಟೆಗೆ.** (3) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 21.08.2025 ರಂದು ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 22.08.2025 ರಂದು ಸಂಜೆ 4.00 ಗಂಟೆಯ ನಂತರ.** (5) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 25.08.2025 ರಂದು ಸಂಜೆ 4.00 ಗಂಟೆಯ ನಂತರ.**

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಬೆಂಗಳೂರು ಗ್ರಾಮಾಂತರ

ವಾಸಾಸಂಇ/ಬೆಂಗ್ರಾಜಿ/2280/ಎಎಎ/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
ಜಯನಗರ ವಿಭಾಗ, ಬಿಬಿಎಂಪಿ, 39ನೇ ಅಡ್ಡರಸ್ತೆ, 18ನೇ ಮುಖ್ಯರಸ್ತೆ,
ಜಯನಗರ 4ನೇ 'ಟಿ' ಬ್ಲಾಕ್, ಬೆಂಗಳೂರು – 560041.

ಸಂಖ್ಯೆ: ಕಾ.ಅ.(ಜೆಎನ್)/ಡಿಎಂ/ಇ-ಪ್ರೊಕ್/05/2025-26 ದಿನಾಂಕ: 12-08-2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಬಿಬಿಎಂಪಿ ಮತ್ತು ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
	ಈ ಕೆಳಕಂಡ ವಾರ್ಡ್‌ಗಳಲ್ಲಿ ರಸ್ತೆಗಳು, ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಇತರೆ ಅಭಿವೃದ್ಧಿ ಕೆಲಸಗಳ ಕಾಮಗಾರಿ.
1	ವಾರ್ಡ್ ಸಂಖ್ಯೆ. 182, ಭೈರಸಂದ್ರ ಇಲ್ಲಿನ ಬ್ಲಾಕ್ ಸಂಖ್ಯೆ. 106_2, 94_1, 84, 54_1 ಮತ್ತು ಸುತ್ತಮುತ್ತ ಪ್ರದೇಶದಲ್ಲಿ ಹಾಗೂ ಎಂ.ಎಸ್. ಕಟ್ಟಡದ ಬ್ಲಾಕ್-ಎ ಮತ್ತು ಬಿ ದುರಸ್ತಿಗಳ ಕಾಮಗಾರಿ. (ಇತರೆ) – **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 150.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,25,000/–**
2	ವಾರ್ಡ್ ಸಂಖ್ಯೆ. 184, ಜಯನಗರ ಪೂರ್ವ ವಾರ್ಡ್ ಇಲ್ಲಿನ ಕಾರ್ಪೋರೇಶನ್ ಕಾಲೋನಿ ಬ್ಲಾಕ್ ಸಂಖ್ಯೆ. 52_2, 22_1, 22_2, 52_1, 23_1, 58_2, 23_2, 57, 51_1, 50_1, 52_2 ಮತ್ತು 18 ಗಳಲ್ಲಿ. (ಇತರೆ) – **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 250.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ರೂ. 2.75 ಲಕ್ಷ ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ.**
3	ವಾರ್ಡ್ ಸಂಖ್ಯೆ. 185, ಜೆ.ಪಿ. ನಗರ ವಾರ್ಡ್ ಇಲ್ಲಿನ ರಾಗಿಗುಡ್ಡ ಕೊಳೆಗೇರಿ ಬ್ಲಾಕ್ ಸಂಖ್ಯೆ. 35, 37, 40, 41, 42, 43, 44_2 ಮತ್ತು ಸುತ್ತಮುತ್ತ ಪ್ರದೇಶದಲ್ಲಿ. (ಇತರೆ) – **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 200.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): ರೂ. 1.00 ಲಕ್ಷ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ರೂ. 2.00 ಲಕ್ಷ ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ.**
4	ವಾರ್ಡ್ ಸಂಖ್ಯೆ. 185, ಜೆ.ಪಿ. ನಗರ ವಾರ್ಡ್ ಇಲ್ಲಿನ ರಾಗಿಗುಡ್ಡ ಕೊಳೆಗೇರಿ ಬ್ಲಾಕ್ ಸಂಖ್ಯೆ. 5, 6, 7, 8, 20 ಮತ್ತು 32 ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ. (ಇತರೆ) – **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 120.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,80,000/–**
5	ವಾರ್ಡ್ ಸಂಖ್ಯೆ. 185, ಜೆ.ಪಿ. ನಗರ ವಾರ್ಡ್ ಇಲ್ಲಿನ ರಾಗಿಗುಡ್ಡ ಕೊಳೆಗೇರಿ ಬ್ಲಾಕ್ ಸಂಖ್ಯೆ. 34, 35, 36 ಮತ್ತು 36ಎ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ. (ಇತರೆ) – **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 120.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,80,000/–**
6	ವಾರ್ಡ್ ಸಂಖ್ಯೆ. 185, ಜೆ.ಪಿ. ನಗರ ವಾರ್ಡ್ ಇಲ್ಲಿನ ರಾಗಿಗುಡ್ಡ ಕೊಳೆಗೇರಿ ಬ್ಲಾಕ್ ಸಂಖ್ಯೆ. 44, 45, 46 ಮತ್ತು 47 ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ. (ಇತರೆ) – **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 120.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,80,000/–**
7	ವಾರ್ಡ್ ಸಂಖ್ಯೆ. 185, ಜೆ.ಪಿ. ನಗರ ವಾರ್ಡ್ ಇಲ್ಲಿನ ರಾಗಿಗುಡ್ಡ ಕೊಳೆಗೇರಿ ಬ್ಲಾಕ್ ಸಂಖ್ಯೆ. 20 ರಿಂದ 32 ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ. (ಇತರೆ) – **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 140.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,10,000/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: **20-08-2025 ರಂದು 3.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಜಯನಗರ ವಿಭಾಗ, ಬಿಬಿಎಂಪಿ ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: **26-08-2025 ರಂದು 16.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ಇ-ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ: **28-08-2025 ರಂದು 16.05 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ಇ-ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ: **29-08-2025 ರಂದು 16.05 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ, ಬಿಬಿಎಂಪಿ.

ದೇಶದ ಕ್ರೀಡಾಕ್ಷೇತ್ರದಲ್ಲಿ ಹೊಸ ಭರವಸೆ

ಸಂಸತ್‌ನಲ್ಲಿ ಕ್ರೀಡಾ ಆಡಳಿತ ಮಸೂದೆಗೆ ಅಂಗೀಕಾರ

• ರಾಷ್ಟ್ರಪತಿ ಅಂಕಿತವಷ್ಟೇ ಬಾಕಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಯು ಮಂಗಳವಾರ ಸಂಸತ್‌ನಲ್ಲಿ ಅಂಗೀಕಾರಗೊಂಡಿತು.

ಲೋಕಸಭೆಯಲ್ಲಿ ಈ ಮಸೂದೆಯನ್ನು ಅಂಗೀಕರಿಸಿ 24 ಗಂಟೆ ಕಳೆಯುವಷ್ಟರಲ್ಲಿಯೇ ರಾಜ್ಯಸಭೆಯಲ್ಲಿ ಬಹಳಷ್ಟು ಚರ್ಚೆಯ ನಂತರ ಅಂಗೀಕೃತಗೊಂಡಿತು. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ (ತಿದ್ದುಪಡಿ) ಮಸೂದೆಯೂ ಸಂಸತ್‌ನಲ್ಲಿ ಅಂಗೀಕಾರಗೊಂಡಿತು. ಇದೀಗ ಈ ಎರಡೂ ಮಸೂದೆಗಳಿಗೂ ರಾಷ್ಟ್ರಪತಿಗಳ ಅಂಕಿತ ಬೀಳಬೇಕಿದೆ. ಅದರ ನಂತರ ಈ ಮಸೂದೆಗಳು ಕಾನೂನು ರೂಪ ಪಡೆಯಲಿವೆ.



ಮನ್ಸುಖ್ ಮಾಂಡವೀಯ ಪಿಟಿಐ ಚಿತ್ರ

ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಸಂಸತ್‌ನ ಮೇಲ್ಮನೆಯಲ್ಲಿ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಮಸೂದೆಗಳನ್ನು ಮಂಡಿಸಿದರು.

ಆದರೆ ಇದೇ ಹೊತ್ತಿನಲ್ಲಿ ಬಿಹಾರದಲ್ಲಿ ಚುನಾವಣೆ ಮತದಾರರ ಪಟ್ಟಿಯ ಪರಿಷ್ಕರಣೆಯ ಕುರಿತು ಸಮಗ್ರ ತನಿಖೆಗೆ ಆಗ್ರಹಿಸಿದ ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು. ವಿಪಕ್ಷ ನಾಯಕ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತಿತರ ನಾಯಕರೂ ಸದನದಿಂದ ಹೊರನಡೆದರು.

ಈ ಸಂದರ್ಭದಲ್ಲಿ ಮಾತನಾಡುವ ಅವಕಾಶ ಪಡೆದ ಸಚಿವ ಮಾಂಡವೀಯ, ‘20 ದೇಶಗಳಲ್ಲಿ ಕ್ರೀಡಾ ಕಾನೂನು ಜಾರಿಯಲ್ಲಿದೆ. ನಾವು ಈ ಕಾನೂನು ಜಾರಿಗೆ ತಂದ 21ನೇ ದೇಶವಾಗುವಂತೆ ಮಾಡುವ ಅವಕಾಶ ರಾಜ್ಯಸಭೆಯ ಕೈಯಲ್ಲಿದೆ’ ಎಂದು ಹೇಳಿದರು. ಇದರೊಂದಿಗೆ ಸದಸ್ಯರ ನಡುವೆ ಚರ್ಚೆ ಆರಂಭವಾದವು.

ಚರ್ಚೆಯಲ್ಲಿ ಭಾಗವಹಿಸಿದ್ದ ಬಿಜೆಡಿ ಸಂಸದ ಶುಭಾಶಿಶ್ ಖುಂತಿಯ, ‘ಕ್ರೀಡಾ ಆಡಳಿತವನ್ನು ಕೇಂದ್ರಿಕೃತಗೊಳಿಸುವುದು ಅಪಾಯಕಾರಿ. ಈ ಮಸೂದೆಯಲ್ಲಿ ಜಿಲ್ಲೆ ಮತ್ತು ಬ್ಲಾಕ್ ಮಟ್ಟದ ಅಥ್ಲೀಟ್‌ಗಳ ಅಭಿವೃದ್ಧಿಯ ಕುರಿತು ಯಾವುದೇ ಸ್ಪಷ್ಟತೆ ಇಲ್ಲ’ ಎಂದರು.

‘ಮಸೂದೆಯು ಸಶಕ್ತಗೊಳಿಸುವಂತಿರಬೇಕು. ನಿಯಂತ್ರಣ ಮಾಡುವಂತಿರಬಾರದು’ ಎಂದೂ ಅವರು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಮಾಂಡವೀಯ, ‘ಕ್ರೀಡಾ ಆಡಳಿತದಲ್ಲಿ ಪಾರದರ್ಶಕತೆ ತರಲು ಈ ಮಸೂದೆಯಿಂದ ಸಾಧ್ಯವಾಗಲಿದೆ. ಸರ್ಕಾರವು ಯಾವುದೇ ನಿಯಂತ್ರಣ ಅಥವಾ ಹಸ್ತಕ್ಷೇಪ ಮಾಡುತ್ತಿಲ್ಲ. ಸರ್ಕಾರವು ಬೆಂಬಲ ನೀಡುವ ಕೆಲಸ ಮಾಡಲಿದೆ ಮತ್ತು ಸೌಲಭ್ಯಗಳನ್ನೂ ನೀಡಲಿದ್ದೇವೆ’ ಎಂದು ಭರವಸೆ ನೀಡಿದರು.

ಎನ್‌ಸಿಪಿ ನಾಯಕ ಹಾಗೂ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಮಾಜಿ ಅಧ್ಯಕ್ಷ ಪ್ರಫುಲ್ ಪಟೇಲ್ ಮತ್ತು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಧ್ಯಕ್ಷ ಪಿ.ಟಿ. ಉಷಾ ಅವರು ಮಸೂದೆಯ ಬಗ್ಗೆ ಮೆಚ್ಚುಗೆಯ ಮಾತನಾಡಿದ್ದಾರೆ.

‘ದೀರ್ಘ ಕಾಲದಿಂದ ಕಾದಿದ್ದ ಮಸೂದೆ ಇದಾಗಿತ್ತು. ಇದು ಈಗಿನ ಅಗತ್ಯವೂ ಆಗಿತ್ತು. ನಮ್ಮಲ್ಲಿ ಈಗಾಗಲೇ ಇದ್ದ ಕ್ರೀಡಾ ನೀತಿಯು ಜಾಳಾಗಿತ್ತು. ಕಾನೂನು ಚೌಕಟ್ಟು ಬಿಗಿಯಾಗಿರಲಿಲ್ಲ. ಆದ್ದರಿಂದ ಈಗ ಅಂಗೀಕಾರವಾಗಿರುವ ಮಸೂದೆ ಮಹತ್ವದ್ದಾಗಿದೆ. 2036ರ ಒಲಿಂಪಿಕ್ ಕೂಟದ ಆತಿಥ್ಯಕ್ಕಾಗಿ ಬಿಡ್ ಸಲ್ಲಿಸಿದ್ದೇವೆ. ನಮಗೆ ಲಭಿಸುವ ಆಶಾಭಾವನೆಯೂ ಇದೆ. ಈ ಸಂದರ್ಭದಲ್ಲಿ ಮಸೂದೆ ಅಂಗೀಕಾರವಾಗಿರುವುದು ಪೂರಕವಾಗಿದೆ’ ಎಂದು ಪಟೇಲ್ ಹೇಳಿದರು.

‘ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಲಿಂಗ ಸಮಾನತೆ ತರಲು ಈ ಮಸೂದೆ ಸಹಕಾರಿಯಾಗಿದೆ. ಅಥ್ಲೀಟ್‌ಗಳನ್ನು ಸಬಲಗೊಳಿಸಿ, ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಕೂಡ ನೆರವಾಗಲಿದೆ. ಇದು ನ್ಯಾಯೋಚಿತ ನಡೆಯಾಗಿದೆ’ ಎಂದು ಪಿ.ಟಿ. ಉಷಾ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಮಾಂಡವೀಯ, ‘ಸ್ವಾತಂತ್ರ್ಯ ನಂತರ ದೇಶದ ಕ್ರೀಡಾಕ್ಷೇತ್ರದಲ್ಲಿ ಆದ ಏಕೈಕ ಅತಿದೊಡ್ಡ ಸುಧಾರಣೆ ಹೆಜ್ಜೆ ಇದಾಗಿದೆ’ ಎಂದು ಬಣ್ಣಿಸಿದರು.

ಮಸೂದೆಗೆ ಕ್ರೀಡಾ ಫೆಡರೇಷನ್‌ಗಳಿಂದ ಸ್ವಾಗತ

ಕ್ರೀಡಾ ಆಡಳಿತ ಮಸೂದೆಯು ಸಂಸತ್‌ನಲ್ಲಿ ಅಂಗೀಕಾರಗೊಳ್ಳುವ ಮೂಲಕ ಅಮೆರಿಕ, ಇಂಗ್ಲೆಂಡ್, ಚೀನಾ ಮತ್ತು ಜಪಾನ್ ದೇಶಗಳ ಸಾಲಿಗೆ ಭಾರತವೂ ಸೇರಿದೆ. ಇದನ್ನು ದೇಶದ ಹಲವು ಕ್ರೀಡಾ ಫೆಡರೇಷನ್‌ಗಳು (ಎನ್‌ಎಸ್‌ಎಫ್) ಸ್ವಾಗತಿಸಿವೆ.

‘ಇದೊಂದು ಒಳ್ಳೆಯ ಬೆಳವಣಿಗೆ. ಎಲ್ಲ ಕಾರ್ಯಗಳನ್ನೂ ನೇರಾನೇರಗೊಳಿಸುತ್ತವೆ. ಅಸ್ಪಷ್ಟತೆಗೆ ಯಾವುದೇ ಅವಕಾಶವಿಲ್ಲ. ಎಲ್ಲರೂ ಏಕರೂಪದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಲೇಬೇಕು. ಬೇರೆ ಬೇರೆ ವ್ಯಕ್ತಿಗಳಿಗೆ ಪ್ರತ್ಯೇಕತೆ ಇಲ್ಲ. ಮೊದಲಿದ್ದ ಧೋರಣೆ ಈಗ ನಡೆಯುವುದಿಲ್ಲ’ ಎಂದು ಅಖಿಲ ಭಾರತ ಟೆನಿಸ್ ಫೆಡರೇಷನ್ (ಎಐಟಿಎ) ಹಂಗಾಮಿ ಕಾರ್ಯದರ್ಶಿ ಸುಂದರ್ ಅಯ್ಯರ್ ಹೇಳಿದ್ದಾರೆ.

ರಾಜ್ಯಸಭಾ ಸದಸ್ಯೆಯೂ ಆಗಿರುವ ಐಒಎ ಅಧ್ಯಕ್ಷೆ ಪಿ.ಟಿ. ಉಷಾ ಅವರು, ‘ಈ ದಿನವು ಕ್ರೀಡಾಕ್ಷೇತ್ರದ ಹಿತದೃಷ್ಟಿಯಿಂದ ಮತ್ತು ವೈಯಕ್ತಿಕವಾಗಿ ಮಹತ್ವದ್ದಾಗಿದೆ. ಈ ಕ್ಷಣಕ್ಕಾಗಿ ದೀರ್ಘ ಕಾಲದಿಂದ ಕಾಯುತ್ತಿದ್ದೆ’ ಎಂದಿದ್ದಾರೆ.

‘ಇದೊಂದು ಉತ್ತಮವಾದ ಮಸೂದೆಯಾಗಿದೆ. 2036ರ ಒಲಿಂಪಿಕ್ಸ್ ಆತಿಥ್ಯ ಗಳಿಸುವ ಹಿನ್ನೆಲೆಯಲ್ಲಿ ಪ್ರಧಾನಿಗಳ ದೂರದರ್ಶಿತ್ವ ಇರುವ ಮಸೂದೆ ಇದಾಗಿದೆ. ಕ್ರೀಡಾ ಫೆಡರೇಷನ್‌ಗಳಲ್ಲಿ ನಡೆಯುವ ಅಪರಾಧಗಳಿಗೆ ಕಡಿವಾಣ ಹಾಕಲಿದ್ದು, ಕ್ರೀಡೆಯು ಉತ್ತಮವಾಗಿ ಬೆಳೆಯಲು ಅವಕಾಶವಾಗಲಿದೆ’ ಎಂದು ಭಾರತ ವೇಟ್‌ಲಿಫ್ಟಿಂಗ್ ಫೆಡರೇಷನ್ ಅಧ್ಯಕ್ಷ ಸಹದೇವ್ ಯಾದವ್ ಹೇಳಿದ್ದಾರೆ.

‘ಪ್ರಸ್ತುತ ಕಾಲಘಟ್ಟದ ಅಗತ್ಯವಾಗಿದೆ ಈ ಮಸೂದೆ’ ಎಂದು ಅಥ್ಲೆಟಿಕ್ಸ್ ಫೆಡರೇಷನ್ ವಕ್ತಾರ ಅದಿಲೆ ಸುಮರಿವಾಲಾ ಶ್ಲಾಘಿಸಿದ್ದಾರೆ.

‘ಬರ್ಮಿಂಗ್‌ಹ್ಯಾಮ್ ದ್ವಿಶತಕ ನನ್ನ ಪಾಲಿಗೆ ಸವಿನೆನಪು’

ಗಿಲ್‌ಗೆ ಐಸಿಸಿ ತಿಂಗಳ ಆಟಗಾರ ಪ್ರಶಸ್ತಿ

ದುಬೈ (ಪಿಟಿಐ): ಇಂಗ್ಲೆಂಡ್ ವಿರುದ್ಧ ಇತ್ತೀಚಿನ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ 754 ರನ್ ಕಲೆಹಾಕಿದ ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಮಂಗಳವಾರ ಐಸಿಸಿಯ ‘ತಿಂಗಳ ಆಟಗಾರ’ ಪ್ರಶಸ್ತಿಗೆ ಭಾಜನರಾದರು.

ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಅವರಂಥ ಘಟಾನುಘಟಿ ಆಟಗಾರರಿಲ್ಲದ ಯುವ ತಂಡವನ್ನು ಮೊದಲ ಬಾರಿಗೆ ಮುನ್ನಡೆಸಿದ್ದ ಗಿಲ್ ನಾಯಕನಾಗಿಯೂ, ಆಟಗಾರನಾಗಿಯೂ ಯಶಸ್ಸು ಗಳಿಸಿದ್ದರು. ನಾಲ್ಕು ಶತಕಗಳನ್ನು ಬಾರಿಸಿದ್ದರು. ಅಂತಿಮ ಟೆಸ್ಟ್‌ನಲ್ಲಿ ಸೋಲಿನಿಂದ ಪಾರಾದ ಭಾರತ ಐದು ಪಂದ್ಯಗಳ ಸರಣಿಯನ್ನು 2-2ರಲ್ಲಿ ಸಮಮಾಡಿಕೊಂಡಿತ್ತು.

ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಮತ್ತು ದಕ್ಷಿಣ ಆಫ್ರಿಕಾದ ಆಲ್‌ರೌಂಡರ್ ವಿಯಾನ್ ಮಲ್ಡರ್ ಅವರ ಪೈಪೋಟಿಯನ್ನು ಮೀರಿನಿಂತ 25 ವರ್ಷ ವಯಸ್ಸಿನ ಗಿಲ್ ಈ ಪ್ರಶಸ್ತಿಗೆ ಪಾತ್ರರಾದರು.

ಶುಭಮನ್ ಗಿಲ್

‘ಐಸಿಸಿಯ ಜುಲೈ ತಿಂಗಳ ಆಟಗಾರನಾಗಿ ನನ್ನನ್ನು ಹೆಸರಿಸಿರುವುದು ಅತೀವ ಸಂತಸ ತಂದಿದೆ. ಟೆಸ್ಟ್ ಸರಣಿಗೆ ಮೊದಲ ಸಲ ನಾಯಕನಾಗಿ ತೋರಿದ ಪ್ರದರ್ಶನಕ್ಕೆ ಈ ಗೌರವ ಒಲಿದಿರುವುದು ಪ್ರಶಸ್ತಿಗೆ ಇನ್ನಷ್ಟು ಮಹತ್ವ ಮೂಡಿಸಿದೆ. ಅದರಲ್ಲೂ ಬರ್ಮಿಂಗ್‌ಹ್ಯಾಮ್‌ನಲ್ಲಿ ಗಳಿಸಿದ ದ್ವಿಶತಕ (269) ನನ್ನ ಪಾಲಿಗೆ ಸವಿನೆನಪಾಗಿ ಉಳಿಯಲಿದೆ. ಇಂಗ್ಲೆಂಡ್‌ನಲ್ಲಿ ನನ್ನ ಪ್ರವಾಸದ ಹೈಲೈಟ್‌ಗಳಲ್ಲಿ ಇದು ಒಂದಾಗಿದೆ’ ಎಂದು ಗಿಲ್ ಅವರನ್ನು ಉದ್ಧರಿಸಿ ಐಸಿಸಿ ಮಾಧ್ಯಮ ಪ್ರಕಟಣೆ ತಿಳಿಸಿದೆ.

‘ಇಂಗ್ಲೆಂಡ್ ವಿರುದ್ಧದ ಸರಣಿ ನಾಯಕನಾಗಿ ನನಗೆ ಅನುಭವದ ಪಾಠವಾಗಿತ್ತು. ಎರಡೂ ತಂಡಗಳಿಂದ ಅಮೋಘ ಆಟ ಮೂಡಿಬಂದಿತು. ಎರಡೂ ತಂಡಗಳು ಆಟಗಾರರಿಗೆ ಈ ಸರಣಿ ದೀರ್ಘಕಾಲ ನೆನಪಿನಲ್ಲಿ ಉಳಿಯಲಿದೆ’ ಎಂದು ಗಿಲ್ ಹೇಳಿದ್ದಾರೆ.

‘ಈ ಋತುವಿನಲ್ಲಿ ಇದೇ ಲಯವನ್ನು ಮುಂದುವರಿಸುವ ತವಕ ಹೊಂದಿದ್ದೇನೆ’ ಎಂದಿದ್ದಾರೆ.

ಇಂಗ್ಲೆಂಡ್ ವಿರುದ್ಧ ಐದು ಟೆಸ್ಟ್‌ಗಳ ಸರಣಿಯ ಮೊದಲ ಮೂರು ಟೆಸ್ಟ್‌ಗಳಲ್ಲಿ ರನ್‌ಹೊಳೆ ಹರಿಸಿದ್ದ ಗಿಲ್ 94.50ರ ಸರಾಸರಿಯಲ್ಲಿ 567 ರನ್ ಪೇರಿಸಿದ್ದರು. ಆ ಸರಣಿಯಲ್ಲಿ ಅವರು ಒಟ್ಟು 754 ರನ್ ಗಳಿಸಿದ್ದರು.

ಶುಭಮನ್‌ಗೆ ನಾಲ್ಕನೇ ಬಾರಿ ಒಲಿದ ಗೌರವ

ಐಸಿಸಿ ತಿಂಗಳ ಆಟಗಾರ ಪ್ರಶಸ್ತಿಯನ್ನು ನಾಲ್ಕು ಬಾರಿ ಗೆದ್ದುಕೊಂಡ ಮೊದಲ ಆಟಗಾರ ಎಂಬ ಗೌರವ ಶುಭಮನ್ ಗಿಲ್ ಅವರದಾಯಿತು.

ಈ ಹಿಂದೆ- 2023ರ ಜನವರಿಯಲ್ಲಿ, ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ ಮತ್ತು ಈ ವರ್ಷದ ಫೆಬ್ರುವರಿಯಲ್ಲಿ ಅವರು ಪ್ರಶಸ್ತಿಗೆ ಪಾತ್ರರಾಗಿದ್ದರು.

ಸೋಫಿಯಾ ಡಂಕ್ಲಿಗೆ ಪ್ರಶಸ್ತಿ: ಇಂಗ್ಲೆಂಡ್‌ನ ಬ್ಯಾಟರ್ ಸೋಫಿಯಾ ಡಂಕ್ಲಿ ಅವರು ಐಸಿಸಿ ‘ತಿಂಗಳ ಆಟಗಾರ್ತಿ’ ಗೌರವಕ್ಕೆ ಪಾತ್ರರಾದರು. ಜುಲೈ ತಿಂಗಳಲ್ಲಿ ಅವರು ಏಕದಿನ ಮತ್ತು ಟಿ20 ಪಂದ್ಯಗಳಲ್ಲಿ ಉತ್ತಮವಾಗಿ ಆಡಿದ್ದರು.

ಸೋಫಿಯಾ ಅವರು ಸ್ವದೇಶದ ಸೋಫಿ ಎಕ್ಲೆಸ್ಟೋನ್ ಮತ್ತು ಐರ್ಲೆಂಡ್ ತಂಡದ ನಾಯಕಿ ಗ್ಯಾಬಿ ಲೂಯಿಸ್ ಅವರನ್ನು ಪ್ರಶಸ್ತಿ ರೇಸ್‌ನಲ್ಲಿ ಹಿಂದೆಹಾಕಿದರು.

ಅವರು ಭಾರತ ವಿರುದ್ಧ ಎರಡೂ ಮಾದರಿಗಳ (ಮೂರು ಏಕದಿನ ಮತ್ತು ನಾಲ್ಕು ಟಿ20) ಸರಣಿಯಲ್ಲಿ ಆಡಿ 270 ರನ್ ಪೇರಿಸಿದ್ದರು. ನಾರ್ತಾಂಪ್ಟನ್‌ನಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಅವರು 92 ಎಸೆತಗಳಲ್ಲಿ ಸೊಗಸಾದ 83 ರನ್ ಬಾರಿಸಿದ್ದರು.

ಮಹಾರಾಜ ಕಪ್ ಟ್ವೆಂಟಿ20 ಕ್ರಿಕೆಟ್ ಟೂರ್ನಿ: ಅನಿರುದ್ಧ ಜೋಶಿ ಹೋರಾಟ

ತಹಾ ಸೊಬಗಿನ ಶತಕ; ಹುಬ್ಬಳ್ಳಿಗೆ ಜಯ

• ಆರ್.ಜಿತೇಂದ್ರ

ಮೈಸೂರು: ಆರಂಭಿಕ ಬ್ಯಾಟರ್ ಮೊಹಮ್ಮದ್ ತಹಾ (101) ಅವರ ಸೊಗಸಾದ ಶತಕದ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ತಂಡವು ಮಂಗಳವಾರ 29 ರನ್‌ಗಳಿಂದ ಶಿವಮೊಗ್ಗ ಲಯನ್ಸ್ ಎದುರು ಗೆದ್ದು ಶುಭಾರಂಭ ಮಾಡಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ‘ಮಹಾರಾಜ ಟ್ರೋಫಿ’ ಟಿ20 ಕ್ರಿಕೆಟ್ ಟೂರ್ನಿಯ ಎರಡನೇ ದಿನ ನಡೆದ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಹುಬ್ಬಳ್ಳಿ ಟೈಗರ್ಸ್ ಪರ ತಹಾ ಕಲಾತ್ಮಕ ಇನಿಂಗ್ಸ್ ಕಟ್ಟಿದರು. ತಂಡವು 217 ರನ್‌ಗಳ ಬೃಹತ್ ಮೊತ್ತ ಪೇರಿಸಲು ಕಾರಣರಾದರು.

ಆರಂಭದಲ್ಲಿ ತಾಳ್ಮೆಯ ಆಟವಾಡಿದ ಅವರು, ಬಳಿಕ ಅಬ್ಬರಿಸಿದರು. ಕೇವಲ 51 ಎಸೆತದಲ್ಲಿ 10 ಬೌಂಡರಿ, 6 ಸಿಕ್ಸರ್ ಸಹಿತ ಶತಕ ದಾಖಲಿಸಿದರು. ತಹಾ ಅವರಿಗೆ ಇದು ಮಹಾರಾಜ ಟ್ರೋಫಿಯಲ್ಲಿ ಎರಡನೇ ಶತಕ. 2023ರಲ್ಲಿ ಬೆಂಗಳೂರಿನಲ್ಲಿ ನಡೆದ ಟೂರ್ನಿಯ 2ನೇ ಆವೃತ್ತಿಯಲ್ಲೂ ಶತಕ ಸಿಡಿಸಿದ್ದರು.

ಶತಕದ ಜೊತೆಯಾಟ: ತಹಾ ಮತ್ತು ನಾಯಕ ದೇವದತ್ತ ಪಡಿಕ್ಕಲ್ ನಡುವಿನ ಶತಕದ ಜೊತೆಯಾಟವು ಹುಬ್ಬಳ್ಳಿ ಇನಿಂಗ್ಸ್‌ಗೆ ಭದ್ರ ಅಡಿಪಾಯ ಹಾಕಿತು. ಈ ಜೋಡಿ ಎರಡನೇ ವಿಕೆಟ್‌ಗೆ 57 ಎಸೆತಗಳಲ್ಲಿ 100 ರನ್ ಪೇರಿಸಿತು. ಆಗ ಪಡಿಕ್ಕಲ್ (52) ಆನಂದ ದೊಡ್ಡಮನಿ ಎಸೆತದಲ್ಲಿ ಹಾರ್ದಿಕ್ ರಾಜ್‌ಗೆ ಕ್ಯಾಚಿತ್ತರು.

ನಂತರ ವಿಕೆಟ್ ಕೀಪರ್ ಕೃಷ್ಣನ್ ಶ್ರೀಜಿತ್ (27) ಜೊತೆಗೂಡಿದ ತಹಾ ಕೇವಲ 40 ಎಸೆತಗಳಲ್ಲಿ 90 ರನ್‌ಗಳ ಉಪಯುಕ್ತ ಜೊತೆಯಾಟ ಕಟ್ಟಿ ತಂಡ ದೊಡ್ಡ ಮೊತ್ತ ಕಲೆಹಾಕಲು ನೆರವಾದರು.

ಆರಂಭಿಕ ಆಘಾತ: ಬೃಹತ್ ಮೊತ್ತ ಬೆನ್ನತ್ತಿದ ಶಿವಮೊಗ್ಗಕ್ಕೆ ವೇಗಿ ನಿಶ್ಚಿತ್ ಪೈ ಎರಡನೇ ಓವರ್‌ನಲ್ಲೇ ಆಘಾತ ನೀಡಿದರು. ಮೊದಲ ಎಸೆತದಲ್ಲೇ ನಿಹಾಲ್ ಉಳ್ಳಾಲ್ (2) ವಿಕೆಟ್ ಪಡೆದ ಅವರು ಮೂರನೇ ಎಸೆತದಲ್ಲಿ ಹಾರ್ದಿಕ್ ರಾಜ್‌ರನ್ನು ಔಟ್ ಮಾಡಿದರು.





ಹುಬ್ಬಳ್ಳಿ ಟೈಗರ್ಸ್ ತಂಡದ ಪರ ಶತಕ ಸಿಡಿಸಿ ಸಂಭ್ರಮಿಸಿದ ಮೊಹಮ್ಮದ್ ತಹಾ (ಎಡ) ಅರ್ಧಶತಕ ಸಿಡಿಸಿದ ನಾಯಕ ದೇವದತ್ತ ಪಡಿಕ್ಕಲ್

ಚಿತ್ರಗಳು: ಅನೂಪ್ ರಾಘ.ಟಿ.

ಐದನೇ ವಿಕೆಟ್‌ಗೆ ಅನೀಶ್ವರ ಗೌತಮ್ (32) ಹಾಗೂ ಅನಿರುದ್ಧ ಜೋಶಿ ಜೋಡಿಯು 56 ರನ್ ಹಾಗೂ ಆರನೇ ವಿಕೆಟ್‌ಗೆ ಅನಿರುದ್ಧ ಹಾಗೂ ಅವಿನಾಶ್ (22) ಜೋಡಿ 36 ಎಸೆತಗಳಲ್ಲಿ 77 ರನ್ ಪೇರಿಸಿ ಹೋರಾಟ ಪ್ರದರ್ಶಿಸಿತು. ಜೋಷಿ 42 ಎಸೆತಗಳಲ್ಲಿ 9 ಸಿಕ್ಸರ್ ಸಹಿತ 79 ರನ್ ಗಳಿಸಿ ಹೋರಾಡಿದರು.

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 216 (ಮೊಹಮ್ಮದ್ ತಹಾ 101, ದೇವದತ್ತ ಪಡಿಕ್ಕಲ್ 52, ಕೃಷ್ಣನ್ ಶ್ರೀಜಿತ್ 27, ವಿದ್ವತ್ ಕಾವೇರಪ್ಪ 39ಕ್ಕೆ 2) **ಶಿವಮೊಗ್ಗ ಲಯನ್ಸ್:** 20 ಓವರ್‌ಗಳಲ್ಲಿ 6 ವಿಕೆಟ್‌ಗೆ 187 (ಅನಿರುದ್ಧ ಜೋಶಿ ಔಟಾಗದೇ 79, ಅನೀಶ್ವರ್ ಗೌತಮ್ 32, ಧ್ರುವ್ ಪ್ರಭಾಕರ್ 30. ಕೆ.ಸಿ. ಕಾರ್ಯಪ್ಪ 28ಕ್ಕೆ 2, ನಿಶ್ಚಿತ್ ಪೈ 42ಕ್ಕೆ 2).

ಪಂದ್ಯದ ಆಟಗಾರ: ಮೊಹಮ್ಮದ್ ತಹಾ

ಇಂದಿನ ಪಂದ್ಯಗಳು:

- ಬೆಂಗಳೂರು ಬ್ಲಾಸ್ಟರ್ಸ್–ಹುಬ್ಬಳ್ಳಿ ಟೈಗರ್ಸ್, ಮಧ್ಯಾಹ್ನ 3.15
- ಮಂಗಳೂರು ಡ್ರ್ಯಾಗನ್ಸ್–ಶಿವಮೊಗ್ಗ ಲಯನ್ಸ್, ರಾತ್ರಿ 7.15.

ಗುಲ್ಬರ್ಗ ಮಿಸ್ಟಿಕ್ಸ್‌ಗೆ 8 ವಿಕೆಟ್ ಗೆಲುವು

ಮೈಸೂರು: ನಿಕಿನ್ ಜೋಸ್ (52) ಹಾಗೂ ಸ್ಮರಣ್ ರವಿಚಂದ್ರನ್ (52) ಅವರ ಅಜೇಯ ಅರ್ಧಶತಕಗಳ ನೆರವಿನಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಮಂಗಳವಾರ ‘ಮಹಾರಾಜ ಟ್ರೋಫಿ’ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮೈಸೂರು ವಾರಿಯರ್ಸ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿತು.

185 ರನ್ ಗುರಿ ಬೆನ್ನತ್ತಿದ್ದ ಗುಲ್ಬರ್ಗ, ಇನ್ನೂ 2 ಓವರ್ ಬಾಕಿ ಇರುವಾಗಲೇ ಜಯ ಗಳಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ ಪರ ಸ್ಥಳೀಯ ಪ್ರತಿಭೆ ಎಂ. ವೆಂಕಟೇಶ್ 77 ರನ್ ಹೊಡೆದರು.

ಸಂಕ್ಷಿಪ್ತ ಸ್ಕೋರ್: ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 184 (ಎಂ. ವೆಂಕಟೇಶ್ 77, ಹರ್ಷಿಲ್ ಧರ್ಮಾನಿ 40, ಎಸ್.ಯು. ಕಾರ್ತಿಕ್ 36. ಲವೀಶ್ ಕೌಶಲ್ 38ಕ್ಕೆ 3, ಮೊನಿಷ್ ರೆಡ್ಡಿ 30ಕ್ಕೆ 2) ಗುಲ್ಬರ್ಗ ಮಿಸ್ಟಿಕ್ಸ್: 18 ಓವರ್‌ಗಳಲ್ಲಿ 2 ವಿಕೆಟ್‌ಗೆ 187 (ನಿಕಿನ್ ಜೋಸ್ ಔಟಾಗದೇ 52, ಸ್ಮರಣ್ ರವಿಚಂದ್ರನ್ ಔಟಾಗದೇ 52, ಪ್ರಜ್ವಲ್ ಪವನ್ 45. ಸಿ.ಎ. ಕಾರ್ತಿಕ್ 23ಕ್ಕೆ 1)

ಬ್ರೆವಿಸ್ ದಾಖಲೆ ಶತಕ: ದಕ್ಷಿಣ ಆಫ್ರಿಕಾ ಜಯಭೇರಿ

ಡಾರ್ವಿನ್ (ಆಸ್ಟ್ರೇಲಿಯಾ) (ಎಪಿ): ದಾಖಲೆಯ ಶತಕ ಬಾರಿಸಿದ ಡಿವಾಲ್ಡ್ ಬ್ರೆವಿಸ್ ಅವರ ಆಟದಿಂದಾಗಿ ದಕ್ಷಿಣ ಆಫ್ರಿಕಾ ತಂಡವು ಮಂಗಳವಾರ ಆಸ್ಟ್ರೇಲಿಯಾ ಎದುರಿನ ಟಿ20 ಕ್ರಿಕೆಟ್ ಪಂದ್ಯದಲ್ಲಿ 53 ರನ್‌ಗಳಿಂದ ಗೆದ್ದಿತು.

ಇದರೊಂದಿಗೆ ಟಿ20 ಮಾದರಿಯಲ್ಲಿ ಸತತ ಹತ್ತನೇ ಪಂದ್ಯ ಜಯಿಸುವ ಆಸ್ಟ್ರೇಲಿಯಾದ ಗುರಿ ಈಡೇರಲಿಲ್ಲ. ಈ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ತಂಡವು 1–1 ಸಮಬಲ ಸಾಧಿಸಿತು.

22 ವರ್ಷದ ಬ್ರೆವಿಸ್ 56 ಎಸೆತಗಳಲ್ಲಿ ಅಜೇಯ 125 ರನ್ ಗಳಿಸಿದರು. ಅವರು ಎಂಟು ಸಿಕ್ಸರ್ ಮತ್ತು 12 ಬೌಂಡರಿ ಬಾರಿಸಿದರು. ಇದರೊಂದಿಗೆ 2015ರಲ್ಲಿ ಫಾಫ್ ಡುಪ್ಲೆಸಿ (119; 56ಎಸೆತ) ಅವರು ವೆಸ್ಟ್ ಇಂಡೀಸ್ ಎದುರು ಮಾಡಿದ್ದ ದಾಖಲೆಯನ್ನು ಮುರಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 7ಕ್ಕೆ218 (ಡಿವಾಲ್ಡ್ ಬ್ರೆವಿಸ್ ಔಟಾಗದೇ 125, ಟ್ರಿಸ್ಟನ್ ಸ್ಟಬ್ಸ್ 31, ಗ್ಲೆನ್ ಮ್ಯಾಕ್ಸ್‌ವೆಲ್ 44ಕ್ಕೆ2, ಬೆನ್ ಡ್ವಾರಶಿಯಸ್ 24ಕ್ಕೆ2) ಆಸ್ಟ್ರೇಲಿಯಾ: 17.4 ಓವರ್‌ಗಳಲ್ಲಿ 165 (ಟಿಮ್ ಡೇವಿಡ್ 50, ಅಲೆಕ್ಸ್ ಕ್ಯಾರಿ 26, ಕ್ವೆನಾ ಮಪಾಕಾ 57ಕ್ಕೆ3)

ಡಿವಾಲ್ಡ್ ಬ್ರೆವಿಸ್ ಆಟದ ವೈಖರಿ ಎಪಿ ಚಿತ್ರ

ಮಹಿಳಾ ವಿಶ್ವಕಪ್: ಬೆಂಗಳೂರು ಪಂದ್ಯಗಳು ಎಲ್ಲಿಗೆ?

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ನಡೆಯಬೇಕಿರುವ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಕೆಲವು ಪಂದ್ಯಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಸಿದ್ಧತೆ ನಡೆದಿದೆ.

ಸೆ.30ರಂದು ಉದ್ಘಾಟನೆ ಪಂದ್ಯ (ಭಾರತ–ಶ್ರೀಲಂಕಾ), ಅ.3 (ಇಂಗ್ಲೆಂಡ್–ದಕ್ಷಿಣ ಆಫ್ರಿಕಾ), ಅ.26 (ಭಾರತ–ಬಾಂಗ್ಲಾದೇಶ) ಹಾಗೂ ಅ.30 (ಸೆಮಿ ಫೈನಲ್) ಪಂದ್ಯಗಳನ್ನು ಬೆಂಗಳೂರಿನಲ್ಲಿ ಆಯೋಜಿಸಲು ಐಸಿಸಿ ಬಿಡುಗಡೆ ಮಾಡಿರುವ ವೇಳಾಪಟ್ಟಿಯಲ್ಲಿ ನಿಗದಿ ಮಾಡಲಾಗಿತ್ತು. ಆದರೆ, ಇದುವರೆಗೂ ರಾಜ್ಯ ಸರ್ಕಾರದಿಂದ ಪಂದ್ಯಗಳ ಆಯೋಜನೆಗೆ ಅನುಮತಿ ದೊರೆತಿಲ್ಲ ಎನ್ನಲಾಗಿದೆ. ಆದ್ದರಿಂದ ಪಂದ್ಯಗಳನ್ನು ಬೇರೆ ನಗರಗಳಿಗೆ ಸ್ಥಳಾಂತರಿಸುವುದು ಬಹುತೇಕ ಖಚಿತವಾಗಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ತಿರುವನಂತಪುರದ ಕರಯಾವಟ್ಟೋಮ್‌ನಲ್ಲಿರುವ ಗ್ರೀನ್ ಫೀಲ್ಡ್ ಕ್ರೀಡಾಂಗಣಕ್ಕೆ ಬೆಂಗಳೂರು ಪಂದ್ಯಗಳು ಸ್ಥಳಾಂತರವಾಗಲಿವೆ. ಕ್ರೀಡಾಂಗಣದ ಪಂದ್ಯ ನಡೆಸಲು ಮೂಲಸೌಲಭ್ಯಗಳ ಕುರಿತ ಮಾಹಿತಿಯನ್ನು ಕೇರಳ ಕ್ರಿಕೆಟ್ ಸಂಸ್ಥೆಯಿಂದ ಕೇಳಲಾಗಿದೆ. ಕೇವಲ ಒಂದು ತಿಂಗಳ ಅವಧಿಯಲ್ಲಿ ಪಂದ್ಯ ಆಯೋಜನೆಗೆ ಸಿದ್ಧಗೊಳ್ಳುವ ಸಾಧ್ಯತೆಗಳ ಕುರಿತೂ ಬಿಸಿಸಿಐ ಮಾಹಿತಿ ಪಡೆದುಕೊಂಡಿದೆ ಎಂದು ಪಿಟಿಐ ವರದಿ ಮಾಡಿದೆ.

ಬಿಸಿಸಿಐನ ಇನ್ನೊಂದು ಮೂಲದ ಪ್ರಕಾರ; ಚೆನ್ನೈ ಮತ್ತು ಮುಂಬೈಗೆ ಈ ಪಂದ್ಯಗಳು ಹಂಚಿಕೆಯಾಗುವ ಸಾಧ್ಯತೆಗಳಿವೆ ಎನ್ನಲಾಗಿದೆ. ಆದರೆ, ಪಂದ್ಯಗಳು ಸ್ಥಳಾಂತರ ಆಗುವ ಕುರಿತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಪದಾಧಿಕಾರಿಗಳು ಖಚಿತಪಡಿಸಿಲ್ಲ.

‘ನಮ್ಮ ಇಲಾಖೆಗೆ ಈ ಕುರಿತು ಯಾವುದೇ ಪ್ರಸ್ತಾವ ಕ್ರಿಕೆಟ್ ಸಂಸ್ಥೆಯಿಂದ ಬಂದಿಲ್ಲ. ಬಹುಶಃ ಬಿಸಿಸಿಐ ಮತ್ತು ಕೆಎಸ್‌ಸಿಎ ಸೇರಿ ಪಂದ್ಯಗಳ ಆಯೋಜನೆ ಅಥವಾ ಸ್ಥಳಾಂತರ ಕುರಿತು ನಿರ್ಧರಿಸ ಬಹುದು’ ಎಂದು ಪೊಲೀಸ್ ಇಲಾಖೆಯ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಜೂನ್ ತಿಂಗಳಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಐಪಿಎಲ್ ಟ್ರೋಫಿ ವಿಜಯೋತ್ಸವದ ಸಂದರ್ಭದಲ್ಲಿ ಕಾಲ್ತುಳಿತ ಸಂಭವಿಸಿತ್ತು. 11 ಜನ ಮೃತಪಟ್ಟಿದ್ದರು. ಈ ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರವು ಏಕಸದಸ್ಯ (ಡಿಕುನ್ಹಾ) ಸಮಿತಿಯನ್ನು ನೇಮಿಸಿತ್ತು. ಅವರು ನೀಡಿರುವ ವರದಿಯಲ್ಲಿ ‘ದೊಡ್ಡ ಮಟ್ಟದ ಕಾರ್ಯಕ್ರಮಗಳನ್ನು ನಡೆಸಲು ಚಿನ್ನಸ್ವಾಮಿ ಕ್ರೀಡಾಂಗಣ ಸುರಕ್ಷಿತವಲ್ಲ’ ಎಂದು ಉಲ್ಲೇಖಿಸಲಾಗಿತ್ತು.

ಮಹಾರಾಜ ಟಿ20 ಕ್ರಿಕೆಟ್ ಟೂರ್ನಿ ಆಯೋಜನೆಗೂ ಪೊಲೀಸ್ ಇಲಾಖೆಯು ಅನುಮತಿ ನೀಡಿರಲಿಲ್ಲ. ಆದ್ದರಿಂದ ಟೂರ್ನಿಯನ್ನು ಮೈಸೂರಿಗೆ ಸ್ಥಳಾಂತರಿಸಲಾಗಿದೆ.

ಡುರಾಂಡ್ ಕಪ್: ಕ್ವಾರ್ಟರ್‌ಗೆ ನೌಕಾಪಡೆ

ಇಂಫಾಲ್ (ಪಿಟಿಐ): ಕೊನೆಯ ಕ್ಷಣದಲ್ಲಿ ಶ್ರೇಯಸ್ ವಿ.ಜಿ. ಅವರು ಗಳಿಸಿದ ಗೋಲಿನ ನೆರವಿನಿಂದ ಭಾರತೀಯ ನೌಕಾಪಡೆ ತಂಡ ಮಂಗಳವಾರ ನಡೆದ 134ನೇ ಆವೃತ್ತಿಯ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 2-1ರಿಂದ ಟ್ರಾವು ಎಫ್‌ಸಿ ತಂಡವನ್ನು ಮಣಿಸಿತು. ಈ ಗೆಲುವಿನಿಂದಾಗಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಕ್ವಾರ್ಟರ್‌ಫೈನಲ್‌ಗೆ ಲಗ್ಗೆ ಇಟ್ಟಿತು.

ಇಲ್ಲಿನ ಖುಮಾನ್ ಲಂಪಕ್ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ 29ನೇ ನಿಮಿಷ ಟ್ರಾವು ತಂಡದ ಮೊಯಿರಂಗಥೆಮ್ ನೆಲ್ಸನ್ ಸಿಂಗ್ ಗೋಲು ಗಳಿಸಿ ತಮ್ಮ ತಂಡಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಪಿಂಟು ಮಹತಾ ಅವರು 87ನೇ ನಿಮಿಷದಲ್ಲಿ ಹೊಡೆದ ಗೋಲಿನ ನೆರವಿನಿಂದ ನೌಕಾಪಡೆ 1-1ರಿಂದ ಸಮಬಲ ಸಾಧಿಸಿತು. ಇಂಜುರಿ ಅವಧಿಯ ಮೂರನೇ ನಿಮಿಷ ಶ್ರೇಯಸ್ ನಿರ್ಣಾಯಕ ಗೋಲು ಹೊಡೆದು ಗೆಲುವಿನ ರೂವಾರಿ ಎನಿಸಿದರು.

ಈ ಗೆಲುವಿನಿಂದಾಗಿ ನೌಕಾಪಡೆಯು 7 ಅಂಕಗಳೊಂದಿಗೆ ‘ಎಫ್’ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ರಿಯಲ್ ಕಾಶ್ಮೀರ ತಂಡವು (6 ಅಂಕ) ಎರಡನೇ ಸ್ಥಾನಕ್ಕೆ ಸರಿಯಿತು.

ಬೋಡೊಲ್ಯಾಂಡ್ ಎಫ್‌ಸಿ ತಂಡವು ಅಸ್ಸಾಂನ ಕೋಕ್ರಜಾರ್‌ನಲ್ಲಿ ನಡೆದ ‘ಡಿ’ ಗುಂಪಿನ ಪಂದ್ಯದಲ್ಲಿ ಐಟಿಬಿಪಿ ಎಫ್‌ಸಿ ಜೊತೆ ಗೋಲಿಲ್ಲದೇ ಡ್ರಾ ಮಾಡಿಕೊಂಡು, ಮೊದಲ ಬಾರಿ ಈ ಟೂರ್ನಿಯ ಎಂಟರ ಘಟ್ಟಕ್ಕೆ ಪ್ರವೇಶಿಸಿತು.

ನೌಕಾಪಡೆ ತಂಡದ ಪರ ನಿರ್ಣಾಯಕ ಗೋಲು ಹೊಡೆದ ಶ್ರೇಯಸ್ ವಿ.ಜಿ.

ರೊನಾಲ್ಡೊ–ಜಾರ್ಜಿನಾ ನಿಶ್ಚಿತಾರ್ಥ

ವಾಷಿಂಗ್ಟನ್ (ಎಪಿ): ಪೋರ್ಚುಗಲ್‌ನ ಫುಟ್‌ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ಅವರು ದೀರ್ಘಕಾಲದ ಗೆಳತಿ ಜಾರ್ಜಿನಾ ರಾಡ್ರಿಗಸ್ ಜೊತೆ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ. ಕೆಲವು ವರ್ಷಗಳಿಂದ ಡೇಟಿಂಗ್ ಮಾಡುತ್ತಿದ್ದ ಈ ಜೋಡಿ, ಐವರು ಮಕ್ಕಳಾದ ಬಳಿಕ ಮದುವೆಯಾಗಲು ನಿರ್ಧರಿಸಿದೆ.

ಜಾರ್ಜಿನಾ ಅವರು ನಿಶ್ಚಿತಾರ್ಥದ ವೇಳೆ ತೊಡಿಸಿದ ದುಬಾರಿ ವಜ್ರದ ಉಂಗುರದ ಫೋಟೋವನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದು, ರೊನಾಲ್ಡೊ ಅವರನ್ನು ಟ್ಯಾಗ್ ಮಾಡಿದ್ದಾರೆ. ಇದರ ಮೌಲ್ಯ ಅಂದಾಜು ₹30 ಕೋಟಿ ಎನ್ನಲಾಗಿದೆ.

ಈ ಜೋಡಿಯು ಮೊದಲು 2016ರಲ್ಲಿ ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿನ ‘ಗುಸ್ಸಿ’ ಫ್ಯಾಷನ್ ಮಳಿಗೆಯಲ್ಲಿ ಭೇಟಿಯಾಗಿತ್ತು. ಜಾರ್ಜಿನಾ ಅವರು ಆ ಮಳಿಗೆಯಲ್ಲಿ ಮಾರಾಟ ಸಹಾಯಕಿಯಾಗಿ (ಸೇಲ್ಸ್ ಗರ್ಲ್) ಕೆಲಸ ಮಾಡುತ್ತಿದ್ದರು. ಕ್ರಮೇಣ, ಇಬ್ಬರ ನಡುವೆ ಪ್ರೀತಿ ಚಿಗುರಿತ್ತು.

ರೊನಾಲ್ಡೊ–ಜಾರ್ಜಿನಾ ಜೋಡಿ

ಗಮನಾರ್ಹ ಸಂಗತಿ ಎಂದರೆ, ರೊನಾಲ್ಡೊ ಮತ್ತು ಜಾರ್ಜಿನಾಗೆ ಇವಾ ಮತ್ತು ಮಟೆಯೊ (ಅವಳಿ), ಅಲಾನಾ ಮತ್ತು ಬೆಲ್ಲಾ ಹೆಸರಿನ ಮಕ್ಕಳಿದ್ದಾರೆ. ಏಂಜೆಲ್ ಹೆಸರಿನ ಮತ್ತೊಂದು ಮಗು (ಬೆಲ್ಲಾ ಜೊತೆ ಅವಳಿ) ಹೆರಿಗೆ ವೇಳೆ ಸಾವಿಗೀಡಾಗಿತ್ತು. ರೊನಾಲ್ಡೊ ಅವರು ತಮ್ಮ ಹಿರಿಯ ಪುತ್ರ ಕ್ರಿಸ್ಟಿಯಾನೊ ಜೂನಿಯರ್ ಅವರ ತಾಯಿಯ ವಿವರವನ್ನು ರಹಸ್ಯವಾಗಿಟ್ಟಿದ್ದಾರೆ.

ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್: ಚಾಲೆಂಜರ್ಸ್ ವಿಭಾಗದಲ್ಲಿ ಅಭಿಮನ್ಯುಗೆ ಸೋಲು

ಡ್ರಾ ಪಂದ್ಯದಲ್ಲಿ ಕೀಮರ್– ಅರ್ಜುನ್

ಚೆನ್ನೈ (ಪಿಟಿಐ): ಭಾರತದ ಅರ್ಜುನ್ ಇರಿಗೇಶಿ ಅವರು ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಟೂರ್ನಿಯ ಆರನೇ ಸುತ್ತಿನ ಬಹುನಿರೀಕ್ಷಿತ ಪಂದ್ಯವನ್ನು ಅಗ್ರಸ್ಥಾನಿ ವಿನ್ಸೆಂಟ್ ಕೀಮರ್ ಜೊತೆ ಕಠಿಣ ಹೋರಾಟದ ನಂತರ ಡ್ರಾ ಮಾಡಿಕೊಂಡರು. ಮಂಗಳವಾರದ ಬಳಿಕ ಜರ್ಮನಿಯ ಗ್ರ್ಯಾಂಡ್‌ಮಾಸ್ಟರ್ ಒಂದು ಪಾಯಿಂಟ್‌ನ ಮುನ್ನಡೆ ಉಳಿಸಿಕೊಂಡಿದ್ದಾರೆ.

ಈ ಟೂರ್ನಿಯಲ್ಲಿ ಅಜೇಯರಾಗಿರುವ ಕೀಮರ್ 4.5 ಪಾಯಿಂಟ್ಸ್ ಹೊಂದಿದ್ದಾರೆ. ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ 3.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಕಿರಿಯ ಗ್ರ್ಯಾಂಡ್‌ಮಾಸ್ಟರ್ ಗಳಿಬ್ಬರ ಸೆಣಸಾಟದಲ್ಲಿ ಅಮೆರಿಕದ 22 ವರ್ಷ ವಯಸ್ಸಿನ ಅವಾಂಡರ್ ಲಿಯಾಂಗ್ (3.5 ಪಾಯಿಂಟ್) ಅವರು 18 ವರ್ಷ ವಯಸ್ಸಿನ ಪ್ರಣವ್ ವಿ. (2 ಪಾಯಿಂಟ್) ಅವರನ್ನು ಸೋಲಿಸಿದರು. ಲಿಯಾಂಗ್ ಮತ್ತು ಅರ್ಜುನ್ ತಲಾ 3.5 ಪಾಯಿಂಟ್ಸ್ ಕಲೆಹಾಕಿದ್ದಾರೆ. ಇನ್ನು ಮೂರು ಸುತ್ತುಗಳಷ್ಟೇ ಉಳಿದಿದ್ದು ಪ್ರಶಸ್ತಿಗೆ ಪೈಪೋಟಿ ಜೋರಾಗಿದೆ.

ವಿನ್ಸೆಂಟ್ ಕೀಮರ್– ಅರ್ಜುನ್ ಇರಿಗೇಶಿ ಮುಖಾಮುಖಿ

ವಿದಿತ್ ಗುಜರಾತಿ (3) ಮತ್ತು ಡಚ್ ಗ್ರ್ಯಾಂಡ್‌ಮಾಸ್ಟರ್ ಅನಿಶ್ ಗಿರಿ (3) ಡ್ರಾ ಮಾಡಿಕೊಂಡರು.

ನೆದರ್ಲೆಂಡ್ಸ್‌ನ ಇನ್ನೊಬ್ಬ ಆಟಗಾರ ಜೋರ್ಡನ್ ವಾನ್ ಫೊರಿಸ್ಟ್ (3) ಕಪ್ಪು ಕಾಯಿಗಳಲ್ಲಿ ಆಡಿ ಭಾರತದ ನಿಹಾಲ್ ಸರಿನ್ ಅವರನ್ನು ಸೋಲಿಸಿದರು. ಕಾರ್ತಿಕೇಯನ್ ಮುರಳಿ (3) ಮತ್ತು ಅಮೆರಿಕದ ರೇ ರಾಬ್ಸನ್ (2.5) ನಡುವಣ ಪಂದ್ಯ ಡ್ರಾ ಆಯಿತು.

ಚಾಲೆಂಜರ್ಸ್ ವಿಭಾಗದಲ್ಲಿ ಅಗ್ರಸ್ಥಾನದಲ್ಲಿರುವ ಅಭಿಮನ್ಯು ಪುರಾಣಿಕ್ (4.5) ಅವರಿಗೆ ಆರನೇ ಸುತ್ತಿನಲ್ಲಿ ಎಂ.ಪ್ರಾಣೇಶ್ (4.5) ಸೋಲುಣಿಸಿದರು. ಈಗ ಈ ವಿಭಾಗದಲ್ಲಿ ಮೂವರು ಮುನ್ನಡೆ ಹಂಚಿಕೊಂಡಿದ್ದಾರೆ. ಇದು ಅಭಿಮನ್ಯುಗೆ ಮೊದಲ ಸೋಲು.

ಲಿಯಾನ್ ಮೆಂಡೋನ್ಸಾ (4.5) ಅವರು ಆರ್ಯನ್ ಮಿಶ್ರಾ (1.5) ಅವರನ್ನು ಮಣಿಸಿದರು. ಗ್ರ್ಯಾಂಡ್ ಮಾಸ್ಟರ್ಸ್ ಆಟಗಾರ್ತಿಯರ ಸೆಣಸಾಟದಲ್ಲಿ ಡಿ.ಹಾರಿಕಾ (1.5) ಅವರು ವೈಶಾಲಿ ಆರ್. (1) ಅವರನ್ನು ಸೋಲಿಸಿದರು. ಆದಿಬನ್ (3.5) ಅವರು ದೀಪ್ತಾಯನ್ ಘೋಷ್ (3.5) ಅವರನ್ನು ಸೋಲಿಸಿದರು. ಈ ವಿಭಾಗದಲ್ಲಿ ಡ್ರಾ ಆದ ದಿನದ ಏಕೈಕ ಪಂದ್ಯದಲ್ಲಿ ಪಾ.ಇನಿಯನ್ (3.5), ಹರ್ಷವರ್ಧನ್ (2) ಜೊತೆ ಅಂಕ ಹಂಚಿಕೊಂಡರು.

ಜಂಟಿ ಮೂರನೇ ಸ್ಥಾನದಲ್ಲಿ ಡಿ.ಗುಕೇಶ್

ಸೇಂಟ್ ಲೂಯಿ (ಅಮೆರಿಕ) (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್, ಮೊದಲ ಸುತ್ತಿನಲ್ಲಿ ಲೆವೊನ್ ಅರೋನಿಯನ್ ಎದುರು ಸೋತರೂ ನಂತರದ ಎರಡು ಪಂದ್ಯಗಳನ್ನು ಗೆಲ್ಲುವ ಮೂಲಕ, ಸೇಂಟ್ ಲೂಯಿ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿಯ ಮೂರನೇ ಸುತ್ತಿನ ನಂತರ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

ಹತ್ತು ಆಟಗಾರರು ಕಣದಲ್ಲಿರುವ ಈ ಟೂರ್ನಿ ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿದೆ. ಗುಕೇಶ್, ಅಮೆರಿಕದ ಅರೋನಿಯನ್ ಎದುರು ಸೋತ ನಂತರ ಚೇತರಿಸಿಕೊಂಡು ಗ್ರಿಗೊರಿ ಒಪಾರಿನ್ ಮತ್ತು ಲೀಮ್ ಲೆ ಕ್ವಾಂಗ್ ಅವರನ್ನು ಸೋಲಿಸಿದರು. ಸೋಮವಾರ ಅವರು ಸಂಭವನೀಯ ಆರು ಪಾಯಿಂಟ್‌ಗಳಲ್ಲಿ ನಾಲ್ಕು ಪಾಯಿಂಟ್ಸ್ ಪಡೆದಿದ್ದಾರೆ.

ಅರೋನಿಯನ್ ಮೊದಲ ದಿನ ಮೂರೂ ಪಂದ್ಯಗಳನ್ನು ಜಯಿಸಿ ಅಗ್ರಸ್ಥಾನಕ್ಕೇರಿದರು. ಅಮೆರಿಕದ ಫ್ಯಾಬಿಯಾನೊ ಕರುವಾನ ಎರಡನೆ ಸ್ಥಾನದಲ್ಲಿದ್ದಾರೆ. ವೆಸ್ಲಿ ಸೊ (ಅಮೆರಿಕ) ಮತ್ತು ಗುಕೇಶ್ ಮೂರನೆ ಸ್ಥಾನದಲ್ಲಿದ್ದಾರೆ. ಲಗ್ರಾವ್ ಮತ್ತು ಲೀನಿಯರ್ ಡೊಮಿಂಗೆಝ್ ಪೆರೆಝ್ ಅವರು ತಲಾ 3 ಅಂಕ ಗಳಿಸಿ ಐದನೇ ಸ್ಥಾನದಲ್ಲಿದ್ದಾರೆ.